ಸಿದ್ದಿ ಸಮುದಾಯ : ಲಿಂಗ ಸಂಬಂಧಿ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಸಾದರಪಡಿಸಿದ ಸಂಪ್ರಬಂಧ)

ಸಂಶೋಧಕಿ

ಸುರೇಖಾ. ಜಿ. ರಾಠೋಡ

ಮಾರ್ಗದರ್ಶಕರು

ಡಾ. ಶೈಲಜ. ಇಂ. ಹಿರೇಮಠ

ಪ್ರವಾಚಕರು

ಮಹಿಳಾ ಅಧ್ಯಯನ ವಿಭಾಗ

ಭಾಷಾ ನಿಕಾಯ

ಮಹಿಳಾ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೦೮

377

ಸಿದ್ಧಿ ಸಮುದಾಯ : ಲಿಂಗ ಸಂಬಂಧಿ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಸಾದರಪಡಿಸಿದ ಸಂಪ್ರಬಂಧ)

ಸಂಶೋಧಕಿ
ಸುರೇಖಾ. ಜಿ. ರಾಠೋಡ

ಮಾರ್ಗದರ್ಶಕರು
ಡಾ. ಶೈಲಜ. ಇಂ. ಹಿರೇಮಠ
ಪ್ರವಾಚಕರು
ಮಹಿಳಾ ಅಧ್ಯಯನ ವಿಭಾಗ

ಭಾಷಾ ನಿಕಾಯ
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬
೨೦೦೮

ದೃಢೀಕರಣ ಪತ್ರ

ಸುರೇಖಾ ಜಿ. ರಾಠೋಡ ಇವರು **ಸಿದ್ದಿ ಸಮುದಾಯ : ಲಿಂಗ ಸಂಬಂಧಿ ಅಧ್ಯಯನ,** ಎಂಬ ವಿಷಯ ಕುರಿತು ಸಂಪ್ರಬಂಧವನ್ನು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ, ಮಹಿಳಾ ಅಧ್ಯಯನ ವಿಭಾಗಕ್ಕೆ ಸಾದರಪಡಿಸುತ್ತಿರುವ ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲ ಎಂದು ದೃಢೀಕರಿಸುತ್ತೇನೆ.

Hiremath

ಡಾ. ಶೈಲಜ. ಇಂ. ಹಿರೇಮಠ
ಮಾರ್ಗದರ್ಶಕರು ಮತ್ತು ಪ್ರವಾಚಕರು
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ಸ್ಥಳ: ವಿದ್ಯಾರಣ್ಯ

ದಿನಾಂಕ:

ಪ್ರಮಾಣ ಪತ್ರ

ಸಿದ್ದಿ ಸಮುದಾಯ : ಲಿಂಗ ಸಂಬಂಧಿ ಅಧ್ಯಯನ ಎಂಬ ವಿಷಯ ಕುರಿತು ಸಂಪ್ರಬಂಧವನ್ನು ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ **ಡಾ. ಶೈಲಜ.ಇಂ.ಹಿರೇಮಠ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಸಂಪ್ರಬಂಧ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸುರೇಖಾ ಜಿ. ರಾಠೋಡ
ಸಂಶೋಧಕರು
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ಸ್ಥಳ: ವಿದ್ಯಾರಣ್ಯ

ದಿನಾಂಕ:

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವೈಧಾನಿಕತೆ

೧.೧. ಪ್ರಸ್ತಾವನೆ.

೧.೨. ಸಾಹಿತ್ಯ ಸಮೀಕ್ಷೆ.

೧.೩. ಅಧ್ಯಯನದ ವ್ಯಾಪ್ತಿ

೧.೪. ಅಧ್ಯಯನದ ಉದ್ದೇಶ

೧.೫. ಅಧ್ಯಾಯನದ ವೈಧಾನಿಕತೆ.

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವೈಧಾನಿಕತೆ

೧.೧. ಪ್ರಸ್ತಾವನೆ :

ಕರ್ನಾಟಕದಲ್ಲಿ ಸುಮಾರು ಐವತ್ತಕ್ಕಿಂತ ಹೆಚ್ಚು ಬುಡಕಟ್ಟು ಸಮುದಾಯಗಳು ನೆಲೆನಿಂತಿವೆ. ಯಾವುದೇ ಜಾತಿ, ಅಥವಾ ಧರ್ಮಕ್ಕೆ ಸೇರದ ಈ ಬುಡಕಟ್ಟುಗಳು ತಮ್ಮದೇ ಆದ ವ್ಯವಸ್ಥೆಯ ಅಡಿಯಲ್ಲಿ ಬದುಕನ್ನು ಕಟ್ಟಿಕೊಂಡಿವೆ. ನಾಗರಿಕ ಸಮುದಾಯಗಳಿಂದ ತುಂಬ ದೂರದಲ್ಲಿ ವಾಸಿಸುತ್ತಿರುವ ಇವರು ನಂಬಿಕೆ, ಸಂಪ್ರದಾಯ, ಸಾಹಿತ್ಯ, ಸಂಗೀತ, ನೃತ್ಯ, ಕಲೆ, ಕರಕುಶಲ ಕಲೆ ಮೊದಲಾದ ಹಲವಾರು ಅಂಶಗಳಿಂದ ತುಂಬ ಭಿನ್ನವಾಗಿರುವರು. ವಿಶಿಷ್ಟವಾದ ಸಂಸ್ಕೃತಿಯ ಅಡಿಯಲ್ಲಿ ಬದುಕುತ್ತಿರುವ ಈ ಬುಡಕಟ್ಟು ಸಮುದಾಯಗಳ ಮೇಲೆ ನಾಗರಿಕ ಸಂಸ್ಕೃತಿ ಮತ್ತು ಜಾಗತೀಕರಣದ ಪ್ರಭಾವಕ್ಕೆ ಒಳಗಾಗಿ ತಮ್ಮ ಮೂಲ ಆಚರಣೆಗಳು ಇವರಿಂದ ಕಳಚಿ ಬೀಳಲಾರಂಭಿಸಿವೆ. ಇವರ ಆಚಾರ–ವಿಚಾರ, ನಡೆ–ನುಡಿ, ರೂಢಿ ಸಂಪ್ರದಾಯಗಳಂತ ಇವರ ಆಚರಣ ಕ್ರಮಗಳಲ್ಲಿ ಬದಲಾವಣೆಯ ಗಾಳಿ ಬೀಸಲಾರಂಭಿಸಿದೆ. ಈ ಬುಡಕಟ್ಟು ಸಮುದಾಯಗಳು ಯಾವ ರೀತಿ ಆಧುನಿಕತೆಗೆ ಒಳಗಾಗಿ ಬದಲಾಗುವರೋ ಅದಕ್ಕೆ ವ್ಯತಿರಿಕ್ತವಾಗಿ ಅವರ ಜೀವನ ಸ್ಥಿತಿ ಸಹ ತುಂಬಾ ಆತಂಕಕ್ಕೊಳಪಟ್ಟಿದೆ. ಯಾವುದೇ ರೀತಿಯ ಕಿರುಕುಳವಿಲ್ಲದೆ ಸ್ವಚ್ಛಂದವಾಗಿ ಬದುಕನ್ನು ಸಾಗಿಸುತ್ತಿದ್ದ ಈ ಸಮುದಾಯಗಳಿಗೆ ವಸಹತುಶಾಹಿಯ ಕೊಳ್ಳೆ ಹೊಡೆಯುವ ಕ್ರಿಯೆಯಿಂದಾಗಿ ಇಂದು ಇವರ ಬದುಕು ತುಂಬಾ ಅತಂತ್ರ ಸ್ಥಿತಿಯಲ್ಲಿದೆ.

ಕಾಡಿನಲ್ಲಿ ಸ್ವಚ್ಛಂದ ಹಕ್ಕಿಯಂತೆ, ಯಾವುದೇ ತೊಂದರೆಗಳಿಲ್ಲದೆ ಜೀವನ ಸಾಗಿಸುತ್ತಿರುವ ಈ ಸಮುದಾಯಗಳಿಗೆ ಇಂದು ಕಾಡಿನ ನಾಶಗಳಿಂದ ಇವರ ಬದುಕು ಆತಂಕಗೊಂಡಿದೆ. ಕಾಡನ್ನೇ ನಂಬಿ, ಸಮೃದ್ಧವಾಗಿ ತಮ್ಮ ಸಾಂಸ್ಕೃತಿಕ ಪರಂಪರೆಯನ್ನು ಕಟ್ಟಿಕೊಂಡಿದ್ದ ಇವರು ಇಂದು ನಿರ್ಗತಿಕರು, ನಿರ್ವಸತಿತರಾಗಿರುವರು. ಅರಣ್ಯದಲ್ಲಿ ಸಿಗುವ ಅರಣ್ಯೋತ್ಪನ್ನಗಳಿಂದ ತಮ್ಮ ಪರ್ಯಾಯ ಬದಕನ್ನು ಸಾಗಿಸುತ್ತಿದ್ದ ಇವರು ಇಂದು ಸರ್ಕಾರ ಕೈಗೊಂಡಿರುವ ಅರಣ್ಯ ಕಾಯ್ದೆಗಳಿಂದ ಅರಣ್ಯದಲ್ಲಿ ಪ್ರವೇಶಿಸಲು ಭಯಭೀತರಾಗಿರುವರು. ಆದ್ದರಿಂದ ಬುಡಕಟ್ಟುಗಳು ತಮ್ಮ ಕುಟುಂಬ ನಿರ್ವಹಿಸಲು ಕೂಲಿ ಕಸಬನ್ನು ಮಾಡಲು ನಗರ, ಪಟ್ಟಣಗಳ ಮೊರೆ ಹೋಗುವಂತಾಗಿದೆ. ಆಧುನಿಕತೆಯ ಅಬ್ಬರದ ನಾಗರಿಕತೆಯ ಸಂಪರ್ಕದಿಂದ ಬುಡಕಟ್ಟುಗಳು ತತ್ತರಿಸಿವೆ. ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ

[illegible]

[illegible]

[illegible]

[illegible]

[illegible]

ಹಾಗೂ ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದಿರುವ ಬುಡಕಟ್ಟುಗಳು ಇಂದು ಮುಖ್ಯವಾಹಿನಿಗೆ ಬರಲು ಸಕಲ ರೀತಿಯಿಂದ ಪ್ರಯತ್ನಿಸುತ್ತವೆ. ಆದರೆ ದುರದೃಷ್ಟದ ಸಂಗತಿಯೆಂದರೆ ಸರ್ಕಾರದಿಂದ ದೊರೆಯುವ ಮೂಲಭೂತ ಸೌಲಭ್ಯಗಳು ಇವರಿಗೆ ಸಮರ್ಪಕವಾಗಿ ಸಿಗದಂತಾಗಿದೆ.

ಕರ್ನಾಟಕದಲ್ಲಿರುವ ಹಲವಾರು ಬುಡಕಟ್ಟುಗಳ ಅಭಿವೃದ್ಧಿಗಾಗಿ ಸರ್ಕಾರ ಮತ್ತು ಸರ್ಕಾರೇತರ ಅನೇಕ ಸಂಘ ಸಂಸ್ಥೆಗಳು ಪ್ರಯತ್ನಿಸುತ್ತಿವೆ. ಆದರೂ ಇವರು ನಾಗರಿಕ ಪ್ರಪಂಚದ ಮುಖ್ಯವಾಹಿನಿಗೆ ಬರಲು ಇನ್ನೂವರೆಗೂ ಸಾಧ್ಯವಾಗಿಲ್ಲ. ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯಾದ್ಯಂತ ಚದುರಿದ ಬುಡಕಟ್ಟುಗಳಲ್ಲಿ ಸಿದ್ದಿ ಸಮುದಾಯವು ಒಂದಾಗಿದೆ. ದಟ್ಟವಾದ ಅರಣ್ಯಗಳಲ್ಲಿ ಬದುಕುತ್ತಿರುವ ಈ ಸಮುದಾಯವು ಆಫ್ರಿಕಾ ದೇಶದಿಂದ ಬಹಳ ಹಿಂದೆಯೇ ಭಾರತಕ್ಕೆ ವಲಸೆ ಬಂದು ಕರ್ನಾಟಕದಲ್ಲಿ ಸಹ ಬಂದು ನೆಲೆನಿಂತ ಒಂದು ಜನಾಂಗವಾಗಿದೆ. ಕರ್ನಾಟಕದ ಇತರ ಬುಡಕಟ್ಟು ಜನಾಂಗಗಳಂತೆ ಅವರದೇ ಆದ ಪ್ರತ್ಯೇಕ ಆಚಾರ, ವಿಚಾರಗಳನ್ನು ಹೊಂದಿದವರಾಗಿರುವರು. ಕಾಡಿನಲ್ಲಿ ತಮ್ಮ ವಿಶಿಷ್ಟವಾದ ಬದುಕನ್ನು ಸಾಗಿಸಿಕೊಂಡು ಬಂದಿರುವ ಈ ಸಿದ್ದಿ ಸಮುದಾಯದ ಮಹಿಳೆಯ ಬಗ್ಗೆ ಅಧ್ಯಯನ ಸಾಮಾನ್ಯವಾಗಿ ಎಲ್ಲೂ ಕಂಡುಬರಲಾರದು. ಅಲ್ಲೊಂದು ಇಲ್ಲೊಂದು ಲೇಖನ ಬಿಟ್ಟರೆ ಆಳವಾದ ಅಧ್ಯಯನ ನಡೆದಿಲ್ಲ. ಹೀಗಾಗಿ ಈ ಸಿದ್ದಿ ಸಮುದಾಯದ ಮಹಿಳೆಯರನ್ನು ಕುರಿತು **'ಸಿದ್ದಿ ಸಮುದಾಯ : ಲಿಂಗ ಸಂಬಂಧಿ ಅಧ್ಯಯನ'** ಎಂಬ ವಿಷಯದ ಹಿನ್ನಲೆಯಲ್ಲಿ ನಾನು ಅಧ್ಯಯನವನ್ನು ಕೈಗೊಳ್ಳುತ್ತಿರುವೆನು.

ಈ ಸಿದ್ದಿ ಸಮುದಾಯವು ತಮ್ಮ ನಾಡನ್ನು ಬಿಟ್ಟು ತಮ್ಮದಲ್ಲದ ನಾಡಿನಲ್ಲಿ ಬದುಕನ್ನು ಕಟ್ಟಿ ಜೀವಿಸುತ್ತಿದೆ. ತಮ್ಮ ಮೂಲ ಸಂಸ್ಕೃತಿಯ ಚಹರೆಗಳನ್ನು ಕಳಚಿಕೊಂಡು ಇನ್ನಾವುದೋ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿ ಬದುಕುತ್ತಿದೆ. ದೈಹಿಕವಾಗಿ ದಷ್ಟಪುಷ್ಟರಾದ ಈ ಸಮುದಾಯವು ಕಠಿಣವಾದ ಕೆಲಸಗಳನ್ನು ಮಾಡಲು ಹಿಂಜರಿಯಲಾರದು. ಈ ದೃಷ್ಟಿಯಿಂದ ಇವರನ್ನು ಒಡೆಯರು ತಮ್ಮ ಕೆಲಸ ಕಾರ್ಯಗಳನ್ನು ಮಾಡಲು ನೇಮಿಸಿಕೊಳ್ಳುತ್ತಿದ್ದರು. ಉನ್ನತ ವರ್ಗದ ಕೈಕೆಳಗೆ ಗುಲಾಮರಾಗಿ ಜೀವಿಸುವ ಇವರು ಅವರಿಂದ ಇವರಿಗಾದ ಹಿಂಸೆ ಅಪಾರ. ಈ ಸಿದ್ದಿ ಸಮುದಾಯವು ತಮ್ಮನ್ನು ಸಾಕುತ್ತಿರುವ ಉನ್ನತ ಸಮುದಾಯದ ಪ್ರಭಾವಕ್ಕೆ ಒಳಗಾಗಿ ತಮ್ಮ ಆಚಾರ-ವಿಚಾರಗಳಲ್ಲಿ ಉನ್ನತ ಸಮುದಾಯದ ಚಹರೆಗಳು ಗೋಚರಿಸುತ್ತಿವೆ. ಯಾವುದೇ ಸಮುದಾಯದ ಜೀವನ ವಿಧಾನವು ಬದಲಾವಣೆಗೊಳ್ಳಲೇಬೇಕು. ಅದು ಅವರ ಮುಖ್ಯ ಗುಣ. ಅನ್ಯ ಸಂಸ್ಕೃತಿಯ ಪ್ರಭಾವಕ್ಕೆ ಸಿಲುಕಿದ ಈ ಸಿದ್ದಿ ಸಮುದಾಯವು ತಮ್ಮ ಪ್ರತಿಯೊಂದು ಜೀವನ ವಿಧಾನದಲ್ಲಿ

ಇಂದು ಬದಲಾಗುತ್ತಿದೆ. ಅದರಂತೆ ಈ ಸಿದ್ದಿ ಸಮುದಾಯದ ಮಹಿಳೆಯರ ಜೀವನ ವಿಧಾನ ಸಹ ಬದಲಾವಣೆಗೆ ಒಳಗಾಗಿದೆ. ಪ್ರಾರಂಭದಲ್ಲಿ ಈ ಸಮುದಾಯದ ಸ್ತ್ರೀಯರು ಅನುಭವಿಸಿದ ಕಿರುಕುಳ ಅಪಾರ. ಉನ್ನತ ಸಮುದಾಯದವರು, ಅಥವಾ ಒಡೆಯರುಗಳು ಇವರನ್ನು ತಮ್ಮ ಲೈಂಗಿಕ ತ್ರುಷೆಗಾಗಿಯೇ ಬಳಸುತ್ತಿದ್ದರು.

ನಮ್ಮ ಭಾರತೀಯ ಸಮಾಜದಲ್ಲಿ ಧರ್ಮದ ಹೆಸರಿನಲ್ಲಿ ವರ್ಗದ ಹೆಸರಿನಲ್ಲಿ, ಸಮುದಾಯದ ಹೆಸರಿನಲ್ಲಿ, ನಡೆಯುತ್ತಿರುವ ದಬ್ಬಾಳಿಕೆ, ದೌರ್ಜನ್ಯ, ಶೋಷಣೆ, ಕೊನೆಗಾಣುವಂತಿದ್ದರೂ ಮಹಿಳಾ ಶೋಷಣೆ ಕೊನೆಯಾಗುವುದಿಲ್ಲ. ಅದು ನಿರಂತರ....... ಏಕೆಂದರೆ ಪ್ರತಿವರ್ಗದಲ್ಲೂ ಪುರುಷರಿಗಿಂತ ಮಹಿಳೆಯರು ಹೆಚ್ಚು ಶೋಷಿತರು, ಅಷ್ಟೇ ಅಲ್ಲ ಸಾಮಾಜಿಕ ಶ್ರೇಣಿಕೃತ ವ್ಯವಸ್ಥೆಯಲ್ಲಿ ಅನುಕೂಲಗಳನ್ನು ಪಡೆದಿರುವ ಮಹಿಳೆಯರು ಕೂಡ ಒಂದಲ್ಲಾ ಒಂದು ರೀತಿಯ ಶೋಷಣೆಗೆ ಒಳಗಾಗುತ್ತಿರುತ್ತಾರೆ. ಒಟ್ಟಿನಲ್ಲಿ ಮಹಿಳಾ ಶೋಷಣೆಗೆ ಅಂಚಿಲ್ಲದಾಗಿದೆ.

ಭಾರತೀಯ ಸಮಾಜದಲ್ಲಾಗಲಿ ಅಥವಾ ಎಲ್ಲ ಬುಡಕಟ್ಟು ಸಮಾಜದಲ್ಲಾಗಲಿ ಲಿಂಗದ ಹೆಸರಿನಲ್ಲಿ ಮಹಿಳೆಯರ ಮೇಲೆ ನಿರಂತರ ಶೋಷಣೆ ನಡೆಯುತ್ತಲೇ ಇದೆ. "ಲಿಂಗ ಒಂದು ಜೈವಿಕ ಪದ. ಜೈವಿಕ ಆಧಾರದ ಮೇಲೆ ಮನುಷ್ಯರು ಗಂಡಸು, ಹೆಂಗಸು ಎಂದು ಗುರುತಿಸುವ ಪದ. ಸ್ತ್ರೀಪುರುಷರ ನಡುವಿನ ಜೈವಿಕ ವ್ಯತ್ಯಾಸ ಸಹಜವಾದದು, ಪ್ರಕೃತಿದತ್ತವಾದುದು. ಅದನ್ನು ಬದಲಾಯಿಸಲು ಸಾಧ್ಯವಿಲ್ಲ. ಕೆಲವು ವಿಷಯಗಳಲ್ಲಿ ಗಂಡಸರು ವಿಶೇಷ ಶಕ್ತಿ ಅಥವಾ ದುರ್ಬಲತೆಯನ್ನು ಪಡೆದಿದ್ದಾರೆ. ಇನ್ನು ಕೆಲವು ವಿಷಯಗಳಲ್ಲಿ ಸ್ತ್ರೀಯರು ವಿಶೇಷ ಶಕ್ತಿ ಅಥವಾ ದುರ್ಬಲತೆಯನ್ನು ಹೊಂದಿರುತ್ತಾರೆ. ಈ ವ್ಯತ್ಯಾಸವನ್ನು ಶ್ರೇಣಿಕೃತಗೊಳಿಸಿ ಗಂಡಸರು ಮೇಲು, ಬಾಲಾಢ್ಯರು, ಆಳುವವರು : ಹೆಂಗಸರು ಕೀಳು, ಅಬಲೆಯರು, ಆಳಲ್ಪಡುವವರು ಎಂದು ನೋಡಲಾಗುತ್ತದೆ. ಸ್ತ್ರೀ–ಪುರುಷರ ಮೇಲೆ ಹೇರಿರುವ ಸಾಮಾಜಿಕ ಪಾತ್ರ ಮತ್ತು ನಡುವಳಿಕೆಯನ್ನು ವಿವರಿಸಲು ಮತ್ತು ಸ್ತ್ರೀ–ಪುರುಷರನ್ನು ಅಸಮಾನವಾಗಿ ನೋಡುವುದನ್ನು ಸಮರ್ಥಿಸಿಕೊಳ್ಳಲು ಈ ಜೈವಿಕ ಅಂಶಗಳನ್ನು ಬಳಸಲಾಗುತ್ತದೆ. ಅದೇ ರೀತಿ ಸ್ತ್ರೀ–ಪುರುಷರ ಸಾಂಪ್ರದಾಯಿಕ ರೂಢಿಬದ್ಧ ಪಾತ್ರಗಳನ್ನು ಪ್ರಚುರ ಪಡಿಸಲು, ಬಲಪಡಿಸಲು ಮತ್ತು ಪುನರ್ ಸ್ಥಾಪಿಸಲು ಜೈವಿಕ ಅಂಶಗಳನ್ನೇ ಆಧಾರವಾಗಿಟ್ಟು ಕೇಳಲಾಗುತ್ತದೆ. ಲಿಂಗಾಧಾರದ ಮೇಲೆ ಸ್ತ್ರೀ ಅಥವಾ ಪುರುಷರಲ್ಲಿ ಯಾರೊಬ್ಬರು ಮೇಲು ಅಥವಾ ಕೀಳು ಎಂದು ರುಜುವಾತು ಪಡೆಸಲು ಯಾವ ಸಾಕ್ಷ್ಯಾಧಾರವು ಇಲ್ಲ. ಜೈವಿಕ ವ್ಯತ್ಯಾಸವನ್ನು ನಾವು ಸಹಜವೆಂದು ಒಪ್ಪಿಕೊಳ್ಳಬೇಕು. ಜೈವಿಕ ವ್ಯತ್ಯಾಸದಲ್ಲಿರುವ ಮೇಲುಕೀಳೆಂಬ ಭಾವನೆಯನ್ನು ಹೋಗಲಾಡಿಸಬೇಕು.[೭] ಆದರೆ

ನಮ್ಮ ಸಮಾಜ ಲಿಂಗವನ್ನು ಮುಂದಿಟ್ಟುಕೊಂಡು ಲಿಂಗವ್ಯವಸ್ಥೆಯನ್ನು ರೂಪಿಸುತ್ತಿದೆ. ಲಿಂಗವ್ಯವಸ್ಥೆ ಎಂದರೆ – ಸ್ತ್ರೀ–ಪುರುಷರ ನಡುವಿನ ಸಾಮಾಜಿಕ, ಸಾಂಸ್ಕೃತಿಕ ಸಂಬಂಧ – ಪಾತ್ರ ಮತ್ತು ನಡುವಳಿಕೆಯನ್ನು ಗುರುತಿಸುವ ಪದವೇ ಲಿಂಗವ್ಯವಸ್ಥೆ. ಈ ಲಿಂಗವ್ಯವಸ್ಥೆಯು ಮಗು ಹುಟ್ಟಿದಾಗಿನಿಂದ ಸಾಮಾಜಿಕರಣ ರೂಪದಲ್ಲಿ ಕೆಲಸ ಮಾಡುತ್ತಿದೆ. ಈ ಸಾಮಾಜಿಕರಣ ಲಿಂಗ ವಿಭಜನೆಗೆ ಕಾರಣವಾಗಿದೆ. ಮಕ್ಕಳು ಹೇಗೆ ಲಿಂಗವ್ಯವಸ್ಥೆಯ ಅನನ್ಯತೆಯನ್ನು ಬೆಳೆಸಿಕೊಳ್ಳುತ್ತವೆ. ಮತ್ತು ಲಿಂಗ ವ್ಯವಸ್ಥೆಯ ವಿಭಜನೆಯನ್ನು ಕಲಿಯುತ್ತೇವೆ. ಮಗು ಬೆಳೆಯುತ್ತಾ ಹೋದಂತೆ ತನ್ನ ಪಾತ್ರ ಸಮಾಜದಲ್ಲಿ ಏನು, ತನ್ನ ಅಸ್ತಿತ್ವವನ್ನು ಹೇಗೆ ಗುರುತಿಸಿಕೊಳ್ಳಬೇಕು ಎಂಬುದನ್ನು ಸಾಮಾಜಿಕರಣದ ಮೂಲಕ ಪಡೆಯುತ್ತದೆ. ಸಾಮಾಜಿಕರಣ ಪಡೆದ ಮಕ್ಕಳು ಮುಂದೆ ಮಹಿಳೆಯನ್ನು ಅಧೀನ ನೆಲೆಗೆ ತಳ್ಳುತ್ತವೆ. ಆದ್ದರಿಂದ ಲಿಂಗವ್ಯವಸ್ಥೆಯನ್ನು ತೊಡೆದು ಹಾಕಲು ಮಹಿಳಾ ಅಧ್ಯಯನ ಮತ್ತು ಸ್ತ್ರೀವಾದಗಳು ಉಗಮವಾದವು. ಮಹಿಳಾ ಅಧ್ಯಯನವು 'ಲಿಂಗ ಸಂಬಂಧಿ' ಅಧ್ಯಯನವಾಗಿದೆ. ಮಹಿಳೆಯರ ಪರಿಸ್ಥಿತಿಯನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಅರ್ಥಮಾಡಿಕೊಂಡು ಜಗತ್ತಿನೊಂದಿಗೆ ಮಹಿಳೆಯರ ಸಂಬಂಧ, ಅವರ ತುಳಿತ ಮತ್ತು ತಾರತಮ್ಯಕ್ಕೆ ಕಾರಣಗಳನ್ನು ಕಂಡು ಹಿಡಿದು ಅವರ ಪರಸ್ಥಿತಿಯನ್ನು ಬದಲಾಯಿಸಲು ನಡೆಸುವ ಪ್ರಯತ್ನವೇ ಮಹಿಳಾ ಅಧ್ಯಯನ.[೨] ಅದೇ ಹಿನ್ನೆಲೆಯಲ್ಲಿ ಮಹಿಳೆಯರ ಕುರಿತು ಸ್ತ್ರೀವಾದ ಹುಟ್ಟಿಕೊಂಡಿತ್ತು.

ಸನಾತನ ಕಾಲದಿಂದಲೂ ಶೋಷಿತಳಾಗಿರುವಂತಹ ಮಹಿಳೆಯ ಶೋಷಣೆಯ ಸ್ವರೂಪಗಳು ಭಿನ್ನವಾಗಿವೆ. ಶೋಷಣೆಗೆ ವರ್ಗದ ಕಲ್ಪನೆಯಿಲ್ಲ. ಅದು ಮೇಲ್ವರ್ಗದ, ಮಧ್ಯಮ ವರ್ಗದ ಮತ್ತು ಕೆಳವರ್ಗದ ಮಹಿಳೆಯರ ಮೇಲೆ ನಿತ್ಯವೂ ನಡೆಯುತ್ತಿವೆ. ಅದು ದೈಹಿಕವಾದ ಶೋಷಣೆ ಆಗಿರಬಹುದು. ಇಲ್ಲವೆ ಮಾನಸಿಕ ಶೋಷಣೆ ಯಾಗಿರಬಹುದು. ಒಟ್ಟಿನಲ್ಲಿ ಮಹಿಳೆಯು ಶೋಷಣೆಯನ್ನು ಎದುರಿಸುತ್ತಿದ್ದಾಳೆ. ಈ ಶೋಷಣೆಯಿಂದ ಸಿದ್ದಿ ಸಮುದಾಯದ ಮಹಿಳೆ ಹೊರತಾಗಿಲ್ಲ. ನೂರಾರು ವರ್ಷಗಳ ಹಿಂದೆ ಗುಲಾಮಳಾಗಿ ಬಂದ ಸಿದ್ದಿ ಮಹಿಳೆ ಒಂದಲ್ಲಾ ಒಂದು ರೀತಿಯಲ್ಲಿ ಶೋಷಣೆಗೆ ಒಳಗಾಗುತ್ತಲೆ ಬಂದಿದ್ದಾಳೆ.

ಸಿದ್ದಿ ಸಮುದಾಯವು ತನ್ನದೇ ಆದ ನಿರ್ದಿಷ್ಟ ವಾಸಸ್ಥಾನ, ಸಾಮಾಜಿಕ, ಆರ್ಥಿಕ, ಧಾರ್ಮಿಕ ರಚನೆಯನ್ನು, ಭಾಷೆ, ವೇಷಭೂಷಣ, ಆಚಾರ–ವಿಚಾರ, ರೀತಿ–ನೀತಿ, ನ್ಯಾಯ ವ್ಯವಸ್ಥೆಯನ್ನು ಹೊಂದಿದೆ. ವರ್ತಮಾನದಲ್ಲಿ ಸಿದ್ದಿ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಜೀವನ ಹೇಗಿದೆ? ಅವರ ಶ್ರಮಕ್ಕೆ ತಕ್ಕ ಪ್ರತಿಫಲ ಸಿಗುತ್ತಿದೆಯೇ? ಅವರು ಎದುರಿಸುತ್ತಿರುವ ಸಮಸ್ಯೆಗಳೇನು? ಮತ್ತು ಅವರ ಶೈಕ್ಷಣಿಕ ಸ್ಥಿತಿಗತಿ ಹೇಗಿದೆ? ಎಂಬುದನ್ನು ಕಂಡುಕೊಳ್ಳುವುದರ ಜೊತೆಗೆ ಆಧುನಿಕ ಸಂದರ್ಭದಲ್ಲಿ ಈ ಸಮುದಾಯದಲ್ಲಿ

ಉಂಟಾಗುತ್ತಿರುವ ಸ್ಥಿತ್ಯಂತರಗಳಾವುವು? ಮತ್ತು ಅವುಗಳ ಸ್ವರೂಪವೇನು? ಎಂಬುದನ್ನು "ಸಿದ್ದಿ ಸಮುದಾಯ : ಲಿಂಗಸಂಬಂಧಿ ಅಧ್ಯಯನ" ಎಂಬ ಸಂಪ್ರಬಂಧದಲ್ಲಿ ಚರ್ಚಿಸಲಾಗಿದೆ.

೧.೨. ಸಾಹಿತ್ಯ ಸಮೀಕ್ಷೆ :

ಉತ್ತರ ಕನ್ನಡ ಜಿಲ್ಲೆಯು ವಿಭಿನ್ನ ಜನಾಂಗಗಳ ಸುಂದರ ತಾಣವಾಗಿದೆ. ಒಂದೆಡೆ ದಟ್ಟ ಅರಣ್ಯವಿದ್ದು ಮತ್ತೊಂದೆಡೆ ಸಾಗರವಿದೆ. ಈ ಪ್ರಾಂತ್ಯದಲ್ಲಿ ಹಲವಾರು ಬುಡಕಟ್ಟು ಸಮುದಾಯಗಳು ತಮ್ಮದೇ ಆದ ಪ್ರತ್ಯೇಕತೆಯನ್ನು ಕಾಯ್ದುಕೊಂಡು ತಮ್ಮದೇ ಆದ ವ್ಯವಸ್ಥೆಯ ಅಡಿಯಲ್ಲಿ ಜೀವಿಸುತ್ತಿವೆ. ಇಂತಹ ಸಿದ್ದಿ ಸಮುದಾಯದ ಬಗ್ಗೆ ಹಲವಾರು ಅಧ್ಯಯನಗಳು ನಡೆದಿವೆ. ಅದರಲ್ಲಿ ಉಪಸಂಸ್ಕೃತಿ ಅಧ್ಯಯನ ಮಾಲೆಯಲ್ಲಿ "ಸಿದ್ದಿಯರ ಸಂಸ್ಕೃತಿ" ಹಾಗೂ "ನಮ್ಮೊಳಗೊಂದು ಪುಟ್ಟ ಆಫ್ರಿಕಾ" ಎಂಬ ಕೃತಿಗಳಲ್ಲಿ ಡಾ.ಹಿ.ಚಿ. ಬೋರಲಿಂಗಯ್ಯ ರವರು ಸಿದ್ದಿಯರ ಮೂಲ, ಅವರ ಸಾಮಾಜಿಕ, ಆರ್ಥಿಕ ಬದುಕು, ಸಾಂಸ್ಕೃತಿಕ ಬದುಕುಗಳ ಬಗ್ಗೆ ವಿವರಿಸಿದ್ದಾರೆ. ಹಾಗೂ "ಕರ್ನಾಟಕ, ಜಾನಪದ ಕಲೆಗಳ ಕೋಶ", ಇದರಲ್ಲಿ ಸಿದ್ದಿ ಜನಾಂಗದ ಕುಣಿತದಲ್ಲಿ ಮಹಿಳೆಯರು ಪಾಲ್ಗೊಳ್ಳುತ್ತಿರುವುದನ್ನು ಸ್ಥೂಲವಾಗಿ ತಿಳಿಸಿದ್ದಾರೆ.

ಕಿರಣ ಕಮಲ ಪ್ರಸಾದರ In Search of an identity an ethnographic study of the Siddis in Karnataka ಇದರಲ್ಲಿ ಸಿದ್ದಿಗಳ ಮೂಲ, ಅವರು ಕರ್ನಾಟಕದಲ್ಲಿ ಎಲ್ಲೆಲ್ಲಿ ನೆಲೆಸಿದ್ದಾರೆ. ಮತ್ತು ಅವರ ಜೀವನ ಕ್ರಮವನ್ನು ವಿವರಿಸಿರುವರು. "ಕರ್ನಾಟಕ ರಾಜ್ಯ ಗ್ಯಾಸೆಟಿಯರ ಭಾಗ ಒಂದು" ಇದರಲ್ಲಿ ಸಿದ್ದಿಗಳ ಧರ್ಮಾಚರಣೆಗಳ ಬಗ್ಗೆ ತಿಳಿಸಿದ್ದಾರೆ. ಹೆಚ್.ಡಿ. ಪ್ರಶಾಂತರವರು ಸಂಪಾದಿಸಿದ "ಕರ್ನಾಟಕ ರಾಜ್ಯ ಕೋಶ" ಇದರಲ್ಲಿ ಸಿದ್ದಿ ಸಮುದಾಯದ ಮೂಲ, ಜೀವನ ಕ್ರಮ, ಸಂಸ್ಕೃತಿ, ಕಸಬು ಶೈಕ್ಷಣಿಕತೆಯ ಬಗ್ಗೆ ತಿಳಿಸಿದ್ದಾರೆ.

ಸಿದ್ದಿ ಸಮುದಾಯದ ಬಗ್ಗೆ ಈ ಕೆಳಗಿನ ಕೃತಿಗಳಲ್ಲಿ ಅಲ್ಪಸ್ವಲ್ಪ ಮಾಹಿತಿ ದೊರೆಯುವುದು. "ಕರ್ನಾಟಕ ಬುಡಕಟ್ಟುಗಳು ಸಂಪುಟ ೧"ರಲ್ಲಿ ವಿಘ್ನೇಶ್ವರ ಭಟ್, ಉತ್ತರಕನ್ನಡ ಜಿಲ್ಲೆಯ ಸಿದ್ದಿ ಜನಾಂಗ ಕುರಿತು ಬರೆದ ಎನ್.ಆರ್. ನಾಯಕ್‌ರವರು ೧೯೮೯ 'ಸಿದ್ದಿ ಜನರು' ಎಂಬ ಕಿರುಪುಸ್ತಿಕೆಯನ್ನು ಡಾ.ಎಲ್. ಹೆಗಡೆಯವರು, ಐ.ಬಿ.ಎಚ್ ಪ್ರಕಾಶನದ ಮೂಲಕ ಪ್ರಕಟಿಸಿದರು. ಈ ಮೇಲಿನ ಕೃತಿಗಳಲ್ಲಿ ಸಿದ್ದಿಯರ ಬದುಕಿನ ವಿವರಗಳನ್ನು ತಿಳಿಸಿರುವರು. ಕರ್ನಾಟಕ ವಿಶ್ವವಿದ್ಯಾಲಯದ "ಜಾನಪದ ದರ್ಶನ ಮಾಲಿಕೆ ೧೭ನೆಯ ಸಂಪುಟ"ದಲ್ಲಿ ಎಸ್.ಎಮ್.ಕುಂತಾಪುರ ಎಂಬುವವರು ಸಿದ್ದಿಯರ ಕುರಿತು

ಲೇಖನವೊಂದನ್ನು ಪ್ರಕಟಿಸಿದ್ದಾರೆ. ಎಡ್ಗರ್ ಥರ್ಸಟನರ 'Cast and Tribes of Southern India' ಸಂಪುಟಗಳು ಮತ್ತು ೧೯೩೦ರಲ್ಲಿ ಪ್ರಕಟವಾದ ಅನಂತಕೃಷ್ಣ ಅಯ್ಯರ ಅವರ 'The Mysore Tribes and Casts' ಸಂಪುಟಗಳಲ್ಲಿ ಸಿದ್ದಿಯರ ಜೀವನ ವಿಧಾನವನ್ನು ವಿವರಿಸಲಾಗಿದೆ. ಮೇಲಿನ ಬಹುತೇಕ ಅಧ್ಯಯನಗಳು ಸಿದ್ದಿಯರ ಬದುಕಿನ ಯಥಾವತ್ತು ವಿವರಗಳನ್ನು ನೀಡಿವೆ. ಸಿದ್ದಿಯರ ವಲಸೆ, ಅವರ ನೆಲೆಗಳು, ಭೌಗೋಳಿಕ ಪ್ರಕಾರ, ಕಲೆ, ಜೀವನ ವಿಧಾನ, ಆಚರಣೆಗಳ ಕುರಿತು ಮೇಲಿನ ಕೃತಿಗಳಲ್ಲಿ ದೊರೆಯುತ್ತವೆ. ಆದರೆ ಮಹಿಳೆಯರ ಬದುಕನ್ನು ಕುರಿತು ಪ್ರತ್ಯೇಕವಾದ ಮಾಹಿತಿಗಳು ಲಭ್ಯವಾಗಿಲ್ಲ. ಆದ್ದರಿಂದ ಮಹಿಳೆಯರ ಬದುಕು, ಅವರು ಎದುರಿಸುವ ಸಮಸ್ಯೆಗಳೇನು, ಅವರ ಕೌಟುಂಬಿಕ ಸ್ಥಾನಮಾನಗಳೇನು, ಎಂಬುದನ್ನು ಮಹಿಳಾ ದೃಷ್ಟಿಕೋನದಿಂದ ತಿಳಿದುಕೊಳ್ಳುವುದು ಅವಶ್ಯಕವಾಗಿರುವುದರಿಂದ ಸಿದ್ದಿ ಸಮುದಾಯ : ಲಿಂಗ ಸಂಬಂಧಿ ಅಧ್ಯಯನವನ್ನು ಕೈಗೊಳ್ಳಲಾಗಿದೆ.

೧.೩. ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನ ಸಿದ್ಧಿ ಸಮುದಾಯವು ಉತ್ತರಕನ್ನಡ, ಬೆಳಗಾಂ, ಧಾರವಾಡ ಜಿಲ್ಲೆಗಳಲ್ಲಿ ಕಂಡುಬರುತ್ತಾರೆ. ಆದರೆ ನಾನು ಉತ್ತರ ಕನ್ನಡ ಜಿಲ್ಲೆಗೆ ನನ್ನ ಅಧ್ಯಯನ ಸೀಮಿತಪಡಿಸಿ ಅದರಲ್ಲಿನ ಕೆಲವು ತಾಲೂಕುಗಳಲ್ಲಿನ ಗ್ರಾಮಗಳನ್ನು ಆಯ್ದುಕೊಂಡಿದ್ದೇನೆ. ಅವುಗಳು ಅಂಕೋಲಾ ತಾಲೂಕಿನ ರಾಮನಗೂಳಿ, ಕಲ್ಲೇಶ್ವರ, ವಂಡರಮನೆ, ಯಲ್ಲಾಪೂರ ತಾಲೂಕಿನ ತಾವರಕಟ್ಟಾ, ಹಳಿಯಾಳ ತಾಲೂಕಿನ ಗೂಳ್ಳಿಹಳ್ಳಿ, ತತ್ವಣಗಿ ಹೊಸುರು ಎಂಬ ಗ್ರಾಮಗಳನ್ನು ಆಯ್ದುಕೊಂಡಿದ್ದೇನೆ. ಏಕೆಂದರೆ ಇಪ್ಪತ್ತು ಜನ ಹಿಂದೂ ಸಿದ್ದಿ ಮಹಿಳೆಯುರು, ಇಪ್ಪತು ಜನ ಕ್ರಿಶ್ಚಿಯನ್ ಸಿದ್ದಿ ಮಹಿಳೆಯರು ಮತ್ತು ಇಪ್ಪತು ಜನ ಮುಸ್ಲಿಂ ಸಿದ್ದಿ ಮಹಿಳೆಯರು ಒಟ್ಟು ಅರವತ್ತು ಜನ ಸಿದ್ದಿ ಮಹಿಳೆಯರನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಈ ಹಿಂದೂ, ಕ್ರಿಶ್ಚಿಯನ್, ಮುಸ್ಲಿಂ ಸಿದ್ದಿ ಮಹಿಳೆಯರ ಕುರಿತು ಮಾಹಿತಿ ಪಡೆಯಲು ಈ ಮೇಲಿನ ಗ್ರಾಮಗಳನ್ನು ಕ್ಷೇತ್ರಕಾರ್ಯಕ್ಕೆ ಒಳಪಡಿಸಲಾಯಿತು. ಏಕೆಂದರೆ ಒಂದೊಂದು ಗ್ರಾಮಗಳಲ್ಲಿ ಒಂದೊಂದು ಧರ್ಮದವರು ವಾಸಿಸುತ್ತಿರುವರು. ಕಲ್ಲೇಶ್ವರದಲ್ಲಿ ವಂಡರಮನೆ, ರಾಮನಗೂಳಿಯಲ್ಲಿ ಹಿಂದೂ ಸಿದ್ದಿಗಳು, ತಾವರಕಟ್ಟಾದಲ್ಲಿ ಕ್ರಿಶ್ಚಿಯನ್ ಸಿದ್ದಿಗಳು ಮತ್ತು ಗೂಳ್ಳಿಹಳ್ಳಿ, ತತ್ವಣಗಿ ಹೊಸುರುಗಳಲ್ಲಿ ಮುಸ್ಲಿಂ ಸಿದ್ದಿಗಳು ವಾಸಿಸುತ್ತಿರುವುದರಿಂದ ಈ ಗ್ರಾಮಗಳಲ್ಲಿ ಕ್ಷೇತ್ರ ಕಾರ್ಯವನ್ನು ಕೈಗೊಳ್ಳಲಾಯಿತು. ಈ ಅಧ್ಯಯನವು ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಸಮುದಾಯದ ಮಹಿಳೆಯರಿಗೆ ಮಾತ್ರ ಸೀಮಿತವಾಗಿದೆ.

೧.೪. ಅಧ್ಯಯನದ ಉದ್ದೇಶಗಳು:

ಭಾರತವು ಅನೇಕ ಜಾತಿ, ಧರ್ಮ, ಉಪಜಾತಿಗಳನ್ನು ತನ್ನ ಒಡಲಿನಲ್ಲಿ ಆಶ್ರಯವನ್ನು ನೀಡಿದೆ. ಅದೇ ರೀತಿಯಾಗಿ ಅನೇಕ ಬುಡಕಟ್ಟು ಸಮುದಾಯಗಳನ್ನು ತನ್ನದೇ ಆದ ಆಚಾರ ವಿಚಾರ, ರೂಢಿ ಸಂಪ್ರದಾಯ, ಆರ್ಥಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಜೀವಿಸಲು ಅವಕಾಶವನ್ನು ನೀಡಿದೆ. ನಮ್ಮ ದೇಶವು ವರ್ಗ, ವರ್ಣ, ಜಾತಿ, ಧರ್ಮ ಮುಂತಾದವುಗಳಿಗೆ ಮಹತ್ವವನ್ನು ನೀಡುತ್ತಾ ಬಂದಿದೆ. ಬುಡಕಟ್ಟು ಸಮುದಾಯಗಳಿಗೆ ತಮ್ಮದೇ ಆದ ರೀತಿಯ ಸ್ವತಂತ್ರ್ಯ ಬದುಕನ್ನು ಕಟ್ಟಿಕೊಳ್ಳಲು ಅವಕಾಶವನ್ನು ನೀಡಿದೆ. ಅದೇ ರೀತಿಯಾಗಿ ಸಿದ್ದಿಗಳು ಕೂಡ ಮೂಲತಃ ಭಾರತದವರಲ್ಲದಿದ್ದರು ಅವರನ್ನು ಭಾರತವು ತನ್ನ ಒಡಲಿನಲ್ಲಿ ಆಶ್ರಯವನ್ನು ನೀಡಿ ಅವರಿಗೆ ಅವರದೇ ಆದ ಹಕ್ಕು ಬಾಧ್ಯತೆಗಳನ್ನು ನೀಡಿದೆ. ಪೋರ್ಚ್‌ಗೀಸರ ಗುಲಾಮಗಿರಿ ಪದ್ಧತಿಗೆ ಒಳಗಾಗಿ ಅನಿವಾರ್ಯವಾಗಿ ಭಾರತಕ್ಕೆ ಬಂದು ಸೇರಿದ ಇವರುಗಳು ಉತ್ತರ ಕನ್ನಡ ಜಿಲ್ಲೆಯಲ್ಲಿ ವಾಸವಾಗಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಸಮುದಾಯದ ಜೀವನವನ್ನು ಅರಿಯುವುದರ ಜೊತೆಗೆ ಅವರ ಸಂಸ್ಕೃತಿ, ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿಗಯನ್ನು ಅರಿತುಕೊಳ್ಳುವುದಾಗಿದೆ. ಸಿದ್ದಿ ಸಮುದಾಯ ಕುರಿತು ಅಧ್ಯಯನ ಕೈಗೊಳ್ಳುವುದರ ಜೊತೆಗೆ ನಾನು ಸಿದ್ದಿ ಮಹಿಳೆಯರ ಸ್ಥಿತಿಗತಿ ಕುರಿತು ಅಧ್ಯಯನವನ್ನು ಕೈಗೊಂಡಿದ್ದೇನೆ. ಏಕೆಂದರೆ "ಹೆಣ್ಣಿನ ಜೈವಿಕತೆಯನ್ನು ಪ್ರಧಾನ ವಾಗಿಟ್ಟುಕೊಂಡು ಪುರುಷನು ಕಟ್ಟಿಕೊಂಡ ಸಾಮಾಜಿಕ ಸಂಬಂಧಗಳು, ಸಾಮಾಜಿಕ ಸಂಸ್ಥೆಗಳು ಹಾಗೂ ಸಾಮಾಜಿಕ ಪ್ರಕ್ರಿಯೆಗಳತ್ತ ದೃಷ್ಟಿ ಹಾಯಿಸಬೇಕಿದೆ. ಲಿಂಗತಾರತಮ್ಯದ ನೆಲೆಯಲ್ಲಿ ರೂಪುಗೊಂಡ ಕೌಟುಂಬಿಕ, ಸಾಮಾಜಿಕ, ಧಾರ್ಮಿಕ ಸಂಬಂಧಗಳನ್ನು ತೀವ್ರ ಸಮಸ್ಯೆಗಳನ್ನಾಗಿ ಪರಿಗಣಿಸಬೇಕಿದೆ. ಅಂದಾಗ ಮಾತ್ರ ಲಿಂಗದ ನೆಲೆಯಲ್ಲಿ ಸಮಾಜವು ಹೇಗೆ ತಾರತಮ್ಯಗಳನ್ನು ನಿಭಾಯಿಸುತ್ತದೆ ಎಂಬುದು ಅರ್ಥವಾಗುತ್ತದೆ.[೨]

ಸಿದ್ದಿ ಸಮುದಾಯದ ಮಹಿಳೆಯರ ಬದುಕನ್ನು ಇತರ ಸಮುದಾಯದವರೊಡನೆ ಹೋಲಿಸಿಕೊಂಡು ಗ್ರಹಿಸುವುದಕ್ಕಿಂತ ಕೆಲವೊಂದು ಸೈದ್ಧಾಂತಿಕ ಆಯಾಮಗಳ ಮೂಲಕ ಸಿದ್ದಿ ಮಹಿಳೆಯರ ಜೀವನ ಸ್ಥಾನಮಾನವನ್ನು ಗ್ರಹಿಸುವುದು ಹೆಚ್ಚು ಸೂಕ್ತವೆನಿಸಿದೆ. ಏಕೆಂದರೆ "ಪುರುಷರು ಕಟ್ಟಿಕೊಟ್ಟ ಲಿಂಗ ಸಂಬಂಧಗಳು ನೈಸರ್ಗಿವಾದವುಗಳಲ್ಲ. ಹೀಗಾಗಿ ಅವುಗಳಿಗೆ ಸ್ಥಿರತೆ ಎಂಬುದಿಲ್ಲ. ಹಾಗೆಂದ ಮಾತ್ರಕ್ಕೆ ಸಾವಿರಾರು ವರ್ಷಗಳ ಚರಿತ್ರೆ ಇರುವ ಪುರುಷ ನಿರ್ಮಿತ ಸಾಮಾಜಿಕ ಅಳತೆಗಳನ್ನು ಒಡೆಯುವುದು ಸುಲಭವೆಂದರ್ಥವಲ್ಲ. ಶತಮಾನಗಳುದ್ದಕ್ಕೂ ತನ್ನ ಸ್ಥಿರತೆಯನ್ನು ಉಳಿಸಿಕೊಂಡು ಆಚರಣೆಯಲ್ಲಿ ಇರುವ ಪುರುಷ ಪ್ರಧಾನ ಸಾಮಾಜಿಕ ಮೌಲ್ಯಗಳನ್ನು ಬದಲಾಯಿಸಬೇಕಾದರೆ, ಈಗಾಗಲೇ ಚಲಾವಣೆಯಲ್ಲಿ

ಇರುವ ಸಾಮಾಜಿಕ ಮೌಲ್ಯಗಳನ್ನು ವಿಮರ್ಶಿಸಿ, ಪುನರ್ ಮೌಲ್ಯೀಕರಣಗೊಳಿಸಬೇಕು. ಮಾನವತಾವಾದದ ಹಿನ್ನೆಲೆಯಲ್ಲಿ ಹೊಸ ಮೌಲ್ಯಗಳನ್ನು ಹುಟ್ಟುಹಾಕಬೇಕಾದರೆ ಸ್ತ್ರೀಯರು ಬೌದ್ಧಿಕವಾಗಿ ಎತ್ತರೆತ್ತರಕ್ಕೇರಬೇಕಾಗಿದೆ.”[೪]

ನಾನು ಕೈಗೊಂಡಿರುವ ಈ ಅಧ್ಯಯನದಲ್ಲಿ ಸಿದ್ದಿ ಮಹಿಳೆಯರ ಸ್ಥಾನಮಾನ ಹಾಗೂ ಭೂತಕಾಲದಿಂದಾದ ಭಯಂಕರ ಶೋಷಣೆಯ ಚರಿತ್ರೆ ಇದೆ. ಸಾವಿರಾರೂ ವರ್ಷಗಳ ಹಿಂದೆ ಗುಲಾಮರನ್ನಾಗಿ ಭಾರತಕ್ಕೆ ತಂದಾಗ ಮಹಿಳೆಯರು ಅನೇಕ ಸಾರಿ ಲೈಂಗಿಕ ಶೋಷಣೆಗೆ ಒಳಗಾಗಿದ್ದಾರೆ. ಈ ಹಿನ್ನೆಲೆಯಲ್ಲಿ ವರ್ತಮಾನದ ಸಿದ್ದಿ ಮಹಿಳೆಯರು ಲೈಂಗಿಕ ಶೋಷಣೆಗೆ ಒಳಗಾಗುತ್ತಿದ್ದಾಳೆಯೇ? ಅವರ ಸ್ಥಿತಿಗತಿ ಕುರಿತು ಸೂಕ್ಷ್ಮವಾಗಿ ಗ್ರಹಿಸುವುದಾಗಿದೆ. ಒಟ್ಟು ಸ್ತ್ರೀಯರ ಮೇಲೆ ಆಗಿದ್ದ ಮತ್ತು ಆಗುತ್ತಿರುವ ಲೈಂಗಿಕ ಶೋಷಣೆಯನ್ನು ಕ್ಷೇತ್ರಕಾರ್ಯದ ಮೂಲಕ ಕಂಡುಕೊಂಡು ದಾಖಲಿಸಿಕೊಳ್ಳಲಾಗಿದೆ. ಮತ್ತು ಇಲ್ಲಿಯವರೆಗೆ ಬಂದ ಸಾಹಿತ್ಯವನ್ನು ಪರಿಶೀಲಿಸಿ ಸತ್ಯ-ಸತ್ಯತೆಯನ್ನು ಹೇಳುವ ಹಿನ್ನೆಲೆಯಲ್ಲಿ ಕ್ಷೇತ್ರಕಾರ್ಯ(ಸಂಶೋಧನೆ) ಕೈಗೊಳ್ಳಲಾಗಿದೆ.

ಸಿದ್ದಿ ಮಹಿಳೆಯರು ಮೂರುಧರ್ಮಗಳಲ್ಲಿ ಹಂಚಿಹೋಗಿರುವುದರಿಂದ ಆಯಾ ಧರ್ಮಗಳಲ್ಲಿ ಕುಟುಂಬದಲ್ಲಿ ನೀಡಿದ ಸ್ಥಾನಮಾನಗಳೇನು? ಎಷ್ಟರ ಮಟ್ಟಿಗೆ ಅವರು ಸ್ವತಂತ್ರವನ್ನು ಪಡೆದಿದ್ದಾರೆ. ಧರ್ಮದ ಹಿನ್ನೆಲೆಯಲ್ಲಿ ಅವರು ಎದುರಿಸುವ ಸಮಸ್ಯೆಗಳೇನು? ಧರ್ಮ ನಿಷೇಧಗಳೇನು? ಎಂಬ ಇತ್ಯಾದಿ ಪ್ರಶ್ನೆಗಳನ್ನು ಹಾಕಿಕೊಂಡಾಗ ಅವರ ಆಚಾರ, ವಿಚಾರ, ರೂಢಿ ಸಂಪ್ರದಾಯಗಳನ್ನು ತಿಳಿದುಕೊಂಡಂತಾಗುತ್ತದೆ.

ಈ ಪ್ರದೇಶದಲ್ಲಿ ಇರುವ ಸಿದ್ದಿ ಮಹಿಳೆಯರು ಮಾಡುವಂತಹ ಉದ್ಯೋಗಗಳು ಯಾವುವು? ಅವುಗಳಿಂದ ಮಹಿಳೆಯರು ಪಡೆಯುವ ಕೂಲಿ ಎಷ್ಟು, ಕೂಲಿತಾರತಮ್ಯ ಎದುರಿಸುತ್ತಿದ್ದಾಳೆಯೇ? ಅವಳ ದುಡಿಮೆಗೆ ಕುಟುಂಬದಲ್ಲಿ ದೊರೆಯುವ ಮೌಲ್ಯ ದುಡಿಮೆಯ ಲಾಭ, ಆಸ್ತಿ ಹಂಚಿಕೆಯಲ್ಲಿ ಪಾಲಗೊಳ್ಳುತ್ತಾಳೆಯೇ? ಮುಂತಾದ ಅಂಶಗಳನ್ನು ಕಂಡುಕೊಳ್ಳುವುದಾಗಿದೆ.

ಸಿದ್ದಿ ಸಮುದಾಯದ ಮಹಿಳೆಯರು ಗುಲಾಮರಾಗಿ ಅನುಭವಿಸಿದ ಕಷ್ಟಗಳಿಂದ ಹೊರಬಂದು ರಾಜಕೀಯವಾಗಿ, ಶೈಕ್ಷಣಿಕವಾಗಿ ಕೆಲವು ಕ್ಷೇತ್ರಗಳಲ್ಲಿ ಪ್ರವೇಶ ಪಡೆದಿದ್ದಾಳೆ. ಆದರೆ ಈ ಕ್ಷೇತ್ರಗಳಲ್ಲಿ ಎಷ್ಟು ಪ್ರಮಾಣದಲ್ಲಿ ಭಾಗವಹಿಸುತ್ತಿದ್ದಾಳೆ ಎಂಬುದನ್ನು ಈ ಅಧ್ಯಯನದಿಂದ ಕಂಡುಕೊಳ್ಳುವುದಾಗಿದೆ.

ಸಿದ್ದಿಯರ ಸಂಸ್ಕೃತಿಯು ಸಂಪತ್ಭರಿತವಾಗಿದೆ. ಅದರಲ್ಲಿ ಮಹಿಳೆಯರ ಸಾಂಸ್ಕೃತಿಕ ಸ್ಥಾನಮಾನ ಹೇಗಿದೆ ಎಂಬುದು ತಿಳಿಯಬಹುದಾಗಿದೆ.

ವರ್ತಮಾನದಲ್ಲಿ ಸಿದ್ದಿ ಮಹಿಳೆಯರ ಸ್ಥಿತಿಗತಿಗಳನ್ನು ತಿಳಿದುಕೊಳ್ಳುವುದು ಅಧ್ಯಯನದ ಉದ್ದೇಶವಾಗಿದೆ.

೧.೫. ಅಧ್ಯಯನದ ವೈಧಾನಿಕತೆ :

ನನ್ನ ಅಧ್ಯಯನದ ಉದ್ದೇಶಗಳನ್ನು ಇಟ್ಟುಕೊಂಡು ಸಾಂಪ್ರದಾಯಿಕ ಸಂಶೋಧನಾ ವಿಧಾನಗಳನ್ನು ಅಳವಡಿಸಿಕೊಂಡರೆ ವಾಸ್ತವಾಂಶಗಳನ್ನು ಅಥವಾ ನಿಜ ಸಂಗತಿಗಳನ್ನು ತಿಳಿಯಲು ಸಾಧ್ಯವಾಗುವುದಿಲ್ಲ. ಏಕೆಂದರೆ ಮಹಿಳೆಯರ ಕುರಿತು ಸಂಶೋಧನೆ ಕೈಗೊಳ್ಳಬೇಕೆಂದರೆ ಪುರುಷ ರಚಿತ ವಿಧಾನಗಳನ್ನು ಅಥವಾ ಸಾಂಪ್ರದಾಯಿಕ ವಿಧಾನಗಳನ್ನು ಅನುಸರಿಸುವುದರಿಂದ ಮಹಿಳೆಯರು ಅಲ್ಲಿ ಗೌಣವಾಗುತ್ತಾರೆ. ಅದಕ್ಕಾಗಿ ಮಹಿಳೆಯರ ವಿಷಯಕ್ಕೆ ಸಂಬಂಧಿಸಿದಂತೆ ಸ್ತ್ರೀವಾದಿ ಸಂಶೋಧನಾ ವಿಧಾನವನ್ನು ಕಂಡುಕೊಳ್ಳುವುದು ಅತಿ ಅವಶ್ಯಕವಾಗಿದೆ.

ಸ್ತ್ರೀವಾದಿ ಸಂಶೋಧನಾ ವಿಧಾನ ಎಂದು ನಿರ್ದಿಷ್ಟವಾದ ವಿಧಾನವಿಲ್ಲ. ಲಿಂಗತಾರತಮ್ಯದಿಂದ ಕೂಡಿದ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನ ತಿಳಿಯಲು ವಾಸ್ತವಾದ ಹೊರತರಲು ಅನುಸರಿಸುವ ಎಲ್ಲಾ ವಿಧಾನಗಳು ಸ್ತ್ರೀವಾದಿ ಸಂಶೋಧನೆಯಾಗಿದೆ. ಸ್ತ್ರೀವಾದಿ ಸಂಶೋಧನೆಗೆ ಸರ್ವಸಮ್ಮತವಾದ ವ್ಯಾಖ್ಯೆಯೂ ಇಲ್ಲ. ಅಥವಾ ಸರ್ವಸಮ್ಮತವಾದ ನಿರ್ದೇಶನಗಳು ಅಥವಾ ವಿಧಾನಗಳು ಇಲ್ಲ. ಆದರೂ ಮಹಿಳೆ ಹಾಗೂ ಜಂಡರ ಬಗ್ಗೆ ಜ್ಞಾನವನ್ನು ಸೃಷ್ಟಿಸುವುದು ಸ್ತ್ರೀವಾದಿ ಸಂಶೋಧನೆ ಎಂದು ಹೇಳಲಾಗುತ್ತದೆ. ಈ ಸಂಶೋಧನಾ ಸಂಪ್ರಂಬಂಧದಲ್ಲಿ ಈ ಕೆಳಗಿನ ವಿಧಾನಗಳನ್ನು ಬಳಸಿಕೊಳ್ಳಲಾಗಿದೆ.

ಪ್ರಶ್ನಾವಳಿ, ಸಂದರ್ಶನ, ಅವಲೋಕನ, ಅಂಕಿ ಸಂಖ್ಯಾಶಾಸ್ತ್ರೀಯ ನಮೂನೆ, ಮಾಹಿತಿ ವಿಶ್ಲೇಷಣಾ ವಿಧಾನ, ಪ್ರಕರಣ ಅಧ್ಯಯನ, ದಾಖಲೀಕರಣ ಮುಂತಾದ ವಿಧಾನಗಳನ್ನು ಬಳಸಿಕೊಳ್ಳಲಾಗಿದೆ. ಮಾಧ್ಯಮಿಕ ಮೂಲವಾಗಿ ಗ್ರಂಥಗಳು, ಪುಸ್ತಕಗಳು, ಮ್ಯಾಗಜೀನ್‌ಗಳ ಮೂಲಕ ಮಾಹಿತಿ ಸಂಗ್ರಹಿಸಲಾಗಿದೆ.

೧. **ಪ್ರಶ್ನಾವಳಿ :** ಸಂಶೋಧನೆಯಲ್ಲಿ ಮಾಹಿತಿ ಸಂಗ್ರಹಣೆಯಲ್ಲಿ ಪ್ರಶ್ನಾವಳಿ ಒಂದು ಪ್ರಮುಖ ಅಂಶವಾಗಿದೆ. ಈ ಪ್ರಶ್ನಾವಳಿಯಲ್ಲಿ ಎರಡು ಪ್ರಕಾರಗಳಿವೆ. ೧. ರಚಿತ ಪ್ರಶ್ನಾವಳಿ – ಉದ್ದೇಶಪೂರ್ವಕವಾಗಿ ಕೇಳುವುದು. ಅಂದರೆ ನಾವು ಸಿದ್ದಿ ಸಮುದಾಯದ ಕುರಿತು ಅಧ್ಯಯನ ಮಾಡುತ್ತಿರುವಾಗ ಅವರಿಂದ (ಸಿದ್ದಿ ಜನಾಂಗದಿಂದ) ಏನೇನು

ಮಾಹಿತಿ ಪಡೆಯಬೇಕು ಎಂಬುದರ ಕುರಿತು ಪ್ರಶ್ನೆಗಳನ್ನು ರಚಿಸಿಕೊಳ್ಳುವುದಾಗಿದೆ. ಅದೇ ರೀತಿಯಾಗಿ ೨. ಅರಚಿತ ಪ್ರಶ್ನಾವಳಿ – ಸಮಯ ಸಂದರ್ಭಕ್ಕೆ ತಕ್ಕಂತೆ ಪ್ರಶ್ನೆಗಳನ್ನು ಕೇಳುವುದರಿಂದ ಮಾಹಿತಿಯನ್ನು ಪಡೆಯುವುದಾಗಿದೆ. ರಚಿತ ಮತ್ತು ಅರಚಿತ ಪ್ರಶ್ನಾವಳಿಗಳು ಮಹಿಳೆಯರ ಜೀವನದ ಕುರಿತು ಅವರ ಸಮಸ್ಯೆಗಳ ಕುರಿತು ತಿಳಿದುಕೊಳ್ಳಲು ಸಹಾಯಕವಾಗಿದೆ. ಆದ್ದರಿಂದ ಈ ವಿಧಾನದ ಉಪಯುಕ್ತತೆಯನ್ನು ಪಡೆದುಕೊಳ್ಳಲಾಗಿದೆ.

೨. ಸಂದರ್ಶನ : ಒಂದು ವಿಷಯವನ್ನು ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಸಂಭಾಷಣೆ ನಡೆದಾಗ ಅದನ್ನು ಸಂದರ್ಶನ ಎನ್ನುತ್ತೇವೆ. ಈ ವಿಧಾನವನ್ನು ಸಂಶೋಧನೆಯ ಮಾಹಿತಿ ಸಂಗ್ರಹಣೆಗಾಗಿ ಮಾನವನ ಮನೋಭಾವ, ವರ್ತನೆ, ನಡತೆ, ಅಭಿಪ್ರಾಯಗಳು, ಅನುಭವಗಳು ಮುಂತಾದ ಅನೇಕ ವಿಷಯಗಳ ಅಧ್ಯಯನಕ್ಕಾಗಿ ವ್ಯಾಪಕವಾಗಿ ಬಳಸುತ್ತಾರೆ. ಈ ವಿಧಾನದಿಂದ ಮಾನವನ ಅತೀ ಸೂಕ್ಷ್ಮವಾದ ಮತ್ತು ವೈಯಕ್ತಿಕವಾದ ಆಂತರಿಕ ವಿಷಯಗಳ ಬಗ್ಗೆ ಸತ್ಯವೂ ಸ್ಪಷ್ಟವೂ ಆದ ಮಾಹಿತಿಯನ್ನು ಸಂಗ್ರಹಿಸಬಹುದು. ಇದು ಹೆಚ್ಚು ವ್ಯಾಪಕವಾದದ್ದು. ಮತ್ತು ಉಪಯುಕ್ತವಾದದ್ದರಿಂದ ಸಂಶೋಧನೆಗೆ ಈ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ.

೩. ಪ್ರಕರಣ ಅಧ್ಯಯನ : ಸಂಶೋಧನೆಯ ಹಲವಾರು ತಂತ್ರ ವಿಧಾನಗಳಲ್ಲಿ ಸಮಗ್ರ ಅಧ್ಯಯನ ಅಥವಾ ಪ್ರಕರಣ ಅಧ್ಯಯನ ಒಂದು ತಂತ್ರವಾಗಿದೆ. ಇದು ವ್ಯಕ್ತಿ ನಿಷ್ಠತೆಯನ್ನು ಹೆಚ್ಚಾಗಿ ಬಿಂಬಿಸುತ್ತದೆ. ಈ ವಿಧಾನವು ಮಹಿಳೆಯರ ಜೀವನದ ಬಗ್ಗೆ ತಿಳಿದುಕೊಳ್ಳಲು ಉಪಯುಕ್ತವಾದದ್ದರಿಂದ ಮಹಿಳೆಯರ ಸಮಸ್ಯೆಗಳ ಆಳ, ಅದು ಹೇಗೆ ಪ್ರಭಾವ ಬೀರಿದೆ? ಮತ್ತು ಅದರ ಪರಿಣಾಮ ಏನೇನು ಆಗಬಹುದು? ಎಂಬುದನ್ನು ಅರಿಯಲು ಸಹಕಾರಿಯಾಗಿದೆ. ಆದ್ದರಿಂದ ರಾಜಕೀಯದಲ್ಲಿ ಮಹಿಳೆಯರ ಭಾಗ ವಹಿಸುವಿಕೆ ಹೇಗಿದೆ ಎಂಬುದನ್ನು ಅರಿಯಲು ಈ ವಿಧಾನವನ್ನು ಬಳಸಿಕೊಳ್ಳಲಾಗಿದೆ.

೪. ಅಂಕಿ–ಸಂಖ್ಯಾಶಾಸ್ತ್ರ : ಈ ವಿಧಾನವು ನನ್ನ ಅಧ್ಯಯನಕ್ಕೆ ತುಂಬಾ ಅವಶ್ಯಕವಾಗಿದೆ. ಈಗಾಗಲೇ ನಡೆದ ಅಧ್ಯಯನಗಳಲ್ಲಿ ಸಿದ್ದಿಜನಾಂಗದ ಕುರಿತು ನೀಡಿದ ಮಾಹಿತಿಗಳು ಅಥವಾ ಅಂಕಿಅಂಶಗಳು ಸರಿಯಾಗಿವೆಯೇ? ಅವುಗಳನ್ನು ತಿಳಿದುಕೊಳ್ಳಲು ನಾನು ಕ್ಷೇತ್ರಕಾರ್ಯ ಕೈಗೊಂಡಲ್ಲಿ ದೊರತ ಅಂಕಿ–ಅಂಶಗಳು ಸರಿಯಾಗಿದೆಯೇ? ಎಂದು ತೌಲನಿಕತೆಯಿಂದ ಬಳಸಿಕೊಳ್ಳಲಾಗಿದೆ. ಇಲ್ಲಿಯವರೆಗೆ ಅಂಕಿ–ಅಂಶಗಳು ಸಿದ್ದಿ ಜನಾಂಗದ ಮಹಿಳೆಯರ ಶಿಕ್ಷಣ, ಆರ್ಥಿಕತೆ, ರಾಜಕೀಯ ಮುಂತಾದವುಗಳ ಬಗ್ಗೆ ತಿಳಿದುಕೊಳ್ಳಲು ಅವಶ್ಯಕವಾಗಿದೆ. ಆದ್ದರಿಂದ ಈ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ.

೫. ಅವಲೋಕನ : ಪ್ರಶ್ನೆಯನ್ನು ಕೇಳಿ ಕೇವಲ ನೋಡುವುದರ ಮೂಲಕ ಮಾಹಿತಿಯನ್ನು ಸಂಗ್ರಹಿಸುವುದಕ್ಕೆ ಅವಲೋಕನ ಎನ್ನುತ್ತೇವೆ. ಈ ಅವಲೋಕನದಲ್ಲಿ ಎರಡು ವಿಧಗಳಿವೆ. ೧.ಸಹಭಾಗಿ ಅವಲೋಕನ, ೨. ಅಸಹಭಾಗಿ ಅವಲೋಕನ. ಈ ಎರಡು ವಿಧಾನಗಳ ಮೂಲಕ ಮಾಹಿತಿ ಪಡೆಯಲಾಗಿದೆ. ಸಿದ್ದಿಯರ ಸಂಸ್ಕೃತಿ ಅವರ ಆಚಾರ-ವಿಚಾರ, ನಡೆ-ನುಡಿ, ಪಿತೃಪ್ರಧಾನತೆಯ ಮೌಲ್ಯಗಳು ಹೇಗೆ ಪರಿಣಾಮ ಬೀರಿವೆ ಮುಂತಾದವುಗಳನ್ನು ಅವಲೋಕನದ ಮೂಲಕ ತಿಳಿದುಕೊಳ್ಳಲಾಗಿದೆ.

೬. ವಿಶ್ಲೇಷಣಾ ವಿಧಾನ : ಮಾಹಿತಿ ಸಂಗ್ರಹಣೆಯಲ್ಲಿ ಅತೀ ಪ್ರಮುಖವಾದ ವಿಧಾನವೇ ಮಾಹಿತಿ ವಿಶ್ಲೇಷಣಾ ವಿಧಾನವಾಗಿದೆ. ಕ್ಷೇತ್ರಕಾರ್ಯದಲ್ಲಿ ಪಡೆದ ಮಾಹಿತಿಯನ್ನು ಸಂಗ್ರಹಿಸಿ ಅವುಗಳನ್ನು ಒಂದೊಂದಾಗಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಒಟ್ಟಿನಲ್ಲಿ ಈ ವೈಧಾನಿಕತೆಯನ್ನು ಬಳಸಿಕೊಳ್ಳಲು ಕಾರಣವೇನೆಂದರೆ ಇಲ್ಲಿಯವರೆಗೆ ಸಿದ್ದಿ ಸಮುದಾಯದ ಕುರಿತು ಬಂದ ಅಧ್ಯಯನಗಳು ಪುರುಷ ಪ್ರಧಾನವಾಗಿರುವುದರಿಂದ, ಸಿದ್ದಿ ಸಮುದಾಯದ ಮಹಿಳೆಯರು ಸಾಮಾಜಿಕ, ಕೌಟುಂಬಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕವಾಗಿ ಎದುರಿಸುವ ಸಮಸ್ಯೆಗಳು ಮತ್ತು ಸ್ಥಾನಮಾನ ಹೇಗಿದೆ ಎಂದು ತಿಳಿದುಕೊಳ್ಳಲು ಈ ಮೇಲಿನ ವಿಧಾನಗಳನ್ನು ಅನುಸರಿಸಿಕೊಂಡು ವಾಸ್ತವಾಂಶವನ್ನು ಹೊರತರಲು ಪ್ರಯತ್ನಿಸಲಾಗಿದೆ.

ಅಡಿಟಿಪ್ಪಣಿಗಳು

೧. ಹೇಮಲತಾ.ಎಚ್.ಎಂ. ಮಹಿಳಾ ಅಧ್ಯಯನ ಒಂದು, ಪುಟ ೩೨-೩೩, ೨೦೦೪.

೨. ಹೇಮಲತಾ.ಎಚ್.ಎಂ. ಮಹಿಳಾ ಅಧ್ಯಯನ ಒಂದು, ಪುಟ ೩೩, ೨೦೦೪.

೩. ಡಾ. ಶೈಲಜಾ ಹಿರೇಮಠ, ಪಾತರದವರು ಪುಟ-೩, ೧೯೯೯.

೪. ಡಾ. ಶೈಲಜಾ ಹಿರೇಮಠ, ಪಾತರದವರು ಪುಟ-೪, ೧೯೯೯.

ಅಧ್ಯಾಯ : ಎರಡು

ಸಿದ್ದಿ ಸಮುದಾಯದ ಸ್ಥೂಲ ಪರಿಚಯ

ಅಧ್ಯಾಯ : ಎರಡು

ಸಿದ್ದಿ ಸಮುದಾಯದ ಸ್ಥೂಲ ಪರಿಚಯ

೨.೧. ಭೌಗೋಳೀಕ ವಿವರ:

ಕರ್ನಾಟಕದ ೨೯ ಜಿಲ್ಲೆಗಳಲ್ಲಿಯೇ ಅತೀ ಸುಂದರವಾದ ಉತ್ತರ ಕನ್ನಡ ಜಿಲ್ಲೆಯು ಒಂದು ಪ್ರಾಕೃತಿಕ ಸೌಂದರ್ಯ ಹೊಂದಿದಂತಹ ಈ ಜಿಲ್ಲೆ ಬೆಟ್ಟ, ಗುಡ್ಡ, ನದಿ, ಹೊಳೆ ಮತ್ತು ಸಮುದ್ರವನ್ನು ಒಳಗೊಂಡಿದೆ. ಜಿಲ್ಲೆಯ ಶೇ.೮೦ರಷ್ಟು ನೆಲ ಅರಣ್ಯಾವೃತವಾಗಿದೆ. ಅರಣ್ಯದ ವಿಸ್ತೀರ್ಣ ೮,೧೫,೦೫೭ ಹೆಕ್ಟೇರ."[೧] ತಾಳೆ, ಸಾಗವಾನಿ, ಶ್ರೀಗಂಧದ ಇತ್ಯಾದಿ ಅತಿಮುಖ್ಯವಾದ ಗಿಡಗಳನ್ನು ಈ ಅರಣ್ಯದಲ್ಲಿ ಬೆಳೆಯುತ್ತಾರೆ. ಬಿದಿರು ಇಲ್ಲಿ ಹೇರಳವಾಗಿ ದೊರೆಯುವ ಅರಣ್ಯ ಉತ್ಪನ್ನ. ತೈಲಾಯುತ ಸಸ್ಯಜಾತಿಗಳೂ ಇವೆ. ಅಳಲೆ, ಸೀಗೆ, ಜೇನು, ಅರಗು, ಗೊಂಡು, ಹಾಲಮಡ್ಡಿ ಇವು ಇನ್ನಿತರ ಅರಣ್ಯೋತ್ಪನ್ನಗಳು. ರಾಜ್ಯದ ಅರಣ್ಯೋತ್ಪನ್ನದಲಿ ಶೇ.೬೫ರಷ್ಟು ಈ ಜಿಲ್ಲೆಯಿಂದ ದೊರೆಯುತ್ತದೆ."[೨]

"ಜಿಲ್ಲೆಯಲ್ಲಿ ೩೨೯ ಕೀ.ಮೀ.ಗಳ ರಾಷ್ಟ್ರೀಯ ಹೆದ್ದಾರಿ ೬೭೨ ಕಿ.ಮೀ.ಗಳ ರಾಜ್ಯ ಹೆದ್ದಾರಿ ಮಾರ್ಗಗಳಿವೆ. ಜಿಲ್ಲಾ ಮುಖ್ಯ ರಸ್ತೆಗಳು ೭೯೫ ಕಿ.ಮೀ. ಇಲ್ಲಿನ ರಸ್ತೆಗಳು ದಕ್ಷಿಣಕ್ಕೆ ಕನ್ಯಾಕುಮಾರಿಯವರೆಗೆ ಉತ್ತರಕ್ಕೆ ಕಾಶ್ಮೀರದವರೆಗೆ ಸಂಪರ್ಕ ಕಲ್ಪಿಸುತ್ತವೆ. ಕಾರವಾರದಿಂದ ಹುಬ್ಬಳ್ಳಿಯ ಕಡೆಗೆ ಹೋಗುವ ರಾಷ್ಟ್ರೀಯ ಹೆದ್ದಾರಿ ಅನೇಕ ನಗರಗಳಿಗೆ ಸಂಪರ್ಕ ಕಲ್ಪಿಸುತ್ತದೆ. ನಗರಗಳೊಂದಿಗೆ ಹಳ್ಳಿಗಳ ಸಂಪರ್ಕವನ್ನು ಕಲ್ಪಿಸುವ ರಸ್ತೆಗಳೂ ಇವೆ. ಘಟ್ಟದ ಮೇಲೆ ಸಿದ್ದಾಪೂರದಿಂದ ಹುಬ್ಬಳ್ಳಿಗೆ, ಕಾರವಾರಕ್ಕೆ, ದಾಂಡೇಲಿಗೆ, ಯಲ್ಲಾಪೂರಕ್ಕೆ ಸಂಪರ್ಕ ದೊರೆಕಿಸುವ ರಸ್ತೆಗಳಿವೆ. ಇತ್ತೀಚಿಗೆ ಕೊಚ್ಚಿ ಮುಂಬೈಗಳಿಗೆ ಹೋಗುವ ಕೊಂಕಣ ರೈಲ್ವೆ, ಈ ಜಿಲ್ಲೆಯ ಮೂಲಕ ಹೋಗುತ್ತವೆ. ಜಿಲ್ಲೆಯಲ್ಲಿ ೧೭೯ ಕಿ.ಮೀ. ಉದ್ದದ ರೈಲು ಮಾರ್ಗವಿದೆ. ೧೫ ರೈಲು ನಿಲ್ದಾಣಗಳಿವೆ. ಇವುಗಳಲ್ಲಿ ಮುಖ್ಯವಾದವು ಭಟ್ಕಳ, ಹೊನ್ನಾವರ, ಕುಮಟ, ಗೋಕರ್ಣ, ಅಂಕೋಲಾ, ಕಾರವಾರ ಇತ್ಯಾದಿ ಇದಲ್ಲದೆ ಅಂತರಾಷ್ಟ್ರೀಯ ಸಂಪರ್ಕ ಕಲ್ಪಿಸುವ ಜಲಮಾರ್ಗ ಸಂಪರ್ಕವೂ ಇದ."[೩]

೨.೨. ಸಿದ್ದಿಗಳು ವಾಸಮಾಡುವ ಸ್ಥಳಗಳು:

ಪೋರ್ಚುಗೀಸರು ಸಿದ್ದಿಗಳನ್ನು ಗುಲಾಮರನ್ನಾಗಿ ಮಾಡಿ ಭಾರತದ ಗೋವಾಕ್ಕೆ ತಂದು ಮಾರಿದರು. ದಾಸ್ಯಕ್ಕೆ ಒಳಗಾದ ಸಿದ್ದಿಗಳು ಪೂರ್ಚುಗೀಸರು ಕೊಡುತ್ತಿದ್ದ ಹಿಂಸೆಯನ್ನು

ತಾಳಲಾರದೆ ಅಲ್ಲಿಂದ ತಪ್ಪಿಸಿಕೊಂಡು ಗೋವಾದ ನೆರೆಹೊರೆ ಜಿಲ್ಲೆಗಳಲ್ಲಿ ಸೇರಿಕೊಂಡರು. ಅದರಲ್ಲೂ ವಿಶೇಷವಾಗಿ ಕರ್ನಾಟಕದ ನಿಭಿಡಾರಣ್ಯದಿಂದ ಕೂಡಿದ ಮತ್ತು ಸಂಪತ್ಭರಿತವಾದ ಕಾಡಿನಿಂದ ಕೂಡಿದ ಉತ್ತರ ಕನ್ನಡ ಜಿಲ್ಲೆಗೆ ಬಂದು ನೆಲೆಸಿದರು. ಉತ್ತರ ಕನ್ನಡದ ವಿವಿಧ ತಾಲೂಕಿನ ಸುಮಾರು ಹಳ್ಳಿಗಳಲ್ಲಿ ಸಿದ್ದಿಗಳು ನೆಲೆಸಿದ್ದಾರೆ. ಅಂಕೋಲಾ ತಾಲ್ಲೂಕಿನ – ರಾಮನಗೊಳ, ಕಲ್ಲೇಶ್ವರ, ಕಮ್ಮನಿ, ಹಳವಳ್ಳಿ, ಹೆಗ್ಗರ, ಶಿವಕರ, ಮಳಗಾಂವ, ಆದ್ರಲ್ಲಿ, ಬಿದ್ರಲ್ಲಿ, ಸತ್ತನ ಬೈಲು, ಬಾಳೆಗದ್ದೆ, ಅಭವೆ, ವಂಡರ ಮನೆ, ಹಳಿಯಾಳ ತಾಲೂಕಿನ – ಅಡಕೆ ಹೊಸೂರು, ಜತಗ ಹೊಸೂರು, ದೊಡ್ಡಕೊಪ್ಪ, ಬಸವಳ್ಳಿ, ತಟ್ಟೀಗೇರಿ, ಕಮಚಿಕೊಪ್ಪ, ಅಜಗಾಂವ, ನೀಲವಾಣಿ, ಗುಂಡೋಳಿ, ಬೊಮ್ಮನಹಳ್ಳಿ, ಕೆದಗಲ, ಭಗವತಿ, ಬಾಲಶಟ್ಟಿಕೊಪ್ಪ, ವಾಡ, ಸಾಂಬ್ರಾಣಿ, ಆರೂರು ನಾರನಳ್ಳಿ, ಗೋಲ್ಲೆಹಳ್ಳಿ, ತತ್ವಣಗಿ ಹೊಸೂರು, ಜೋಯಿಡಾ ತಾಲೂಕಿನ – ಜನತಾ ಕಾಲೋನಿ, ಕೊಲಂದ, ನಂದಿಗದ್ದೆ, ರಾಮನಗರ, ಮುಂಡಗೋಡ ತಾಲೂಕಿನ, ಗುಂಜವತಿ, ಶಿರಶಿ ತಾಲೂಕಿನ – ಜಡ್ಡಿಗದ್ದೆ, ಕಕ್ಕಳ್ಳಿ, ಮಟ್ಟಿಘಟ್ಟ, ಯಲ್ಲಾಪೂರ ತಾಲೂಕಿನ – ಕರೆಹೊಸಳ್ಳಿಬಿಳಕಿ, ಕಾಳಂಜಿಕೊಪ್ಪ, ಮುಚಿಕೇರೆ, ಬಚ್ಚನಳ್ಳಿ, ಮಾದನಗಿ, ಶಿರ್ನಾಲ, ಹಳ್ಳಿಗದ್ದೆ, ಜೋಗದ ಮನೆ, ಕೆರೆಹೊಸಹಳ್ಳಿ, ತವರಕಟ್ಟಾ, ಹುಣಸೆಕೊಪ್ಪ, ಮೈನಹಳ್ಳಿ, ಕನ್ನದಗಲ, ಕಿರವತ್ತಿ, ಅಂದಗೂಡು, ಬಿಜನಿಕೊಪ್ಪ, ಮಾವಿನಕಟ್ಟಿ, ಕೆರೆಗದ್ದೆ, ಜಡ್ಡಿಗದ್ದೆ, ಬೊಲಿಕೊಂಡ, ಹುಲ್ಲರ ಮನೆ, ಹಿತ್ಲಳ್ಳಿ, ಜಯಂತಿ ನಗರ, ಹೊಸಲ್ಲಿ, ಅರೆಬೈಲು, ಗುಲ್ಲಾಪೂರ, ಕಂಚಿನಮನೆ, ಲಿಂಗದ ಬೈಲು, ಕೂಡಗಿ, ಇಷ್ಟಲ್ಲದೆ ಧಾರವಾಡ ಜಿಲ್ಲೆಯ ಕಲಘಟಗಿ, ಬೆಳಗಾಂ ಜಿಲ್ಲೆಯ ಖಾನಾಪೂರ, ಕರ್ನಾಟಕದಲ್ಲಿ ಈ ಮೇಲೆ ನೋಡಿದ ಸ್ಥಳಗಳಲ್ಲಿ ಸಿದ್ದಿಗಳು ವಾಸ ಮಾಡುತ್ತಿರುವುದು ಕಂಡುಬರುತ್ತದೆ.

"ಕರ್ನಾಟಕದಲ್ಲಿ ಮಾತ್ರವಲ್ಲದೆ ಭಾರತದ ಇನ್ನಿತರೆ ರಾಜ್ಯಗಳಾದ ಗೋವಾ, ಡಯಾ, ಡಾಮನ್, ಗುಜರಾತ, ಆಂಧ್ರ, ಬಂಗಾಳಗಳಲ್ಲಿ ಕೂಡ ಸಿದ್ದಿ ಜನರನ್ನು ಕಾಣಬಹುದಾಗಿದೆ. ಗೋವಾ, ಡಯಾ, ಡಾಮನ್, ಗುಜರಾತನ ಮತ್ತು ಕರ್ನಾಟಕದ ಉತ್ತರಕನ್ನಡ ಜಿಲ್ಲೆ ಸಿದ್ದಿ ಜನರನ್ನು ಮಾತ್ರ ಗಿರಿಜನರ ಗುಂಪಿಗೆ ಸೇರಿಸಲಾಗಿದೆ."[೪] ಭಾರತದಲ್ಲಿ ಎಲ್ಲೆಡೆ ಹರಡಿಕೊಂಡ ಸಿದ್ದಿಗಳು ತಮ್ಮದೇ ಆದ ನೆಲೆಯನ್ನು ಕಂಡುಕೊಂಡಿದ್ದಾರೆ.

೨.೩. ಸಿದ್ದಿಗಳ ಸಮುದಾಯದ ಜನಸಂಖ್ಯೆ :

ಉತ್ತರ ಕನ್ನಡ ಜಿಲ್ಲೆಯ ಒಟ್ಟು ಜನಸಂಖ್ಯೆ ೧೩,೫೨,೭೯ ಇದರಲ್ಲಿ ೯,೬೫,೩೪೫ ಜನ ಹಳ್ಳಿಗಳಲ್ಲಿ ವಾಸಿಸುತ್ತಾರೆ. ಇವರಲ್ಲಿ ೪,೯೦,೦೦೧ ಗಂಡಸರು, ೪,೭೫,೩೩೪ ಹೆಂಗಸರು.[೫] ಉತ್ತರ ಕನ್ನಡ ಜಿಲ್ಲೆಯ ಸಿದ್ದಿಸಂಖ್ಯೆ ಕೋಷ್ಟಕ ಒಂದರಲ್ಲಿ ಸೂಚಿಸಲಾಗಿದೆ.

ಕೋಷ್ಟಕ – ೧

ಕರ್ನಾಟಕದಲ್ಲಿ ಸಿದ್ದಿ ಸಮುದಾಯದ ಶಿಕ್ಷಣಮಟ್ಟ

ಸಂ.	ತಾಲ್ಲೂಕು	ಜಿಲ್ಲೆ	ಒಟ್ಟು ಜನಸಂಖ್ಯೆ	ಒಟ್ಟು ಶಿಕ್ಷಣ	I		II		III		IV		V		VI ಹೆ		VII		VIII		IX		X		PUC		ಒಟ್ಟು
					ಗ	ಹೆ	ಗ	ಹೆ	ಗ	ಹೆ	ಗ	ಹೆ	ಗ	ಹೆ	ಗ	ಹೆ	ಗ	ಹೆ	ಗ	ಹೆ	ಗ	ಹೆ	ಗ	ಹೆ	ಗ	ಹೆ	
೧	೨	೨	೪	೫	೬		೭		೮		೯		೧೦		೧೧		೧೨		೧೩		೧೪		೧೫		೧೬		
೧.	ಅಂಕೋಲಾ	ಉ.ಕನ್ನಡ	೫೮೭	೪೧	–	೧	೭	೧	೩	೫	೧೪	೭	೩	–	–	–	–	–	–	–	–	–	–	–	–	–	೭.೦೦
೨.	ಹಳಿಯಾಳ	ಉ.ಕನ್ನಡ	೨೨೮೦	೨೬೨	೩೦	೧೫	೫೬	೧೭	೩೪	೫	೪೩	೬	೨೩	೩	೧೩	೩	೯	–	೧	–	–	–	೨	–	೨	–	೧೧.೨
೩.	ಮುಂಡಗೋಡ	ಉ.ಕನ್ನಡ	೪೯೯	೭೦	೧೫	೬	೨೩	೪	೬	೧	೮	೧	೧	–	೨	–	೩	–	–	–	–	–	–	–	–	–	೧೪
೪.	ಶಿರಶಿ	ಉ.ಕನ್ನಡ	೬೮	–	–	–	–	–	–	–	–	–	–	–	–	–	–	–	–	–	–	–	–	–	–	–	೦
೫.	ಸುಫಾ	ಉ.ಕನ್ನಡ	೩೩	೪	–	೨	–	–	೨	–	–	–	–	–	–	–	–	–	–	–	–	–	–	–	೧	೧	೧೨.೧
೬.	ಯಲ್ಲಾಪೂರ	ಉ.ಕನ್ನಡ	೧೮೯೪	೧೪೪	೧೩	೯	೩೦	೪	೨೩	೬	೩೧	೫	೬	೧	೪	–	೫	–	–	–	೧	–	೧	೧	–	–	೭.೦೬
೭	ಕಲಘಟಗಿ	ಧಾರವಾಡ	೧೫೯	೮	೪	–	೧	–	–	–	೩	–	–	೧	–	–	–	–	೧	೧	–	–	–	–	–	–	೪.೦೪
೮.	ಖಾನಾಪೂರ	ಬೆಳಗಾಂ	೫೮	೮	–	–	–	–	೨	–	೧	–	–	–	೧	–	–	೧	೧	–	–	–	–	–	–	–	೧೩.೮
	ಒಟ್ಟು		೫೫೭೮	೫೩೭	೬೪	೩೧	೧೧೭	೨೬	೭೦	೧೭	೯೯	೧೯	೩೩	೫	೧೯	೪	೧೮	–	೩	೧	೧	–	೩	೧	೩	೧	೯.೦೬

–ಕಿರಣ್‌ಕಮಲ ಪ್ರಸಾದ

ಈ ಕೋಷ್ಟಕ ಮೂಲಕ ತಿಳಿಯುವುದೇನೆಂದರೆ ಸಿದ್ದಿಗಳು ಕರ್ನಾಟಕದಲ್ಲಿ ಎಲ್ಲಿ, ಎಷ್ಟು ಪ್ರಮಾಣದಲ್ಲಿ ಇದ್ದಾರೆ. ಅವರ ಕುಟುಂಬದ ಸಂಖ್ಯೆ ಅವರು ಸ್ವೀಕರಿಸಿದ ಧರ್ಮ ಇತ್ಯಾದಿಗಳ ಬಗ್ಗೆ ಸೂಚಿಸುತ್ತದೆ. ೨೮೮ ಹಿಂದೂ ಸಿದ್ದಿಗಳು, ೩೪೪ ಮುಸ್ಲಿಂ ಸಿದ್ದಿಗಳು, ೪೫೫ ಕ್ರಿಶ್ಚಿಯನ್ ಸಿದ್ದಿಗಳ ಕುಟುಂಬಗಳು ಕಂಡುಬರುತ್ತದೆ. ಹೆಚ್ಚಿನ ಕುಟುಂಬ ಸಂಖ್ಯೆ ಕ್ರಿಶ್ಚಿಯನ್ ಸಿದ್ದಿಗಳು ಕಂಡುಬರುತ್ತದೆ. ಒಟ್ಟು ಸಿದ್ದಿಗಳ ಸಂಖ್ಯೆ ೫೫೭೮ ಇದರಲ್ಲಿ ಪುರುಷರು ೨೮೪೮ ಮತ್ತು ಮಹಿಳೆಯರು ೨೭೩೦ ಪ್ರತಿಸಾವಿರ ಪುರುಷರಿಗೆ ೯೬೪ ಮಹಿಳೆಯರು ಲಿಂಗಾನುಪಾತ ೯೬೪ ಈ ಲಿಂಗಾನುಪಾತ ಕಡಿಮೆಯಾಗಲು ಕಾರಣವೇನೆಂದರೆ ಲಿಂಗತಾರತಮ್ಯ. ಭಾರತೀಯ ಸಮಾಜದಲ್ಲಿ ಒಟ್ಟಾರೆಯಾಗಿ ಹೆಣ್ಣು ಮಕ್ಕಳ ಬಗ್ಗೆ ತೋರುವ ನಿರ್ಲಕ್ಷ ಲಿಂಗಾನುಪಾತದ ಮೂಲಕ ತಿಳಿಸುತ್ತದೆ. ಯಾವುದೇ ಸಮುದಾಯಗಳಲ್ಲಾಗಲಿ ಗಂಡಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡುತ್ತಿರುವುದು ಕೂಡ ಮಹಿಳೆಯರು ಕಡಿಮೆ ಆಗಲಿಕ್ಕೆ ಅಥವಾ ಲಿಂಗಾನುಪಾತದಲ್ಲಿ ವ್ಯತ್ಯಾಸ ಕಡಿಮೆ ಕಂಡು ಬರಲು ಕಾರಣವಾಗಿದೆ. ಉದಾಹರಣೆಗೆ ಸಿದ್ದಿಯರ ಬಗ್ಗೆ ನಾನು ನಡೆಸಿದ ಕ್ಷೇತ್ರಕಾರ್ಯದಲ್ಲಿ ಮಹಿಳೆಯರು ನೀಡಿದ ಮಾಹಿತಿ ಪ್ರಕಾರ – **ಯಾವ ಸಂತಾನಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡುತ್ತೀರಿ** ಎಂದು ಕೇಳಿದಾಗ ಬಂದ ಉತ್ತರ ಈ ರೀತಿಯಾಗಿದೆ.

ಕೋಷ್ಟಕ ೨:

ಅಭಿಪ್ರಾಯ	**ಆವೃತ್ತಿಸಂಖ್ಯೆ**	**ಪ್ರತಿಶತ**
ಗಂಡುಬೇಕು	೪೭	೭೮.೩೩%
ಹೆಣ್ಣುಬೇಕು	೧೩	೨೧.೬೬%
ಒಟ್ಟು	೬೦	೯೯.೯೯%(೧೦೦)

ಅಧ್ಯಯನಕ್ಕೆ ಒಳಪಡಿಸಲಾದ ೬೦ ಮಹಿಳೆಯರಲ್ಲಿ ಶೇ. ೭೮.೩೩ ರಷ್ಟು ಮಹಿಳೆಯರು ಗಂಡು ಸಂತಾನಕ್ಕೆ ಪ್ರಾಧಾನ್ಯತೆ ನೀಡುತ್ತಾರೆ. ಅತೀ ಕಡಿಮೆ ಪ್ರಮಾಣದಲ್ಲಿ ಅಂದರೆ ಶೇ.೨೧.೬೬ ರಷ್ಟು ಹೆಣ್ಣಿಗೆ ಪ್ರಾಧಾನ್ಯತೆ ನೀಡುತ್ತಾರೆ. ಈ ೨೧.೬೬ರಷ್ಟು ಮಹಿಳೆಯರು ಏಕೆ ಹೆಣ್ಣು ಮಕ್ಕಳಿಗೆ ಪ್ರಾಧಾನ್ಯತೆ ನೀಡುತ್ತಾರೆ ಎಂಬುದನ್ನು ಅಧ್ಯಾಯ ನಾಲ್ಕರಲ್ಲಿ ಚರ್ಚಿಸಲಾಗುವುದು.

೨.೪. ಇತರ ಸಮುದಾಯ:

ಉತ್ತರಕನ್ನಡ ಜಿಲ್ಲೆಯಲ್ಲಿ ಹಲವಾರು ಬುಡಕಟ್ಟು ಚಹರೆಗಳನ್ನು ಕಾಣಬಹುದು.

ಕರಾವಳಿಯ ಉದ್ದಕ್ಕೆ ಹಾಗೂ ಸಮುದ್ರದ ಹಿನ್ನೀರಿನ ನದಿದಂಡೆಗಳ ಮೇಲೆ ವಾಸಿಸುವ ಹರಿಕಾಂತರು, ಖಾರ್ವಿಗಳು, ಅಂಬಿಗರು, ಹಾಲಕ್ಕಿ ಒಕ್ಕಲಿಗರು, ಮುಕ್ರಿಗಳು, ಗುಡಿಕಾರರು, ಗಾಣಿಗರು, ಗಾಮೊಕ್ಕಲಿಗರು ಕೊಮಾರ ಪಂತರು, ವೈಶ್ಯರು, ನಾಡವರು ಮತ್ತು ನಾಮಧಾರಿಗಳು ಮುಂತಾದ ಜನ ಹೆಚ್ಚು ಕಡಿಮೆ ಕಾಡು, ನದಿ, ಮತ್ತು ಸಮುದ್ರದ ನಿರಂತರ ಸಂಬಂಧ ಹೊಂದಿದವರಾದರೆ ಹವ್ಯಕ ಬ್ರಾಹ್ಮಣರು, ಸಿದ್ದಿಯರು, ಹಲಸರು, ಗೌಳಿಗರು, ಗೊಂಡರು, ಕುಣಬಿಯರು, ಕರೆ ಒಕ್ಕಲಿಗರು, ಕುಮ್ರಿಮರಾಠಿಗರು ಸಂಪೂರ್ಣವಾಗಿ ಅರಣ್ಯದ ಸಂಬಂಧವನ್ನು ಇಟ್ಟುಕೊಂಡವರು."[೬]

೨.೫. ಸಿದ್ದಿಯರ ಮೂಲ:

ಸುಮಾರು ಸಾವಿರಾರೂ ವರ್ಷಗಳ ಹಿಂದೆಯೇ ಮಾನವ ಗುಂಪಾಗಿ ಬದಕಲು ಪ್ರಾರಂಭಿಸಿ ಗುಂಪಿನ ಹಿತಾಸಕ್ತಿಗಾಗಿ ಹೋರಾಡಿದ. ಇದು ಕೇವಲ ಮನುಷ್ಯ ತಾನು ಎಂಬ ಭಾವನೆ ಹುಟ್ಟುವುದಕ್ಕಿಂತ ಪೂರ್ವದಲ್ಲಿ ಇತ್ತು. ಪ್ರಾಣಿ ಜೀವಿಗಳಲ್ಲಿಯೇ ಮನುಷ್ಯ ಹೆಚ್ಚು ಚುರುಕುತನ ಮತ್ತು ಚಾಣಕ್ಷ್ಯವನ್ನು ಹೊಂದಿದವನು. ಮನುಷ್ಯ ಯಾವಾಗ ತನ್ನ ಚಾಣಕ್ಷ್ಯತನದಿಂದ ಪ್ರಕೃತಿಯ ಮೇಲೆ ಹಿಡಿತವನ್ನು ಸಾಧಿಸಲು ಹೊರಟನೋ ಅಂದಿನಿಂದ ಎಲ್ಲವೂ ತನ್ನದಾಗಬೇಕು ಎಂಬ ಆಸೆ ಅತಿಯಾಯಿತು. ಮನುಷ್ಯ ಮನುಷ್ಯನನ್ನೇ ಶೋಷಣೆಗೆ ಅಂದರೆ ಗುಲಾಮರನ್ನಾಗಿಸುವ ಸ್ಥಿತಿಗೆ ಬಂದ. ಈ ಗುಲಾಮಿ ಪದ್ಧತಿಯು ತನ್ನತನವನ್ನ ಮರೆತು ಒಂದು ಜೀವಿಯನ್ನು ರಕ್ಷಿಸುವ ನೆಪದಲ್ಲಿ ಹೀನಾಯವಾಗಿ ಶೋಷಣೆಗೆ ಒಳಪಡಿಸಲು ಪ್ರಾರಂಭಿಸಿತು. ಪ್ರಾಚೀನ ಕಾಲದಿಂದಲೂ ಗುಲಾಮ ಪದ್ಧತಿಯು ಒಂದಲ್ಲಾ ಒಂದು ರೀತಿಯಲ್ಲಿ ಬೆಳೆದುಬಂದಿದೆ. ಬಡವರನ್ನು, ರೈತರನ್ನು, ಮುಗ್ದರನ್ನು, ಉಳ್ಳವರು, ಶ್ರೀಮಂತರು ಹಣವನ್ನು ಕೊಟ್ಟು ಆ ಹಣ ತೀರುವವರೆಗೂ ಅವರನ್ನು ಜೀತಕ್ಕಾಗಿ ಇಟ್ಟುಕೊಳ್ಳುತ್ತಿದ್ದರು. ಅದೇ ರೀತಿಯಾಗಿ ಪುರುಷರು ಉಳ್ಳವರ ಅಥವಾ ಶ್ರೀಮಂತರ ಹಿಡಿತಕ್ಕೆ ಒಳಗಾದರೆ ಆತನ ಹೆಣ್ಣು ತನ್ನ ಅಧೀನದಲ್ಲಿ ಇರಬೇಕು. ಅವಳು ತನ್ನ ಗುಲಾಮಳಾಗಬೇಕು ಎಂದು ಬಯಸುತ್ತಾನೆ.

"ಭಾರತದ ಶ್ರೇಣಿಕೃತ ಸಮಾಜವೇ ಗುಲಾಮಗಿರಿಯ ಇನ್ನೊಂದು ರೂಪ. ಇನ್ನೊಂದು ರೂಪ ಶೂದ್ರರು, ಅದರಲ್ಲಿಯೂ ಕನಿಷ್ಠ ಹಂತವಾದ ಮುಟ್ಟಬಾರದವರು ಎನಿಸಿಕೊಂಡ ಹೊಲೆಮಾದಿಗರು, ಒಂದಲ್ಲಾ ಒಂದು ರೀತಿಯಲ್ಲಿ ಗುಲಾಮತನದ ಬಾಳನ್ನು ಬಾಳಬೇಕಾದ ಅನಿವಾರ್ಯತೆಯನ್ನು ನಮ್ಮ ಸಮಾಜ ನಿರ್ಮಾಣ ಮಾಡಿಬಿಟ್ಟಿತ್ತು. ಇದು ಒಂದು ಹಂತವಾದರೆ, ಇನ್ನೊಂದು ಹಂತದಲ್ಲಿ ಎಲ್ಲ ವರ್ಣಗಳ ಹೆಣ್ಣುಮಕ್ಕಳು ಕನಿಷ್ಠತಮವಾದ ಬದುಕು ಸವೆಸಬೇಕಾಗಿ ಬಂದ ಹಲವು ಪ್ರಸಂಗಗಳು ನಮ್ಮಲ್ಲಿವೆ."[೮]

೨.೫.೧. ಆಫ್ರಿಕಾದಿಂದ ಭಾರತಕ್ಕೆ ಸಿದ್ದಿಗಳ ಆಗಮನ:

"ಆಫ್ರಿಕಾ ಭೂಖಂಡದ ಮತ್ತು ಅಲ್ಲಿನ ಜೀವ ಇತಿಹಾಸ ಅತ್ಯಂತ ಪ್ರಾಚೀನವಾದದು. ಸಾವಿರಾರು ವರ್ಷಗಳವರೆಗೆ ಹೊರಗಿನ ಮನುಷ್ಯ ಪೀಳಿಗೆಯ ದೃಷ್ಟಿಗೆ ಬೀಳದೆ, 'ಕಗ್ಗತ್ತಲಖಂಡ'ವಾಗಿಯೇ ಉಳಿದಿದ್ದು. ನಾಗರಿಕ ಸಮಾಜದಿಂದ ದೂರವಿದ್ದು, ಈ ಭೂಖಂಡ ಏಕಾಏಕೀ 'ನಾಗರೀಕ'ರೆನಿಸಿಕೊಂಡದ್ದು, ಹೊರ ಜಗತ್ತಿನ ಜನರ ವ್ಯಾಪಾರೀ ದೃಷ್ಟಿಗೆ ಬೀಳುವಂತಾದದ್ದು, ಜಗತ್ತಿನ ಚರಿತ್ರೆಯ ಒಂದು ದುರಂತ ಅಧ್ಯಾಯ. ಮನುಷ್ಯ ಕುಲದಲ್ಲಿಯೇ ತಾವು ಅತ್ಯಂತ ಪವಿತ್ರರೂ, ಸುಂದರರೂ, ಬುದ್ಧಿವಂತರೂ ಎಂದು ತನ್ನ ಬೆನ್ನು ತಾವೇ ತಟ್ಟಿಕೊಳ್ಳುವ ಆರ್ಯಕುಲ ಸಂಜಾತರಾದ ಅರಬ್ಬರು ಮತ್ತು ಯೂರೋಪಿಯನ್ನರು ಆಫ್ರಿಕಾಖಂಡಕ್ಕೆ ಹದ್ದುಗಳಂತೆ ಎರಗಿದ ರೀತಿ ಮಾತ್ರ ಖಂಡನೀಯ. ಮೊದಲಿಗೆ ಅರಬರು ಆನಂತರ ಯುರೋಪಿಯನ್ನರು ಆ ಪ್ರಶಾಂತ ಅರಣ್ಯಕ್ಕೆ ದಾಳಿಯಿಟ್ಟು ಅಲ್ಲಿನ ಮನುಷ್ಯರನ್ನು ಪ್ರಾಣಿಗಳಂತೆ ಕಡಿಯಾಗಿ ಬೇಟೆಯಾಡಿದ ಭೀಭತ್ಸ ಪ್ರಸಂಗಗಳು ಮಾತ್ರ ಇದೇ ಮನುಷ್ಯ ಕುಲಕ್ಕೆ ನಾಚಿಕೆ ತರಬೇಕಾದ ಸಂಗತಿಗಳಾಗಿವೆ."[೯]

ಜಗತ್ತಿನ ಮುಂದುವರಿದ ದೇಶ ಎಂದು ಬೀಗುತ್ತಿರುವ ಅಮೇರಿಕಾ ಕೂಡ ಜನಾಂಗೀಯ ಶೋಷಣೆಯಿಂದ ಹೊರತಾಗಿಲ್ಲ ಎಂಬುದನ್ನು ಮಹಿಳಾ ಲೇಖಕಿಯಾದ ಸಾರಾ ಅಬೂಬಕ್ಕರ್ ಅವರು ತಮ್ಮ ಪ್ರವಾಸ ಕಥನ 'ಐಶಾರಾಮದ ಆಳದಲ್ಲಿ' ಎನ್ನುವ ಕೃತಿಯಲ್ಲಿ ವರ್ಗವರ್ಣದ ಬಗೆಗೆ ಚಿತ್ರಿಸಿದ್ದಾರೆ. ಅದು ಇಂತಿದೆ. "ಕರಿಯರನ್ನು ಎಷ್ಟೊಂದು ಕ್ರೂರವಾಗಿ ನಡೆಸಿಕೊಳ್ಳುತ್ತಿದ್ದರೆಂದರೆ, ಹಡಗಿನಲ್ಲಿ ಇವರನ್ನು ಕರೆದುಕೊಂಡು ಬರುವಾಗ ಆಹಾರದ ಅಭಾವ ತಲೆದೂರಿದರೆ ಆಹಾರ ಸಾಕಾಗುವಷ್ಟು ಜನರನ್ನು ಇಟ್ಟುಕೊಂಡು ಉಳಿದವರನ್ನು ನಿರ್ದಯವಾಗಿ ಪ್ರಾಣಿಗಳನ್ನೆಸೆಯುವಂತೆ ಕಡಲಿಗೆ ಎಸೆಯುತ್ತಿದ್ದರು. ಅವರಿಗೆ ರೋಗ ಬಂದರೆ ಔಷಧಿಗಳನ್ನು ಕೊಡುವವರು ಪ್ರಾಣಿ ವೈದ್ಯರು. ಯಾರು ಎಷ್ಟು ದಿನ ಬದುಕಬೇಕು, ಯಾವಾಗ ಸಾಯಬೇಕೆಂಬುದನ್ನು ನಿರ್ಧರಿಸುವವರು ಇವರ ಯಜಮಾನರಾಗಿದ್ದರು. ತಮ್ಮ ದೇಶದಿಂದ ರಕ್ತ ಸಂಬಂಧಿಗಳ ನಡುವಿನಿಂದ ತಮ್ಮ ಸಂಸ್ಕೃತಿ, ಭಾಷೆ ಎಲ್ಲದರಿಂದಲೂ ತಮ್ಮನ್ನು ಬೇರ್ಪಡಿಸಿ ಪ್ರಾಣಿಗಳನ್ನು ಬೇಟೆಯಾಡಿದಂತೆ ತಮ್ಮನ್ನು ಬೇಟೆಯಾಡಿದ್ದನ್ನು ಈ ಜನ ಹೇಗೆ ಸಹಿಸಿಕೊಂಡಿರಬಹುದು."

ಸಾರಾ ಅವರ ಅನುಭವಕ್ಕೆ ಬಂದ ವರ್ಗ ವರ್ಣ ತಾರತಮ್ಯವು ಪ್ರತಿ ದೇಶದಲ್ಲೂ ಮೊದಲಿನಿಂದಲೂ ಇದೆ ಎಂಬುದನ್ನು ತಿಳಿಸುತ್ತದೆ. ಪ್ರಭುತ್ವದ ಅಡಿಯಲ್ಲಿ ಅಸಹಾಯಕರು, ಸ್ತ್ರೀಯರು ಎಂದಿಗೂ ಕೂಡ ಶೋಷಣೆಗೊಳಗಾಗಿಯೇ ಬಂದಿದ್ದಾರೆ ಎನ್ನುವದು ಇದರಿಂದ ತಿಳಿಯುತ್ತದೆ.

"ಯುರೋಪಿಯನ್ನರು ಗುಲಾಮರನ್ನು ಖರೀದಿಸಲು ಬಂದಾಗಲಷ್ಟೇ ಬಂಧಮುಕ್ತರನ್ನಾಗಿ ವಿಶಾಲ ಬಯಲಿಗೆ ಕರತರಲಾಗುತ್ತಿತ್ತು. ಕಡುಬಿಸಿಲಿನಲ್ಲಿ ಬೆತ್ತಲಾಗಿ ನಿಂತ ಗಂಡಸರು-ಹೆಂಗಸರನ್ನು ವೈದ್ಯರು ತಪಾಸಣೆ ಮಾಡುತ್ತಿದ್ದರು. ತೀವ್ರ ತಪಾಸಣೆಯ ನಿರಾಕರಣೆಯಾದವರನ್ನು ವಿಭಾಗಿಸಲಾಗುತ್ತಿತ್ತು. ನಿರಾಕರಣೆಯಾದವರನ್ನು ಮೆಕ್ರಾನ್ಸ್‌ಗಳೆಂದು ಗುರುತಿಸಲಾಗುತ್ತಿತ್ತು. ಈ ಸಾಲಿನಲ್ಲಿ ಮೂವತ್ತು ವರ್ಷ ಮೇಲ್ಪಟ್ಟ ತಲೆ ನರೆತವರು, ಲೈಂಗಿಕ ರೋಗಿಗಳು ಅಥವಾ ಬಲಹೀನರು ಇರುತ್ತಿದ್ದರು. ಅಂಗೀಕರಿಸಿದ ಗುಲಾಮರ ಎದೆಯ ಮೇಲೆ ಕಾದ ಕಬ್ಬಿಣದಿಂದ ಫ್ರೆಂಚ್ ಇಂಗ್ಲಿಷ್ ಅಥವಾ ಡಚ್ ಕಂಪನಿಯ ಗುರುತಿನ ಮುದ್ರೆಯೊತ್ತುತ್ತಿದ್ದರು. ಹೆಣ್ಣು ಮಕ್ಕಳ ಚರ್ಮ ಕೋಮಲ ವಾಗಿರುತ್ತಿದ್ದರಿಂದ ಬೇಗ ಸಂಕ್ರಾಮಿಕ ರೋಗಗಳಿಗೆ ತುತ್ತಾಗುತ್ತಿದ್ದರು. ಮುದ್ರೆ ಒತ್ತಿದ ಗುಲಾಮರನ್ನು ಸರಪಳಿಯಲ್ಲಿ ಬಂಧಿಸಿ ಸಣ್ಣದೋಣಿಗಳಲ್ಲಿ ಹಡಗಿನ ಬಳಿ ತರಲಾಗುತ್ತಿತ್ತು."[೧೧]

"ಗುಲಾಮರು ದಂಗೆ ಏಳುತ್ತಾರೆ ಎನ್ನುವ ಭಯದಿಂದ ನಾವಿಕರು ಸಾಲಾಗಿ ನಿಂತಿರುತ್ತಿದ್ದರು. ಈ ನಾವಿಕರಿಗೆ ಕರಿಯರ ಬಗ್ಗೆ ಅಸಹ್ಯವಿದ್ದರೂ ಹೆಣ್ಣು ಮಕ್ಕಳನ್ನು ಲೈಂಗಿಕವಾಗಿ ಶೋಷಿಸಲು ಅದು ಅಡ್ಡಿಯಾಗುತ್ತಿರಲಿಲ್ಲ. ಗುಲಾಮರನ್ನಾಗಿ ತಂದು ಮಾರಲಾದ ಹೆಣ್ಣು-ಗಂಡುಗಳ ಮಾಲೀಕರು ಹೆಚ್ಚಾಗಿ ಗುಲಾಮ ಮಹಿಳೆಯರ ಮೇಲೆ ಅತ್ಯಾಚಾರ ಎಸಗುತ್ತಿದ್ದರು. ೧೮೫೦ರಲ್ಲಿ ಸಿಲಿಯಾ ೧೪ ವರ್ಷದ ಹೆಣ್ಣು ಮಗಳನ್ನು ರಾಬರ್ಟ ನ್ಯೂಸಮ್ ಎಂಬುವವನು ಕೊಂಡುಕೊಂಡನು. ಆತ ಅವಳನ್ನು ತನ್ನ ಆಸ್ತಿಯೆಂದು ಭಾವಿಸಿದ್ದ. ಸಿಲಿಯಾಳಿಗೆ ಉಪಪತ್ನಿಯಾಗಲು ಒತ್ತಾಯಿಸಿ ಐದು ವರ್ಷಗಳ ಲೈಂಗಿಕ ಶೋಷಣೆ ನಡೆಸಿದ. ಅವಳಿಗೆ ಇಬ್ಬರು ಮಕ್ಕಳಾದ ಮೇಲೆ ಜಾರ್ಜ ಎಂಬ ಗುಲಾಮನನ್ನು ಸಿಲಿಯಾ ಪ್ರೀತಿಸತೊಡಗಿ ಒಡೆಯನನ್ನು ನಿರಾಕರಿಸಿದಳು. ಒಡೆಯ ಅದಕ್ಕೆ ಒಪ್ಪಲಿಲ್ಲ. ಸಿಲಿಯಾ ತನ್ನ ಜೋಪಡಿಯಲ್ಲಿ ಬಲವಾದ ದೊಣ್ಣೆಯೊಂದನ್ನು ಅಡಗಿಸಿಕೊಂಡಿದ್ದಳು. ರಾತ್ರಿ ಒಡೆಯ ಬಂದಾಗ ಅವನ ತಲೆಗೆ ಹತ್ತಾರು ಏಟುಗಳನ್ನು ಹಾಕಿ ಕೊಂದುಬಿಟ್ಟಳು. ಬೆಂಕಿಗೆ ಹಾಕಿ ಹೆಣವನ್ನು ಸುಟ್ಟುಬಿಟ್ಟಳು. ಎಷ್ಟೋ ಗುಲಾಮ ಹೆಂಗಸರು ತಮ್ಮ ಹೆಣ್ಣುಮಕ್ಕಳಿಗೆ ಹೊಡೆದಾಡು, ಬಡಿ, ಕಚ್ಚು, ಎಂದು ಹೇಳಿಕೊಡುತ್ತಿದ್ದರು."[೧೨] ಪುರುಷ ಗುಲಾಮರು ಒಂದು ರೀತಿ ಹಿಂಸೆಯನ್ನು ಅನುಭವಿಸುತ್ತಿದ್ದರೆ, ಹೆಣ್ಣು ಗುಲಾಮಳಾಗಿ ಮಾನಸಿಕವಾಗಿ ಹಿಂಸೆಗೆ ಒಳಗಾಗುತ್ತಿದ್ದಳು. ತನ್ನ ದೇಹದ ಜೊತೆ ಚಕ್ಕಂದವಾಡುತ್ತಿದ್ದ ಪುರುಷರ ವಿರುದ್ಧ ತನ್ನ ಅಸ್ತಿತ್ವವನ್ನು ಕಾಪಾಡಿ(ಕಟ್ಟಿ)ಕೊಳ್ಳಲು ಹೆಣ್ಣು ಹಿಂದಿನಿಂದ ಇಂದಿನವರೆಗೆ ಸಮಾಜದಲ್ಲಿ ಹೋರಾಟ ಮಾಡುತ್ತಲೇ ಬಂದಿದ್ದಾಳೆ. ಯುರೋಪಿಯನ್ನರು ಆಫ್ರೀಕರನ್ನು ಜಗತ್ತಿನ ಅವರ ವಿವಿಧ ವಸಹಾತು ವಿಭಾಗಗಳಿಗೆ ಸಾಗಿಸಿ ಮಾರಾಟ ಮಾಡಿದರು. ಅದರಂತೆ

ಪೋರ್ಚುಗೀಸರು ಭಾರತಕ್ಕೆ ಬರುವಾಗ ಸಿದ್ದಿಯರನ್ನು ಗೋವಾ ಮೂಲಕ ತಂದು ಶೋಷಿಸಲು ತೊಡಗಿದರು. ಪೋರ್ಚುಗೀಸರು ಭಾರತದ ಗೋವಾದಲ್ಲಿ ತಮ್ಮ ಪ್ರಭುತ್ವವನ್ನು ಸಾಧಿಸಿದ್ದರು. ಆದ್ದರಿಂದ ಗೋವೆಯಲ್ಲಿ ಗುಲಾಮರನ್ನು ಮಾರಾಲಾಯಿತು. ಪೋರ್ಚುಗೀಸರು ಕೆಲವು ಶತಮಾನಗಳವರೆಗೆ ಗೋವಾವನ್ನು ಆಳಿದರು. ಭಾರತಕ್ಕೆ ಸ್ವತಂತ್ರ ಸಿಕ್ಕ ನಂತರವೂ ಕೂಡ ಗೋವಾ ಸ್ವಾತಂತ್ರ್ಯವನ್ನು ಪಡೆದುಕೊಂಡಿರಲಿಲ್ಲ. ಸತತ ಪ್ರಯತ್ನದಿಂದ ಗೋವೆಯಿಂದ ಪೋರ್ಚುಗೀಸರನ್ನು ಹೊರಗೆ ಕಳಿಸಲಾಯಿತು. ಅವರು ಬಿಟ್ಟು ಹೋದ ಗುಲಾಮರೇ ಈ ಸಿದ್ದಿಗಳು.

೨.೫.೨. ಉತ್ತರ ಕನ್ನಡಕ್ಕೆ ಬಂದ ಸಿದ್ದಿಗಳು:

ಉತ್ತರ ಕನ್ನಡದಲ್ಲಿ ವಿವಿಧ ಬುಡಕಟ್ಟುಗಳು ವಾಸಿಸುತ್ತಾರೆ. ಆ ಬುಡಕಟ್ಟುಗಳಲ್ಲಿ ಮೂಲ ಬುಡಕಟ್ಟುಗಳ ಸಂಖ್ಯೆ ಕಡಿಮೆ ಇದೆ. ವಲಸೆ ಬಂದ ಬುಡಕಟ್ಟುಗಳ ಸಂಖ್ಯೆ ಹೆಚ್ಚಾಗಿದೆ. ಅದೇ ರೀತಿಯಾಗಿ ಸಿದ್ದಿಯರು ಕೂಡ ವಲಸೆ ಬಂದ ಬುಡಕಟ್ಟಾಗಿ ಗುರುತಿಸಿಕೊಳ್ಳುತ್ತಾರೆ. ಈ ಸಿದ್ದಿಗಳು ಮೂಲತಃ ಕರ್ನಾಟಕದವರಂತೂ ಅಲ್ಲ. ಮಹಾರಾಷ್ಟ್ರ ಗೋವಾ ಇವರ ಮೊದಲ ನೆಲೆ. ಆದರೆ ಇವರ ಹಿಂದಿನ (ಗುಲಾಮಗಿರಿಯ) ಚರಿತ್ರೆಯನ್ನು ನೋಡಿದಾಗ ತಿಳಿದುಬರುವುದು ಆಫ್ರಿಕಾದ ಮೂಲದವರೆಂದು ತಿಳಿಯುತ್ತದೆ. ಆದರೆ ಉತ್ತರ ಕನ್ನಡದ ಕಾಡಿಗೆ ಹೇಗೆ? ಏಕೆ? ಬಂದರು ಎಂಬುದು ಖಚಿತವಾದ ದಾಖಲೆಗಳು ದೊರೆತಿಲ್ಲ. ಆದರೆ, ಡಾ. ಹಿ.ಚಿ.ಬೋರಲಿಂಗಯ್ಯನವರು ಊಹಿಸಿದಂತಹ ಕಾರಣಗಳನ್ನು ನೋಡಬಹುದು.

"೧. ಉತ್ತರ ಕನ್ನಡದ ಸಮೃದ್ಧ ತೋಟಗಳಿಗೆ ಕೆಲಸಗಾರರಾಗಿ ಬಂದಿರಬಹುದು.

೨. ಪ್ರಪಂಚದ ಇತರೆಡೆಗಳಲ್ಲಿ ನಡೆದ ಗುಲಾಮ ಹೋರಾಟದ ಪ್ರಭಾವದಿಂದ ಬಂಡೆದ್ದು ಓಡಿ ಬಂದಿರಬಹುದು.

೩. ಗುಲಾಮಿ ಪದ್ಧತಿಯ ರದ್ಧತಿಯ ಪರಿಣಾಮವಾಗಿ ಬಿಡುಗಡೆ ಹೊಂದಿರಬಹುದು."

ಒಟ್ಟಿನಲ್ಲಿ ಗುಲಾಮರಾಗಿದ್ದ ಸಿದ್ದಿಗಳು ಭೂಮಾಲೀಕರ, ಶ್ರೀಮಂತರ ಮತ್ತು ವಸಾಹತುಗಳಿಂದ ಬಿಡುಗಡೆ ಹೊಂದಿ ತಮ್ಮದೇ ಆದ ಒಂದು ನೆಲೆಯನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿ ಕಂಡುಕೊಳ್ಳಲು ಪ್ರಯತ್ನಿಸಿದ್ದಾರೆ.

೨.೬. ಸಿದ್ದಿ ಪದದ ಅರ್ಥ:

ಕರ್ನಾಟಕದ ಬುಡಕಟ್ಟುಗಳಲ್ಲಿಯೇ ವಿಶಿಷ್ಟವಾದ ಬುಡಕಟ್ಟು ಸಿದ್ದಿ ಬುಡಕಟ್ಟು. ಈ ಸಿದ್ದಿ ಎಂಬ ಹೆಸರು ಹೇಗೆ ಬಂತು? ಯಾಕೆ? ಯಾವಾಗ ಇವರನ್ನು ಸಿದ್ದಿ ಎಂದು ಕರೆದರು ಎಂಬುದು ತಿಳಿಯುವುದು ಅತಿ ಅವಶ್ಯಕವಾಗಿದೆ.

ಡಚ್ಚರು, ಪೋರ್ಚುಗೀಸರು, ಅರಬರು ಮತ್ತು ಇಂಗ್ಲೀಷರು ಗುಲಾಮರ ಸಂತೆಯಲ್ಲಿ ಕಾಂಗೋ ಬೆಜಾ ಮುಂತಾದ ಬೇರೆ ಬೇರೆ ಮೂಲಕ್ಕೆ ಸೇರಿದ ಜನರನ್ನು ಭಾರತಕ್ಕೆ ತಂದರು. ಆ ರೀತಿ ತಂದ ಬೇಜಾ ಎಂಬ ಗುಂಪಿನವರೇ ಸಿದ್ದಿಗಳಿರಬೇಕೆಂಬುದು ವಿದ್ವಾಂಸರ ಊಹೆ.[೧೩] ಸಿದ್ದಿ ಎಂಬ ಹೆಸರು ಸಿದಿ ಎಂಬುದರಿಂದ ಬಂದಿರಬಹುದು. ಹರ್ಬಟ್‌ರಿಸ್ಲೇ ಎಂಬ ವಿದ್ವಾಂಸ 'ಸಿದ್ದಿ' ಎಂದರೆ 'ಕೂಲಿಕಾರ'ರೆಂದು ಹೇಳಿದ್ದಾನೆ. 'ಸಿದ್ದಿನಾಸ' ಎಂಬ ತಮ್ಮ ಮೂಲದೇವರಿಂದ ಈ ಹೆಸರು ಬಂದಿತೆಂಬುದು ಸಿದ್ದಿಗಳ ಅಭಿಪ್ರಾಯ. ಸಿದ್ದಿಗಳೆಂದರೆ ಆಕ್ಸ್‌ಫರ್ಡ್ ಡಿಕ್ಷನರಿ ಪ್ರಕಾರ 'Lord or Prince'. ಭಾರತದಲ್ಲಿ ಸಾಹೇಬ್ ಎಂದು ಕರೆಯುವಂತೇ ಉತ್ತರ ಆಫ್ರಿಕಾದಲ್ಲಿ ಸಿದ್ದಿಗಳೆಂದು ಕರೆಯಲ್ಪಡುತ್ತಾರೆ.[೧೪] ಸಿದ್ದಿಯರನ್ನು ಪಾಶ್ಚಾತ್ಯರು ಸಿದಿ ಎಂದು ಕರೆಯುತ್ತಾರೆ. ಸಿದಿ ಎಂಬ ಪದವು ನೀಗ್ರೋ ಪದಕ್ಕೆ ಪರ್ಯಾಯಪದ. 'ಎನ್.ಆರ್.ನಾಯಕರು' ಹೇಳುವಂತೆ 'ಸಯೀದ್' ಎಂದರೆ 'ಸರ' ಎನ್ನುವ ಪದದಂತೆ ಗೌರವ ಸೂಚಕ ಪದವಾಗಿದೆ. ಈ ಸಯೀದ ಎಂಬ ಶಬ್ದದಿಂದಲೇ ಸಿದ್ದಿ ಶಬ್ದ ನಿಷ್ಪತ್ತಿವಾಗಿರಬಹುದೇ? ಎಂಬ ಅನುಮಾನ ಬರುತ್ತದೆ. ಆದರೆ ಇದು ಸಿದ್ದಿಯರ 'ಸರ' ಇಲ್ಲವೆ ಸಯೀದ ಗೌರವದಿಂದ ವಂಚಿತರಾಗಿ ಗುಲಾಮರಂತೆ ಬಾಳುತ್ತಿದ್ದಾರೆ. ಆದರೂ ಒಂದಾನೊಂದು ಕಾಲಕ್ಕೆ ಇವರು ಗೌರವಯುತ ಬಾಳು ಬದುಕಿರಬೇಕು: ಸಯೀದ್ ಎಂಬ ಪದವೇ ಕ್ರಮೇಣ ಸಿದ್ದಿಯೆಂದು ನಮ್ಮಲ್ಲಿ ಮಾರ್ಪಟ್ಟಾಗಿ ಬಳಕೆಯಲ್ಲಿ ಬಂದಿರಬೇಕು.[೧೫] ಜಂಬೆಸಿ ನದಿ ದಂಡೆಯ 'ಟಿಟೆ' ಪ್ರದೇಶದಲ್ಲಿ ಶಿದಿಮಾಗಳು ಎಂದು ಕರೆಯಲ್ಪಡುತ್ತಿದ್ದ ಜನರು ಬನ್ಯಾಯ ಪಂಗಡದವರೆಂದು ತಿಳಿದು ಬರುತ್ತದೆ. ಈ ಬನ್ಯಾಯ ಅಥವಾ ಶಿದಿಮಾಗಳು ಇಂದಿನ ಸಿದ್ಧಿಯರು.[೧೬] ಪ್ರತಿಯೊಬ್ಬ ವಿದ್ವಾಂಸರು ಸಿದ್ದಿ ಎಂಬ ಶಬ್ದಕ್ಕೆ ಅರ್ಥವನ್ನು ತಮ್ಮ ಅಭಿಪ್ರಾಯದ ಪ್ರಕಾರ ಸೂಚಿಸಿದ್ದಾರೆ. ಆದರೆ ಈ ಶಬ್ದದ ಸತ್ಯಾಸತ್ಯತೆ ಏನು ಎಂದು ತಿಳಿದುಕೊಳ್ಳಲು ಇನ್ನೂ ಹೆಚ್ಚಿನ ಸಂಶೋಧನೆ ನಡೆಯುವುದು ಅವಶ್ಯಕವಾಗಿದೆ.

೨.೭. ಸಾಮಾಜಿಕ ವಿಚಾರಗಳು:

ಸಿದ್ದಿಗಳನ್ನು ಭಾರತಕ್ಕೆ ಗುಲಾಮರನ್ನಾಗಿ ಮಾರಿದಾಗ ಇವರು ಮೂರು ಧರ್ಮಗಳಲ್ಲಿ ಹರಿದೂ ಹಂಚಿಹೋದರು. ಮುಸ್ಲಿಂರ ಜೊತೆಯಲ್ಲಿ ಉಳಿದಾಗ ಮುಸ್ಲಿಂ ಧರ್ಮವನ್ನು ಅನುಸರಿಸಿದರು. ಕ್ರಿಶ್ಚಿಯನ್ ಜೊತೆ ಉಳಿದಾಗ ಕ್ರಿಶ್ಚಿಯನರಾಗಿ ಮತ್ತು ಹಿಂದೂಗಳಲ್ಲಿ ಉಳಿದಾಗ ಹಿಂದೂಗಳಾಗಿ, ಹೀಗೆ ಮೂರು ಧರ್ಮಗಳನ್ನು ಅನುಸರಿಸಿಕೊಂಡು ಹೋಗುತ್ತಿದ್ದಾರೆ. ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಸಿದ್ದಿಯರಲ್ಲಿ ವಿವಾಹ ನೇರವೇರುತ್ತದೆ. ಇವರು ಹೆಚ್ಚಾಗಿ ವಿಭಕ್ತ ಕುಟುಂಬಗಳಲ್ಲಿ ವಾಸಿಸುತ್ತಾರೆ. ಇವರಲ್ಲಿ ಬಹುಸಂಖ್ಯಾತರು

ಕ್ರಿಶ್ಚಿಯನರಾಗಿದ್ದಾರೆ. ಸಿದ್ದಿಗಳನ್ನು ಉಳಿದ ಹಿಂದೂಗಳಂತೆ ದೇವಸ್ಥಾನಗಳಲ್ಲಿ ಪ್ರವೇಶಿಸಲು ಉಳಿದ ಮುಸ್ಲಿಂರಂತೆ ಮಸೀದಿಗಳಲ್ಲಿ ಪ್ರವೇಶಿಸಲು ಮತ್ತು ಉಳಿದ ಕ್ರೈಸ್ತರಂತೆ ಚರ್ಚುಗಳಲ್ಲಿ ಪ್ರವೇಶಿಸಲು ಅವಕಾಶ ಮಾಡಿಕೊಟ್ಟಿಲ್ಲ. ಆದರೆ ಇತ್ತಿತ್ತಲಾಗಿ ಕೆಲವು ಕಡೆ ಚರ್ಚುಗಳು, ದೇವಸ್ಥಾನಗಳಲ್ಲಿ ಸ್ವಲ್ಪ ಮಟ್ಟಿಗೆ ಅವಕಾಶವನ್ನು ನೀಡಿದ್ದಾರೆ.

೨.೮. ಆರ್ಥಿಕ ವಿಚಾರಗಳು:

ಸಿದ್ದಿಗಳು ಕಾಡಿನ ಮೇಲೆ ಹೆಚ್ಚಾಗಿ ಅವಲಂಬಿತರಾಗಿದ್ದಾರೆ. ಅಂದರೆ ಕಾಡಿನಲ್ಲಿ ಸಿಗುವ ಉತ್ಪನ್ನಗಳನ್ನು ಬಳಸಿಕೊಂಡು, ಮಾರಿಕೊಂಡು ಜೀವನವನ್ನು ಸಾಗಿಸುತ್ತಿದ್ದಾರೆ. ಮತ್ತೆ ಕೆಲವರು ಕೂಲಿ ಮಾಡಿಯೋ ಕಾಡಿನ ಉತ್ಪನ್ನಗಳಿಂದ ಕರಿಮೆಣಸು, ಮಾವಿನಕಾಯಿ, ಕಟ್ಟಿಗೆ, ಸೊಪ್ಪು, ಜೇನುತುಪ್ಪ ಮುಂತಾದವುಗಳನ್ನು ಸಂಗ್ರಹಿಸಿ ಮಾರಾಟ ಮಾಡಿ ಜೀವನ ಸಾಗಿಸುತ್ತಿದ್ದಾರೆ. ಕೆಲವರು ಸ್ವಲ್ಪ ಭೂಮಿಯನ್ನು ಹೊಂದಿದವರು ಅದರಲ್ಲಿಯೇ ತರಕಾರಿ ಮತ್ತಿತರ ಬೆಳೆಗಳನ್ನು ಬೆಳಿಸಿ ಮಾರಿಕೊಂಡು ತಮ್ಮ ಉಪಜೀವನ ನಡೆಸುತ್ತಿದ್ದಾರೆ. ಒಡೆಯರ ಅಥವಾ ಮೇಲ್ವರ್ಗದವರ ಮನೆಯಲ್ಲಿ ಮನೆಯಾಳಾಗಿ ಸಿದ್ದಿಗಳು ಶ್ರಮ ಜೀವಿಗಳಾಗಿದ್ದಾರೆ. ಸಿದ್ದಿಗಳು ಆರ್ಥಿಕವಾಗಿ ಹಿಂದುಳಿದವರಾಗಿದ್ದಾರೆ. ಅವರ ಬದುಕು ನಿಕೃಷ್ಟಮಯವಾಗಿದೆ. ಆ ದಿಸೆಯಲ್ಲಿ ಆಡಳಿತ ವರ್ಗದ, ಪ್ರಭುತ್ವದ ಬೆಂಬಲ ಇವರಿಗೆ ದೊರೆತಲ್ಲಿ, ಇವರೂ ಕೂಡ ಸಮಾಜದ ಮುಖ್ಯ ವಾಹಿನಿಗೆ ಬರಲು ಸಾಧ್ಯವಿದೆ.

೨.೯. ಸಿದ್ದಿಯರ ಇಂದಿನ ಸ್ಥಿತಿಗತಿಗಳು:

ಸಿದ್ದಿಯರು ವರ್ತಮಾನದಲ್ಲಿ ಸರ್ಕಾರದ ಕೆಲವು ಸೌಲಭ್ಯಗಳಿಂದ ಮನೆಗಳನ್ನು ಕಟ್ಟಿಸಿಕೊಂಡಿದ್ದಾರೆ. ಇವರು ಶಿಕ್ಷಣವನ್ನು ಪಡೆದುಕೊಳ್ಳುತ್ತಿದ್ದಾರೆ. ಆದರೂ ಸಂಪೂರ್ಣ ಅಭಿವೃದ್ಧಿ ಸಾಧ್ಯವಾಗಿಲ್ಲ. ಅರಣ್ಯ ಉತ್ಪನ್ನಗಳ ಬಳಕೆ ಮಾಡಲು ಸರ್ಕಾರದ ಅಡತಡೆಗಳು ಇವೆ. ಇವರನ್ನು ಪರಿಶಿಷ್ಟ ಪಂಗಡ (ಎಸ್.ಟಿ.) ಗುಂಪಿಗೆ ಸೇರಿಸಿಕೊಂಡರೂ ಯಾವುದೇ ರೀತಿಯ ಸೌಲಭ್ಯಗಳನ್ನು ಸರ್ಕಾರ ಒದಗಿಸಿಲ್ಲ. ಭಾರತೀಯ ಕ್ರೀಡಾ ಪ್ರಾಧಿಕಾರ ಇವರ ಮಕ್ಕಳಿಗೆ ಕೆಲವು ದಿನಗಳವರೆಗೆ ಅವಕಾಶ ನೀಡಿ ಮತ್ತೆ ಅವಕಾಶವಂಚಿತರನ್ನಾಗಿ ಮಾಡಿದೆ.

ಸಿದ್ದಿಗಳು ತಮ್ಮ ಸುತ್ತಲಿನ ಪರಿಸರದಿಂದ ಪ್ರಭಾವಿತರಾಗಿ ಆಧುನಿಕ ಜೀವನ ವಿಧಾನವನ್ನು ಅಳವಡಿಸಿಕೊಳ್ಳುವ ಯತ್ನದಲ್ಲಿ ತೊಡಗಿದ್ದಾರೆ. ಸಿದ್ದಿ ಯುವಕ-ಯುವತಿಯರು ಮೇಲ್ಜಾತಿಯವರ ವೇಷ-ಭೂಷಣ ಸಾಮಾಜಿಕ ನಡುವಳಿಕೆಗಳನ್ನು ಅನುಕರಿಸುತ್ತಿದ್ದಾರೆ. ಇದು ಆಧುನಿಕ ಪ್ರಭಾವ ಎನಿಸುತ್ತದೆ. ಆಧುನಿಕತೆ ಎನ್ನುವುದು ಪ್ರತಿಯೊಂದು ಬುಡಕಟ್ಟುಗಳಿಗೂ ಸಹ ಇದು ಪ್ರವೇಶಿಸುತ್ತದೆ ಎಂಬುದು ಇದರಿಂದ ತಿಳಿಯುತ್ತದೆ.

ಅಡಿಟಿಪ್ಪಣಿಗಳು

೧. ಕನ್ನಡ ವಿಷಯ ವಿಶ್ವಕೋಶ, ಕರ್ನಾಟಕ ಸಂಪುಟ ೧ ಪ್ರಧಾನ ಸಂಪಾದಕ ಡಾ.ಹಾ.ಮಾ.ನಾಯಕ, ಪುಟ ೧೪೨, ೨೦೦೫.

೨. ಕನ್ನಡ ವಿಷಯ ವಿಶ್ವಕೋಶ, ಕರ್ನಾಟಕ ಸಂಪುಟ ೧ ಪ್ರಧಾನ ಸಂಪಾದಕ ಡಾ.ಹಾ.ಮಾ.ನಾಯಕ, ಪುಟ ೧೪೨, ೨೦೦೫.

೩. ಕನ್ನಡ ವಿಷಯ ವಿಶ್ವಕೋಶ, ಕರ್ನಾಟಕ ಸಂಪುಟ ೧ ಪ್ರಧಾನ ಸಂಪಾದಕ ಡಾ.ಹಾ.ಮಾ.ನಾಯಕ, ಪುಟ ೧೪೨, ೨೦೦೫.

೪. By the Scheduled castes and Scheduled Tribes (Amenelment) Act.1976., C.No.of 108 of 1976) dt. 18th Sept. 1976.

೫. ಕನ್ನಡ ವಿಷಯ ವಿಶ್ವಕೋಶ, ಕರ್ನಾಟಕ ಸಂಪುಟ ೧ ಸಂಪಾದಕ ಡಾ. ಹಾ.ಮಾ.ನಾಯಕ ಪುಟ-೧೪೩, ೨೦೦೫.

೬. In Search of An identity, Kiran Kamal Prasad, Page 3, 2005.

೭. ಡಾ.ಹಿ.ಚಿ.ಬೋರಲಿಂಗಯ್ಯ, ಸಿದ್ದಿಯರ ಸಂಸ್ಕೃತಿ, ಪುಟ ೨೭, ೧೯೯೩.

೮. ಡಾ.ಹಿ.ಚಿ.ಬೋರಲಿಂಗಯ್ಯ, ಸಿದ್ದಿಯರ ಸಂಸ್ಕೃತಿ, ಪುಟ ೩, ೧೯೯೩.

೯. ಡಾ.ಹಿ.ಚಿ.ಬೋರಲಿಂಗಯ್ಯ, ಸಿದ್ದಿಯರ ಸಂಸ್ಕೃತಿ, ಪುಟ ೬. ೧೯೯೩.

೧೦. ಸಾರಾ ಅಬೂಬಕ್ಕರ- ಐಶಾರಾಮದ ಆಳದಲ್ಲಿ, ಪುಟ ೨೧, ೨೦೦೨.

೧೧. ಎಂ. ಆರ್.ಕಮಲ- ಕಪ್ಪು ಹಕ್ಕಿಯ ಬೆಳಕಿನ ಹಾಡು, ಪುಟ ೪, ೨೦೦೪.

೧೨. ಎಂ. ಆರ್.ಕಮಲ- ಕಪ್ಪು ಹಕ್ಕಿಯ ಬೆಳಕಿನ ಹಾಡು, ಪುಟ ೫. ೨೦೦೪.

೧೩. ಕನ್ನಡ ವಿಷಯ ವಿಶ್ವಕೋಶ, ಕರ್ನಾಟಕ ಸಂಪುಟ ೨, ಪ್ರಧಾನ ಸಂಪಾದಕರು - ಡಾ. ಹಾ.ಮಾ.ನಾಯಕ ಪುಟ ೧೧೯೮, ೨೦೦೫.

೧೪. ಡಾ. ಎಂ. ಬೈರೇಗೌಡ, ಜಾನಪದ ವೈವಿಧ್ಯ, ಪುಟ ೧೮,೧೯೯೯.

೧೫. ಎನ್. ಆರ್. ನಾಯಕ, ಉತ್ತರ ಕನ್ನಡ ಜಿಲ್ಲೆಯ ಸಿದ್ಧಿ ಜನಾಂಗ, ಪುಟ ೨ ೧೯೯೨.

೧೬. ಹಿ.ಚಿ.ಬೋರಲಿಂಗಯ್ಯ, ಸಿದ್ದಿಯರ ಸಂಸ್ಕೃತಿ, ಪುಟ ೩೮.೧೯೯೩.

ಅಧ್ಯಾಯ : ಮೂರು

ಕೌಟುಂಬಿಕ ಸಂರಚನೆ ಮತ್ತು ಸಿದ್ದಿ ಮಹಿಳೆ

೩.೧. ಜನನ.

೩.೨. ನಾಮಕರಣ.

೩.೩. ಋತುಮತಿ

೩.೪. ವಿವಾಹ.

    ೩.೪.೧. ಮಹಿಳೆಗೆ ವಿವಾಹದಲ್ಲಿ ಆಯ್ಕೆ ಸ್ವಾತಂತ್ರ್ಯ.

    ೩.೪.೨. ಕನ್ಯಾಶುಲ್ಕ (ತೆರ)

    ೩.೪.೩. ಅಂತರ್‌ಜಾತಿ ವಿವಾಹ.

    ೩.೪.೪. ಬಹುಪತ್ನಿತ್ವ

೩.೫. ಗರ್ಭಿಣಿ.

    ೩.೫.೧. ತಾಯ್ತನ.

೩.೬. ಪಾತಿವೃತ್ಯದ ಪರಿಕಲ್ಪನೆ.

೩.೭. ವಿಧವೆ ಮತ್ತು ವಿಧವಾ ವಿವಾಹ.

೩.೮. ಸಿದ್ದಿ ಸಮುದಾಯದಲ್ಲಿ ಸಾವು ಮತ್ತು ಸಾವಿನ ನಂತರದ ಆಚರಣೆಗಳು.

೩.೯. ಕುಟುಂಬ.

ಅಧ್ಯಾಯ : ಮೂರು

ಕೌಟುಂಬಿಕ ಸಂರಚನೆ ಮತ್ತು ಸಿದ್ದಿ ಮಹಿಳೆ

ಕರ್ನಾಟಕದಾದ್ಯಂತ ಹಲವಾರು ಬುಡಕಟ್ಟು ಸಮುದಾಯಗಳು ಕಂಡುಬರುತ್ತವೆ. ಆದರೆ ಈ ಸಮುದಾಯಗಳು ತಮ್ಮದೇ ಆದ ಆಚಾರ ವಿಚಾರಗಳು ರೂಢಿ ಸಂಪ್ರದಾಯಗಳನ್ನು ಬಂದಿವೆ. ಈ ರೂಢಿ ಸಂಪ್ರದಾಯ ಆಚಾರ, ವಿಚಾರಗಳು, ಸಾಮಾನ್ಯವಾಗಿ ಒಂದು ಬುಡಕಟ್ಟಿನಿಂದ ಇನ್ನೊಂದು ಬುಡಕಟ್ಟುಗಳ ನಡುವೆ ಭಿನ್ನತೆಯನ್ನು ಕಾಣುಬಹುದಾಗಿದೆ. ಈ ಬುಡಕಟ್ಟು ಸಮುದಾಯಗಳು ತಲೆತಲಾಂತರಗಳಿಂದ ಬಂದ ತಮ್ಮ ಸಂಸ್ಕೃತಿಯನ್ನು ಚಾಚು ತಪ್ಪದೇ ಪಾಲನೆ ಮಾಡಿಕೊಂಡು ಬಂದಿರುವಂತಹದಾಗಿವೆ. ಸಂಸ್ಕೃತಿ ಎಂಬುದು ಮನುಷ್ಯ ಸಮಾಜವು ಇರುವಡೆಯಲ್ಲೆಲ್ಲ ಸಂಸ್ಕೃತಿ ಇದ್ದೇ ಇರುತ್ತದೆ. ಇಲ್ಲಿ ಮನುಷ್ಯನೊಬ್ಬ ಬಡವನೋ, ಶ್ರೀಮಂತನೋ, ಮೇಲ್ಜಾತಿಯೋ, ಕೀಳಜಾತಿಯೋ, ಯಾವುದು ಮುಖ್ಯವಲ್ಲ. ಮನುಷ್ಯನಿದ್ದ ಕಡೆಯಲ್ಲಿ ಅವನದೇ ಆದ ಒಂದು ವಿಶಿಷ್ಟ ಸಂಸ್ಕೃತಿ ಇರುತ್ತದೆ. 'ಸಂಸ್ಕೃತಿ' ಎಂಬ ಪರಿಕಲ್ಪನೆಗೆ ಮೇಲುಸಂಸ್ಕೃತಿ, ಕೀಳುಸಂಸ್ಕೃತಿ ಎಂಬ ತಾರತಮ್ಯವಿಲ್ಲ."[೧] ಬುಡಕಟ್ಟು ಸಮುದಾಯಗಳು ತಮ್ಮದೇ ಆದ ಸಂಸ್ಕೃತಿಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಇವರಲ್ಲಿ ಹುಟ್ಟಿನಿಂದ ಸಾವಿನವರೆಗಿನ ಆಚರಣೆಗಳಾದ ಜನನ, ನಾಮಕರಣ, ಋತುಮತಿ, ಮದುವೆ, ಗರ್ಭಿಣಿ, ಸೀಮಂತ ಕಾರ್ಯ, ವಿಧವೆ, ಸಾವು ಮತ್ತು ಸಾವಿನ ನಂತರದ ಆಚರಣೆಗಳು ಅವರದೇ ಆದ ರೀತಿಯಲ್ಲಿ ನಡೆಯುತ್ತವೆ. ಅದೇ ರೀತಿಯಾಗಿ "ಹೆಣ್ಣಿನಲ್ಲಿರುವ ಸೃಷ್ಟಿಶಕ್ತಿಯನ್ನು ಗುರುತಿಸಿದ ಜನಪದರು ಬುಡಕಟ್ಟು ಸಮುದಾಯಗಳ ಹೆಣ್ಣು ಋತುಮತಿಯಾದಾಗ, ವಿವಾಹವಾಗುವಾಗ, ಗರ್ಭಧರಿಸುವಾಗ ಹೆಣ್ಣಿಗಾಗಿಯೇ ಕೆಲವೊಂದು ಆಚರಣೆ ಸಂಪ್ರದಾಯಗಳನ್ನು ಸೃಷ್ಟಿಸಿದರು. ಸಾಮಾನ್ಯವಾಗಿ ಎಲ್ಲಾ ಬುಡಕಟ್ಟು ಸಮುದಾಯಗಳಲ್ಲಿ ಹೆಣ್ಣಿಗೆ ಸಂಬಂಧಿಸಿದ ಆಚರಣೆಗಳಲ್ಲಿ ಪರಸ್ಪರ ಸಾಮ್ಯತೆ ಇರುವುದು ಕಂಡುಬರುತ್ತದೆ. ಇಂತಹವುಗಳನ್ನು ಆಯಾ ಸಮುದಾಯಗಳಲ್ಲಿ ಆಚರಣೆಯ ಹಿನ್ನೆಲೆಯಲ್ಲಿ ನೋಡಬಹುದು. ಈ ಆಚರಣೆಗಳು ಪ್ರಾದೇಶಿಕವಾಗಿ ಜನಾಂಗಗಳ ಆರ್ಥಿಕ ಸ್ಥಿತಿಗತಿಗಳ ಮೇಲೆ ರೂಪುಗೊಂಡಿರುತ್ತದೆ ಎಂಬುದನ್ನು ಗಮನಿಸಬಹುದು. ಆದರೆ ಅವುಗಳ ಆಶಯ ಮಾತ್ರ ಒಂದೇ ಆಗಿರುತ್ತದೆ ಎಂಬುದನ್ನು ಅವರ ಆಚರಣೆಗಳಿಂದ ಕಂಡುಕೊಳ್ಳಬಹುದು."[೨] ಅದೇ ಆಶಯವನ್ನು ಇಟ್ಟುಕೊಂಡು ಸಿದ್ದಿ ಸಮುದಾಯವು ಕೂಡ ಹುಟ್ಟಿನಿಂದ ಸಾವಿನವರೆಗೆ ಅನೇಕ ರೀತಿಯ ಆಚರಣೆಗಳನ್ನು ಕೈಗೊಳ್ಳುತ್ತಾರೆ.

೩.೧. ಜನನ:

ವಿಸ್ಮಯವಾದ ಸೃಷ್ಟಿಯಲ್ಲಿ ಅನೇಕಾನೇಕ ವಿಸ್ಮಯಕಾರಿಯಾದ ಚಮತ್ಕಾರಗಳು ನಡೆಯುತ್ತವೆ. ಸೃಷ್ಟಿಯಲ್ಲಿ ಇರುವ ಪ್ರತಿಯೊಂದು ಜೀವರಾಶಿಗಳಿಗೆ ಹುಟ್ಟು ಸಾವು ಸಹಜ. ಈ ಸೃಷ್ಟಿಯಲ್ಲಿ ಹೆಣ್ಣು ತನ್ನ ಜೀವವನ್ನು ಸಾವು–ನೋವಿನ ಜೊತೆ ಹೋರಾಡಿ ಒಂದು ಜೀವಕ್ಕೆ ಜನನ ಕೊಡುತ್ತಾಳೆ. ಇದು ಪ್ರಕೃತಿಯಲ್ಲಿ ನಿರಂತರವಾಗಿ ನಡೆಯುವಂತಹ ಸಹಜ ಕ್ರಿಯೆಯಾಗಿದೆ. ಇದು ಕೇವಲ ಮನುಷ್ಯರಲ್ಲಿ ಅಷ್ಟೇ ಅಲ್ಲ, ಪ್ರಾಣಿಗಳಲ್ಲಿ, ಸಸ್ಯಜೀವಿಗಳಲ್ಲಿಯೂ ಕೂಡ ನಡೆಯುವಂತಹ ಕ್ರಿಯೆಯಾಗಿದೆ. ಈ ಜನನ ಕ್ರಿಯೆಯಲ್ಲಿ ಮಹಿಳೆ ಅದ್ಭುತವಾದ ಪಾತ್ರವನ್ನು ವಹಿಸುತ್ತಾಳೆ. ಅದೇ ರೀತಿಯಾಗಿ ಸಿದ್ದಿ ಮಹಿಳೆಯರಿಗೆ ಹೆರಿಗೆ ಸಮಯದಲ್ಲಿ ಆಸ್ಪತ್ರೆಗೆ ಅಥವಾ ವೈದ್ಯರ ಬಳಿ ಕರೆದುಕೊಂಡು ಹೋಗದೆ ಹೆರಿಗೆ ನೋವು ಕಾಣಿಸಿಕೊಂಡಾಗ ನುರಿತ ಮಹಿಳೆಯರು ಬಂದು ಅವರಿಗೆ ಹೆರಿಗೆ ಮಾಡಿಸುತ್ತಾರೆ. ಹೆರಿಗೆಯಾದ ಬಳಿಕ ಹೊಕ್ಕುಳ ಬಳ್ಳಿಕೊಯ್ದು, ಮಾಸನ್ನು ಒಂದು ಮಡಿಕೆಯಲ್ಲಿ ಹಾಕಿ ಮನೆಯ ಹಿರಿಯ ಮಹಿಳೆ ಅಥವಾ ಸೂಲಗಿತ್ತಿ ಸೇರಿ ಗುಂಡಿ ತೋಡಿ ಅದನ್ನು ಮುಚ್ಚುವರು. ಅದಕ್ಕೆ ನರಿ, ನಾಯಿ ಕೆದರದಂತೆ ಎಚ್ಚರಿಕೆ ವಹಿಸುವರು. ಹೆರಿಗೆಯಾಗಿ ೪ ದಿನಗಳ ಬಳಿಕ ಮಾಸ ಮುಚ್ಚಿದ ಗುಂಡಿಗೆ, ಕಟ್ಟಿಗಿಗೆ ಬಟ್ಟೆಸುತ್ತಿ ಅದಕ್ಕೆ ಎಣ್ಣೆ ಹಾಕಿ ದೀಪ ಎಂದು ಆ ಮುಚ್ಚಿದ ಮಾಸನ್ನು ಪೂಜೆ ಮಾಡುವರು. ನಂತರ ಮನೆಗೆ ಬಂದು ದಿನಾಲು ಸ್ಥಾನ ಮಾಡುವ ನೀರಿನ ಪಾತ್ರೆಯೊಳಗೆ ಕೊಬ್ಬರಿ ಹುಂಡಿಯನ್ನು ತುಪ್ಪದಲ್ಲಿ ಮಾಡಿ ನಾಲ್ಕು ಜನ ಚಿಕ್ಕ ಚಿಕ್ಕ ಮಕ್ಕಳಿಗೆ ತಿನ್ನಲು ಕೊಡುವರು. ಇದು ಹೆರಿಗೆಯಾಗಿ ನಾಲ್ಕು ದಿನದ ಬಳಿಕ ಮಾಡುವಂತಹ ಆಚರಣೆಯಾಗಿದೆ. ಹೆರಿಗೆಯಾದ ಮಹಿಳೆಗೆ ನಾಲ್ಕು ದಿನಗಳವರೆಗೆ ಮುಟ್ಟುವಂತೆ ಇಲ್ಲ. ಒಂದು ವೇಳೆ ಮುಟ್ಟಿದರೆ ಸ್ನಾನ ಮಾಡಬೇಕಾಗುತ್ತದೆ.

ಮಹಿಳೆಯರು ಹೆರಿಗೆಯಾಗಿ ಹನ್ನೊಂದು ದಿನಗಳವರೆಗೆ ಹೊರಗೆ ಇರಬೇಕಾಗುತ್ತದೆ. ಸೂತಕದ ಆಚರಣೆಯನ್ನು ಸರಿಯಾಗಿ ಪಾಲಿಸದಿದ್ದರೆ ನಮ್ಮ ಇಡೀ ಸಮುದಾಯಕ್ಕೆ ವಂಶಕ್ಕೆ ಕೆಡಕಾಗುತ್ತದೆ ಎಂಬ ಭಾವನೆ ಅವರಲ್ಲಿ ಬೆಳೆದು ಬಂದಿರುವುದು ಸ್ಪಷ್ಟವಾಗಿ ಕಾಣುತ್ತದೆ. ಆದರೆ ಎಂ.ಎಂ. ಕಾಚಾಪೂರ ಹೇಳುವಂತೆ "ಸಿದ್ದಿಗಳಲ್ಲಿ ಯಾವುದೇ ತರಹದ ಮಡಿ ಅಥವಾ ಮೈಲಿಗೆ ಇಲ್ಲ."[೩] ಎಂದು ಹೇಳುವುದು ಅಷ್ಟು ಸಮಂಜಸವಾಗಲಾರದು. ಮಹಿಳೆಯು ಹೆರಿಗೆಯಾಗಿ ಹನ್ನೊಂದು ದಿನಗಳವರೆಗೆ ಹೊರಗಡೆ ಇದ್ದರು ಸಹ ಅದನ್ನು ಅವಳು ಯಾವುದೇ ರೀತಿಯ ಹಿಂಸೆ, ತೊಂದರೆ ಎಂದು ಭಾವಿಸಿಕೊಳ್ಳಲಾರಳು. ಏಕೆಂದರೆ ಈ ರೀತಿಯ ಪದ್ಧತಿಯನ್ನು ತನ್ನ ತಾಯಿ ಅಥವಾ ತನ್ನ ಸಮುದಾಯದ ಸ್ತ್ರೀಯರು ಪಾಲನೆ ಮಾಡಿಕೊಂಡು ಬಂದಿರುವುದನ್ನು ತಾನು ಚಿಕ್ಕವಳಿರುವಾಗಳಿಂದಲೂ

ಗಮನಿಸಿಕೊಂಡು ಬಂದಿರುತ್ತಾಳೆ. ಹೀಗಾಗಿ ಸಂಪ್ರದಾಯವನ್ನು ಮುರಿದರೆ ತಮಗೆ ಅಥವಾ ಹುಟ್ಟಿದ ಮಕ್ಕಳಿಗೆ ಏನಾದರೂ ಅನಾಹುತ ಅಥವಾ ಕೆಟ್ಟದಾದ ಪರಿಣಾಮ ಬೀರಬಹುದೆಂಬ ಪ್ರಬಲವಾದ ನಂಬಿಕೆಗಳು ಈ ಸಿದ್ದಿ ಸಮುದಾಯದ ಮಹಿಳೆಯರಲ್ಲಿ ಕಂಡುಬರುತ್ತದೆ.

೩.೨. ನಾಮಕರಣ:

ಸಿದ್ದಿಜನಾಂಗದಲ್ಲಿ ಮಗುಜನಿಸಿದ ಹನ್ನೊಂದನೇ ದಿನಕ್ಕೆ ಈ ನಾಮಕರಣದ ಕಾರ್ಯಕ್ರಮವನ್ನು ಕೈಗೊಳ್ಳುವರು. ಇಲ್ಲಿ ಹೆರಿಗೆಯಾದ ಸ್ತ್ರೀ ಹನ್ನೊಂದು ದಿನಗಳವರೆಗೆ ಮನೆಯೊಳಗೆ ಪ್ರವೇಶಿಸಬಾರದು. ಹೀಗಾಗಿ ಅವಳಿಗೆ ಕೋಣೆಯ ಹೊರಗಡೆ ಚಪ್ಪರದಂತೆ ತಡಿಕೆ ಕಟ್ಟಿರುತ್ತಾರೆ. ಅಲ್ಲಿಯೇ ಅವಳು ಹನ್ನೊಂದು ದಿನಗಳವರೆಗೆ ವಾಸವಾಗಿರಬೇಕು. ಹನ್ನೊಂದನೆಯ ದಿನಕ್ಕೆ ಬಾಗಿಲ ಮುಂದೆ ಅಕ್ಕಿ ಹಾಕಿ ಮಗುವಿಗೆ ಅಕ್ಕಿಯ ಮೇಲೆ ಮಲಗಿಸಿ ತಾಯಿಯಾದವಳು ಮಗುವನ್ನು ಎತ್ತಿಕೊಂಡು ಮನೆಯೊಳಗೆ ಪ್ರವೇಶ ಮಾಡಬೇಕು. ತದನಂತರ ಭಟ್ಟರ ಮನೆಗೆ ಹೋಗಿ ಮಗು ಹುಟ್ಟಿದ ಜಾತಕವನ್ನು ಕೊಟ್ಟು ಮಗುವಿಗೆ ಏನೆಂದು ನಾಮಕರಣ ಮಾಡಬೇಕು ಎಂದು ತಿಳಿದುಕೊಂಡು ರಾತ್ರಿ ವೇಳೆ ತೊಟ್ಟಿಲಿಗೆ ಹೂವಿನಿಂದ ಶೃಂಗಾರ ಮಾಡಿ ಐದು ಅಥವಾ ಎರಡು ತೆಂಗಿನ ಕಾಯಿ ತೊಟ್ಟಿಲಲ್ಲಿ ಇಟ್ಟು ಒಂದು ತೊಟ್ಟಿಲಿಗೆ ಒಡೆಯುತ್ತಾರೆ. ನಂತರ ಮಗುವನ್ನು ತೊಟ್ಟಿಲಲ್ಲಿ ಹಾಕುವ ಮುಂಚಿತವಾಗಿ ಬಟ್ಟೆಯಿಂದ ಕೃತಕ ಮಗುವನ್ನು ತಯಾರಿಸಿ ಹೆರಿಗೆಯಾದ ತಾಯಿ ತಂದೆಗಳು ತೊಟ್ಟಿಲಿಗೆ ಏಳು ಬಾರಿ ಪ್ರದಕ್ಷಣೆ ಹಾಕಿ ಬಟ್ಟೆಯಿಂದ ಮಾಡಿದ ಮಗುವನ್ನು ತೊಟ್ಟಿಲಿಗೆ ಹಾಕುವರು. ಅದೇ ರೀತಿಯಾಗಿ ಮಗುವಿಗೂ ಕೂಡ ತೊಟ್ಟಿಲಲ್ಲಿ ಮಲಗಿಸಿ ಮಗುವಿನ ಮಾವನಾದವನು ಮಗುವಿನ ಕಿವಿಯಲ್ಲಿ ಹೆಸರನ್ನು ಹೇಳುತ್ತಾನೆ. ನಂತರ ಎಲ್ಲರಿಗೂ ಕೇಳುವಂತೆ ಜೋರಾಗಿ ಮಗುವಿನ ಹೆಸರನ್ನು ಹೇಳುತ್ತಾನೆ.

ಅದೇ ರೀತಿಯಾಗಿ ಕ್ರಿಶ್ಚಿಯನ್ ಸಿದ್ದಿಗಳು ಚರ್ಚಿಗೆ ಹೋಗಿ ಮಗು ಹುಟ್ಟಿದ ವೇಳೆ ಮತ್ತು ದಿನಾಂಕವನ್ನು ಹೇಳಿದ ನಂತರ ಫಾದರ್ ಬೈಬಲಿನ ಪ್ರಕಾರ ಹೆಸರನ್ನು ಸೂಚಿಸುವರು. ಕ್ರಿಶ್ಚಿಯನ್ ಸಿದ್ದಿಗಳು ಹನ್ನೆರಡು ದಿನಕ್ಕೆ ನಾಮಕರಣ ಮಾಡುವರು. ಕ್ರಿಶ್ಚಿಯನ ಸಿದ್ದಿಯರಲ್ಲಿ ಮಗು ಜನಿಸಿದ ವಿಷಯ ಚರ್ಚಿನಲ್ಲಿ ಹೇಳದೆ ಮನೆಯಲ್ಲಿಯೇ ನಾಮಕರಣ ಮಾಡಿಕೊಂಡರೆ ಆ ಮಗು ಕ್ರಿಶ್ಚಿಯನ್ ಆಗುವುದಿಲ್ಲ. ಅದು ಮೊದಲ ಕ್ರಿಸ್ತ ಪ್ರಸಾದ ಪಡೆಯುವಂತಿಲ್ಲ. ಮೊದಲು ಕ್ರಿಸ್ತ ಪ್ರಸಾದ ಪಡೆಯದೇ ಹೋದರೆ ಕ್ರಿಶ್ಚಿಯನ್ ಸಿದ್ದಿ ಎಂದು ಒಪ್ಪಿಕೊಳ್ಳುವುದಿಲ್ಲ ಆದ್ದರಿಂದ ಕ್ರಿಶ್ಚಿಯನ್ ಸಿದ್ದಿಗಳು ಮಗು ಜನಿಸಿದಾಗ ಜಾತಕವನ್ನು ಕೊಟ್ಟು ಹೆಸರನ್ನು ನೋಂದಾಯಿಸಿ ಬರುತ್ತಾರೆ. ಅದೇ ರೀತಿಯಾಗಿ ಮುಸ್ಲಿಂ ಸಿದ್ದಿಗಳು ಮುಸ್ಲಿಂ ಧರ್ಮದ ಪ್ರಕಾರ ನಾಮಕರಣ ಮಾಡುತ್ತಾರೆ.

ಗಂಡು ಮಗುವಾಗಲಿ ಅಥವಾ ಹೆಣ್ಣು ಮಗುವಾಗಲಿ ಮೊದಲಿನೇ ಮಗುವಿಗೆ ಹೊಸ ತೊಟ್ಟಿಲನ್ನು ತಂದು ಮಗುವಿನ ನಾಮಕಾರಣ ಮಾಡುತ್ತಾರೆ. ಸಿದ್ದಿ ಸಮುದಾಯದಲ್ಲಿ ಸಾಮಾನ್ಯವಾಗಿ ಎಲ್ಲಾ ಸಮುದಾಯದಲ್ಲಿರುವಂತೆ ಹೆಣ್ಣು ಮಗುವಿಗಿಂತಲೂ ಗಂಡುಮಗುವಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡುವುದನ್ನು ಕಾಣಬಹುದು.

೩.೩. ಋತುಮತಿ:

ಹದಿಹರೆಯವು ಬಾಲ್ಯವಸ್ಥೆ ಮತ್ತು ಯೌವನವಸ್ಥೆಯ ಮಧ್ಯಂತರ ವಯಸ್ಸು. ಈ ಹದಿಯರೆಯ ಹಂತವು ಒಂದು ಮಹತ್ತರವಾದ ಕಾಲಘಟ್ಟವಾಗಿದೆ. ಇದು ಸರಾಸರಿ ಹತ್ತರಿಂದ ಹತ್ತೊಂಬತ್ತರ ವಯೋಮಿತಿಯಲ್ಲಿರುತ್ತದೆ. ಈ ಹಂತದಲ್ಲಿ ದೇಹದ ಎಲ್ಲಾ ಅಂಗಾಂಗಗಳಲ್ಲಿ ಅನೇಕ ರೀತಿಯ ಮಾರ್ಪಾಡುಗಳನ್ನು ಕಾಣಬಹುದಾಗಿದೆ. ಹುಡುಗಿಯರಲ್ಲಿ ಹನ್ನೊಂದರಿಂದ ಹದಿನೈದು ವರ್ಷಗಳಲ್ಲಿ ಮತ್ತು ಹುಡುಗರಲ್ಲಿ ಹನ್ನೆರಡರಿಂದ ಹದಿನಾರು ವರ್ಷಗಳಲ್ಲಿ ಹೆಚ್ಚಿನ ಬದಲಾವಣೆಗಳನ್ನು ಕಾಣಬಹುದು. ಹುಡುಗಿಯರು ಹನ್ನೆರಡರಿಂದ ಹದಿನೈದು ವರ್ಷದೊಳಗಾಗಿ ಋತುಮತಿಯಾಗುತ್ತಾರೆ. "ಹೆಣ್ಣು ಋತುಮತಿಯಾಗುವುದು ಪ್ರಾಕೃತಿಕ ಸಹಜ ನಿಯಮ. ಒಮ್ಮೆ ಹೆಣ್ಣು ಋತುಮತಿಯಾದ ಮೇಲೆ ಮಧ್ಯವಯಸ್ಸಿನಲ್ಲಿ ಆಕೆಯ ಋತು ಚಕ್ರ ಸ್ಥಗಿತಗೊಳ್ಳುವವರೆಗಿನ ಕಾಲಘಟ್ಟವನ್ನು ಫಲವಂತಿಕೆಯ ಕಾಲ ಎಂದು ಗುರುತಿಸುವರು. ಹೆಣ್ಣು ಋತುಮತಿಯಾದಾಗ ಮೊಟ್ಟ ಮೊದಲು ಬಾರಿಗೆ ಜೈವಿಕ ಬದಲಾವಣೆ ಆಗುತ್ತಿರುವುದನ್ನು ಅನುಭವಿಸುತ್ತಾಳೆ."[੧] ಈ ಮುಟ್ಟು ಅನ್ನುವಂತದು ಪ್ರಕೃತಿ ಸಹಜವಾಗಿರುವುದರಿಂದ ಎಲ್ಲಾ ಮಹಿಳೆಯರಲ್ಲಿ ಸರ್ವೆಸಾಮಾನ್ಯವಾಗಿ ಕಂಡುಬರುತ್ತದೆ. ಆದರೆ ಈ ಮುಟ್ಟು ಅಥವಾ ಹೊರಗಾಗುವಿಕೆಯ ಬಗ್ಗೆ ಅನೇಕ ಸಮುದಾಯಗಳಲ್ಲಿ ಅವರದೇ ಆದ ಕೆಲವೊಂದು ಕಟ್ಟುಪಾಡುಗಳಿರುತ್ತವೆ. ಸಾಮಾನ್ಯವಾಗಿ ಎಲ್ಲಾ ಬುಡಕಟ್ಟುಗಳಲ್ಲಿ ಮುಟ್ಟನ್ನು ಮೈಲಿಗೆ ಎಂಬ ರೀತಿಯಲ್ಲಿ ನೋಡುತ್ತಾರೆ. ಹಲಸರು, ಗೌಳಿಗರು, ಹಾಲಕ್ಕಿಗಳು, ಸೋಲಿಗರು, ಮ್ಯಾಸಬೇಡರು, ಲಂಬಾಣಿಗರು ಮುಂತಾದ ಬುಡಕಟ್ಟು ಸಮುದಾಯಗಳಲ್ಲಿ ಮುಟ್ಟನ್ನು ಮೈಲಿಗೆ ಎಂದು ಪರಿಭಾವಿಸುವರು. ಅದೇ ರೀತಿಯಾಗಿ ಸಿದ್ದಿಗಳಲ್ಲಿಯೂ ಕೂಡ ಮುಟ್ಟನ್ನು ಮೈಲಿಗೆ ಎಂಬಂತಹ ರೀತಿಯಲ್ಲಿ ನೋಡುತ್ತಾರೆ.

ಸಿದ್ದಿ ಸಮುದಾಯದಲ್ಲಿ ಋತುಮತಿಯಾದಾಗ ಋತುಮತಿಯಾದ ಕನ್ಯೆಯನ್ನು ಸ್ನಾನ ಮಾಡಿಸಿ ಕೋಣೆಯ ಮೂಲೆಯಲ್ಲಿ 'ಸಿಡಿ' ಎಂದು ನಾಲ್ಕು ಕಡೆಗೆ ಮಂಡಲ ಹಾಕಿ ಅದರಲ್ಲಿ ಒಂದು ಸುಲಿಯದ ತೆಂಗಿನಕಾಯಿಯನ್ನಿಟ್ಟು ಅಲ್ಲಿರುವಂತೆ ವ್ಯವಸ್ಥೆ ಮಾಡುತ್ತಾರೆ. ಚೌಕಟ್ಟನ್ನು ದಾಟಿ ಅತ್ತ ಇತ್ತ ಓಡಾಡುವ ಹಾಗೆ ಇಲ್ಲ. ಋತುಮತಿಯಾದಾಗ

ಅಥವಾ ಮುಟ್ಟಾದಾಗ ಐದು ದಿನಗಳವರೆಗೆ ದೇವರಕೋಣೆಗೆ, ಅಡುಗೆ ಮನೆಗೆ, ದೇವರಪೂಜೆ ಮುಂತಾದವುಗಳನ್ನು ಮಾಡುವಂತೆ ಇಲ್ಲ. ಐದು ದಿನಗಳಾದ ನಂತರ ವಾಸವಾದ ಜಾಗವನ್ನು ಐದು ಬಾರಿ ಸಾರಿಸುತ್ತಾರೆ. ನಂತರ ಋತುಮತಿ ಕನ್ಯೆಯನ್ನು ಕೆರೆಗೆ ಕರೆದುಕೊಂಡು ಹೋಗಿ ಐದು ಜನ ಮುತ್ತೈದೆಯರು ಸ್ನಾನ ಮಾಡಿಸುವರು. ತಲೆಯನ್ನು ಬಾಚಿ ಹೊಸ ಸೀರೆ ಉಡುಸಿ ಹೂ ಮುಡಿಸುವರು. ಮನೆಗೆ ಬಂದು ದೇವರಿಗೆ ಮತ್ತು ಹಿರಿಯರಿಗೆ ನಮಸ್ಕರಿಸಿ ಬೆಲ್ಲ ತುಪ್ಪ ತಿನ್ನಿಸುತ್ತಾರೆ. ಇದು ಹಿಂದೂ ಸಿದ್ದಿಗಳಲ್ಲಿ ಕಂಡುಬರುವ ಆಚರಣೆಯಾದರೂ ಕ್ರಿಶ್ಚಿಯನ್ ಮತ್ತು ಮುಸ್ಲಿಂ ಸಿದ್ದಿಗಳಲ್ಲಿಯೂ ಈ ಮೇಲಿನಂತೆ ಕಂಡುಬರುತ್ತದೆ. ಇತ್ತಿತ್ತಲಾಗಿ ಋತುಮತಿ ಆದ ವಿಷಯವನ್ನು ಬಹಿರಂಗ ಪಡೆಸುವುದಿಲ್ಲ. ಏಕೆಂದರೆ ಇಂದಿನ ಹೆಣ್ಣು ಮಕ್ಕಳು ಹನ್ನೊಂದರಿಂದ ಹನ್ನೆರಡನೆಯ ವಯಸ್ಸಿಗೆ ಋತುಮತಿಯಾದಾಗ ಮುಂದೆ ಕುಟುಂಬದವರು ಕೆಲವೊಂದು ಸಮಸ್ಯೆಯನ್ನು ಎದುರಿಸುವಂತಹ ಪ್ರಸಂಗಗಳು ಬರಬಹುದೆಂಬ ಕಾರಣಕ್ಕೆ ಋತುಮತಿಯಾದ ವಿಷಯವನ್ನು ಬಹಿರಂಗ ಪಡಿಸುವುದಿಲ್ಲ.

ಇಂದಿನ ಮಹಿಳೆಯರು ಎದುರಿಸುತ್ತಿರುವಂತಹ ಅತ್ಯಾಚಾರ, ದೌರ್ಜನ್ಯ ಮುಂತಾದವುಗಳಿಗೆ ತುತ್ತಾಗಬಾರದೆಂದು ಸಿದ್ದಿಗಳು ಹೆಚ್ಚಾಗಿ ಋತುಮತಿಯಾದ ಸಂದರ್ಭದಲ್ಲಿ ಆಚರಿಸುವ ಆಚರಣೆಗಳನ್ನು ಕಡೆಗಣಿಸುತ್ತಿದ್ದಾರೆ. ನಮ್ಮ ಸಮಾಜದಲ್ಲಿ ಮಹಿಳೆಯರಿಗೆ ಬಾಲ್ಯಾವಸ್ಥೆಯಲ್ಲಿರುವಷ್ಟು ಸ್ವತಂತ್ರ್ಯವು ಋತುಮತಿಯಾದ ಮೇಲೆ ಇರುವುದಿಲ್ಲ. ಏಕೆಂದರೆ ಅವಳು ಋತುಮತಿಯಾದಾಗಿನಿಂದ ಗಂಡು ಮಕ್ಕಳ ಜೊತೆ ಆಟವಾಡಲು, ಮಾತನಾಡಲು, ಕೆಲವೊಂದು ನಿರ್ಬಂಧನೆಗಳನ್ನು ಹೇರಿರುತ್ತಾರೆ. ಮಹಿಳೆಯರ ಮೇಲೆ ನಡೆಯುತ್ತಿರುವ ಅತ್ಯಾಚಾರ ಅಪಹರಣ, ದೌರ್ಜನ್ಯಗಳಂತಹ ಪ್ರಕರಣಗಳು ಮಹಿಳೆಯರ ಸ್ವತಂತ್ರತೆಗೆ ಅಡ್ಡಿಯನ್ನುಂಟು ಮಾಡುತ್ತದೆ. ಈ ಪುರುಷಶಾಹಿ ವ್ಯವಸ್ಥೆ ಹೆಣ್ಣು ಮಕ್ಕಳು ಮೈನೆರೆದರೆ ಸಾಕು ಅವಳನ್ನು ತಮ್ಮ ಕಾಮತೃಷೆ ತೀರಿಸಿಕೊಳ್ಳಲು ಕುತಂತ್ರಗಳನ್ನು ಉಪಯೋಗಿಸುತ್ತಿರುತ್ತದೆ. ಆದ್ದರಿಂದ ಮಹಿಳೆಯರು ಇವುಗಳನ್ನು ಎದುರಿಸುವಂತೆ ಜಾಗೃತರಾಗಬೇಕು.

೩.೪. ವಿವಾಹ:

ಮದುವೆ ಅನ್ನುವಂತದ್ದು ಗಂಡು ಹೆಣ್ಣು ಕೂಡಿ ಬದುಕನ್ನು ಕಟ್ಟಿ ಜೀವಿಸಲಿಕ್ಕೆ ಆದಂತಹ ಪವಿತ್ರ ಬಂಧನ, ಇದು ಸರ್ವೇಸಾಮಾನ್ಯವಾಗಿ ಎಲ್ಲಾ ಸಮುದಾಯಗಳಲ್ಲಿ ಕಂಡುಬರುವ ಒಂದು ಉತ್ತಮವಾದ ಸಂಸ್ಕಾರವಾಗಿದೆ. ಹೆಣ್ಣು ಮತ್ತು ಗಂಡುಗಳ ವ್ಯವಸ್ಥಿತವಾದ ಲೈಂಗಿಕ ಸಂಬಂಧಕ್ಕೆ ಸಮಾಜ ನೀಡುವ ಮಾನ್ಯತೆಯೇ ಈ ಮದುವೆಯಾಗಿದೆ.

ಅಲ್ಲದೇ ಸಾಮಾಜಿಕವಾಗಿ ಮಾನವ ಸಂತತಿ ರೂಢಿಸಿಕೊಂಡು ಬಂದಂತಹ ಬಂಧುತ್ವದ ತಳಹದಿ ವಿವಾಹ ಎಂದು ಹೇಳಬಹುದು. ಸಾಮಾನ್ಯವಾಗಿ ವಿವಾಹದ ಉದ್ದೇಶಗಳು ಮಾನವನ ಜೈವಿಕ ಆಸೆ ಆಕಾಂಕ್ಷೆಗಳ ಪೂರೈಕೆಗಳಲ್ಲಿ ಒಂದಾಗಿದೆ. ಇದರಲ್ಲಿ ಧರ್ಮಾಚರಣೆಯ ಒಂದು ಅಂಶವು ಸೇರಿಕೊಳ್ಳುತ್ತದೆ. ಹೀಗಾಗಿ ಈ ವಿವಾಹದಿಂದ ಆಸ್ತಿ, ಹಣ, ಸಂತಾನ, ಸ್ಥಾನಮಾನ, ಕೀರ್ತಿ ಮುಂತಾದ ಆಕಾಂಕ್ಷೆಗಳು ಹುಟ್ಟಿಕೊಳ್ಳುತ್ತವೆ. ಕುಟುಂಬ ಎಂಬ ಸಾಮಾಜಿಕ ಸಂಸ್ಥೆಗೆ ವಿವಾಹ ಎಂಬ ಮತ್ತೊಂದು ಸಂಸ್ಥೆಯ ಮೂಲ ಇದೊಂದು ವ್ಯಾಪಕ ಹಾಗೂ ಸಾರ್ವತ್ರಿಕ ಸಂಸ್ಥೆಯಾಗಿದೆ.

ಈ ವಿವಾಹವೆಂಬುದು ತಮ್ಮದೇ ಆದ ಧರ್ಮದ ನೆಲೆಗಟ್ಟಿನ ಮೇಲೆ ನೆರವೇರುತ್ತವೆ. ಹಿಂದೂಗಳಲ್ಲಿ ವಿವಾಹ ಎಂಬುದು ಪವಿತ್ರ ಬಂಧನವಾದರೆ, ಇಸ್ಲಾಂ ಧರ್ಮದಲ್ಲಿ ಅದು ಒಂದು ಒಪ್ಪಂದವಾಗಿ ಮಾರ್ಪಟ್ಟಿದೆ. ಅದೇ ರೀತಿಯಲ್ಲಿ "ಕ್ರೈಸ್ತ ಧರ್ಮದಲ್ಲಿ ಒಪ್ಪಂದ, ಒಡಂಬಡಿಕೆ ಮತ್ತು ಸಂಸ್ಕಾರವೆಂದು ಹೇಳಬಹುದು"[೫] ಅಲ್ಲದೆ "ಪ್ರತಿಯೊಂದು ಬುಡಕಟ್ಟು ಸಮುದಾಯಗಳು ತಮ್ಮದೆ ಆದ ಸಂಪ್ರದಾಯ ಆಚರಣೆಗಳ ಮೂಲಕ ಮದುವೆ ಮಾಡುವುದನ್ನು ಪ್ರಾಚೀನ ಕಾಲದಿಂದಲೂ ರೂಢಿಸಿಕೊಂಡ ಆಚರಣೆಗಳು ಹಾಗೂ ಪದ್ಧತಿಗಳು ಗೋಚರಿಸುತ್ತವೆ. ಶತಶತಮಾನಗಳಿಂದ ರೂಢಿಸಿಕೊಂಡು ಬಂದ ಮದುವೆಗಳಲ್ಲಿನ ಆಚರಣೆಗಳು ಇಂದು ಬದಲಾಗಿವೆ. ಮದುವೆಯಲ್ಲಿ ಆಚರಿಸುವ ಅನೇಕ ಆಚರಣೆ ಸಂಪ್ರದಾಯಗಳು ಮಾಯವಾಗಿ ಕೆಲವೊಂದು ಹೊಸ ರೂಪ ಪಡೆದುಕೊಂಡಿವೆ."[೬] ಈ ಬದಲಾವಣೆಗಳು ಕಂಡುಬರಲು ಹಲವು ಕಾರಣಗಳಿವೆ. ಅವರಲ್ಲಿ ಮೇಲ್ಜಾತಿಯ ಅಥವಾ ಉನ್ನತ ಸಂಸ್ಕೃತಿಯ ಪ್ರಭಾವವಾದರೆ ಇನ್ನೊಂದು ಕಡೆ ಶಿಕ್ಷಣ ಹಾಗೂ ಜಾಗತೀಕರಣದ ಪ್ರಭಾವಗಳಿಂದ ಮದುವೆ ಆಚರಣೆಯಲ್ಲಿ ಕೆಲವೊಂದು ಬದಲಾವಣೆಗಳು ಸಾಮಾನ್ಯವಾಗಿ ಕಂಡುಬರುತ್ತದೆ. ಸಿದ್ದಿ ಸಮುದಾಯವು ಮೂರು ಧರ್ಮಗಳಲ್ಲಿ ಹರಿದು ಹಂಚಿ ಹೋಗಿರುವುದರಿಂದ ಅವರವರ ಧರ್ಮದ ಅನುಸಾರವಾಗಿ ವಿವಾಹದ ಆಚರಣೆಗಳು ನಡೆಯುತ್ತವೆ. ಹಿಂದೂ ಸಿದ್ದಿಯರ ಮದುವೆಯ ಪೌರೋಹಿತ್ಯವನ್ನು ಹವ್ಯಕ ಬ್ರಾಹ್ಮಣರು ನಿರ್ವಹಿಸುತ್ತಾರೆ. ಆದರೆ ಕಡ್ಡಾಯವಾಗಿ ಇವರನ್ನು ಅವಲಂಬಿಸಬೇಕಾಗಿಲ್ಲ. ಇವರಲ್ಲದೆ ಗೌಡ, ಬುದುವಂತರ ನೇತೃತ್ವದಲ್ಲಿಯೂ, ಮದುವೆಗಳು ಜರಗುತ್ತವೆ. ಕ್ರಿಶ್ಚಿಯನ್ ಸಿದ್ದಿಯರಲ್ಲಿ ಚರ್ಚಿನ ಫಾದರ್‌ರವರ ಸಮ್ಮುಖದಲ್ಲಿ ಮದುವೆ ನಡೆಯುತ್ತದೆ. ಮುಸ್ಲಿಂ ಸಿದ್ದಿಗಳಲ್ಲಿ ಕಾಜಿ ಇಲ್ಲವೆ ಮುಲ್ಲಾನ ನೇತೃತ್ವದಲ್ಲಿ ಹೆಣ್ಣಿನ ಮನೆಯಲ್ಲಿ 'ನಿಕಾ' (ಮದುವೆ) ಮಾಡಿಕೊಳ್ಳುತ್ತಾರೆ.

ವಿವಾಹವು ಮಹಿಳೆಯರ ಬಾಳಿನ ದಿಕ್ಕನ್ನು ಬದಲಿಸುವ ಒಂದು ಸಂಸ್ಕಾರ. ಹೀಗಾಗಿ ಕುಟುಂಬದ ನಿರ್ವಹಣೆಯ ಜೊತೆಗೆ ಸಮಾಜದ ಜವಾಬ್ದಾರಿಯನ್ನು ಪಾಲಿಸಿಕೊಂಡು

ಬದುಕನ್ನು ಸಕಾರಾತ್ಮಕವಾಗಿ ಕಟ್ಟಬಲ್ಲವಳಾಗಿದ್ದಾಳೆ. ಆದರೆ ನಮ್ಮ ಸಿದ್ದಿ ಸಮುದಾಯ ವಿವಾಹವಾಗದಿದ್ದರೆ ಕನ್ಯೆಯನ್ನು ಪಾಪಿ, ಸೂಳೆ ಎಂಬ ರೀತಿಯಲ್ಲಿ ಕಾಣುತ್ತವೆ. ಸಿದ್ದಿಗಳಲ್ಲಿ ಮದುವೆಯಾದರೆ ಮಾತ್ರ ಅವಳು ಎಲ್ಲಾ ಸಂಪ್ರದಾಯಿಕ ಆಚರಣೆಗಳಲ್ಲಿ ಭಾಗವಹಿಸಲು ಅರ್ಹಳಾಗಿರುವಳು. ವಿವಾಹದ ನಂತರ ಪೂಜೆ, ಪುನಸ್ಕಾರ ಮಾಡಲು, ಆರತಿ ಹಿಡಿಯಲು ಹಕ್ಕುವುಳ್ಳವರಾಗಿರುತ್ತಾರೆ. ವಿವಾಹವೇ ಇವರ ಜೀವನದ ಪರಮಗುರಿ ಎಂಬಂತಾಗಿದೆ. ವಿವಾಹವಾಗದೆ ಹಾಗೆ ಇದ್ದರೆ ಸಮಾಜದಲ್ಲಿ ನಿಂದನೆಗೆ ಒಳಗಾಗಬೇಕಾಗುತ್ತದೆ. (ಕ್ಷೇತ್ರಕಾರ್ಯದಲ್ಲ ಮಹಿಳೆಯರು ನೀಡಿದ ಮಾಹಿತಿಯ ಪ್ರಕಾರ) ಆದ್ದರಿಂದ **ಈ ಸಮುದಾಯುದ ಮಹಿಳೆಯುರು ಹೆಚ್ಚಾಗಿ ಹದಿನೈದರಿಂದ ಇಪ್ಪತ್ತನೆಯ ವಯಸ್ಸಿಗೆ ವಿವಾಹವಾಗಿರುವುದು** ನಾನು ಕೈಗೊಂಡ ಕ್ಷೇತ್ರ ಕಾರ್ಯದಲ್ಲಿ ಕಂಡುಬಂದಿದೆ.

ಕೋಷ್ಟಕ–೩

ವಿವಾಹದ ವಯಸ್ಸು	ಮಹಿಳೆಯರ ಸಂಖ್ಯೆ	ಶೇಕಡಾವರು
೧೦–೧೫	೭	೧೧.೬೬
೧೫–೨೦	೪೨	೭೦
೨೦–೩೦	೧೧	೧೮.೩೩
ಒಟ್ಟು	೬೦	೯೯.೯೯(೧೦೦)

ಅಧ್ಯಯನಕ್ಕೆ ಒಳಪಡಿಸಿದ ಅರವತ್ತು ಮಹಿಳೆಯರಲ್ಲಿ ಶೇಕಡಾ ೧೧.೬೬ ರಷ್ಟು ಮಹಿಳೆಯರು ೧೦ರಿಂದ ೧೫ನೇ ವಯಸ್ಸಿಗೆ ವಿವಾಹವಾಗಿರುವುದು, ಶೇಕಡಾ ೭೦ರಷ್ಟು ಮಹಿಳೆಯರು ೧೫ರಿಂದ ೨೦ನೇ ವಯಸ್ಸಿಗೆ ವಿವಾಹವಾಗಿರುವರು ಹಾಗೂ ಶೇಕಡಾ ೧೮ರಿಂದ ೩೩ ರಷ್ಟು ಮಹಿಳೆಯರು ೨೦ರಿಂದ ೩೦ನೇ ವಯಸ್ಸಿಗೆ ವಿವಾಹವಾಗಿರುವರು ಸಾಮಾನ್ಯವಾಗಿ ಕಂಡುಬಂದಿದೆ.

೩.೪.೧. ಮಹಿಳೆಗೆ ವಿವಾಹದಲ್ಲಿ ಆಯ್ಕೆ ಸ್ವತಂತ್ರ:

ಸಾರ್ವತ್ರಿಕವಾಗಿ ನೋಡಿದರೆ ವಿವಾಹದ ವಿಷಯದಲ್ಲಿ ಹೆಣ್ಣಿಗೆ ಆಯ್ಕೆ ಸ್ವತಂತ್ರ ನೀಡಿರುವುದು ಅತಿ ಕಡಿಮೆ. ನೀಡಿದರೂ ಕೂಡ ಅದು ಶೈಕ್ಷಣಿಕವಾಗಿ ಆರ್ಥಿಕವಾಗಿ ಮುಂದುವರೆದ ಕುಟುಂಬಗಳು ಮಾತ್ರ ಸ್ವಲ್ಪ ಮಟ್ಟಿಗೆ ಹೆಣ್ಣಿಗೆ ಆಯ್ಕೆ ಸ್ವತಂತ್ರ್ಯವನ್ನು ನೀಡಿದೆ. ಅದೇ ರೀತಿಯಾಗಿ ಸಿದ್ದಿ ಸಮುದಾಯಗಳಲ್ಲಿಯೂ ಕೂಡ ವಿವಾಹದ ವಿಷಯದಲ್ಲಿ ಮಹಿಳೆಯರು ಗಂಡಿನ ಆಯ್ಕೆಯಲ್ಲಿ ಸ್ವತಂತ್ರತೆಯನ್ನು ಪೂರ್ತಿಯಾಗಿ ಪಡೆದಿಲ್ಲ. ಕ್ಷೇತ್ರ

ಕಾರ್ಯ ಕೈಗೊಂಡ ಸಂದರ್ಭದಲ್ಲಿ ಮದುವೆ ವಿಷಯಕ್ಕೆ ಸಂಬಂಧಪಟ್ಟಂತೆ ಹೆಣ್ಣು ಮಕ್ಕಳಿಗೆ **ಆಯ್ಕೆ ಸ್ವತಂತ್ರ ಎಷ್ಟಿದೆ?** ಎಂದು ಕೇಳಿದ ಪ್ರಶ್ನೆಗಳಿಗೆ ಸಿದ್ದಿ ಸಮುದಾಯದ ಮಹಿಳೆಯರು ನೀಡಿದ ಉತ್ತರ ಈ ಕೆಳಗಿನ ಕೋಷ್ಟಕದ ಮೂಲಕ ತಿಳಿಯಬಹುದು.

ಕೋಷ್ಟಕ–೪

ಮಹಿಳೆಯರ ಅಭಿಪ್ರಾಯ	ಆವೃತ್ತಿ ಸಂಖ್ಯೆ	ಶೇಕಡಾವಾರು
ಹೌದು	೨೦	೩೩.೩೩
ಇಲ್ಲ	೪೦	೬೬.೬೬
ಒಟ್ಟು	೬೦	೯೯.೯೯(೧೦೦)

ಅಧ್ಯಯನಕ್ಕೆ ಒಳಪಡಿಸಿದ ೬೦ ಜನ ಮಹಿಳೆಯರಲ್ಲಿ ವಿವಾಹ ಆಯ್ಕೆಯ ಸ್ವತಂತ್ರದ ಬಗ್ಗೆ ಶೇಕಡಾ ೩೩.೩೩ರಷ್ಟು ಮಹಿಳೆಯರು ಪಡೆದಿದ್ದಾರೆ. ಇವರ ಮನೆಗಳಲ್ಲಿ ಒಪ್ಪಿಗೆ ಪಡೆದು ವಿವಾಹವನ್ನು ನೇರವೇರಿಸುವರು. ಆದರೆ ಶೇಕಡಾ ೬೬.೬೬ ರಷ್ಟು ಮಹಿಳೆಯರಿಗೆ ವಿವಾಹದಲ್ಲಿ ಆಯ್ಕೆ ಸ್ವತಂತ್ರ್ಯವನ್ನು ನೀಡಿಲ್ಲ. ಏಕೆ ನೀಡಿಲ್ಲ ಎಂದು ಇವರನ್ನು ಕೇಳಿದರೆ ಮನೆಯ ಹಿರಿಯರು ಏನು ಮಾಡಿದರು ನಮ್ಮ ಒಳ್ಳೆಯದಕ್ಕೆ ಮಾಡುತ್ತಾರೆ. ಕೆಲವರು ಮುಖ ನೋಡಿದಾಕ್ಷಣ ಹುಡುಗ ಚೆನ್ನಾಗಿದ್ದಾನೆ ಎಂದು ಹೇಳಿದರಾಯ್ತು ಅವನ ಗುಣಗಳನ್ನು ಯಾರು ಅರಿತಾರು ಎಂದು ಹೇಳುವರು. ಒಂದು ವೇಳೆ ತಂದೆ–ತಾಯಿಗಳು ನಮಗೆ ನೋಡಿದ ಹುಡುಗನಿಗೆ ವಿವಾಹವಾಗಲು ನಾವು ನಿರಾಕರಿಸಿ ನಮಗೆ ಇಷ್ಟ ಬಂದ ಹುಡುಗನ ಜೊತೆ ವಿವಾಹವಾಗಿ ಮುಂದೆ ಏನಾದರೂ ಗಂಡ ಬಿಟ್ಟು ಹೋದರೆ ಆಗ ಜವಾಬ್ದಾರಿಯನ್ನು ಯಾರು ತೆಗೆದುಕೊಳ್ಳಲಾರರು. ಅದಕ್ಕೆ ನಾವೇ ಹೊಣೆಗಾರರಾಗುತ್ತೇವೆ ಎಂದು ಸಂಪೂರ್ಣವಾಗಿ ತಂದೆ–ತಾಯಿಯ ಮೇಲೆ ವಿವಾಹ ಜವಾಬ್ದಾರಿಯನ್ನು ಹಾಕಿರುತ್ತೇವೆ. ತಂದೆ–ತಾಯಿಯರನ್ನು ಕೇಳಿದಾಗ ಹೆಣ್ಣು ಮಕ್ಕಳಿಗೆ ನಿರ್ಣಯ ತೆಗೆದುಕೊಳ್ಳಲು ಆಗುವುದಿಲ್ಲ. ಮದುವೆಯ ವಿಷಯದ ಬಗ್ಗೆ ಅವರಿಗೆ ಸರಿಯಾದ ತಿಳುವಳಿಕೆ ಇರಲಾರದು ಎಂಬ ಕಾರಣಕ್ಕೆ ಅವರ ಹಿತವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿ ಅವಳ ಆಯ್ಕೆ ಸ್ವತಂತ್ರವನ್ನು ಕಿತ್ತುಕೊಳ್ಳುತ್ತಾರೆ. ಆದರೆ ಮಗನ ಅಭಿಪ್ರಾಯವನ್ನು ಮಾತ್ರ ಪಾಲಿಸುತ್ತಾರೆ. ಗಂಡುಮಗುವಿನ ಅಭಿಪ್ರಾಯಕ್ಕೆ ಅವನ ಮೆಚ್ಚುಗೆಗೆ ಅವಕಾಶಗಳವೆ. ಅವನು ಒಪ್ಪಿದಾಗ ಮಾತ್ರ ವಿವಾಹಗಳು ನೆರವೇರುತ್ತವೆ.

ಒಟ್ಟಿನಲ್ಲಿ ಸಿದ್ದಿ ಸಮುದಾಯದ ಸ್ತ್ರೀಯರಿಗೆ ತಾವು ವಿವಾಹವಾಗಲು ಗಂಡಿನ ಆಯ್ಕೆ ಪ್ರಕ್ರಿಯೆಯಲ್ಲಿ ಎಳ್ಳಷ್ಟು ಸ್ವತಂತ್ರವಿಲ್ಲ. ಪರಂಪರೆಯಿಂದ ಪಾಲಿಸಿಕೊಂಡು ಬಂದ ಪದ್ಧತಿಯನ್ನು ಅನುಸರಿಸುವ ಹಿರಿಯರು ಇವರ ಸ್ವಾತಂತ್ರತೆಗೆ ದಕ್ಕೆ ತರುವರಾಗಿದ್ದಾರೆ. ಹೀಗಾಗಿ ಈ ಸಮಾಜದಲ್ಲಿ ಸಹ ಮಹಿಳೆಗೆ ಕೆಲವೊಂದು ವಿಚಾರದಲ್ಲಿ ಮುಕ್ತತೆಯ ವಾತಾವರಣವಿಲ್ಲ.

೩.೪.೨. ತೆರ ಅಥವಾ ಕನ್ಯಾಶುಲ್ಕ:

ಬುಡಕಟ್ಟು ಸಮುದಾಯಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಒಂದು ವಿಶಿಷ್ಟ ಪದ್ಧತಿ ಎಂದರೆ ಕನ್ಯಾಶುಲ್ಕ. ಇದು ಕೆಲವೇ ಬುಡಕಟ್ಟು ಸಮುದಾಯಗಳಲ್ಲಿ ಇರುವ ಪದ್ಧತಿಯಾಗಿದೆ. ಉದಾಹರಣೆಗೆ: ಹಾಲಕ್ಕಿ ಒಕ್ಕಲಿಗರಲ್ಲಿ, ಲಂಬಾಣಿಗರಲ್ಲಿ ಕಾಣಿಸಿಕೊಳ್ಳುತ್ತದೆ. ಆದರೆ ಕಾಲನಂತರ ಈ ಬುಡಕಟ್ಟು ಸಮುದಾಯಗಳಲ್ಲಿ ವಧುದಕ್ಷಣೆ ಹೋಗಿ ವರದಕ್ಷಣೆಯಾಗಿ ಮಾರ್ಪಟ್ಟು ಭೀಕರ ಸ್ವರೂಪವನ್ನು ಪಡೆದಿದೆ. ವಿವಾಹದ ಸಮಯದಲ್ಲಿ ವರನ ಕುಟುಂಬದವರು ವಧುವಿನ ಕುಟುಂಬಕ್ಕೆ ನೀಡುವ ಹಣವನ್ನು ವಧುದಕ್ಷಿಣೆ ಅಥವಾ ತೆರ ಅಥವಾ ಕನ್ಯಾಶುಲ್ಕ ಎಂದು ಕರೆಯುವರು. ನಮ್ಮ ಆಧುನಿಕ ಸಮಾಜದಲ್ಲಿ ವಧುದಕ್ಷಣೆ ಹೋಗಿ ವರದಕ್ಷಣೆಯಾಗಿ ಸಮಾಜಕ್ಕೆ ಒಂದು ಭೂತವಾಗಿ ಕಾಡಲಾರಂಭಿಸಿದೆ. ವರದಕ್ಷಣೆ ಎಂಬ ಭೂತದಿಂದ ಅನೇಕ ಮಹಿಳೆಯರು ಸಾವಿಗೆ ಆಹುತಿಯಾಗುತ್ತಿದ್ದಾರೆ. ಇದರ ಕಿರುಕುಳ ತಾಳಲಾರದೆ ಹಲವು ಮಹಿಳೆಯರು ಆತ್ಮಹತ್ಯೆ ಮಾಡಿಕೊಳ್ಳುವಂತಹ ಪ್ರಸಂಗಗಳು ನಡೆಯುತ್ತಲಿವೆ. ಒಂದು ವೇಳೆ ವರದಕ್ಷಣೆ ತರಲಿಲ್ಲದಿದ್ದರೆ ಅವಳಿಗೆ ಅನೇಕ ರೀತಿಯ ಹಿಂಸೆಗೆ ಗುರಿಮಾಡಿ ಸಾಯಿಸಿರುವ ಪ್ರಕರಣಗಳು ಹಲವು ಪತ್ರಿಕೆಗಳಲ್ಲಿ ದಿನನಿತ್ಯ ಕಂಡುಬರುತ್ತವೆ. ಇಂತಹ ಕೆಟ್ಟ ಪರಿಣಾಮ ಬೀರುವ ಈ ವರದಕ್ಷಣೆ ಅನ್ನುವಂತಹ ಪದ್ಧತಿಯು ಸಿದ್ದಿ ಸಮುದಾಯದಲ್ಲಿ ಬೆಳೆಯುತ್ತಿದೆ. ಹೇಗೆಂದರೆ ವಿವಾಹದ ಸಮಯದಲ್ಲಿ ವರನಿಗೆ ಉಡುಗರೆಯಾಗಿ ನೀಡುತ್ತಿರುವಂತಹ ಬಂಗಾರ, ಕೈಗಡಿಯಾರ, ಪಾತ್ರೆಗಳು, ಮುಂತಾದವುಗಳನ್ನು ನೋಡಿದರೆ 'ವಧುದಕ್ಷಣೆ' ಹೋಗಿ ವರದಕ್ಷಣೆ ಆಗುತ್ತಿದೆಯೇ? ಎಂಬ ಭಯವು ಈ ಸಮುದಾಯದ ಜನರನ್ನು ಕಾಡುತ್ತಿದೆ. ಈಗ ಉಡುಗರೆಯಾಗಿ ನೀಡುತ್ತಿರುವ ವಸ್ತುಗಳು ಮುಂದಿನ ದಿನಗಳಲ್ಲಿ ಕಡ್ಡಾಯವಾಗಬಾರದೆಂದು ಈ ಜನರ ಆಶಯವಾಗಿದೆ.

ಸಿದ್ದಿ ಸಮುದಾಯದಲ್ಲಿ ವಿವಾಹವು ವಧುವಿನ ಕುಟುಂಬದವರ ಕಡೆ ಇದ್ದರೆ ಗಂಡನ ಕಡೆಯವರು ಹಣ ಮತ್ತು ವಿವಾಹ ಸಂದರ್ಭದಲ್ಲಿ ಬೇಕಾದ ವಸ್ತುಗಳಾದ ಅಕ್ಕಿ,

ಬೆಲ್ಲ, ಬೇಳೆ, ಎಣ್ಣೆ ಮುಂತಾದವುಗಳನ್ನು ಕೊಟ್ಟು ಹೆಣ್ಣಿನವರ ಮನೆಯಲ್ಲಿಯೇ ಮದುವೆ ನಡೆಸುವರು. ಒಂದು ವೇಳೆ ಹೆಣ್ಣಿನವರ ಕೈನಡೆಯುವಂತಿದ್ದರೆ ವರನಿಗೆ ಚಿನ್ನದ ಸರ, ಅದಿಲ್ಲವಾದರೂ ವರನ ಕುಟುಂಬಕ್ಕೆ ತುಸು ಅಕ್ಕಿ, ಬೇಳೆ, ಬಟ್ಟೆ, ಅರಳು, ಜೀರಿಗೆ ಹಾಗೂ ಕೂಡ ಪಾನ ಸಾಮಾನ್ಯವಾಗಿ ಕೊಡುವುದು ವಾಡಿಕೆ."[೭] ಯಾಗಿ ವರನ ಮನೆಯಲ್ಲಿ ವಿವಾಹ ನೇರವೇರಿಸುತ್ತಾರೆ. ಮದುವೆಯಲ್ಲಿ ಕನ್ಯಾಶುಲ್ಕ ಇಷ್ಟೇ ಕೊಡಬೇಕು ಎಂಬ ನಿಯಮವಿಲ್ಲ. ಇದು ವರನ ಆರ್ಥಿಕ ಪರಸ್ಥಿತಿಯ ಮೇಲೆ ಅವಲಂಬಿಸಿರುವುದು ಅಲ್ಲದೆ ಕೆಲವೊಂದು ಸಂದರ್ಭದಲ್ಲಿ ಹೆಣ್ಣಿನ ಸೌಂದರ್ಯದ ಮೇಲೆ ಎಷ್ಟು ಕೊಡಬೇಕು ಎಂಬುದನ್ನು ನಿರ್ಧಾರಿಸಬೇಕಾಗುತ್ತದೆ. ಅದೇ ರೀತಿಯಾಗಿ ಮುಸ್ಲಿಂರಲ್ಲಿ ನೀಡುವಂತಹ ಮೇಹರ ಕೂಡ ಅಷ್ಟೇ, ಹೆಣ್ಣಿನ ಸೌಂದರ್ಯ, ವಯಸ್ಸು, ಸಾಮರ್ಥ, ಕೌಟುಂಬಿಕ ಸ್ಥಾನಮಾನ, ವಂಶ, ಶಿಕ್ಷಣ ಮತ್ತಿತರ ಅಂಶವನ್ನು ಗಮನದಲ್ಲಿಟ್ಟುಕೊಂಡು ನೀಡಲಾಗುತ್ತದೆ. ಇಲ್ಲಿ ಅವಳ ಭಾವನೆ, ಮತ್ತು ಗುಣಸ್ವ ಭಾವವನ್ನು ಪರಿಗಣಿಸದಿರುವುದು ಕಂಡುಬರುತ್ತದೆ. ಆ ಮೇಹರ ಮೊತ್ತವನ್ನು ಅವಳಿಗೆ ಅಂತಕೊಟ್ಟರೂ ಕೂಡ ಅದನ್ನು ಬಳಸಲು ಅನುಮತಿ ಪಡೆಯಬೇಕು. ಸಿದ್ದಿಗಳಲ್ಲಿಯೂ ಕೂಡ ಮಹಿಳೆಯರ ಭಾವನೆಗಳಿಗೆ, ವ್ಯಕ್ತಿತ್ವಕ್ಕೆ ಯಾವುದೇ ರೀತಿಯಾದ ಬೆಲೆ ಇಲ್ಲ.

೩.೪.೩. ಅಂತರ್‌ಜಾತಿಯ ವಿವಾಹ:

ಸ್ವತಂತ್ರ್ಯ ಪೂರ್ವದಿಂದಲೂ ಅಂತರ ಜಾತಿಯ ವಿವಾಹಕ್ಕೆ ಮನ್ನಣೆ ನೀಡಬೇಕೆಂದು ಅನೇಕ ಸಮಾಜ ಸುಧಾರಕರು ಪ್ರಯತ್ನಿಸಿದರು. ಅವರಲ್ಲಿ ಪಂಡಿತ ರಮಾಬಾಯಿ, ಸರೋಜಿನಿ ನಾಯ್ಡು, ಜ್ಯೋತಿ ಬಾ ಪುಲೆ ಮುಂತಾದವರು ಅಂತರ್ ಜಾತಿ ವಿವಾಹಕ್ಕೆ ತುಂಬಾ ಪ್ರೋತ್ಸಾಹ ನೀಡಿದರು. "ಗಾಂಧಿ ಒಂದೆಡೆ ತಾನು ಅಂತರ್ ಜಾತಿ ವಿವಾಹಗಳಲ್ಲಿ ಮಾತ್ರ ಭಾಗವಹಿಸುವುದಾಗಿ ಸಾರಿದರು"[೮] ಜಾತಿಯತೆಯನ್ನು ತೊಡೆದು ಹಾಕಲು ಈ ಅಂತರ್ ಜಾತಿಯ ವಿವಾಹಕ್ಕೆ ಕಾನೂನಿನಲ್ಲಿ ಮನ್ನಣೆ ನೀಡಬೇಕೆಂದು ಅನೇಕ ಪ್ರಯತ್ನಗಳನ್ನು ಮಾಡಿದರು. ಆದರೆ ಪ್ರಸ್ತುತ ಸಂದರ್ಭದಲ್ಲಿ ಅಂತರ್ ಜಾತಿಯ ವಿವಾಹವಾದರೆ ತಂದೆ-ತಾಯಿಗಳು "ತಮ್ಮ ಮಗಳು ಅಥವಾ ಮಗನೊಡನೆ ಸಂಬಂಧವನ್ನು ಕಡಿದುಕೊಂಡಂತಹ ನಿದರ್ಶನಗಳು ಹಲವಾರಿವೆ. ಜೈವಿಕ ಮತ್ತು ಭಾವನಾತ್ಮಕ ಸಂಬಂಧಗಳಿಗಿಂತ ಜಾತಿ ಅಥವಾ ಧರ್ಮದ ಬಾಂಧವ್ಯವೇ ಹೆಚ್ಚು ಎನ್ನುವ ಪೋಷಕರಿಗೆ ತಮ್ಮ ಮಕ್ಕಳು ತೆಗೆದುಕೊಂಡ ನಿರ್ಧಾರವನ್ನು ಗೌರವಿಸುವಂತ ಮನೋಭಾವನೆಗಳು ಅವರಲ್ಲಿರುವುದಿಲ್ಲ. ಇಂದಿಗೂ ಸ್ವಜಾತಿ ಅಥವಾ ತಮ್ಮ ಉಪಜಾತಿಗಳಲ್ಲಿ ವಿವಾಹ ಸಂಬಂಧಗಳನ್ನು ಬೆಳೆಸಲು ಇಚ್ಚೆಪಡುವವರೇ ಹೆಚ್ಚು. ಬೇರೆ ಜಾತಿ ಅಥವಾ ಬೇರೆ ಧರ್ಮಕ್ಕೆ ಸೇರಿದ ಮದುವೆಯಾದ ಅನೇಕ

ನವದಂಪತಿಗಳನ್ನು ಚಿತ್ರಹಿಂಸೆಕೊಟ್ಟು ಕೊಲ್ಲಿರುವ ಅನೇಕ ಘಟನೆಗಳು ಬಂದಿವೆ. ಆದರೆ ಸೀಮಿತ ಚೌಕಟ್ಟಿನಲ್ಲಿ ವಿವಾಹವಾಗಬೇಕೆಂಬ ಪರಿಸ್ಥಿತಿಯಿಂದ ಮಹಿಳೆ ಅಥವಾ ಪುರುಷರು ಹೊರ ಬಂದಿರುವುದನ್ನೇ ಸಕಾರಾತ್ಮಕ ಬೆಳವಣಿಗೆ ಎಂದು ನೋಡಬಹುದು."[೯]

ಸಿದ್ದಿಗಳಲ್ಲಿಯೂ ಕೂಡ ಅಂತರ್‌ಜಾತಿ ವಿವಾಹಗಳು ನಡೆಯುತ್ತವೆ. ಆದರೆ ಸಿದ್ದಿಗಳು ಅವರನ್ನು ಕೀಳಾಗಿ ಕಾಣುತ್ತಾರೆ. ಹಿಂದೂ-ಮುಸ್ಲಿಂ, ಕ್ರಿಶ್ಚಿಯನ್ ಸಿದ್ದಿಗಳಲ್ಲಿ ಅಂತರ್ ಜಾತಿವಿವಾಹಕ್ಕೆ ಅವರ ತಂದೆ-ತಾಯಿಗಳು ಒಪ್ಪಿಗೆ ನೀಡಲಾರರು. ಆದರೂ ಕೂಡ ವಿವಾಹಗಳು ನಡೆಯುತ್ತವೆ. ಗ್ರೀನ್ ಇಂಡಿಯಾ ಸಂಸ್ಥೆಯ ಮಹೇದ್ರಕುಮಾರರವರು "ಸಿದ್ದಿಗಳಲ್ಲಿ ಅಂತರ್ ಜಾತಿಯ ವಿವಾಹಗಳು ನಡೆಯುತ್ತಿವೆ. ಅಂದರೆ ಪ್ರೇಮವಿವಾಹಗಳು. ಸಿದ್ದಿಗಳಲ್ಲಿಯೇ ವಿವಾಹವಾದರೆ ಅದು ಅಂತರಜಾತಿಯ ವಿವಾಹ ಎನ್ನುವಂತಿಲ್ಲ. ಉದಾಹರಣೆಗೆ ಸಿದ್ದಿಗಳನ್ನು ಅರಬ್ಬರು ತಂದು ಮಾರಿದ್ದಾರೆ. ಅದಕ್ಕೆ ಭಾರತದಲ್ಲಿ ಅವರು ಬೇರೆ ಬೇರೆ ಧರ್ಮಗಳಲ್ಲಿ ಹಂಚಿ ಹೋಗಿದ್ದಾರೆ. ಅಂದಾಕ್ಷಣ ಅವರಲ್ಲಿಯೇ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ವಿವಾಹವಾದರೆ ಅದನ್ನು ಅಂತರಜಾತಿಯ ವಿವಾಹ ಎನ್ನುವಂತಿಲ್ಲ."[೧೦] ಎಂದು ಅಭಿಪ್ರಾಯ ಪಡುತ್ತಾರೆ. ಕೇವಲ ಸಿದ್ದಿ ಪುರುಷರು ಮಾತ್ರ ಮೇಲ್ಜಾತಿಯ ಮಹಿಳೆಯರರೊಂದಿಗೆ ವಿವಾಹವಾಗಿದ್ದಾರೆ. ಆದರೆ ಮಹಿಳೆಯರು ಮೇಲ್ಜಾತಿಯ ಪುರುಷನೊಂದಿಗೆ ವಿವಾಹವಾಗಿರುವುದು ಕಂಡುಬಂದಿಲ್ಲ.

೩.೪.೪. ಬಹುಪತ್ನಿತ್ವ:

ಸಾಮಾನ್ಯವಾಗಿ ಒಬ್ಬ ಪುರುಷನು ಏಕಕಾಲಕ್ಕೆ ಒಬ್ಬಳಿಗಿಂತ ಹಲವು ಜನ ಸ್ತ್ರೀಯರನ್ನು ಪತ್ನಿಯರನ್ನಾಗಿ ಹೊಂದಿರುವುದಕ್ಕೆ ಬಹುಪತ್ನಿತ್ವ ಎಂದು ಕರೆಯುತ್ತಾರೆ. ಜಗತ್ತಿನಾದ್ಯಂತ ಬಹುತೇಕ ಸಮುದಾಯಗಳಲ್ಲಿ ಒಂದಲ್ಲ ಒಂದು ಕಾಲದಲ್ಲಿ ಪ್ರಚಲಿತವಿದ್ದ ಅಥವಾ ಪ್ರಚಲಿತವಿರುವ ವಿವಾಹದ ಪದ್ಧತಿಯಾಗಿದೆ. ವೇದೋತ್ತರ ಕಾಲದಲ್ಲಿ ಧರ್ಮಶಾಸ್ತ್ರಜ್ಞರು ಬಹುಪತ್ನಿತ್ವಕ್ಕೆ ಅವಕಾಶ ನೀಡಿದ್ದರೂ ಅದನ್ನೊಂದು ರಿಯಾಯತಿ ಎಂದು ಪರಿಗಣಿಸಿದ್ದರೆ ವಿನಃ ಆದರ್ಶ ಎಂದಲ್ಲ. ಅಂತಹ ಪ್ರಕರಣಗಳನ್ನು ಅಪವಾದಗಳೆಂದು ಭಾವಿಸಲಾಗಿತ್ತು. ಪ್ರಾಚೀನ ಕಾಲದಿಂದಲೂ ಮನ್ನಣೆ ಪಡೆದುಕೊಂಡುಬಂದಿರುವ ಈ ವಿವಾಹ ಪದ್ಧತಿಯು ಇಂದಿನ ಸಮಾಜದ ಪುರುಷರಿಗೆ ಚಾಲನೆ ನೀಡಿದಂತಾಗಿದೆ. ದೇವತೆಗಳೆಂದು ಗೌರವಿಸುವ ಪೂಜಿಸುವಂತಹ ದೇವತೆಗಳೇ ಬಹುಪತ್ನಿತ್ವವನ್ನು ಅನುಸರಿಸುವಾಗ ಸಾಮಾನ್ಯ ಜನರು ಯಾಕೆ ಅನುಸರಿಸಬಾರದು? ಎಂದು ಪ್ರಶ್ನೆ ಕೂಡ ಏಳಬಹುದು.

"ಬಹುಪತ್ನಿತ್ವಕ್ಕೆ ಭಾರತೀಯ ಸಮಾಜದಲ್ಲಿ ಒಂದು ಹಳೆಯ ಇತಿಹಾಸವೇ ಇದೆ. ಸ್ತ್ರೀಪುರುಷ ಸಮಾನತೆ ಮತ್ತು ಸ್ವತಂತ್ರ್ಯಗಳನ್ನು ಕುರಿತಂತೆ ದ್ವಿಮುಖ ಮೌಲ್ಯಗಳನ್ನೇ

ಪ್ರತಿಪಾದಿಸುತ್ತಾ ಬಂದಿರುವ ಈ ಸಾಮಾಜಿಕ ವ್ಯವಸ್ಥೆಯಲ್ಲಿ ಪುರುಷನಿಗೆ 'ಜೀವನದಲ್ಲಿ ಒಂದೇ ಬಾರಿ ವಿವಾಹ' ಎಂಬ ನಿಯಮ ಹಿಂದೆಯೂ ಅನ್ವಯಿಸುತ್ತಿರಲಿಲ್ಲ. ಇಂದಿಗೂ ಅನ್ವಯಿಸುತ್ತಿಲ್ಲ. ಏಕಸಂಗಾತಿ ವಿವಾಹ ಅತ್ಯಂತ ಸಮ್ಮತ ವಿವಾಹ ಪ್ರಕಾರವೆಂದು ಅಂಗಿಕೃತವಾಗಿದ್ದರೂ ಅನೇಕ ಪುರುಷರು ಬಹುಪತ್ನಿತ್ವ ಪದ್ಧತಿಯನ್ನು ಅನುಸರಿಸುತ್ತಿರುವುದನ್ನು ನಾವು ಕಾಣಬಹುದು."[೧೧] ಇಂದಿಗೂ ಮೊದಲನೆ ಹೆಂಡತಿಗೆ ಮೋಸ ಮಾಡಿ ಎರಡನೆಯವಳನ್ನು ವಿವಾಹವಾದ ಘಟನೆಗಳು ದಿನ ಪತ್ರಿಕೆಗಳಲ್ಲಿ ಮತ್ತು ಟಿ.ವಿ.ಗಳಲ್ಲಿ ನಾವು ಕಾಣಬಹುದಾಗಿದೆ.

ದ್ವಿಪತ್ನಿತ್ವವು ಯಾವುದೇ ಕಾರಣದಿಂದ ನಡೆದರೂ ಅದರಲ್ಲಿ ಶೋಷಿಸಲ್ಪಡುವುದು ಹೆಣ್ಣು ಮಾತ್ರ. ಆ ಘಟನೆಯ ಬಲಿಪಶು ಹೆಣ್ಣೇ ಆದರೂ ಅವಳ ಬಗ್ಗೆ ಚಿಂತಿಸದೆ ಇಬ್ಬರ ಪತ್ನಿಯನ್ನು ಹೊಂದಿದ ಆ ಪುರುಷನ ಬಗೆಗೆ ಕರುಣೆಯನ್ನು ತೋರುವುದು ಸಾಮಾನ್ಯವಾಗಿದೆ. ನಮ್ಮ ಪುರುಷ ಪ್ರಧಾನ ಮೌಲ್ಯಗಳು ಪುರುಷನ ಯೋಚನೆ ಮತ್ತು ಅವರ ನಡುವಳಿಕೆಗಳನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳುತ್ತವೆ. ಆದರೆ ಸ್ತ್ರೀಯ ಸ್ಥಿತಿ-ಗತಿಗಳನ್ನು ಅರ್ಥಮಾಡಿಕೊಳ್ಳುವುದೇ ಅವಳ ಬಗೆಗೆ ತಾತ್ಸಾರ ಭಾವನೆಯನ್ನು ಹೊಂದುವರಿದ್ದಾರೆ. ಹಿಂದೂಗಳಲ್ಲಿ ಈ ದ್ವಿಪತ್ನಿತ್ವ ಕೆಲವು ಕಾರಣಗಳಾಗಿ ಮಾತ್ರ ಸ್ವೀಕಾರ್ಹವಾಗಿದೆ. ಆದರೆ ಮುಸ್ಲಿಂರಲ್ಲಿ ಇದು ಸಾಮಾನ್ಯವಾಗಿದೆ. ಕ್ರಿಶ್ಚಿಯನ್‌ರಲ್ಲಿ ದ್ವಿಪತ್ನಿತ್ವಕ್ಕೆ ಅವಕಾಶವಿಲ್ಲ. ಮೊದಲನೆಯವಳಿಗೆ ವಿಚ್ಛೇದನೆ ನೀಡಿ ಎರಡನೆಯವಳನ್ನು ವಲಿಸಬಹುದಾಗಿದೆ.

ಸಿದ್ದಿ ಸಮುದಾಯವು ಮೂರು ಧರ್ಮದಲ್ಲಿ ಹಂಚಿ ಹೋಗಿದ್ದರೂ ಕೂಡ ಬಹುಪತ್ನಿತ್ವಕ್ಕೆ ಅವಕಾಶ ನೀಡುವುದಿಲ್ಲ. ಆದರೆ ಕೆಲವು ಕಾರಣಗಳಿಂದ ಮಾತ್ರ ಬಹುಪತ್ನಿತ್ವಕ್ಕೆ ಅಥವಾ ದ್ವಿಪತ್ನಿತ್ವಕ್ಕೆ ಅವಕಾಶವನ್ನು ನೀಡಿದ್ದಾರೆ. **ಬಹುಪತ್ನಿತ್ವ ಪದ್ಧತಿ ಆಚರಣೆಯಲ್ಲಿ ಇದೆಯೇ?** ಎಂದು ಕೇಳಿದಾಗ ನೀಡಿದ ಉತ್ತರ ಈ ಕೆಳಗಿನ ಕೋಷ್ಟಕದ ಮೂಲಕ ತಿಳಿದುಬರುತ್ತದೆ.

ಕೋಷ್ಟಕ - ೧೦

ಅಭಿಪ್ರಾಯ	**ಆವೃತ್ತಿ ಸಂಖ್ಯೆ**	**ಶೇಕಡಾವಾರು**
ಹೌದು	೮	೧೩.೩೩
ಇಲ್ಲ	೫೨	೮೬.೩೩
ಒಟ್ಟು	೬೦	೯೯.೯೯(೧೦೦)

ಅಧ್ಯಯನಕ್ಕೆ ಒಳಪಡಿಸಿದ ೬೦ ಜನ ಮಹಿಳೆಯರಲ್ಲಿ ಶೇಕಡಾ ೧೩.೩೩ ಮಾತ್ರ

ಮಹಿಳೆಯರು ಬಹುಪತ್ನಿತ್ವಕ್ಕೆ ಅವಕಾಶವಿದೆ ಎಂದಿದ್ದಾರೆ. ಏಕೆ ಆಚರಣೆಯಲ್ಲಿ ಇದೆ ಎಂದರೆ ಮೊದಲ ಹೆಂಡತಿಗೆ ಮಕ್ಕಳಾಗದೆ ಇದ್ದಾಗ, ಹೆಂಡತಿ ಸತ್ತಾಗ, ವಿವಾಹ ವಿಚ್ಛೇದನೆ ಹೊಂದಿದಾಗ ಮಾತ್ರ ದ್ವಿಪತ್ನಿತ್ವಕ್ಕೆ ಅವಕಾಶ ನೀಡುತ್ತಾರೆ. ಮುಸ್ಲಿಂ ಸಿದ್ದಿ ಸಮುದಾಯದಲ್ಲಿಯೂ ಕೂಡ ಬಹುಪತ್ನಿತ್ವಕ್ಕೆ ಅವಕಾಶವಿಲ್ಲ. ಇವರು ಮುಸ್ಲಿಂ ಧರ್ಮವನ್ನು ಅನುಸರಿಸಿದರೂ ಕೂಡ ಬಹುಪತ್ನಿತ್ವಕ್ಕೆ ಇಲ್ಲಿ ಆಸ್ಪದವಿಲ್ಲ. ಕ್ರಿಶ್ಚಿಯನ್ ಸಿದ್ದಿಯರು ಇದಕ್ಕೆ ಅವಕಾಶವೇ ಇಲ್ಲ ಎಂದು ಹೇಳುತ್ತಾರೆ. ಒಂದು ವೇಳೆ ಹೆಂಡತಿಯನ್ನು ತೊರೆದು ಬೇರೆ ವಿವಾಹವಾದರೆ ಸಿದ್ದಿ ಸಮುದಾಯ ದಂಡ ವಿಧಿಸುತ್ತದೆ. ಶೇಕಡಾ ೮೬.೩೩ರಷ್ಟು ಮಹಿಳೆಯರ ಅಭಿಪ್ರಾಯದಂತೆ ಬಹುಪತ್ನಿತ್ವಕ್ಕೆ ಮನ್ನಣೆ ನೀಡಿರುವುದಿಲ್ಲ. ಬಹುಪತ್ನಿತ್ವಕ್ಕೆ ಮನ್ನಣೆವಿಲ್ಲವೆಂದರೂ ಕೆಲವು ಅನಿವಾರ್ಯ ಕಾರಣಗಳಿಂದ ವಿವಾಹವಾದ ಸಂಗತಿಗಳು ನಡೆದಿವೆ.

ಕೆಲವೊಂದು ಕಾರಣಗಳ ಹಿನ್ನೆಲೆಯಲ್ಲಿ ಈ ಬಹುಪತ್ನಿತ್ವ ಪದ್ಧತಿಯಿಂದ ಮಹಿಳೆಯು ಸಾಮಾನ್ಯವಾಗಿ ಶೋಷಣೆಗೆ ಒಳಗಾಗಿದ್ದಾಳೆ. ಕೇವಲ ಮಕ್ಕಳಾಗಲಿಲ್ಲ ಎಂದು ಹೆಂಡತಿಯನ್ನು ತೊರೆಯುವುದು ಯಾವ ನ್ಯಾಯ? ಈ ಮಕ್ಕಳಾಗದೇ ಇರುವುದಕ್ಕೆ ಕಾರಣಗಳೇನು ಎಂದು ತಿಳಿಯದೇ ಬೇರೆ ವಿವಾಹದ ಮೊರೆ ಹೋಗುತ್ತಾರೆ. ಒಂದು ವೇಳೆ ಮಕ್ಕಳಾಗದಿದ್ದಕ್ಕೆ ಗಂಡನೇ ಕಾರಣನಾದರೆ, ಹೆಂಡತಿ ಗಂಡನನ್ನು ತೊರೆದು ಮಕ್ಕಳು ಬೇಕು ಎಂದು ಬೇರೆ ಗಂಡನ ಜೊತೆ ವಿವಾಹವಾದರೆ ಈ ಸಮಾಜ ಅವಳಿಗೆ ಒಪ್ಪಿಗೆ ನೀಡುತ್ತದೆಯೇ? ಇಲ್ಲಿ ಸ್ತ್ರೀಯಾದವಳು ಏನೆಲ್ಲಾ ತೊಂದರೆಗೆ, ಮೋಸಕ್ಕೆ, ಅನ್ಯಾಯಕ್ಕೆ, ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾಳೆ. ಇದಕ್ಕೆ ಪುರುಷಶಾಹಿ ಪ್ರಧಾನ ವ್ಯವಸ್ಥೆಯ ಹುನ್ನಾರ ಎಂದು ಹೇಳಬಹುದು.

ಈ ಬಹುಪತ್ನಿತ್ವವು ಕೆಲವೊಂದು ಸಮಸ್ಯೆಗಳಿಗೆ ಪರಿಹಾರಕ್ಕಾಗಿ ಹುಟ್ಟಿಕೊಂಡಿತು. ಆದರೆ ಸದ್ಯದ ಸಂದರ್ಭದಲ್ಲಿ ಅದೊಂದು ಸಾಮಾಜಿಕ ಸಮಸ್ಯೆಯಾಗಿದೆ. ಹಾಗೂ ಕಾನೂನು ಬಾಹಿರ ವಿಷಯವಾಗಿದೆ. ಕಾನೂನು ಮೊದಲ ಪತ್ನಿಯನ್ನು ಮಾತ್ರ ಪತ್ನಿಯೆಂದು ಪರಿಭಾವಿಸಿದೆ. ಆದರೆ ಎರಡನೆಯ ಮದುವೆಯನ್ನು ಕಾನೂನು ಯಾವುದೇ ರೀತಿಯ ಸವಲತ್ತು ನೀಡುವುದಿಲ್ಲ. ಹೀಗಾಗಿ ಈ ಪಿತೃಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯ ಬದುಕು ಹಲವು ದೃಷ್ಟಿಯಿಂದ ಅತಂತ್ರವಾಗಿವೆ.

೩.೫. ಗರ್ಭಿಣಿ:

ಪ್ರತಿಯೊಂದು ಸಮುದಾಯದಲ್ಲಿ ಗರ್ಭಿಣಿಯಾದ ಸ್ತ್ರೀಯರಿಗೆ ಅನೇಕ ರೀತಿಯ ಆಚರಣೆಗಳನ್ನು ಮಾಡುವ ಪದ್ಧತಿಯನ್ನು ನಾವು ಕಾಣುತ್ತೇವೆ. ಅದೇ ರೀತಿಯಾಗಿ

ಬುಡಕಟ್ಟುಗಳಲ್ಲಿಯೂ ಕೂಡ ಗರ್ಭಿಣಿಯಾದ ಸ್ತ್ರೀಯರಿಗೆ ಅವರದೇಯಾದ ಕೆಲವೊಂದು ಆಚರಣೆಗಳಿವೆ. ಸಿದ್ದಿ ಸಮುದಾಯದ ಗರ್ಭಿಣಿ ಸ್ತ್ರೀಯರಿಗೆ ಸೀಮಂತ ಕಾರ್ಯಕ್ರಮವನ್ನು ಮಾಡುವರು. ಅದು ಏಳನೇ ತಿಂಗಳಿಗೆ ತಂದೆ-ತಾಯಿಯ ಅಥವಾ ಗಂಡನ ಮನೆಯಲ್ಲಿ ಈ ಆಚರಣೆ ಕೈಗೊಳ್ಳುತ್ತಾರೆ. ತಂದೆ-ತಾಯಿಯ ಮನೆಯಲ್ಲಿ ಮಾಡಿದರೆ ಗರ್ಭಿಣಿಗೆ ಸ್ನಾನ ಮಾಡಿಸಿ ಹೊಸ ಬಟ್ಟೆ ಕೊಡುತ್ತಾರೆ. ಅದೇ ರೀತಿಯಾಗಿ ಅಳಿಯನಿಗೂ ಹೊಸ ಬಟ್ಟೆ ಅಲ್ಲದೇ, ಸ್ವಲ್ಪ ಶ್ರೀಮಂತರಾಗಿದ್ದರೆ ಬಂಗಾರದ ವಡವೆಗಳನ್ನು ಹಾಕುವರು. ಗರ್ಭಿಣಿಯಾದ ಮಹಿಳೆಗೆ ಉಡಿಯಲ್ಲಿ ತೆಂಗಿನಕಾಯಿ, ಅಕ್ಕಿ, ಹೂವು, ಹಣ್ಣು ಎಲ್ಲವನ್ನು ಹಾಕಿ ತುಂಬಿ ಆರತಿ ಮಾಡುತ್ತಾರೆ. ಮತ್ತು ಇಷ್ಟವಾದ ಅಡುಗೆಯನ್ನು ಮಾಡಿ ಉಡಿಯಕ್ಕಿ ಸಂಭ್ರಮದ ವಾತಾವರಣದ ಕಂಡುಬರುವುದು.

೩.೫.೧. ತಾಯ್ತನ

'ತಾಯ್ತನ' ಎಂಬುದು ಒಂದು ಜೈವಿಕ ಕ್ರಿಯೆ ಆಗಿದೆ. ಈ ಜೈವಿಕ ಕ್ರಿಯೆಯನ್ನು ಹೆಣ್ಣಿಗೆ ಮತ್ತು ಭೂಮಿಗೆ ಹೋಲಿಸಲಾಗಿದೆ. ಭೂಮಿ ಮತ್ತು ಹೆಣ್ಣು ಒಂದೇ ಸ್ವರೂಪದ್ದು ಎಂಬಂತೆ, ಹೆಣ್ಣು ಹೇಗೆ ಮಗುವಿಗೆ ಜನ್ಮ ನೀಡುತ್ತಾಳೆ. ಅದೇ ರೀತಿಯಾಗಿ ಭೂಮಿಯು ಕೂಡ ಫಲವಂತಿಕೆಯ ಸಂಕೇತವಾಗಿದೆ. ಅದು ಹೇಗೆ ಎಂದರೆ "ನಿಸರ್ಗದ ಅನಂತ ಜೀವರಾಶಿಗಳನ್ನು ಗಮನಿಸಿದ ಮಾನವ ಭೂಮಿಯನ್ನು ಅಭ್ಯತ ಫಲವಂತಿಕೆಯ ಮೊತ್ತವೆಂದು ಭಾವಿಸಿರುವ ಕೆಲವೊಂದು ಆಚರಣೆಗಳು ವ್ಯಕ್ತಪಡಿಸುತ್ತವೆ. ಉದಾಹರಣೆಗೆ: ಮಲೆನಾಡಿನ ಭೂಮಿ ಹುಣ್ಣಿಮೆಯ ಸಂಪ್ರದಾಯ, ಉತ್ತರ ಕರ್ನಾಟಕದ ಸೀಗೆ ಹುಣ್ಣಿಮೆಯ ಆಚರಣೆಯಲ್ಲಿ ಚರಗ ಚೆಲ್ಲುವುದು, ಓರಿಸ್ಸಾದ ಸಂತಾಲರು ಭೂಮಿ ಋತುಮತಿಯಾಯಿತೆಂದು ಜೂನ್ ತಿಂಗಳಲ್ಲಿ ರಾಜಹಬ್ಬ ಮೊದಲಾದುದನ್ನು ಉಲ್ಲೇಖಿಸಬಹುದು."[೨] ಈ ಫಲವಂತಿಕೆ ಎಂಬುದು ಅಷ್ಟು ಮಹತ್ವವನ್ನು ಪಡೆದಿವೆ.

ಮಹಿಳೆಗೆ ನಿಸರ್ಗ ನೀಡಿದ ವಿಶಿಷ್ಟ ಕೊಡುಗೆ ಎಂದರೆ ತಾಯ್ತನ. ಈ ತಾಯ್ತನವೇ ಇಲ್ಲದ ಮಹಿಳೆ ಎಷ್ಟೆಲ್ಲ ಸಮಸ್ಯೆಗಳನ್ನು ವೇದನೆಗಳನ್ನು ಈ ಸಮಾಜದಲ್ಲಿ ಎದುರಿಸಬೇಕಾಗುತ್ತದೆ ಎಂಬುದನ್ನು ಜಾನಪದ ಗೀತೆಗಳು, ಗಾದೆಗಳು ನಮಗೆ ವ್ಯಕ್ತಪಡಿಸುತ್ತವೆ.

"ಕಂಡ ಕಂಡ ಕಲ್ಲಿಗೆ ಕೈ ಮುಗಿದಾಯ್ತು
ತಿನ್ನಬಾರದ ಮದ್ದನ್ನೆಲ್ಲ ತಿಂದಾಯ್ತು
ಮಾಡಬಾರದ ಮಾಟ ಮಾಡಿದಾಯ್ತು
ಆದರೂ ಶಿವ ಒಂದು ಸಂತಾನ ಕೊಡಲಿಲ್ಲ.

ಹೆಣ್ಣು ಸಮಾಜದಲ್ಲಿ ತನ್ನ ಅಸ್ಥಿತ್ವವನ್ನು ಉಳಿಸಿಕೊಳ್ಳಲು ಏನೆಲ್ಲಾ ಕಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಮಕ್ಕಳಿಲ್ಲದ ಹೆಣ್ಣು ಸಮಾಜದ ಕ್ರೂರ-ದೃಷ್ಟಿಗೆ ಒಳಗಾಗುತ್ತಾಳೆ. ಸಂತಾನ ಹೀನತೆಗೆ ಗಂಡಿನ ದೈಹಿಕ ದೋಷವಿದ್ದ ಸಂದರ್ಭದಲ್ಲಿಯೂ ಪುರುಷ ಪ್ರಧಾನ ಸಮಾಜ ಅದನ್ನು ಮುಚ್ಚಿ ಹಾಕಿ ಆ ದೋಷವನ್ನು ಹೆಣ್ಣಿನ ತಲೆಗೆ ಕಟ್ಟಿ ಆಕೆಯನ್ನು ನಿಕೃಷ್ಟವಾಗಿ ಕಾಣುವುದನ್ನು ನೋಡಬಹುದು. 'ಬಾಲಕರಿಲ್ಲದ ಬಾಲೆದ್ಯಾತರಜನ್ಮ ಬಾಡಿಗೆ ಎತ್ತು ದುಡಿದಂಗ ಬಾಳೆಲೆಯ ಹಾಸ್ಸುಂಡು ಬೀಸಿ ಒಗೆದಂಗ" ಮಕ್ಕಳಿಲ್ಲದ ಮಹಿಳೆಗೆ ಸಮಾಜದಲ್ಲಿ ಯಾವುದೇ ಸ್ಥಾನಮಾನವಿಲ್ಲ. ಅವಳನ್ನು ಕುಟುಂಬ ಮತ್ತು ಸಮಾಜವು ಕಾಣುವ ವೈಖರಿಯೇ ಬೇರೆಯಾಗಿದೆ. ಬದುಕಿನಲ್ಲಿ ಯಾವುದೇ ಆಸೆ ಆಕಾಂಕ್ಷೆಗಳು ಇಟ್ಟುಕೊಳ್ಳದಂತೆ ಅವಳ ಜೀವನ ವ್ಯರ್ಥ ಎಂಬಂತೆ ನೋಡಿಕೊಳ್ಳುವರು. ಸಿದ್ದಿ ಜನಾಂಗದಲ್ಲಿ ಕೂಡ ಮಕ್ಕಳಿಲ್ಲದವರನ್ನು ಅತ್ಯಂತ ಕೀಳಾಗಿ ಕಾಣುವರು. ನಾನು ಕೈಗೊಂಡ ಕ್ಷೇತ್ರ ಕಾರ್ಯದಲ್ಲಿ **ಬಂಜೆ ಮಹಿಳೆಯರನ್ನು ಸಮಾಜವು ಯಾವ ರೀತಿ ಕಾಣುತ್ತದೆ?** ಎಂದು ಕೇಳಿದಾಗ ಅವರ ಕೊಟ್ಟ ಉತ್ತರ ಈ ಕೆಳಗಿನ ಕೋಷ್ಟಕದ ಮೂಲಕ ಶೇಕಡಾವಾರು ತಿಳಿದುಬರುತ್ತದೆ.

ಕೋಷ್ಟಕ-೫

ಮ.ಅಭಿಪ್ರಾಯ	ಆವೃತ್ತಿ ಸಂಖ್ಯೆ	ಶೇಕಡಾವಾರು
ಉತ್ತಮ	೧೫	೨೫
ಕೀಳಾಗಿ	೪೫	೭೫
ಒಟ್ಟು	೬೦	೧೦೦

ಅಧ್ಯಯನಕ್ಕೆ ೬೦ ಜನ ಮಹಿಳೆಯರನ್ನು ಒಳಪಡಿಸಿದಾಗ ಬಂಜೆಯರ ಬಗ್ಗೆ ಕೇವಲ ೨೫% ರಷ್ಟು ಮಹಿಳೆಯರು ಮಾತ್ರ ಒಳ್ಳೆಯ ಅಭಿಪ್ರಾಯವನ್ನು ವ್ಯಕ್ತಿಪಡಿಸಿದರು. ಮಕ್ಕಳಾಗದಿರುವುದು ಅದು ಹೆಣ್ಣಿನ ಗಂಡಿನ ಇಬ್ಬರಲ್ಲಿ ಅಥವಾ ಒಬ್ಬರಲ್ಲಾದರೂ ನ್ಯೂನ್ಯತೆಗಳಿರಬಹುದು ಅದನ್ನು ನಾವು ಕೆಟ್ಟದಾಗಿ ಪರಿಗಣಿಸಬಾರದೆಂಬುದು ಈ ಮಹಿಳೆಯ ಸಕಾರಾತ್ಮಕ ಪ್ರತಿಕ್ರಿಯೆಯಾದರೆ, ಶೇಕಡಾ ೭೫%ರಷ್ಟು ಮಹಿಳೆಯರು ಬಂಜೆಯರನ್ನು ಕೀಳಾಗಿ ಕಾಣುವರು. ಏಕೆಂದರೆ ಅವಳು ಅನಿಷ್ಠ, ದಾರಿದ್ರ್ಯದವಳು. ಅವಳ ಮುಖ ನೋಡಿ ಹೋದರೆ ಹೋದ ಕೆಲಸಗಳು ಆಗುವುದಿಲ್ಲ ಎಂದು ನಂಬುತ್ತಾರೆ. ಬಂಜೆಯಾದ ಮಹಿಳೆ ಬೇರೆಯವರ ಮಕ್ಕಳನ್ನು ಮುದ್ದಿಸಲಿಕ್ಕೆ ಬಂದರೆ "ಮಕ್ಕಳ ಸುಖ ಕಂಡಿಲ್ಲ"

ಎಂದು ಮಕ್ಕಳನ್ನು ಮುಟ್ಟಲು ಕೊಡುವುದಿಲ್ಲ. ಅಷ್ಟಲ್ಲದೇ ಒಂದೇ ಮಗುವಿನ ತಾಯಿಗೂ ಕೂಡ ಕೀಳಾಗಿ ಕಾಣುತ್ತಾರೆ. ಅಂದರೆ ಒಂದೇ ಮಗುವಾಗಿ ಮುಂದೆ ಮಕ್ಕಳಾಗದಿದ್ದರೆ ಅಂಥವರನ್ನು 'ಒಂಟಿ ಕಾಗೆ' ಎಂದು ಕರೆಯುತ್ತಾರೆ. ಒಂದು ಮಗುವನ್ನು ಹೊಂದಿದ್ದರೂ ಕೂಡ ಸಮಾಜದ ನಿಂದನೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಇದು ಮಹಿಳೆಯರ ಮೇಲೆ ಎಷ್ಟು ಪರಿಣಾಮ ಬೀರುತ್ತದೆ ಎಂಬುದು ಅರಿಯದಾಗಿದೆ ಈ ಸಮಾಜ.

ಯಾವತ್ತು ತಾಯ್ತನವು ಮಹಿಳೆಯರ ಆಯ್ಕೆಯಾಗಿಲ್ಲ. ಅವಳಿಗೆ ಇಷ್ಟವಿರಲಿ ಇಲ್ಲದೇ ಇರಲಿ ಆಕೆ ತಾಯಿಯಾಗಲೇಬೇಕು ಎಂಬುದು ಈ ಸಮಾಜದ ಆಶೆಯಾಗಿದೆ. ಮಹಿಳೆ ತಾಯಿಯಾಗದಿದ್ದಲ್ಲಿ ಬಂಜೆ ಎನಿಸಿಕೊಂಡು ಸಮಾಜದ ಕಣ್ಣಿನಲ್ಲಿ ಅಪರಾಧಿಯಾಗುತ್ತಾಳೆ. ದೋಷವಿರುವುದು ಅವಳಲ್ಲಿಯೇ ಅಥವಾ ಗಂಡನಲ್ಲಿಯೇ ಎನ್ನುವುದರ ಬಗೆಗೆ ಸಮಾಜ ಎಂದು ವಿಚಾರ ಮಾಡಿದಂತೆ ಕಾಣುವುದಿಲ್ಲ. ಮಗು ಹೆರದಿದ್ದದ್ದು ಅವಳದೇ ತಪ್ಪು ಎಂದು ಭಾವಿಸಲಾಗುತ್ತದೆ. ಮಗುವಿಗಾಗಿ ಗಂಡಸು ಎಷ್ಟು ಮದವೆಯನ್ನಾದರೂ ಮಾಡಿಕೊಳ್ಳಬಹುದು."[೧೩] ಪುತ್ರ ಸಂತಾನಕ್ಕಾಗಿ ರಾಮಾಯಣ ಮಹಾಭಾರತ ಕಾಲದಲ್ಲೂ ಬೇರೆ ವಿವಾಹವಾದ ಸಂಗತಿಗಳು ಕಂಡುಬರುತ್ತವೆ.

ತಾಯ್ತನವನ್ನು ಒಂದು ಮೌಲ್ಯವಾಗಿ ಪ್ರತಿಪಾದಿಸುವ ಸಮಾಜದಲ್ಲಿ ಅದರ ನಿರಾಕರಣೆ ಊಹೆಗೂ ನಿಲಕದ್ದು. ತಾಯ್ತಿನದ ಆಕಾಂಕ್ಷೆ ಎಲ್ಲಾ ಮಹಿಳೆಯರಲ್ಲಿಯೂ ಇದ್ದೆ ಇರುತ್ತದೆ. ತಾಯಿಯಾಗುವುದೇ ಮಹಿಳೆಯ ಬದುಕಿನ ಪರಮೋದ್ದೇಶವೆಂದು ತಾಯಿಯಾದಾಗಲೇ ಬದುಕು ಸಾರ್ಥಕವಾಗುತ್ತದೆ ಎಂದು ಬಿಂಬಿಸುತ್ತಾ ಬಂದ ಪರಿಸರದಲ್ಲಿ ಅದನ್ನು ನಿರಾಕರಿಸುವುದು ಬಹಳ ದೊಡ್ಡ ಪ್ರತಿಭಟನೆಯಾಗಿದೆ."[೧೪] ನಿರಾಕರಿಸಿದಂತ ಮಹಿಳೆಗೆ ಯಾವ ರೀತಿಯ ಸ್ಥಾನಮಾನ ದೊರೆಯಬಹುದು ಎಂಬುದು ಊಹೆಗೂ ನಿಲುಕದ್ದಾಗಿದೆ.

೩.೬. ಪಾತಿವ್ರತ್ಯದ ಪರಿಕಲ್ಪನೆಗಳು:

ಭಾರತೀಯ ಸಂಸ್ಕೃತಿಗಳು ಪಾತಿವ್ರತ್ಯ ಪರೀಕ್ಷೆಗಳನ್ನು ನ್ಯಾಯೋಚಿತವಾಗಿಯೇ ಕಂಡಿವೆ. ಸ್ತ್ರೀಯರ ಶೀಲ ಶಂಕಿಸುವವರು ಪರೀಕ್ಷಿಸುವವರು ಪುರುಷರು. ಈ ಪಾತಿವ್ರತ್ಯ ಪರೀಕ್ಷೆಯಲ್ಲಿ ಪಾಸಾಗಲು ಹೆಣಗುವವರು ಮಹಿಳೆಯರಾಗಿರುತ್ತಾರೆ. ಪಾತಿವೃತ್ಯೆ ಪರೀಕ್ಷೆಯು ಹೆಣ್ಣಿನ ಪಾಲಿಗೆ ಬರಿ 'ಶೀಲ'ದ ಪರೀಕ್ಷೆಯಾಗಿರುವುದಿಲ್ಲ. ಅದು ಅವಳ ಭವಿಷತ್ತಿನ ಪ್ರಶ್ನೆಯು ಆಗಿರುತ್ತದೆ. ಪಾತಿವ್ರತ್ಯವನ್ನು ಪರೀಕ್ಷಿಸುವವನು ಪ್ರಥಮ ದರ್ಜೆಯ ಪ್ರಜೆಯಾಗಿ, ಪರೀಕ್ಷೆಗೆ ಒಳಪಡುವವಳು ಎರಡನೆಯ ದರ್ಜೆಯ ಪ್ರಜೆಯಾಗಿ ನಿಲ್ಲುವವಳು. ಪಾತಿವ್ರತ್ಯದ ಒಟ್ಟು ಪರೀಕ್ಷಾ ಪ್ರಕ್ರಿಯೆಯು ಸಮಾಜದ ಲಿಂಗಶ್ರೇಣೀಕರಣಕ್ಕನುಗುಣವಾಗಿ ಪುರುಷನನ್ನು ಯಜಮಾನ

ಸ್ಥಾನದಲ್ಲಿ, ಸ್ತ್ರೀಯನ್ನು ದಾಸಿಯ ಸ್ಥಾನದಲ್ಲಿ ನಿಲ್ಲಿಸುತ್ತದೆ. ಈ ಪರೀಕ್ಷೆಯಲ್ಲಿ ಅವಳು ಎದುರಿಸುವ ಮಾನಾಪಮಾನಗಳು, ತಲ್ಲಣಗಳು, ಅತಂತ್ರಗಳು, ದೈಹಿಕ ಹಿಂಸೆಗಳು, ಮಾನಸಿಕ ಹಿಂಸೆಗಳು ಕುರಿತು ಪುರುಷಶಾಹಿ ಸಂಸ್ಕೃತಿ ಜಾಣ ಮೌನ ತಳೆದಿದೆ.[೧೫] ಇದು ಕೇವಲ ಮಹಿಳೆಯರಿಗೆ ಏಕೆ ಸೀಮಿತವಾಗಿದೆ ಎಂದರೆ ಪುರುಷಶಾಹಿ ಸಮಾಜ ನಡೆಸುತ್ತಿರುವ ಕುತಂತ್ರವೆನ್ನಬಹುದು. ಮಹಿಳೆಗೆ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು ಎಂದರೆ ಅವಳ ಶೀಲ ಮುಖ್ಯವಾಗಿಟ್ಟುಕೊಂಡು ಮಾತನಾಡಲಾಗುತ್ತದೆ. ಶಿಲದ ಅಥವಾ ಪಾತಿವ್ರತ್ಯದ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಡಾ. ಶೈಲಜಾ ಹಿರೇಮಠರವರು ವಿಮರ್ಶಾತ್ಮಕವಾಗಿ ಈ ರೀತಿ ಹೇಳುತ್ತಾರೆ. "ಪಾತಿವ್ರತ್ಯದ ಪರೀಕ್ಷೆಗಳನ್ನು ಎರಡು ಬಗೆಯಲ್ಲಿ ವಿಂಗಡಿಸಬಹುದು. ೧. ನಿರೀಕ್ಷಿತ ಪಾತಿವ್ರತ್ಯ ಪರೀಕ್ಷೆ. ಇದರಲ್ಲಿ ಮಹಿಳೆಗೆ ಪೂರ್ವ ಸೂಚನೆ ನೀಡಿಯೇ ಪರೀಕ್ಷೆ ನಡೆಸಲಾಗುವುದು. ಮತ್ತು ಅವಳು ಮೊದಲೇ ಶೀಲ ಶಂಕೆಗೆ ಗುರಿಯಾಗಿರುತ್ತಾಳೆ. ೨. ಅನಿರೀಕ್ಷಿತ ಪಾತಿವ್ರತ್ಯ ಪರೀಕ್ಷೆ. ಇಲ್ಲಿ ಯಾವ ಮುನ್ಸೂಚನೆಯೂ ಕೊಡದೆ ಅವಳರಿವಿಗೆ ಬರದಂತೆ ಪಾತಿವ್ರತ್ಯ ಪರೀಕ್ಷೆಗಳು ನಡೆಯುತ್ತದೆ. ಇಂತಹ ಪರೀಕ್ಷೆಗೆ ಒಳಪಡುವ ಸ್ತ್ರೀಯರ ಚಾರಿತ್ರ್ಯದ ಕುರಿತು ಯಾವ ಅನುಮಾನಗಳು ಇರುವುದಿಲ್ಲ. ಆದರೆ ಹೆಣ್ಣಿನ ಮನೋನಿಗ್ರಹವನ್ನು ಒರೆಹಚ್ಚಿ ನೋಡಲು ಈ ಬಗೆಯ ಪರೀಕ್ಷೆಗಳು ನಡೆಯುತ್ತದೆ. ನಿರೀಕ್ಷಿತ ಹಾಗೂ ಅನಿರೀಕ್ಷಿತ ಪಾತಿವ್ರತ್ಯ ಪರೀಕ್ಷೆಗಳಲ್ಲಿ, ಎರಡನೆಯ ಪರೀಕ್ಷೆ ಹೆಣ್ಣಿಗೆ ಹೆಚ್ಚು ಮಾನಸಿಕ ಹಾಗೂ ದೈಹಿಕ ಹಿಂಸೆಗಳಿಗೆ ಒಳಗಾಗುತ್ತಾಳಾದರೂ, ಕೊನೆಯ ಪಕ್ಷ ಅವಳಿಗೆ ತನ್ನ ಅಪಾದನೆಗಳ ಕುರಿತು ಅರಿವಿರುತ್ತದೆ. ಅನಿರೀಕ್ಷಿತ ಪಾತಿವ್ರತ್ಯಕ್ಕೆ ಒಳಪಡುವ ಸ್ತ್ರೀಗೆ ತಾನು ಪ್ರತಿ ಕ್ಷಣವು ಪರೀಕ್ಷೆಗೆ ಗುರಿಯಾಗುತ್ತಿದ್ದೇನೆ. ಎನ್ನುವ ಅರಿವು ತಿಳುವಳಿಕೆ ಪ್ರಜ್ಞೆ ಅವಳಿಗರುವುದೇ ಇಲ್ಲ. ಅರಿವಿಗೆ ಬಾರದೆ ಪರೀಕ್ಷೆಗಳು ನಡೆದುಹೋಗುತ್ತವೆ. ಅನಂತರದಲ್ಲಿ ತಾನು ಪಾತಿವ್ರತ್ಯ ಪರೀಕ್ಷೆಗೆ ಒಳಗಾಗಿದ್ದೆ ಎಂದು ತಿಳಿದು ಬಂದಾಗ ಆಕೆಗೆ ಹೆಚ್ಚು ಆಘಾತವಾಗುತ್ತದೆ, ನೋವಾಗುತ್ತದೆ. ಸ್ತ್ರೀಯ ಪ್ರಜ್ಞೆಗೆ ಬರದೆ ನಡೆದ ಪರೀಕ್ಷೆಗಳಲ್ಲಿ ಅವಳು ಪಾಸಾಗಿದ್ದರೆ ಆ ಮಾತು ಬೇರೆ. ಒಂದು ವೇಳೆ ಸೋತಿದ್ದರೆ? ಶೀಲ ಪರೀಕ್ಷೆಯಲ್ಲಿ ಪರಾಜಯ ಹೊಂದಿದ ಪರಿಣಾಮ ಪಾತಿವ್ರತ್ಯ ಪರೀಕ್ಷೆಗೆ ಗುರಿಯಾದ ಮಹಿಳೆಯ ಮನಸ್ಸಿನ ಮೇಲೆ ತೀವ್ರ ನೋವನ್ನು ಸೃಷ್ಟಿಸುತ್ತದೆ. ಹೇಳಿಕೊಳ್ಳಲಾಗದ ಹತಾಶೆ, ತಲ್ಲಣಗಳು ಅವಳನ್ನು ಹರಿದು ಮುಕ್ಕುತ್ತವೆ. ಅನಿರೀಕ್ಷಿತ ಪ್ರಾತಿವ್ರತ್ಯ ಪರೀಕ್ಷೆಗೆ ಒಳಪಟ್ಟ ಹೆಣ್ಣು ತನ್ನ ಇಷ್ಟದಂತೆ ಮತ್ತೊಬ್ಬನನ್ನು ಕೂಡಿ ಸಿಕ್ಕಿ ಬಿದ್ದಿರಬಹುದು ಇಲ್ಲವೆ ಯಾವುದೋ ಸನ್ನಿವೇಶಕ್ಕೆ ಒಳಗಾಗಿ ಕೂಡಿರಬಹುದು. ಹೀಗೆ ಸ್ತ್ರೀಬೇಕಾಗಿ ಇಲ್ಲವೆ ಬೇಡವಾಗಿ ಪುರುಷನನ್ನು ಕೂಡುವ ಪ್ರಸಂಗಗಳ ಹಿಂದೆ ಪರಸ್ಥಿತಿಯ ಒತ್ತಡ ಇದ್ದೆ ಇರುತ್ತದೆ. ತಾನೇಕೆ ಇಂತಹ ಪ್ರಸಂಗಕ್ಕೆ ಆಹುತಿಯಾಗುವುದು

ಅನಿವಾರ್ಯವಾಯಿತು ಎಂದು ಹೇಳುವ ಸ್ಥಿತಿಯಲ್ಲಿ ಅವಳಿರುವುದಿಲ್ಲ. ಕೇಳುವ ಸ್ಥಿತಿಯಲ್ಲಿ ಗಂಡನಿರುವುದಿಲ್ಲ. ಒಂದು ವೇಳೆ ಹೇಳಲು ಪ್ರಯತ್ನಿಸಿದರೂ, ತಪ್ಪಿನಿಂದ ಜಾರಿಕೊಳ್ಳಲು ನಡೆಸುವ ಬಡಬಡಿಕೆಯಾಗಿಯೇ ಕಂಡುಬರುತ್ತದೆ. ಮುಖ್ಯವಾದ ಸಂಗತಿಯೆಂದರೆ ಇಂತಹ ಪ್ರಸಂಗಗಳಲ್ಲಿ ಹೇಳುವ ಕೇಳುವ ವೇದಿಕೆ ಸೃಷ್ಟಿಯಾಗುವುದಿಲ್ಲ. ಇಂತಹ ಸನ್ನಿವೇಶಕ್ಕೆ ಸಿಕ್ಕಿ ಕೂಡ ಮಹಿಳೆ ಗಂಡನಿಂದ ಮತ್ತು ಸಂದರ್ಭದ ಲಾಭ ಪಡೆದು ಅತ್ಯಾಚಾರವೆಸಗಿದ ವ್ಯಕ್ತಿಯಿಂದ ಏಕಕಾಲದಲ್ಲಿ ಇಬ್ಬರು ಗಂಡಸರಿಂದ ಅನ್ಯಾಯಕ್ಕೊಳಗಾಗಿರುತ್ತಾಳೆ.[೧೬] ಇಂತಹ ಶೋಷಣೆಗೆ ರಾಮಾಯಣ ಕಾಲದಿಂದಲೂ ಮಹಿಳೆ ಒಳಗಾಗುತ್ತಾ ಬಂದಿದ್ದಾಳೆ. ಈ ಸಿದ್ದಿ ಜನಾಂಗದ ಮಹಿಳೆಯರು ಕೂಡ ಈ ಸಮಸ್ಯೆಯಲ್ಲಿ ಮೂಲದಿಂದಲೂ ಬಲಿಯಾಗುತ್ತಾ ಬಂದಿದ್ದಾರೆ. ಇವರು ಮೂಲತಃ ಗುಲಾಮರಾಗಿ ನಮ್ಮ ದೇಶಕ್ಕೆ ಬಂದಾಗ ಈ ಮಹಿಳೆಯರನ್ನು ಮೇಲ್ಜಾತಿಯ ಪುರುಷರು ಬಳಸಿಕೊಳ್ಳದೇ ಇದ್ದಾರೆಯೇ? ಆ ಸಂದರ್ಭದಲ್ಲಿ ಸಿದ್ದಿ ಮಹಿಳೆಯರ ಮೇಲೆ ಅನೇಕ ಅತ್ಯಾಚಾರಗಳು ನಡೆದು ಹೋಗಿವೆ. ಇಂದಿಗೂ ಕೂಡ ನಡೆಯುತ್ತಲಿವೆ. ಕ್ಷೇತ್ರಕಾರ್ಯದಲ್ಲಿ ಮಾಹಿತಿ ಪಡೆದಂತೆ ಭಟ್ಟರ ಮನೆಗಳಲ್ಲಿ ಕೆಲಸಕ್ಕೆ ಹೋದಾಗ ಸಿದ್ದಿ ಮಹಿಳೆಯರನ್ನು ತಮ್ಮ ಕಾಮತೃಷೆಯನ್ನು ತೀರಿಸಿಕೊಳ್ಳಲು ಬಳಸಿಕೊಳ್ಳುತ್ತಿದ್ದರೆಂಬುದಕ್ಕೆ ಅನೇಕ ಘಟನೆಗಳ ದಾಖಲೆಗಳಿವೆ. ಇತ್ತಿತ್ತಲಾಗಿ ಸ್ವಲ್ಪ ಮಟ್ಟಿಗೆ ಕಡಿಮೆ ಪ್ರಮಾಣದಲ್ಲಿ ನಡೆಯುತ್ತಿದೆ. ಸಿದ್ದಿ ಮಹಿಳೆಯರು ಭಟ್ಟರ ಮನೆಗಳಿಗೆ ಕೆಲಸಕ್ಕೆ ಹೋದರೂ ಕೂಡ ಜಾಗೃತರಾಗಿ ಕೆಲಸ ಮಾಡಿ ಹಿಂದಿರುಗುತ್ತಾರೆ. ಒಂದು ವೇಳೆ ಈ ಸಿದ್ದಿ ಮಹಿಳೆಯು ಮೇಲ್ಜಾತಿಯ ಪುರುಷರ ತೋಟಗಳಲ್ಲಿ ಅಥವಾ ಮನೆಗಳಲ್ಲಿ ಕೆಲಸ ಮಾಡಲು ಹೋದಾಗ ಅವರನ್ನು ಲೈಂಗಿಕವಾಗಿ ಬಳಸಿಕೊಂಡ ವಿಷಯ ಸುದ್ದಿ ಪುರುಷರಿಗೆ ತಿಳಿದರೆ ಆ ಮಹಿಳೆಯರ ಮೇಲೆಯೇ ತಪ್ಪುಗಳನ್ನು ಹೊರಿಸಿ ಅವಳನ್ನೇ ಶಿಕ್ಷೆಗೆ ಎಂದು ಗುರಿಪಡಿಸಿದ ಸಂದರ್ಭಗಳು ನಡೆದಿವೆ. ಈಗಲೂ ಕೂಡ ಭಟ್ಟರ ಮನೆಗಳಿಗೆ ಕೆಲವು ಮಹಿಳೆಯರು ಕೆಲಸಕ್ಕೆ ಹೋದರೂ ಕೂಡ ತಮ್ಮ ಶೀಲಕ್ಕೆ ದಕ್ಕೆ ಬರದಂತೆ ಕೆಲಸ ಮುಗಿಸಿಕೊಂಡು ಮರಳಿ ಮನೆಗೆ ಬರುತ್ತಾರೆ. ಇವರು ಕೇವಲ ಮೇಲ್ಜಾತಿಯ ಪುರುಷರಿಂದಲ್ಲದೇ ಸಿದ್ದಿ ಪುರುಷರಿಂದಲೂ ಶೋಷಣೆಗೆ ಒಳಗಾಗುತ್ತಾರೆ. ಸಿದ್ದಿ ಮಹಿಳೆಯರು ಮದುವೆಕ್ಕಿಂತ ಮುಂಚಿತವಾಗಿ ಯಾರೊಂದಿಗೆ ಸಂಬಂಧವನ್ನು ಹೊಂದಿದ್ದರೆ ಅವಳನ್ನು ಕುಟುಂಬದಿಂದ ಮತ್ತು ಸಮಾಜದಿಂದ ಹೊರಗೆ ಹಾಕುವರು. ಈ ಸಮುದಾಯದಲ್ಲಿಯು ಶೀಲದ ಪರಿಕಲ್ಪನೆಯು ಎಷ್ಟು ಗಟ್ಟಿಯಾಗಿ ನೆಲೆಯೂರಿದೆ ಎಂದರೆ ಪಾತಿವ್ರತ್ಯಕ್ಕೆ ಮಹತ್ವ ನೀಡುತ್ತೀರಾ ಎಂದು ಕೇಳಿದಾಗ ಮಹಿಳೆಯರು ನೀಡಿದ ಉತ್ತರ ಈ ಕೆಳಗಿನ ಕೋಷ್ಟಕದ ಮೂಲಕ ನೋಡಿದರೆ ತಿಳಿಯುತ್ತದೆ.

ಕೋಷ್ಟಕ – ೬

ಮಹಿಳೆಯರ ಅಭಿಪ್ರಾಯ	ಆವೃತ್ತಿ ಸಂಖ್ಯೆ	ಶೇಕಡಾ ಪ್ರಮಾಣ
ಹೌದು	೫೭	೯೫
ಇಲ್ಲ	೩	೫
ಒಟ್ಟು	೬೦	೧೦೦

ಅಧ್ಯಯನಕ್ಕೆ ಒಳಪಡಿಸಿದ ೬೦ ಮಹಿಳೆಯರಲ್ಲಿ ಶೇಕಡಾ ೯೫ ರಷ್ಟು ಮಹಿಳೆಯರು ಪಾತಿವ್ರತ್ಯಕ್ಕೆ ಮಹತ್ವವನ್ನು ಕೊಡುತ್ತಾರೆ. ಆದರೆ ಕೇವಲ ಪ್ರತಿಶತ ೫ ರಷ್ಟು ಮಹಿಳೆಯರು ಮಾತ್ರ ಪಾತಿವ್ರತ್ಯಕ್ಕೆ ಮಹತ್ವವನ್ನು ನೀಡುವುದಿಲ್ಲ ಎಂದು ಹೇಳುವರು. ಶೇಕಡಾ ೯೫ ರಷ್ಟು ಮಹಿಳೆಯರು ಏಕೆ ಪಾತಿವೃತ್ಯಕ್ಕೆ ಮಹತ್ವವನ್ನು ನೀಡುತ್ತಾರೆ ಎಂದರೆ ಗಂಡನೆ ಸರ್ವಸ್ವ, ಗಂಡನೇ ದೇವರು, ತಮ್ಮ ದೇಹ, ಶೀಲ ಅನ್ನುವಂತಹದ್ದು ಕೇವಲ ಗಂಡನಿಗೆ ಮಾತ್ರ ಮೀಸಲು ಎಂದು ಹೇಳುವರು. ಆದರೆ ಕೇವಲ ಪ್ರತಿಶತಃ ೫ ರಷ್ಟು ಮಹಿಳೆಯರು ಮಾತ್ರ ಪಾತಿವೃತ್ಯಕ್ಕೆ ಮಹತ್ವ ನೀಡುವುದಿಲ್ಲ. ಏಕೆಂದರೆ ಸ್ವಲ್ಪ ವೈಚಾರಿಕವಾಗಿ ಮಾತನಾಡುವ ಅಸ್ತಿತ್ವವನ್ನು ಕುರಿತು ಮಾತಾನಾಡುವ ಮಹಿಳೆಯರು ಮಾತ್ರ ಮಹತ್ವ ನೀಡುವುದಿಲ್ಲ.

ಹಿಂದೂ ಶಾಸ್ತ್ರಕಾರರು ವಿಧಿಸಿರುವಂತೆ ಪತ್ನಿಯು ತನ್ನ ಪತಿಗೆ ನಿಷ್ಠಳಾಗಿರಬೇಕು. ಪತಿಯೇ ಪರಮದೈವ ಎಂಬುದಾಗಿ ನಂಬಿ ನಡೆಯಬೇಕು. ಪತಿಯ ಸೇವೆ ತನ್ನ ಆದ್ಯ ಕರ್ತವ್ಯ ಎಂದು ಪರಿಗಣಿಸಿ ನಡೆದುಕೊಳ್ಳಬೇಕು. ನದಿಯು ಸಮುದ್ರದಲ್ಲಿ ಸೇರಿಕೊಂಡು ತನ್ನ ಅಸ್ತಿತ್ವವನ್ನು ಕಳೆದುಕೊಂಡು ಸಮುದ್ರದೊಂದಿಗೆ ಐಕ್ಯವಾಗುವಂತೆ ಪತ್ನಿಯಾದವಳು ತನ್ನನ್ನು ಸಂಪೂರ್ಣವಾಗಿ ಗಂಡನಿಗೆ ಅರ್ಪಿಸಿಕೊಳ್ಳಬೇಕು. ತನ್ನದೇ ಆದ ಪ್ರತ್ಯೇಕ ವೈಯಕ್ತಿಕ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವ ಕಡೆ ಎಳ್ಳಷ್ಟು ಗಮನಕೊಡಬಾರದು. ಪತಿಯ ವ್ಯಕ್ತಿತ್ವದಲ್ಲಿಯೇ ತನ್ನ ವ್ಯಕ್ತಿತ್ವವನ್ನು ಸಂಪೂರ್ಣವಾಗಿ ಲೀನಗೊಳಿಸಿಕೊಂಡು ತನ್ಮೂಲಕ ಧನ್ಯತೆಯನ್ನು ಕಾಣಬೇಕು. ಒಂದು ವೇಳೆ ಪತಿಯಾದವನು ಅಯೋಗ್ಯ, ದುಷ್ಟ, ಪಾನಾಸಕ್ತಿ, ವಿಷಯ ಲಂಪಟ, ಕ್ರೂರಿ, ರೋಗಪೀಡಿತ, ಷಂಡ ಮೊದಲಾದ ಅವಗುಣಗಳಿಂದ ಕೂಡಿದವನಾಗಿದ್ದರೂ ಆತನ ವಿರುದ್ಧ ಏನೇನೂ ಚಕಾರವೆತ್ತದೆ ಆತನ ಮನಸ್ಸನ್ನು ಸಂತೋಷಪಡಿಸಲು ತನ್ನ ಶರೀರವನ್ನು ತೇಯ್ದುಕೊಳ್ಳುವುದರಲ್ಲಿಯೇ ಸಂತೃಪ್ತ ಪಡಬೇಕು."[೧೭] ಎಂಬ ಗುಣಗಳನ್ನು ಮಹಿಳೆಗೆ ಸಮಾಜವು ಸಾಮಾಜೀಕರಣದ ಮೂಲಕ ಚಿಕ್ಕಂದಿನಿಂದಲೂ ತುಂಬಿರುತ್ತದೆ. ಅದಕ್ಕೆ ವಿರುದ್ಧವಾಗಿ ನಡೆದರೆ ಸಮಾಜದಿಂದ ದಿಕ್ಕರಿಸಲ್ಪಡುತ್ತಾಳೆ. ನಮ್ಮ ಸಾಮಾಜಿಕ ವ್ಯವಸ್ಥೆಯು ಮಹಿಳೆಯನ್ನು ಅವರ ಮೇಲೆ ಲೈಂಗಿಕ ಹಿಡಿತವನ್ನು ಸಾಧಿಸಲು

ಎಲ್ಲಿಲ್ಲದ ನಿರ್ಬಂಧಗಳನ್ನು ಹೇರಿರುತ್ತಾರೆ. ಒಟ್ಟಿನಲ್ಲಿ ಎಲ್ಲ ಧರ್ಮಗಳಲ್ಲಿಯೂ ಕೂಡ ಪಾತಿವೃತ್ಯದ ಪರಿಕಲ್ಪನೆ, ಗಟ್ಟಿಯಾದ ತಳಪಾಯವನ್ನು ಹಾಕಿದೆ.

೩.೭. ವಿಧವೆ ಮತ್ತು ವಿಧವಾ ವಿವಾಹ :

ಸಾಮಾಜಿಕ ಪ್ರಗತಿ ಸಾಧಿಸಬೇಕೆನ್ನುವವರು ಮೊದಲು ಸಮಾಜದಲ್ಲಿ ಆಳವಾಗಿ ಬೇರೂರಿರುವ ಕಂದಾಚಾರಗಳನ್ನು ಬೇರು ಸಹಿತ ಕಿತ್ತೊಗೆಯಬೇಕು. ೧೯ನೆಯ ಶತಮಾನದಿಂದ ಭಾರತದ ವಿವಿಧ ಪ್ರಾಂತಗಳಲ್ಲಿ ಸಮಾಜ ಸುಧಾರಕರು ಸಾಕಷ್ಟು ಸಂಖ್ಯೆಯಲ್ಲಿ ಕಾಣಿಸಿಕೊಳ್ಳುವರು. ಭಾರತೀಯ ಸಮಾಜದಲ್ಲಿ ಜಡ್ಡುಗಟ್ಟಿರುವ ಬಾಲ್ಯವಿವಾಹ, ಸತಿಪದ್ಧತಿ ಹಾಗೂ ಅನೇಕ ಸಾಮಾಜಿಕ ಅನಿಷ್ಟ ಪದ್ಧತಿಗಳ ವಿರುದ್ಧ ಜನಜಾಗೃತಿಯನ್ನುಂಟು ಮಾಡುವುದು ಅವರ ಮುಖ್ಯ ಉದ್ದೇಶವಾಗಿತ್ತು. ರಾಜಾರಾಮ ಮೋಹನರಾಯರಂಥವರು, ಲಾರ್ಡ್ ವಿಲಿಯಂ ಬೆಂಟಿಕನ ಸಹಾಯದಿಂದ ಸತಿ ಪದ್ಧತಿಯನ್ನು ಕ್ರಿ.ಶ. ೧೮೨೯ರಲ್ಲಿ ಕಾನೂನಿನ ಮೂಲಕ ತಡೆಗಟ್ಟಿದನ್ನು ಇಲ್ಲಿ ಸ್ಮರಿಸಬಹುದು. ವಿಧವಾ ವಿವಾಹ, ಸ್ತ್ರೀ ಶಿಕ್ಷಣ ಮುಂತಾದವುಗಳ ಮೂಲಕ ಸ್ತ್ರೀಯರ ಕೆಲವು ಗಂಭೀರ ಸಮಸ್ಯೆಗಳನ್ನು ಪರಿಹರಿಸಲು ಈ ಸಮಾಜ ಸುಧಾರಕರು ತುಂಬಾ ಶ್ರಮಿಸಿದರು. ಅವರಲ್ಲಿ ಪಂಡಿತ ಈಶ್ವರ ಚಂದ್ರ ವಿದ್ಯಾಸಾಗರ, ಸ್ವಾಮಿ ದಯಾನಂದ ಸರಸ್ವತಿ, ಬಾಬುಕೇಶವ ಇಂದ್ರಸೇನ, ರಾನಡೆ, ಕರ್ವೆ, ಮುಂತಾದವರನ್ನು ಹೆಸರಿಸಬಹುದು. ಆದರೆ ಇಷ್ಟೆಲ್ಲ ಸಮಾಜ ಸುಧಾರಕರು ಪ್ರಯತ್ನಿಸಿದರು ವಿಧವೆಯರ ಬಾಳು ಸುಧಾರಿಸುವಲ್ಲಿ ವಿಫಲವಾಗಿದೆ.

"ಗಂಡ ಸಾಯೋಕ್ಕಿಂತ ಮುಂಡ್ಯಾಗೋಕಿಂತ
ಕಂಡವರ ಮನೆಯ ಕಸನ್ಹಾಕಿ ಸಾಯೋಕ್ಕಿಂತ
ಕೊಂಡವನ್ನೊದೆ ಕಡಲೇಸು"

ಎಂದು ಜನಪದ ಮಹಿಳೆ ಹಾಡುವಷ್ಟರ ಮಟ್ಟಿಗೆ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ವಿಧವೆಯ ಬದುಕು ಅಸಹನೀಯವಾಗಿರುತ್ತದೆ.[೧೭] ಪತ್ನಿಯನ್ನು ಕಳೆದುಕೊಂಡ ಪುರುಷನು ತೀರ ವೈಯಕ್ತಿಕಾರ್ಥದಲ್ಲಿ ಒಂಟಿತನವನ್ನು ಅನುಭವಿಸುವುದಾದರೆ ಪತಿಯನ್ನು ಕಳೆದುಕೊಂಡು ಸ್ತ್ರೀ ಸಮಾಜದಲ್ಲಿ ತನ್ನ ಸಾಮಾಜಿಕ ಸ್ಥಾನಮಾನ, ಆರ್ಥಿಕ ಅಭದ್ರತೆಯ ಜೊತೆಗೆ ಲೈಂಗಿಕ ಶೋಷಣೆಗಳಿಗೂ ಒಳಪಡುಬಹುದಾದ ಸ್ಥಿತಿಗೆ ಬರುತ್ತಾಳೆ. ವಿವಾಹ ಸಂಸ್ಥೆಯಲ್ಲಿ ಗಂಡನ ಅಧೀನದಲ್ಲಿದ್ದವಳು ನೇರವಾಗಿ ಕುಟುಂಬ ಸಮಾಜದ ಅಧೀನಕ್ಕೆ ಒಳಪಡುತ್ತಾಳೆ.[೧೮] ಆಗ ಮಹಿಳೆಯ ಬದುಕಿನಲ್ಲಿ ನರಕಯಾತನೆ ಪ್ರಾರಂಭವಾಗುತ್ತದೆ. ಸಮಾಜ ಏನೇನು ನಿರ್ಬಂಧನೆಗಳನ್ನು ಹೇರಿದರೂ ಅದನ್ನು ಮೆಟ್ಟಿನಿಲ್ಲುವಂತಹ ಧೈರ್ಯ, ಶಕ್ತಿ ಪಡೆಯಬೇಕಾಗಿದೆ.

ವಿಧವೆಯರಿಗೆ ಕೀಳಾಗಿ ನೋಡುವಷ್ಟು ವಿಧುರನಿಗೆ ಕೀಳಾಗಿ ನೋಡಲಾರರು. ಸಾಮಾನ್ಯವಾಗಿ ಈ ವಿಧುರ ಎಂಬ ಶಬ್ದ ಅಪರಿಚಿತವಾಗಿ ಕಾಣುತ್ತದೆ. ಗಂಡ ಸತ್ತ ತಕ್ಷಣ ಹೆಣ್ಣಿಗೆ ಮೂಗುತಿ, ಕುಂಕುಮ, ಬಳೆ, ತಾಳಿ ಮುಂತಾದವುಗಳನ್ನು ಹಾಕಿಕೊಳ್ಳಬಾರದು ಎಂದು ಸಾಮಾಜಿಕ ವ್ಯವಸ್ಥೆ ನಿರ್ಬಂಧ ಹೇರುತ್ತದೆ. ಆದರೆ ಕುಂಕುಮವನ್ನು ಹೆಣ್ಣು ಹುಟ್ಟಿದಾಗಿನಿಂದ ಹಚ್ಚಿಕೊಂಡು ಬಂದಿರುವಳು. ಇದನ್ನು ಸಹ ಗಂಡನ ಸಂಕೇತವೆಂದು ಗುರುತಿಸುತ್ತಾರೆ. ಗಂಡ ಸತ್ತ ನಂತರ ವಿಧವೆಯಾದವಳು ಕೆಲವೊಂದು ನಿಯಮಗಳನ್ನು ಮೀರುವಂತಿಲ್ಲ ಎಂದು ಗೆರೆಹಾಕಿದರೆ ಅದೇ ಪುರುಷನಿಗೆ ಯಾವುದೇ ನಿರ್ಬಂಧನೆಗಳು ನಿಯಮಗಳಿರುವುದಿಲ್ಲ. ಹೆಂಡತಿ ಸತ್ತ ಒಂದು ತಿಂಗಳ ಒಳಗಾಗಿ ಅಥವಾ ವರ್ಷದೊಳಗಾಗಿ ಮತ್ತೊಂದು ವಿವಾಹ ಮಾಡಿಕೊಳ್ಳಬಹುದು. ಅದೇ ಒಂದು ಹೆಣ್ಣು ಗಂಡ ಸತ್ತ ತಕ್ಷಣ ಬೇರೆ ವಿವಾಹವಾದರೆ ಸಮಾಜದಲ್ಲಿ ಅವಹೇಳನಕ್ಕೆ ಒಳಗಾಗುತ್ತಾಳೆ. ಈ ರೀತಿಯಾಗಿ ಮಹಿಳೆಯರನ್ನು ಕೀಳಾಗಿ ಕಾಣಲಿಕ್ಕೆ ಪಾರಂಪರಿಕವಾಗಿ ಪಾಲಿಸಿಕೊಂಡು ಬಂದ ಸಾಮಾಜಿಕ ವ್ಯವಸ್ಥೆ ಎಂದು ಹೇಳಬಹುದು. ಸಿದ್ದಿ ಸಮುದಾಯದಲ್ಲಿಯು ಸಹ ವಿಧವೆಯರು ಯಾವುದೇ ಮಂಗಳ ಕಾರ್ಯಗಳಿಗೆ ಹೋಗಬಾರದು. ಉದಾಹರಣೆಗೆ ಮದುವೆಯಲ್ಲಿ, ತಾಳಿಕಟ್ಟುವಲ್ಲಿ, ದೇವರಿಗೆ ಆರತಿ ಮಾಡುವಲ್ಲಿ, ಮಕ್ಕಳಿಗೆ ತೊಟ್ಟಿಲಲ್ಲಿ ಹಾಕುವಾಗ ಮುಂತಾದವುಗಳ ಕಡೆಗೆ ವಿಧವೆ ಮಹಿಳೆಯರಿಗೆ ಅವಕಾಶವಿಲ್ಲ. ಒಳ್ಳೆಯ ಕೆಲಸಕ್ಕೆ ಹೋಗಬೇಕಾದರೆ ವಿಧವೆಯರ ಮುಖ ನೋಡುವುದಿಲ್ಲ. ನೋಡಿದರೆ ಹೋದ ಕೆಲಸವಾಗಲಾರದು. ಒಂದು ರೀತಿಯಲ್ಲಿ ಅಶುಭದ ಸಂಕೇತವಾಗಿ ಈ ವಿಧವೆ ಮಹಿಳೆಯರನ್ನು ಕಾಣುವರು, ವಿಧವೆಯರು ಮರುಮದುವೆಯಾದರು ಕೂಡ ಅವರಿಗೆ ಮಂಗಳ ಕಾರ್ಯಗಳಿಗೆ ಭಾಗವಹಿಸಲು ಅವಕಾಶಗಳಿಲ್ಲ.

ಸಿದ್ದಿ ಸಮುದಾಯದಲ್ಲಿ ವಿಧವೆಯರು ಮರುವಿವಾಹವಾಗುವುದು ಅನಿವಾರ್ಯ ಪರಸ್ಥಿತಿಗಳು ಇದ್ದಾಗ ಮಾತ್ರ ಕಂಡುಬರುತ್ತದೆ. ಅತಿ ಚಿಕ್ಕ ವಯಸ್ಸಿನಲ್ಲಿ ಗಂಡ ಸತ್ತರೆ ಮಾತ್ರ ಮರುಮದುವೆಯಾಗಲು ಅವಕಾಶವಿರುವುದು. ಆದರೆ ಇದನ್ನು ವಿವಾಹ ಎಂದು ಕರೆಯುವುದಿಲ್ಲ. 'ಉಡಕಿ' ಅಥವಾ 'ಸೀರುಡಿಕೆ' ಅಥವಾ ಕಾಪಾಡನೆ 'ಸೋನೆ' ಎಂದು ಕರೆಯುತ್ತಾರೆ. ಈ ಉಡಕಿ ಆಚರಣೆಯನ್ನು ಊರಿನ ನಾಲ್ಕು ಜನ ಹಿರಿಯರು ಸೇರಿ ಒಂದು ಗುಡಿಯ ಹತ್ತಿರ ಚಹ, ಚುರುಮುರಿ ಮಾಡಿ ಎಲ್ಲರಿಗೂ ಹಂಚಿ ಗಂಡ-ಹೆಂಡತಿ ಹಾರ ಬದಲಾಯಿಸುತ್ತಾರೆ. ಆದರೆ ತಾಳಿ ಕಟ್ಟುವುದು ವಿಧವೆಯರು ಸೇರಿ ಮರುವಿವಾಹವಾಗುವ ಮಹಿಳೆಗೆ ತಾಳಿಕಟ್ಟುತ್ತಾರೆ. ಇದು ಮೊದಲಿನಿಂದಲೂ ಬಂದ ಸಂಪ್ರದಾಯವಾಗಿದೆ. ಇದನ್ನು ಮುತ್ತೈದೆ ಮಹಿಳೆಯರು ನೋಡುವಂತಿಲ್ಲ. (ಮುಸ್ಲಿಂ ಸಿದ್ದಿ

ಮಹಿಳೆಯರು ನೀಡಿದ ಮಾಹಿತಿ ಪ್ರಕಾರ) ವಿಧವೆ ಮಹಿಳೆಯರಿಗೆ ಮರುವಿವಾಹವಾದರೂ ಅವಳಿಗೆ ಮಂಗಳ ಕಾರ್ಯಗಳಲ್ಲಿ ಅವಕಾಶವಿಲ್ಲ. ಏಕೆಂದರೆ ಗಂಡ ಸತ್ತು ಮತ್ತೆ ಮದುವೆಯಾದರೂ ಮತ್ತೈದೆ ಭಾಗ್ಯ ಬರುವುದಿಲ್ಲ. ಏಕೆ ಎಂದು ಕೇಳಿದಾಗ "ಹೆಣ್ಣು ಮಕ್ಕಳು ವಿಧವೆಯಾದರೆ ಆಯಿತು ನಂತರ ಹತ್ತು ಮದುವೆ ಮಾಡಿಕೊಂಡರೂ ಮೊದಲಿನ ಗಂಡನ ಕಿಮ್ಮತ್ ಬರೋದಿಲ್ಲ". ಎಂದು ಹೇಳುತ್ತಾರೆ. ಏಕೆಂದರೆ ಹೆಣ್ಣು ಚಿಕ್ಕವಯಸ್ಸಿನಲ್ಲಿ ಗಂಡ ಸತ್ತರೆ ಆಗ ಮಹಿಳೆ ಅನೈತಿಕ ಸಂಬಂಧ ಹೊಂದಬಹುದು ಎಂದು ಅದನ್ನು ತಪ್ಪಿಸಲು ಹೆಚ್ಚಾಗಿ ಈ 'ಸೀರುಡಿಕೆ' ಆಚರಣೆಯನ್ನು ಕೈಗೊಳ್ಳುತ್ತಾರೆ. ಆದರೆ ಈ ವಿಧವಾ ವಿವಾಹ ತೀರ ಕ್ವಚಿತವಾಗಿನಡೆದರೂ ಸಹ ಅವರು ಯಾವ ಮಂಗಳಕರವಾದ ಕಾರ್ಯಗಳಲ್ಲೂ ಭಾಗವಹಿಸಬಾರದೆಂದು ನಿರ್ಬಂಧವಿದೆ. ಪುರುಷನಿಗೆ ಯಾವುದೇ ರೀತಿಯ ನಿರ್ಬಂಧನೆ ಇರುವುದಿಲ್ಲ. ಇದು ಪುರುಷ ಪ್ರಧಾನ ಸಮಾಜವಾಗಿರುವುದರಿಂದ ಪುರುಷ ರಾಜಕಾರಣಗಳು ನಡೆಯುವುದರಿಂದ ಮಹಿಳೆಯರು ಪುರುಷ ಮಾಡುವ ಕುತಂತ್ರಗಳಿಗೆ ಬಲಿಯಾಗುತ್ತಾ ಬಂದಿದ್ದಾಳೆ.

೩.೮. ಸಿದ್ದಿ ಸಮುದಾಯದಲ್ಲಿ ಸಾವು ಮತ್ತು ಸಾವಿನ ನಂತರದ ಆಚರಣೆಗಳು.

ಮರಣವೆಂಬುದು ಯಾವುದೇ ಒಂದು ಜೀವಿಯ ಜೀವಿತದ ಕೊನೆಯ ಘಟ್ಟ. ಜೀವಿಯೊಂದು ಜನಿಸಿದ ಮೇಲೆ ಅದು ಸಾಯಲೇಬೇಕಾದ್ದು ಪ್ರಕೃತಿ ನಿಯಮ. ಇದು ಮನುಷ್ಯನಿಗೂ ಅನ್ವಯವಾಗುವಂಥದ್ದು. ಸಿದ್ದಿ ಸಮುದಾಯದಲ್ಲಿ "ಸತ್ತವರು ತಮ್ಮ ಹಿರಿಯರನ್ನು ಸೇರುತ್ತಾರೆಂದು ಜೊತೆಗೆ ಅವರು ಮರಳಿ ತಮ್ಮ ಮನೆಯಲ್ಲಿ ಪುನಃ ಹುಟ್ಟುವರೆಂದು ನಂಬುತ್ತಾರೆ. ಅದಕ್ಕಾಗಿ ತಮ್ಮ ಮಕ್ಕಳಿಗೆ ಸತ್ತ ಹಿರಿಯರ ಹೆಸರನ್ನಿಡುತ್ತಾರೆ. ಸಾವನ್ನಪ್ಪಿದ ವ್ಯಕ್ತಿಯನ್ನು ಆತ ಸತ್ತ ಮೂರು ತಾಸಿನ ಒಳಗೆ ಚಟ್ಟದ ಮೇಲೋಯ್ದು ದಫನ ಕಾರ್ಯ ಮಾಡಿ ಮುಗಿಸುತ್ತಾರೆ.[೨೦] ಶವ ಹೊತ್ತಿಕೊಂಡು ಹೋಗುವಾಗ ಮಹಿಳೆಯರು ಕೂಡ ಹೆಗಲನ್ನು ಕೊಡುತ್ತಾರೆ. ಇದು ಹೆಣ್ಣು ಮಕ್ಕಳ ತಾಯಿ ತೀರಿಕೊಂಡಾಗ, ತಾಯಿಯ ಮೇಲೆ ಅತಿಯಾದ ಪ್ರೀತಿಯುಳ್ಳವರು ಪಾಲ್ಗೊಳ್ಳುತ್ತಾರೆ. ಶವಕ್ಕೆ ಪೂಜೆ ಮಾಡಿ ತೆಂಗಿನ ಕಾಯಿ ಹೊಡೆಯುವ ಅಧಿಕಾರ ಪುರುಷರಿಗೆ ಮಾತ್ರವಿದೆ. ಮಹಿಳೆಯರಿಗೆ ಇಲ್ಲ. ತಾಯಿಯ ಮೇಲೆ ಎಷ್ಟೇ ಪ್ರೀತಿಯಿದ್ದರೂ ಶವಕ್ಕೆ ಬೆಂಕಿ ಇಡಲು ಅವಕಾಶ ಮಹಿಳೆಗಿಲ್ಲ. ಈ ಶವ ಹೊರವು ಪದ್ಧತಿಯಲ್ಲಿ ಏಕೆ ಮಹಿಳೆಯರು ಪಾಲಗೊಳ್ಳುತ್ತಾರೆ ಎಂದರೆ ಸಿದ್ದಿಗಳು ಮೂಲತಃ ಉತ್ತರ ಕನ್ನಡ ಜಿಲ್ಲೆಯ ಕಾಡಿನಲ್ಲಿ ವಾಸಿಸುತ್ತಿರುವವರು. ಒಂದೊಂದು ಕುಟುಂಬವನ್ನು ಕಟ್ಟಿಕೊಂಡು ವಾಸಿಸುತ್ತಿದ್ದವರು. ಅಂತಹ ಸಂದರ್ಭದಲ್ಲಿ ಮನೆಯಲ್ಲಿ ಯಾರಾದರೂ ಮರಣ ಹೊಂದಿದರೆ ಸಂಬಂಧಿಕರಿಗೆ ತಿಳಿಸುವುದು ಕಷ್ಟವಾಗುತ್ತಿತ್ತು. ಆದ್ದರಿಂದ ಮೊದಲು

ಮನೆಯವರೆಲ್ಲರೂ (ಪುರುಷರು ಮತ್ತು ಮಹಿಳೆಯರು) ಸೇರಿ ಶವಸಂಸ್ಕಾರ ಮಾಡಿದ ಮೇಲೆ ಸಂಬಂಧಿಕರಿಗೆ ತಿಳಿಸುತ್ತಿದ್ದರು. ಇದೇ ಪದ್ಧತಿಯು ಮುಂದುವರೆದು ಮಹಿಳೆಯರು ಈಗ ಶವ ಹೋರುವ ಅಥವಾ ಹೆಗಲನ್ನು ಕೊಡುವ ಪದ್ಧತಿಯು ಸಾಂಪ್ರದಾಯಿಕವಾಗಿ ಮುಂದುವರೆಯುತ್ತಿದೆ. ಇದು ಕೇವಲ ಹಿಂದೂ ಸಿದ್ದಿಗಳಲ್ಲಿ ಮಾತ್ರ ಕಂಡುಬರುತ್ತದೆ ಎಂದು ದಿಯೋಗ ಸಿದ್ದಿಯವರು ತಮ್ಮ ಅಭಿಪ್ರಾಯ ವ್ಯಕ್ತಿಪಡಿಸಿದರು. ನಾನು ಕ್ಷೇತ್ರ ಕಾರ್ಯ ಕೈಗೊಂಡಾಗ ಕೇಳಿದ ಪ್ರಶ್ನೆಗೆ ಹಿಂದೂ ಮಹಿಳೆಯರು ಮಾತ್ರ ಶವ ಹೊತ್ತುಕೊಂಡು ಹೋಗುವಾಗ ಹೆಗಲು ಕೊಡುತ್ತಾರೆ ಎಂಬುದಕ್ಕೆ ನೀಡಿದ ಉತ್ತರ ಶೇಕಡಾವಾರು ಈ ಕೆಳಗಿನ ಕೋಷ್ಟಕದಲ್ಲಿ ತಿಳಿಸಲಾಗಿದೆ.

ಕೋಷ್ಟಕ–೭

ಮಹಿಳೆ ಅಭಿಪ್ರಾಯ	ಆವೃತ್ತಿ ಸಂಖ್ಯೆ	ಶೇಕಡಾವಾರು
ಹಾದು	೨೦	೩೩.೩೩
ಇಲ್ಲ	೪೦	೬೬.೬೬
ಒಟ್ಟು	೬೦	೯೯.೯೯(೧೦೦)

ಈ ಕೋಷ್ಟಕದ ಪ್ರಕಾರ ಮಹಿಳೆಯರು ಶವ ಹೊರುವ ಪದ್ಧತಿಯಲ್ಲಿ ಪಾಲಗೊಳ್ಳುವುದು ಶೇಕಡಾ ೩೩.೩೩ರಷ್ಟು ಕಂಡುಬರುತ್ತದೆ. ಮುಸ್ಲಿಂ, ಕ್ರಿಶ್ಚಿಯನ್ ಸಿದ್ದಿ ಮಹಿಳೆಯರು ಶೇಕಡಾ ೬೬.೬೬ರಷ್ಟು. ಶವ ಹೊರುವ ಸಂಪ್ರದಾಯದಲ್ಲಿ ಪಾಲ್ಗೊಳ್ಳುವುದಿಲ್ಲ. ಕ್ರಿಶ್ಚಿಯನ್ ಸಿದ್ದಿಗಳು ಹನ್ನೊಂದು ದಿನದವರೆಗೆ ಸೂತಕವನ್ನಾಚರಿಸಿ ಹನ್ನೆರಡನೆಯ ದಿನಕ್ಕೆ ಸತ್ತವರ 'ದೀಸ' ಮಾಡುತ್ತಾರೆ. ಅಂದು ಸತ್ತವರಿಗೆ ಇಷ್ಟವಾದ ಅಡುಗೆಯನ್ನು ಮಾಡುವರು. ತಿಂಗಳಿಗೆ, ಮೂರು ತಿಂಗಳಿಗೆ ಹಾಗೂ ವರ್ಷಕ್ಕೆ ಸತ್ತವರ ಹೆಸರಿನಲ್ಲಿ 'ದೀಸ' ಮಾಡಿ ಮಾಂಸದಡಿಗೆಯನ್ನು ಮಾಡಿ ನೆಂಟರಿಷ್ಟರನ್ನು ಕರೆದು ಊಣಬಡಿಸುವರು. ನಂತರ ಪ್ರತಿವರ್ಷ ಕಾಯಿ ಪೂಜೆ ಮಾಡುತ್ತಾರೆ. ಸಿದ್ದಿಗಳಲ್ಲಿ ಗಂಡುಮಕ್ಕಳಿಲ್ಲದಾಗ ಹೆಣ್ಣುಮಕ್ಕಳಿಗೆ ಶವಕ್ಕೆ ಬೆಂಕಿ ಇಡಲು ಅವಕಾಶವಿಲ್ಲ. ಏಕೆಂದರೆ ಇವರಲ್ಲಿಯೂ ಸಹ ಸ್ವರ್ಗ ನರಕದ ಪರಿಕಲ್ಪನೆಗಳಿವೆ. ಹೆಣ್ಣಿನಿಂದ ಮೋಕ್ಷ ದೊರೆಯಲಾರದು ಎಂಬ ಕಲ್ಪನೆಗಳು ಅವರನ್ನು ಕಾಡಿರಬೇಕು. ಹೀಗಾಗಿ ಹೆಣ್ಣಿಗೆ ಬೆಂಕಿ ಇಡುವ ಹಕ್ಕನ್ನು ಕಿತ್ತುಕೊಂಡಿದ್ದಾರೆ. ತಂದೆ–ತಾಯಿ ಎಷ್ಟೇ ಪ್ರೀತಿ ಮಾಡಲಿ "ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ" ಎಂಬಂತೆ ಅವಳಿಗೆ ತಂದೆ–ತಾಯಿಯ ಶವಕ್ಕೆ ಬೆಂಕಿ ಇಡಲು ಅವಕಾಶ ಕೊಡುವುದಿಲ್ಲ. ಸ್ವತಂತ್ರತೆ, ಸಮಾನತೆ ಎಂದು ಮಾತನಾಡುವಂತಹ ನಮ್ಮ ದೇಶದಲ್ಲಿ ಮಹಿಳೆಯರಿಗೆ ಮೊದಲು ಕುಟುಂಬದಲ್ಲಿಯೇ ಸಮಾನತೆಯನ್ನು ನೀಡಿಲ್ಲ.

ಮೊದಲು ಸಮಾನತೆ ಬರಬೇಕಾಗಿದ್ದು ಕುಟುಂಬದಲ್ಲಿ ಅಂದಾಗ ಮಾತ್ರ ಸಮಾನತೆ ಸಾಧಿಸಲು ಸಾಧ್ಯವಾಗಬಹುದು. ಎಲ್ಲಾ ಸಂಪ್ರದಾಯಿಕ ವಲಯಗಳಲ್ಲಿ ಅಥವಾ ಇತರ ಕ್ಷೇತ್ರಗಳಾಗಲಿ, ಗಂಡಿಗೆಷ್ಟು ಹಕ್ಕು, ಅಧಿಕಾರವಿರುತ್ತದೆಯೇ ಅಷ್ಟೇ ಅಧಿಕಾರ ಮಹಿಳೆಯರಿಗೂ ಬೇಕಾಗಿದೆ. ಮತ್ತು ಅವಶ್ಯಕವಾಗಿದೆ.

೩.೯. ಕುಟುಂಬ:

ಸಾಮಾಜಿಕ ವ್ಯವಸ್ಥೆಯ ಒಂದು ಮೂಲ ಘಟಕವೇ ಕುಟುಂಬವಾಗಿದೆ. ಇದರಲ್ಲಿ ಸ್ತ್ರೀ–ಪುರುಷರು ಮಕ್ಕಳು ಸೇರಿ ಪ್ರೀತಿ, ವಿಶ್ವಾಸ, ನಂಬಿಕೆ ಹಾಗೂ ಕರ್ತವ್ಯಗಳ ಬಂಧನದಲ್ಲಿ ಬದುಕುತ್ತಾರೆ. ಇದು ತನ್ನ ಸದಸ್ಯರಿಗೆ ಆಹಾರ ಆಶ್ರಯ ಲೈಂಗಿಕ ಜೀವನಗಳಂತಹ ಮೂಲಭೂತ ಅಗತ್ಯಗಳೊಂದಿಗೆ ಏಕತೆಯ, ಒಗ್ಗಟ್ಟಿನ ಭಾವನೆಗಳನ್ನು ಒದಗಿಸುತ್ತದೆ. ಕುಟುಂಬವೇ ವ್ಯಕ್ತಿಯ ಬಾಳಿನ ಮೊದಲ ಕಲಿಕಾ ಕೇಂದ್ರ ಅಥವಾ ಪಾಠಶಾಲೆ, ಸಮಾಜದಲ್ಲಿ ವ್ಯಕ್ತಿ ಹೇಗೆ ಬದುಕಬೇಕು ಎಂಬುದರ ಬಗ್ಗೆ ತಿಳುವಳಿಕೆ ಹಾಗೂ ತರಬೇತಿಯನ್ನು ಕೊಡುತ್ತದೆ.

ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ಮಹಿಳೆಗೆ ಸಾಮಾನ್ಯವಾಗಿ ಎರಡು ಕುಟುಂಬಗಳ ನೆಲೆಯಿರುತ್ತದೆ. ಹುಟ್ಟಿದ ಕುಟುಂಬದ ಆಯ್ಕೆ ಮಹಿಳೆಯರಿಗೆ ಯಾರಿಗೂ ಸಾಧ್ಯವಿಲ್ಲ. ಹುಟ್ಟಿನಿಂದ ಮೊದಲ ಕುಟುಂಬ ನಿರ್ಧರಿತವಾದರೆ ಮದುವೆಯಿಂದ ಎರಡನೆ ಕುಟುಂಬ ಮೂಡಿ ಬರುತ್ತದೆ. ನಮ್ಮ ಪಿತೃ ಪ್ರಧಾನ ಕುಟುಂಬ ವ್ಯವಸ್ಥೆಯಿರುವುದರಿಂದ ಗಂಡನ ಮನೆಯೇ ಹೆಣ್ಣಿನ ಕೊನೆಯ ಮನೆಯಾಗಿದೆ. ಸಿದ್ದಿ ಸಮುದಾಯದಲ್ಲಿಯೂ ಕೂಡ ಪಿತೃ ಪ್ರಧಾನ ಕುಟುಂಬ ವ್ಯವಸ್ಥೆ ಇದೆ. ಕುಟುಂಬದ ಯಜಮಾನ ಪುರುಷನಾಗಿರುತ್ತಾನೆ. ಕುಟುಂಬದ ಎಲ್ಲಾ ಜವಾಬ್ದಾರಿ ಪುರುಷನೆ ತೆಗೆದುಕೊಳ್ಳುತ್ತಾನೆ. ಆದರೆ ನಾಮ ಮಾತ್ರ ಅಧಿಕಾರ ಸ್ವಲ್ಪ ಮಟ್ಟಿಗೆ ಮಹಿಳೆಯರಿಗೆ ಒದಗಿಸಿದ್ದಾರೆ. **ಕುಟುಂಬದ ಸಂಪೂರ್ಣ ಜವಾಬ್ದಾರಿ ಯಾರ ಮೇಲೆ ಇದೆ?** ಎಂದು ಕೇಳಿದಾಗ ಮಹಿಳೆಯರು ನೀಡಿದ ಉತ್ತರ ಈ ಕೆಳಗಿನ ಕೋಷ್ಟಕದ ಮೂಲಕ ತಿಳಿದುಬರುತ್ತದೆ.

ಕೋಷ್ಟಕ – ೮

ಅಭಿಪ್ರಾಯ	ಮಹಿಳೆಯ ಸಂಖ್ಯೆ	ಶೇಕಡಾವಾರು
ನಿಮ್ಮ ಮೇಲೆ	೨	೧.೬೬
ಗಂಡನ ಮೇಲೆ	೮	೧೩.೩೩
ಇಬ್ಬರ ಮೇಲೆ	೫೦	೮೩.೩೩
ಒಟ್ಟು	೬೦	೯೯.೯೯(೧೦೦)

ಅಧ್ಯಯನಕ್ಕೆ ಒಳಪಡಿಸಿದ ೬೦ ಜನ ಮಹಿಳೆಯರಲ್ಲಿ ಶೇಕಡಾ ೧.೬೬ರಷ್ಟು ಮಹಿಳೆಯರ ಮೇಲೆ ಜವಾಬ್ದಾರಿ ಇದೆ. ಇಲ್ಲಿ ಗಂಡನು ಯಾವುದೇ ತೊಂದರೆ ಅಥವಾ ಅಂಗವಿಕಲತೆ ಮುಂತಾದವುಗಳಿಗೆ ತುತ್ತಾಗಿದ್ದರೆ, ಮಾತ್ರ ಮಹಿಳೆಯರು ನಿಭಾಯಿಸುತ್ತಾರೆ. ೧೩.೩೩ರಷ್ಟು ಕುಟುಂಬಗಳು ಪುರುಷರ ಮೇಲೆ ಅವಲಂಬನೆಯಾಗಿದೆ. ಅಂದರೆ ಮಹಿಳೆಯರು ಹೊರಗೆ ದುಡಿಯಲು ಹೋಗುವುದಿಲ್ಲ. ಮನೆಕೆಲಸದ ಜೊತೆಗೆ ಮಕ್ಕಳ ಲಾಲನೆ – ಪಾಲನೆ ಮಾಡಿಕೊಂಡು ಮನೆಯಲ್ಲಿ ಇರುವರು. ಶೇಕಡಾ ೮೩.೩೩ ರಷ್ಟು ಕುಟುಂಬಗಳು ಸ್ತ್ರೀ–ಪುರುಷರ ಇಬ್ಬರ ಮೇಲೆ ಜವಾಬ್ದಾರಿ ಇದೆ. ಅಂದರೆ ಕೂಲಿ ಕೆಲಸದ ಮೇಲೆ ಅವಲಂಬನೆಯಾಗಿದ್ದ ನಿರ್ವಹಣೆ ಮಾಡಬೇಕಾಗುತ್ತದೆ. ಆದ್ದರಿಂದ ಇಬ್ಬರ ಮೇಲೆ ಅಷ್ಟೇ ಜವಾಬ್ದಾರಿ ಇರುವುದು. ಆದರೆ ಕುಟುಂಬದಲ್ಲಿ ಮಹಿಳೆ ಮತ್ತು ಪುರುಷರ ಮೇಲೆ ಅಷ್ಟೆ ಜವಾಬ್ದಾರಿ ಇದ್ದರೂ ಪುರಷನೆ ಕುಟುಂಬದ ಯಜಮಾನನಾಗಿ ಕರೆಸಿಕೊಳ್ಳುವುದು. ಕುಟುಂಬದ ನಿರ್ವಹಣೆಗೆ ಅಗತ್ಯವಾದ ಸಂಪನ್ಮೂಲ ಕ್ರೂಢೀಕರಿಸುವ ವ್ಯಕ್ತಿ ಆ ಮನೆಯ ಹೆಣ್ಣಾಗಿದ್ದರೂ ಮನೆಯ ಯಜಮಾನನೆಂಬ ಅಧಿಕಾರದ ಸ್ಥಾನ ಪುರುಷನದಾಗಿರುತ್ತದೆ. ಸಂಪನ್ಮೂಲ ಸಂಗ್ರಹದಲ್ಲಿ ಅವಳ ಪಾಲಿದ್ದರೂ ಅವಳಿಗೆ ವ್ಯಯ ಮಾಡುವ ಯಾವುದೇ ಅಧಿಕಾರವಿಲ್ಲ. ಹೆಣ್ಣಿಗೆ ನೀಡುವ ಶಿಕ್ಷಣವನ್ನು ಅವಳ ಮದುವೆಯನ್ನು ನಿರ್ಧರಿಸುವನು ಪುರುಷನೇ ಆಗಿರುತ್ತಾನೆ. ಹೀಗಾಗಿ ವಿವಾಹದ ವಿಷಯದಲ್ಲಿ ಗಂಡಿನ ಅಭಿಪ್ರಾಯ ಕೇಳುವಂತೆ ಹೆಣ್ಣಿಗೆ ಕೇಳುವುದಿಲ್ಲ. ಪುರುಷ ಪ್ರಧಾನ ಸಮಾಜದಲ್ಲಿ ಬದುಕುತ್ತಿರುವ ಹೆಣ್ಣಿಗೆ ತನ್ನ ಪ್ರತಿಯೊಂದು ಆಸೆಆಕಾಂಕ್ಷೆಗಳಿಗೆ ಸ್ವಾತಂತ್ರ್ಯತೆಯಿಲ್ಲದೇ ಬಾಳಿನಲ್ಲಿ ಮರಕುತ್ತಿದ್ದಾಳೆ.

ಕುಟುಂಬದ ಮೂಲಕ ಸಾಮಾಜಿಕರಣ ವ್ಯವಸ್ಥೆಯು ಮಹಿಳೆಯನ್ನು ನಿಯಂತ್ರಿಸುತ್ತದೆ. ಕುಟುಂಬದಲ್ಲಿ ಮಹಿಳೆಯರು ಹೇಗೆ ಇರಬೇಕು ಎಂದರೆ ಒಳ್ಳೆಯ ತಾಯಿಯಾಗಿ, ಹೆಂಡತಿ, ಮಗಳು, ಗೆಳತಿ, ಅತ್ತೆ, ಸೊಸೆ, ಸೇವಕಿ ಮುಂತಾದ ಗುಣಗಳನ್ನು ಹೊಂದಿದವಳಾಗಿರಬೇಕು. ಅಂದಾಗ ಮಾತ್ರ ಕುಟುಂಬ ವ್ಯವಸ್ಥೆ ಸುವ್ಯವಸ್ಥಿತವಾಗಿ ನಡೆಯುತ್ತದೆ ಎಂದು ಪುರುಷ ಪ್ರಧಾನ ಸಮಾಜ ಬಯಸುತ್ತದೆ.

"ಕಾರ್ಯೇಷು ದಾಸಿ, ಕರುಣೇಷು ಮಂತ್ರಿ
ಬೋಜ್ಯೋಷು ಮಾತಾ, ಶಯನೇಷ ವೇಶ್ಯಾ
ರೂಪೇಷು ಲಕ್ಷ್ಮೀ, ಕ್ಷಮೆಯಾಧರಿತ್ರಿ
ಷಡ್ಗುಣಯುಕ್ತಾ ಕುಲ ಮುದ್ದರಿತ್ರಿ"

ಎಂದು ಹೆಣ್ಣಿನಿಂದ ಈ ಮೇಲಿನ ನಿರೀಕ್ಷೆ ಇಟ್ಟುಕೊಳ್ಳುತ್ತಾರೆ. ಇದಕ್ಕೆ ಅನುಗುಣವಾಗಿ

ಪುರುಷರು ನಡೆದುಕೊಳ್ಳಲಿ, ಬಿಡಲಿ, ಆದರೆ ಸ್ತ್ರೀ ಮಾತ್ರ ಹೀಗೆ ಇರಬೇಕೆಂಬ ಈ ಶ್ಲೋಕ ಹೆಣ್ಣಿನ ಅಧೀನ ನೆಲೆಗೆ ಸಾಕ್ಷಿಯಾಗಿದೆ.

ಕುಟುಂಬವು ಸಮಾಜದ ಅತ್ಯಂತ ಚಿಕ್ಕ ಹಾಗೂ ಪ್ರಮುಖ ಘಟಕವಾಗಿದೆ. ಸಿದ್ದಿ ಸಮುದಾಯದಲ್ಲಿ ಅವಿಭಕ್ತ ಕುಟುಂಬಗಳಿಗಿಂತಲೂ ವಿಭಕ್ತ ಕುಟುಂಬಗಳೆ ಹೆಚ್ಚಾಗಿ ಕಂಡುಬರುತ್ತವೆ. ಈ ಕುಟುಂಬ ವ್ಯವಸ್ಥೆ ಯಾವುದೆ ಆಗಿರಲಿ ಅದು ಅವಿಭಕ್ತ ಅಥವಾ ವಿಭಕ್ತವಾದರೂ ಕುಟುಂಬ ನಿರ್ವಹಣೆಯ ಪ್ರಮುಖ ಕರ್ತವ್ಯ ಅಡುಗೆ ಮಾಡುವುದು, ಮಕ್ಕಳ ಲಾಲನೆ-ಪಾಲನೆ ಪೋಷಣೆ, ಗೃಹ ಕೆಲಸ ಇತ್ಯಾದಿಗಳನ್ನು ಮಹಿಳೆಯರೇ ಮಾಡಬೇಕು ಎಂಬಂತೆ ಮಹಿಳೆಯರ ಮೇಲೆ ಹೇರಲಾಗಿದೆ.

ಕುಟುಂಬದಲ್ಲಿ ಮಕ್ಕಳ ಮದುವೆ, ಶಿಕ್ಷಣ, ಆಸ್ತಿ ಕೊಂಡುಕೊಳ್ಳುವಿಕೆ ಮುಂತಾದವುಗಳಲ್ಲಿ ಸಿದ್ದಿ ಮಹಿಳೆಯರು ನಿರ್ಣಯಕವಾದ ಪಾತ್ರವನ್ನು ವಹಿಸುವರಾಗಿರುವರು. ಆದರೆ ಇದು ಎಷ್ಟರ ಮಟ್ಟಿಗೆ ನಿಜವಾಗಿದೆ ಎಂಬುದನ್ನು ಸೂಕ್ಷ್ಮವಾಗಿ ಗಮನಿಸಿದರೆ ಅದು ಕೇವಲ ನಾಮ ಮಾತ್ರ ಅಧಿಕಾರವಾಗಿರುತ್ತದೆ. ನಾನು ಕೈಗೊಂಡ ಕ್ಷೇತ್ರ ಕಾರ್ಯದ ಕುಟುಂಬದಲ್ಲಿ ಮಕ್ಕಳ ಶಿಕ್ಷಣ, ಮದುವೆ ಮುಂತಾದ ವಿಷಯಗಳಲ್ಲಿ ಯಾರು ನಿರ್ಣಯ ತೆಗೆದುಕೊಳ್ಳುತ್ತಾರೆ? ಎಂದು ಕೇಳಿದಾಗ ಬಂದ ಉತ್ತರ ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

ಕೋಷ್ಟಕ - ೯

ನಿರ್ಣಯ	ಮಹಿಳೆಯರ ಸಂಖ್ಯೆ	ಶೇಕಡಾ ಪ್ರಮಾಣ
ಹೆಂಡತಿ	೧	೧.೬೬
ಗಂಡ, ಹೆಂಡತಿ (ಹಿರಿಯರ)	೫೯	೯೮.೩೩
ಒಟ್ಟು	೬೦	೯೯.೯೯(೧೦೦)

ಅಧ್ಯಯನಕ್ಕೆ ೬೦ ಜನ ಮಹಿಳೆಯರನ್ನು ಒಳಪಡಿಸಿದಾಗ ಕೇವಲ ೧.೬೬ ಪ್ರತಿಶತದಷ್ಟು ಮಹಿಳೆಯರು ಮಾತ್ರ ನಿರ್ಣಯ ತೆಗೆದುಕೊಳ್ಳುತ್ತಾರೆ. ಆದರೆ ಗಂಡ-ಹೆಂಡತಿ(ಹಿರಿಯರು) ಸೇರಿ ೯೮.೩೩ ಪ್ರತಿಶತದಷ್ಟು ನಿರ್ಣಯ ತೆಗೆದುಕೊಳ್ಳುವರು. ಉದಾಹರಣೆಗೆ ಹೆಣ್ಣು ಮಕ್ಕಳ ಮದುವೆ ಮಾಡಬೇಕಾದರೆ ಪುರುಷರು ಒಂದು ವೇಳೆ ಬೇರೆ ಊರಿಗೆ ಹೋದಾಗ ಅವರ ಮಕ್ಕಳ ಬಗ್ಗೆ ಕೇಳಿದಾಗ ಆಗ ಅವರಲ್ಲಿ ಒಪ್ಪಿಗೆಯನ್ನು ನೀಡಿ ಬಂದ ಮೇಲೆ ಹೆಂಡತಿಯನ್ನು ಕೇಳುತ್ತಾರೆ. ಇದಕ್ಕೆ ನಾವು ಎಷ್ಟರ ಮಟ್ಟಿಗೆ ಮಹಿಳೆಯರಿಗೆ ಸ್ವತಂತ್ರ್ಯತೆ ಇದೆ ಎಂದು ತಿಳಿಯಬೇಕು.

ಈ ಸಿದ್ದಿ ಸಮುದಾಯದಲ್ಲಿ ಹಿಂದೂ ಸಿದ್ದಿ ಮಹಿಳೆಯರಿಗಿಂತ ಕ್ರಿಶ್ಚಿಯನ್ ಸಿದ್ದಿ ಮಹಿಳೆಯರು ಕುಟುಂಬದಲ್ಲಿ ಉತ್ತಮವಾದ ಸ್ಥಾನವನ್ನು ಹೊಂದಿರುವರು. ಆದರೆ ಮುಸ್ಲಿಂ ಸಿದ್ದಿ ಮಹಿಳೆಯರಿಗೆ ಹಿಂದೂ-ಕ್ರಿಶ್ಚಿಯನ್ ಮಹಿಳೆಯರನ್ನು ಹೋಲಿಸಿದಾಗ ಇವರಿಗಿದಷ್ಟು ಸ್ವತಂತ್ರತೆ ಮುಸ್ಲಿಂ ಸಿದ್ದಿ ಮಹಿಳೆಯರು ಹೊಂದಿಲ್ಲ. ಮಹಿಳೆಯರು ಗಂಡನ ನಿರ್ಣಯದಂತೆ ನಡೆಯಬೇಕು. ಮುಸ್ಲಿಂ ಸಿದ್ದಿ ಮಹಿಳೆಯರು ಮಸೀದಿಗಳಲ್ಲಿ ಹೋಗಿ ಪ್ರಾರ್ಥನೆ ಸಲ್ಲಿಸುವಂತಿಲ್ಲ. ಮನೆಯಲ್ಲಿಯೇ ನಮಾಜ ಮಾಡುವರು. ಆದರೆ ಹಿಂದೂ ಕ್ರಿಶ್ಚಿಯನ್ ಸಿದ್ದಿ ಮಹಿಳೆಯರು ಗುಡಿ ಮತ್ತು ಚರ್ಚುಗಳಲ್ಲಿ ಪ್ರಾರ್ಥನೆಯನ್ನು ಸಲ್ಲಿಸಲು ಯಾವುದೇ ಅಡ್ಡಿಗಳಿಲ್ಲ. ಕ್ರಿಶ್ಚಿಯನ್ ಮತ್ತು ಹಿಂದೂ ಸಿದ್ದಿ ಮಹಿಳೆಯರು ಬೇರೆ ಸಮುದಾಯದ ಗಂಡಸರು ಬಂದಾಗ ಹೊರಗೆ ಬಂದು ಮಾತನಾಡುವಷ್ಟು ಮುಸ್ಲಿಂ ಸಿದ್ದಿ ಮಹಿಳೆಯರು ಮಾತನಾಡುವುದಿಲ್ಲ. ಮುಸ್ಲಿಂ ಸಿದ್ದಿ ಮಹಿಳೆಯರು ಮುಸ್ಲಿಂ ಧರ್ಮಕ್ಕೆ ಅನುಗುಣವಾಗಿ ನಡೆಯುವರು. ಇಲ್ಲಿ ಇವರು ಮುಸ್ಲಿಂ ಧರ್ಮವನ್ನು ಅನುಸರಿಸುವುದರಿಂದ ಮುಸ್ಲಿಂ ಧರ್ಮದ ಮೂಲ ಮಹಿಳೆಯರು ಕುಟುಂಬದಲ್ಲಿ ಹೇಗೆ ಇರುವರೋ ಅದೇ ರೀತಿಯಾಗಿ ಸಿದ್ದಿ ಸಮುದಾಯದ ಮುಸ್ಲಿಂ ಮಹಿಳೆಯರು ಕುಟುಂಬದಲ್ಲಿ ಇರುವರು. ಮುಸ್ಲಿಂ ಸಿದ್ದಿ ಮಹಿಳೆಯರು ಮಾರುಕಟ್ಟೆಗೆ ಅಥವಾ ಇತರೆ ಕಾರ್ಯಗಳಿಗೆ ಹೊರಗೆ ಹೋಗಬೇಕಾದರೆ (ಶ್ರೀಮಂತರು) ಬುರಕಾ ಧರಿಸುತ್ತಾರೆ. ಸಿದ್ದಿ ಸಮುದಾಯದ ಮಹಿಳೆಯರು ಬೇರೆ ಊರಿಗೆ ಹೋಗಬೇಕಾದರೆ ಗಂಡನ ಒಪ್ಪಿಗೆಯನ್ನು ಮೊದಲು ಪಡೆಯಬೇಕಾಗುತ್ತದೆ. ಒಂದು ವೇಳೆ ಗಂಡ ಒಪ್ಪಿಗೆ ನೀಡದಿದ್ದರೆ ಹೋಗುವಂತಿಲ್ಲ.

ಒಟ್ಟಿನಲ್ಲಿ ಹೇಳುವುದಾದರೆ ಕುಟುಂಬ ಎಂಬ ವ್ಯವಸ್ಥೆ ಮಹಿಳೆಯರನ್ನು ನಾಲ್ಕು ಗೋಡೆಗಳ ನಡುವೆ ಬಂಧಿಸಿದೆ. ವರ್ತಮಾನದ ಸಂದರ್ಭದಲ್ಲಿ ಮಹಿಳೆ ಸ್ವಲ್ಪ ಮಟ್ಟಿಗೆ ಪ್ರಾಧಾನ್ಯತೆಯನ್ನು ನೀಡಿದೆ. ಆದರೂ ಕೆಲವೊಂದು ಸಮುದಾಯದಲ್ಲಿ ಮಹಿಳೆ ಬಂದಿಯಾಗಿಯೇ ಬದುಕನ್ನು ಸಾಗಿಸುತ್ತಿದ್ದಾಳೆ. ಇಲ್ಲಿ ಮಹಿಳೆಯ ವ್ಯಕ್ತಿತ್ವಕ್ಕೆ ಅವಳ ವೈಯಕ್ತಿಕ ಅಗತ್ಯಗಳಿಗೆ ಮಹತ್ವ ನೀಡುವುದಿಲ್ಲ. ಹೀಗಾಗಿ ಅವಳು ತನ್ನನ್ನು ತಾನೇ ಮರೆಯುವಂತಾಗಿದೆ.

ಅಡಿಟಿಪ್ಪಣಿಗಳು:

೧. ಡಾ. ಹಿ.ಚಿ.ಬೋರಲಿಂಗಯ್ಯ, ಸಿದ್ದಿಯರ ಸಂಸ್ಕೃತಿ, ಪುಟ ೧೫, ೧೯೯೩.

೨. ಡಾ. ಗಂಗಾಧರ ದೈವಜ್ಞ, ಬುಡಕಟ್ಟು ಸಮಾಜ ಹುಟ್ಟು ಸಾವಿನ ನಡುವೆ ಪುಟ ೨೮, ೨೦೦೦.

೩. ಡಾ. ಸೋಮಶೇಖರ ಇಮ್ರಾಪೂರ, ಜನಪದ ಸಾಹಿತ್ಯ ದರ್ಶನ, ಭಾಗ ೧೭, ಪುಟ ೬೫, ೧೯೯೩.

೪. ಭಾನುಮತಿ ವೈ.ಸಿ. ಮಹಿಳೆ–ಫಲವಂತಿಕೆ, ಮಹಿಳಾ ಅಧ್ಯಯನ ಸಂಚಿಕೆ ೩, ಸಂಪುಟ ೧, ಜನವರಿ ೨೦೦೦.

೫. ಡಾ. ಕವಿತಾ ರೈ, ವಿವಾಹ ಮತ್ತು ಕುಟುಂಬ, ಪುಟ ೧೯, ೨೦೦೭.

೬. ಡಾ. ಗಂಗಾಧರ ದೈವಜ್ಞ, ಬುಡಕಟ್ಟು ಸಮಾಜ ಹುಟ್ಟು ಸಾವಿನ ನಡುವೆ ಪುಟ ೫೫, ೨೦೦೦.

೭. ಎಚ್.ಜಿ.ಲಕ್ಕಪ್ಪಗೌಡ, ಕರ್ನಾಟಕ ಬುಡಕಟ್ಟು, ಸಂಪುಟ ೧, ಪುಟ ೮೯, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ೧೯೯೪.

೮. ಡಾ. ಎಂ. ಉಷಾ, ಮಹಿಳಾ ಚಳುವಳಿ ಮತ್ತು ಮಹಿಳಾ ವಿಷಯಗಳು, ಪುಟ ೯೮, ೨೦೦೪.

೯. ಡಾ. ಆರ್. ಇಂದಿರಾ, ಮಹಿಳೆ ಸಮಾಜ ಮತ್ತು ಸಂಸ್ಕೃತಿ, ಪುಟ ೪೪, ೨೦೦೨.

೧೦. ಮಹೇಂದ್ರಕುಮಾರ, ಗ್ರೀನ್ ಇಂಡಿಯಾ ಸಂಸ್ಥೆ, ಮೌಖಿಕವಾಗಿ ನೀಡಿದ ಮಾಹಿತಿಯಾಗಿದೆ.

೧೧. ಡಾ. ಆರ್. ಇಂದಿರಾ, ಮಹಿಳೆ ಸಮಾಜ ಮತ್ತು ಸಂಸ್ಕೃತಿ, ಪುಟ ೩೪, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೨.

೧೨. ಭಾನುಮತಿ ವೈ.ಸಿ. ಜನಪದ ಆಂತರ್ಯ, ಪುಟ ೨, ೨೦೦೩.

೧೩. ಡಾ. ಚಂದ್ರಮತಿ ಸೊಂದಾ, ಸ್ತ್ರೀವಾದಿ ವಿಮರ್ಶೆ, ಚಿಪ್ಪೊಡೆದ ಮೌನ, ಪುಟ ೧೩೩, ೨೦೦೪.

೧೪. ಡಾ. ಚಂದ್ರಮತಿ ಸೊಂದಾ, ಸ್ತ್ರೀವಾದಿ ವಿಮರ್ಶೆ, ಚಿಪ್ಪೊಡೆದ ಮೌನ, ಪುಟ ೧೪೨, ೨೦೦೪.

೧೫. ಡಾ. ಶೈಲಜಾ ಹಿರೇಮಠ, ಮಾತೃ ಪ್ರಧಾನ ಪರಿಕಲ್ಪನೆ, ಪುಟ ೧೯, ೨೦೦೪.

೧೬. ಡಾ. ಶೈಲಜಾ ಹಿರೇಮಠ, ಮಾತೃ ಪ್ರಧಾನ ಪರಿಕಲ್ಪನೆ, ಪುಟ ೨೦, ೨೦೦೪.

೧೭. ಪ್ರೊ. ಕೆ. ಬೈರಪ್ಪ, ಭಾರತದ ಸಮಾಜ ಪರಂಪರೆ ಮತ್ತು ಪರಿವರ್ತನೆ ಭಾಗ-೧, ಪುಟ ೨೦, ೨೦೦೬.

೧೮. ಡಾ. ಚಂದ್ರಮತಿ ಸೊಂದಾ, ಸ್ತ್ರೀವಾದಿ ವಿಮರ್ಶೆ, ಚಿಪ್ಪೊಡೆದ ಮೌನ, ಪುಟ ೪೨ ೨೦೦೪.

೧೯. ಡಾ. ಎಂ. ಉಷಾ, ಮಹಿಳಾ ಚಳುವಳಿ ಮತ್ತು ಮಹಿಳಾ ವಿಷಯಗಳು, ಪುಟ ೮೦, ೨೦೦೪.

೨೦. ಎನ್. ಆರ್. ನಾಯಕ, ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಜನಾಂಗ, ಪುಟ ೨೦, ೧೯೯೨.

೨೧. In search of an identity, Kiran Kamal Prasad, Page 3, 2005.

ಅಧ್ಯಾಯ : ನಾಲ್ಕು

ಸಿದ್ದಿ ಸಮುದಾಯದ ಮಹಿಳೆಯರ ಸಾಮಾಜಿಕ ಸ್ಥಿತಿ–ಗತಿ:

೪.೧. ಸಿದ್ದಿ ಸಮುದಾಯದ ಮಹಿಳೆಯರ ಸಾಮಾಜಿಕ ಸ್ಥಿತಿ–ಗತಿ

೪.೧.೧. ವಿವಾಹ ವಿಚ್ಛೇದನ.

೪.೧.೨. ಲಿಂಗ ತಾರತಮ್ಯ.

೪.೧.೩. ನ್ಯಾಯ ಪಂಚಾಯಿತಿ.

೪.೨. ರಾಜಕೀಯದಲ್ಲಿ ಸಿದ್ದಿ ಮಹಿಳೆಯರ ಪಾತ್ರ.

೪.೩. ಸಿದ್ದಿ ಸಮುದಾಯದ ಮಹಿಳೆಯರ ಶೈಕ್ಷಣಿಕ ಸ್ಥಿತಿಗತಿ

ಅಧ್ಯಾಯ : ನಾಲ್ಕು

ಸಿದ್ದಿ ಸಮುದಾಯದ ಮಹಿಳೆಯರ ಸಾಮಾಜಿಕ ಸ್ಥಿತಿ–ಗತಿ:

ಭಾರತದಲ್ಲಿ ಕಂಡು ಬರುವ ಎಲ್ಲಾ ಬುಡಕಟ್ಟು ಸಮುದಾಯವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಅಲ್ಲಿ ಸ್ತ್ರೀಯರ ಸ್ಥಾನಮಾನ ಮತ್ತು ಸ್ಥಿತಿಗತಿಗಳು ಪುರುಷರಿಗಿಂತ ಅತ್ಯಂತ ಕೆಳಮಟ್ಟದಲ್ಲಿರುವುದು ಕಂಡುಬರುತ್ತದೆ. ಹಲವಾರು ಮಹಿಳಾ ಚಿಂತನವಾದಿಗಳು ಮಹಿಳೆಯರ ಹಿತಾಶಕ್ತಿಗಳನ್ನು ಕುರಿತಂತೆ 'ಸ್ಥಿತಿಗತಿಗಳು' ಮತ್ತು 'ಸ್ಥಾನಮಾನ'ಗಳ ನಡುವೆ ಭಿನ್ನತೆಯನ್ನು ಗುರುತಿಸಿದ್ದಾರೆ. 'ಮೊಲಿನಿಕ್ಸ್' ಎಂಬ ಮಹಿಳಾವಾದಿಯು ಮಹಿಳೆಯರ ಸ್ಥಿತಿಗತಿಗಳಿಗೆ ಸಂಬಂಧಿಸಿದ ಸಂಗತಿಗಳನ್ನು 'ದೈನಂದಿನ' ಹಿತಾಸಕ್ತಿಗಳೆಂದು ಮತ್ತು ಸ್ಥಾನಮಾನಗಳಿಗೆ ಸಂಬಂಧಿಸಿದ ಸಂಗತಿಗಳನ್ನು 'ಸಂಘರ್ಷಣಾತ್ಮಕ' ಹಿತಾಸಕ್ತಿಗಳೆಂದು ಎರಡು ಗುಂಪುಗಳಾಗಿ ವರ್ಗಿಕರಿಸುತ್ತಾರೆ.

ಈ ಮಹಿಳಾ ಶೋಷಣೆ ಅನ್ನುವ ವ್ಯವಸ್ಥೆ ಇತ್ತೀಚಿನದಲ್ಲ. ಪ್ರಾಚೀನ ವೇದಕಾಲದಿಂದ ಹಿಡಿದು ಇಂದಿನ ಇಪ್ಪತ್ತನೇ ಶತಮಾನದವರೆಗೆ ಬೇರೂರಿದೆ. ಮುಂದುವರೆದ ಜನಾಂಗದ ಸ್ತ್ರೀಯರಿಂದ ಹಿಡಿದು ಅತ್ಯಂತ ಕೆಳ ಸಮುದಾಯದ ಸ್ತ್ರೀಯರು ಸಹ ಅನೇಕ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿರುವರು. ಎ.ಎಲ್. ಆಲ್ಟೇಕರವರು ಅಭಿಪ್ರಾಯ ಪಟ್ಟಿರುವಂತೆ "ತಂದೆ ತಾಯಿಯರ ಮಮತೆಯಲ್ಲಿ ಬೆಳೆದಿದ್ದರೂ, ಪತಿಯಿಂದ ಪ್ರೀತಿಸಲ್ಪಟ್ಟರೂ ಮತ್ತು ಅವಳ ಮಕ್ಕಳಿಂದ ಗೌರವಿಸಲ್ಪಟ್ಟಿದ್ದರೂ ಸಹ ಸುಮಾರು ಕ್ರಿ.ಪೂ. ಇಪ್ಪತ್ತರಿಂದ ೧೮೦೦ರವರೆಗೆ ಸುಮಾರು ಎರಡು ಸಾವಿರ ವರ್ಷಗಳ ಕಾಲ ಭಾರತೀಯ ಸ್ತ್ರೀಯರ ಸ್ಥಾನಮಾನವು ನಿರಂತರವಾಗಿ ಅವನತಿಗೊಳ್ಳುತ್ತಲೇ ಹೋಯಿತು. ಸತಿಪದ್ಧತಿ ಆಚರಣೆಯ ಪುನರುಜ್ಜೀವನಗೊಳಿಸುವಿಕೆ, ಪುನರ್‌ವಿವಾಹದ ಮೇಲಿನ ನಿಷೇದ, ಪರದಾ ಪದ್ಧತಿಯ ವ್ಯಾಪಕತೆ ಮತ್ತು ಬಹುಪತ್ನಿತ್ವದ ಆಚರಣೆ ಇವು ಆಕೆಯ ಸ್ಥಾನಮಾನವನ್ನು ಮತ್ತುಷ್ಟು ಹಾಳು ಗೆಡಿವಿದವು.[೧] ಪ್ರಾಚೀನ ಕಾಲ ಮಧ್ಯಯುಗ ಮತ್ತು ಆಧುನಿಕ ಕಾಲದವರೆಗೆ ಮಹಿಳೆಯರ ಸ್ಥಿತಿಗತಿಗಳು ಅವರ ಸ್ಥಾನಮಾನಗಳು, ಹಿತಾಸಕ್ತಿ ಸಮಾಜದಲ್ಲಿ ಅವರ ಪಾತ್ರ ಹಾಗೂ ಹಕ್ಕುಗಳು ಮುಂತಾದ ವಿಷಯಗಳಲ್ಲಿ ಅನೇಕ ರೀತಿಯ ಕಟ್ಟುಪಾಡುಗಳನ್ನು ಸಮಾಜ ವಿಧಿಸಿದೆ. ಅಲ್ಲದೇ ಈ ಯುಗಗಳಲ್ಲಿ ಸ್ತ್ರೀಯರ ಸ್ಥಾನಮಾನಗಳು ಅನೇಕ ರೀತಿಯ ಏರುಪೇರುಗಳನ್ನು ಅನುಭವಿಸಿದೆ.

ಕುಟುಂಬ ಅಥವಾ ಸಮಾಜಕ್ಕೆ ಸ್ತ್ರೀಯ ಕೊಡುಗೆ ಅಪಾರ.ಕುಟುಂಬದ ಪ್ರತಿಯೊಂದು ಕೆಲಸ ಕಾರ್ಯಗಳನ್ನು ನಿಭಾಯಿಸಿ ಬದುಕನ್ನು ಕಟ್ಟುವ ಮನೋಕಾಂಕ್ಷೆವುಳ್ಳವಳು. ಬದುಕೆಂಬ ರಥದ ಚಕ್ರಗಳೇ 'ಈ ಸ್ತ್ರೀ-ಪುರುಷರು', ರಥಕ್ಕೆ ಚಕ್ರಗಳೆಷ್ಟು ಮುಖ್ಯವೊ ಅದರಂತೆ ಕುಟುಂಬ ಅಥವಾ ಸಮಾಜವನ್ನು ಉತ್ತಮ ಸ್ಥಿತಿಯಲ್ಲಿಡಲು ಸ್ತ್ರೀ-ಪುರುಷರು ಅಷ್ಟೇ ಮುಖ್ಯ. ಆದರೆ ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀಗೆ ನೀಡಿದ ಸ್ಥಾನಮಾನವೇ ಬೇರೆಯಾಗಿದೆ.

ಯಾವುದೇ ಸಮಾಜದಲ್ಲಿ ಸ್ತ್ರೀಯರಿಗಿರುವ ಸ್ಥಾನಮಾನದ ಆಧಾರದ ಮೇಲೆ ಸಮಾಜದ ಗುಣಮಟ್ಟವನ್ನು ಅಳೆಯಬಹುದಾಗಿರುತ್ತದೆ. ಎಲ್ಲಿ ಸ್ತ್ರೀಯರಿಗೆ ಉನ್ನತ ಸ್ಥಾನವಿರುತ್ತದೋ ಅಲ್ಲಿ ಅದರ ಗುಣಮಟ್ಟ ಉತ್ತಮವಾಗಿರುತ್ತದೆ. ಇಲ್ಲವಾದರೆ ಅದರ ಗುಣಮಟ್ಟವು ಅಧೋಗತಿಗೆ ಇಳಿದಿರುತ್ತದೆ. ಡಾ. ಮೀರಾದೇಸಾಯಿ ಅವರ ಅಭಿಪ್ರಾಯದಲ್ಲಿ "ಸಮಾಜವು ಸ್ತ್ರೀಯರಿಗೆ ನೀಡಿರುವ ಸ್ಥಾನಮಾನವು ಆ ಸಮಾಜದ ಸಾಂಸ್ಕೃತಿಕ ಮಟ್ಟದ ಸೂಚಿಯಾಗಿದೆ." ಪ್ರಸ್ತುತ ಸಂದರ್ಭದಲ್ಲಿ ಮಹಿಳೆ ಶೈಕ್ಷಣಿಕವಾಗಿ, ಸಾಮಾಜಿಕವಾಗಿ ರಾಜಕೀಯವಾಗಿ ಮತ್ತು ಆರ್ಥಿಕ ದೃಷ್ಟಿಯಿಂದ ಸ್ವಲ್ಪ ಮಟ್ಟಿಗೆ ಸಮಾನತೆಯ ಹತ್ತಿರ ಬಂದಿದ್ದಾಳೆ. ಆದರೂ ಸಮಾಜದ ಕೆಲವೊಂದು ಪುರುಷಶಾಹಿ ದರ್ಪದಿಂದ ಮಹಿಳೆಗೆ ಸಮಾಜದಲ್ಲಿ ಸೂಕ್ತ ಸ್ಥಾನಮಾನವನ್ನು ಪಡೆಯುವಲ್ಲಿ ವಿಫಲಳಾಗಿದ್ದಾಳೆ.

೪.೧. ಸಿದ್ದಿ ಮಹಿಳೆಯರ ಸಾಮಾಜಿಕ ಸ್ಥಿತಿಗತಿ.

ಪ್ರತಿಯೊಂದು ಸಮುದಾಯವು ತಮ್ಮ ಸಮಾಜದ ಸ್ತ್ರೀಯರಿಗೆ ಕೆಲವೊಂದು ನಿರ್ಬಂಧವನ್ನು ವಿಧಿಸಿರುವ ಅಂಶ ಗೋಚರಿಸುತ್ತವೆ. ಅದು ಸಾಮಾಜಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ, ಶೈಕ್ಷಣಿಕವಾಗಿ ಹೀಗೆ ಮುಂತಾದ ವಲಯದಲ್ಲಿ ಸಹಜವಾಗಿ ಕಾಣುತ್ತವೆ. ದೇಶ ಬಿಟ್ಟು ವಿದೇಶವನ್ನು ತಮ್ಮ ನಾಡನ್ನಾಗಿಸಿಕೊಂಡು ನೆಲೆಯೂರಿದ ಸಿದ್ದಿ ಸಮುದಾಯದ ಮಹಿಳೆಯರಿಗೆ ಇರುವ ಸಾಮಾಜಿಕ ಸ್ಥಿತಿಗತಿಯ ಬಗ್ಗೆ ತಿಳಿದುಕೊಳ್ಳಲು ಮೊದಲು ಅವರ ಪ್ರಾರಂಭದ ಹಂತದಿಂದಲೇ ನೋಡಬೇಕಾಗುತ್ತದೆ. ಗುಲಾಮರಾಗಿ ಭಾರತಕ್ಕೆ ವಲಸೆ ಬಂದ ಸಿದ್ದಿಯರ ಜೀವನ ಕ್ರಮದ ಬಗ್ಗೆ ಅವರು ಬರಲಿಕ್ಕೆ ಕಾರಣಗಳೇನು? ಎಂಬುದರ ಬಗ್ಗೆ ಎರಡನೇ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಆದರೆ ಭಾರತಕ್ಕೆ ಗುಲಾಮರಾಗಿ ಬಂದ ಸಿದ್ದಿ ಮಹಿಳೆಯರ ಸ್ಥಾನಮಾನಗಳ ರಕ್ಷಣೆ, ಭದ್ರತೆ ಮತ್ತು ಅವರ ಸಂಘರ್ಷಣಾತ್ಮಕ ಹಿತಾಸಕ್ತಿಗಳ ಬಗ್ಗೆ ತಿಳಿಯುವುದು ಅತಿ ಮುಖ್ಯ. ಗುಲಾಮರ "ನೆನುಪುಗಳೇ ತಮ್ಮ ಜೀವನದ ಏಕೈಕ ಆಸ್ತಿಯನ್ನಾಗಿ ಪಡೆದ ಕಪ್ಪು ಜನಾಂಗ: ಹೋರಾಟ, ಮತ್ತು ಹೋರಾಟವನ್ನೇ

ತಮ್ಮ ಇನ್ನೊಂದು ಚಿರ ಆಸ್ತಿಯಾಗಿ ಮಾಡಿಕೊಂಡವು. ಹದಿನೆಂಟನೆಯ ಶತಮಾನದಲ್ಲಿ ಅಸ್ತಿತ್ವಕ್ಕಾಗಿ ಶುರುವಾದ ಈ ಹೋರಾಟದಲ್ಲಿ ಬಿಡುಗಡೆ ಪಡೆದವರು ಕಪ್ಪು ಜನಾಂಗದ ಪುರುಷರು–ಮಕ್ಕಳು ಮಹಿಳೆಯರು" ಆದರೆ ಹೋರಾಟದಲ್ಲಿ ತಮ್ಮ ಅಸ್ಥಿತ್ವವನ್ನು ಮತ್ತು ಬದುಕಿಗಾಗಿ ಸಾರ್ವಜನಿಕವಾಗಿ ಹೋರಾಡುವಾಗಲೂ ಕಪ್ಪು ಜನಾಂಗವು ತಮ್ಮ ತಾಳ್ಮೆ, ವಿವೇಕ, ಮಾನವೀಯ, ಅನುಕಂಪ ಮತ್ತು ಸ್ಥೈರ್ಯಗಳನ್ನು ಕಳೆದುಕೊಳ್ಳದಿರುವುದು ಅವರ ಬಹುದೊಡ್ಡ ಗುಣವಾಗಿದೆ.

ಗುಲಾಮರಿಗೆ ಒಂದೇ ಕಡೆ ಕುಟುಂಬ ಕಟ್ಟಿಕೊಂಡು ಇರಲು ಅವಕಾಶಗಳಿರಲಿಲ್ಲ. ಅವರುಗಳು ವಿವಾಹವಾದರೆ ಅವರನ್ನು ಬೇರೆ ಬೇರೆಯನ್ನಾಗಿ ಮಾಡುತ್ತಿದ್ದರು. ಗಂಡನಾದವನು ಹೆಂಡತಿಯ ಮೇಲೆ ಮಕ್ಕಳ ಮೇಲೆ ಅಧಿಕಾರವನ್ನು ಹೊಂದಿರಲಿಲ್ಲ. ಒಂದು ವೇಳೆ ಮದುವೆಯಾಗಿ ಒಂದೇ ಕಡೆ ನೆಲೆಸಿದರೆ ನಗರಗಳಲ್ಲಿ ಇರುವ ಕಾರ್ಖಾನೆಗಳ ಕೆಲಸಕ್ಕೆ ಪುರುಷರಿಗೆ ಕಳಿಸಿ ಕುಟುಂಬದಿಂದ ದೂರ ಮಾಡುತ್ತಿದ್ದರು. ಆಗ ಮಹಿಳೆಯರೇ ತಮ್ಮ ಮಕ್ಕಳ ಜವಾಬ್ದಾರಿಯನ್ನು ಹೊಂದಿರುತ್ತಿದ್ದರು. "ತೋಟಗಳಲ್ಲಿ ಕೆಲಸ ಮಾಡುತ್ತಿದ್ದ ಗುಲಾಮರ ಹೆಂಗಸರು ಮತ್ತು ಒಡೆಯರ ನಡುವೆ ಲೈಂಗಿಕ ಸಂಬಂಧ ಸಾಧಾರಣ ವಿಷಯವಾಗಿತ್ತು. ಇಂತಹ ಸಂಬಂಧದಿಂದ ಹುಟ್ಟಿದ ಮಕ್ಕಳು ಸಮಾಜಕ್ಕೆ ಸವಾಲುಗಳನ್ನು ಒಡ್ಡುತ್ತಿದ್ದವು. ಈ ಮಕ್ಕಳನ್ನು ಒಡೆಯರ ಮಕ್ಕಳೆನ್ನಬೇಕೋ ಅಥವಾ ಕರಿಯರ ಮಕ್ಕಳೆನ್ನಬೇಕೋ ತಿಳಿಯದಾಗಿದೆ? ಈ ಮಕ್ಕಳು ಹೊಲದಲ್ಲಿ ಕರಿಯರಂತೆ ದುಡಿಯಬೇಕೇ ಅಥವಾ ಒಡೆಯರ ಮಕ್ಕಳಂತೆ ಸುಖ ಬೋಗಗಳನ್ನು ಅನುಭವಿಸಬೇಕೇ? ಎಂಬ ಪ್ರಶ್ನೆ ಸಾಮಾನ್ಯವಾಗಿ ಏಳುತ್ತಿರಬೇಕು. ಗುಲಾಮ ಮಹಿಳೆಯರಿಗೆ ಆಗ ದಕ್ಷಿಣ ಮಧ್ಯ ಅಮೇರಿಕಾದ ಸ್ಪಾನಿಷ್ ಮತ್ತು ಪೋರ್ಚುಗೀಸ ಕಾಲೋನಿಗಳಲ್ಲಿ ವರ್ಣ ಸಂಕರ ಹೆಚ್ಚಾಗಿದ್ದರಿಂದ ನಿಗ್ರೋ ಅಥವಾ ಯುರೋಪಿಯನ್ ರಕ್ತದ ಪ್ರಮಾಣವನ್ನು ಆಧರಿಸಿ ವಿಂಗಡಿಸಬೇಕಾಯಿತು. ಶ್ರೇಣೀಕೃತ ಸಮಾಜ ನಿರ್ಮಾಣವಾಗಿ ಯುರೋಪಿಯನ್‌ರಿಗೆ ಹುಟ್ಟಿದ ಮಕ್ಕಳಿಗೆ ಆದ್ಯತೆ ನೀಡಲಾಯಿತು. ಮತ್ತು ಉಳಿದ ಜನರನ್ನು ಗುರುತಿಸಲು ತಮ್ಮದೇ ಒಂದು ಕ್ರಮವನ್ನು ರೂಪಿಸಿಕೊಂಡರು. ಯುರೋಪಿಯನ್ನರು ಮತ್ತು ಇಂಡಿಯನ್‌ರ ಸಂಬಂಧದಿಂದ ಹುಟ್ಟಿದ ಮಕ್ಕಳಿಗೆ 'ಮೆಸ್ಟಿಹೋಮ' ಎಂದು ಕರೆಯುತ್ತಿದ್ದರು."[೩]

ಮಹಿಳೆಯರು ಒಡೆಯರ ಕುಟುಂಬಗಳಲ್ಲಿ ವಿಪರೀತವಾಗಿ ದುಡಿಯುತ್ತಿದ್ದರು. "ತೋಟದ ಕೆಲಸಕ್ಕಿಂತಲೂ ಮನೆಯ ಚಾಕರಿ ಸುಲಭವಾದುದೆಂಬ ಸಾಮಾನ್ಯವಾದ ಅಭಿಪ್ರಾಯವಿರುವುದು ನಿಜವಾದರೂ ಅದು ವಾಸ್ತವವಾಗಿರಲಿಲ್ಲ. ಮನೆಯಲ್ಲಿ ಕೂತ ತಮಗೆ ಅನಿಸಿದ್ದನ್ನು ಒಡೆಯ, ಒಡತಿಯರು ಮಾಡಲು ಹೇಳುತ್ತಿದ್ದರು. ಎಷ್ಟೋ ಬಾರಿ ಆ ಕೆಲಸಗಳಿಗೆ ಯಾವ

ಅರ್ಥವೇ ಇರುತ್ತಿರಲಿಲ್ಲ. ಬೆಳಿಗ್ಗೆ ಐದು ಗಂಟೆಗೆ ಪ್ರಾರಂಭವಾದ ಕೆಲಸ ರಾತ್ರಿ ಹತ್ತು ಗಂಟೆಯಾದರೂ ಮುಗಿಯುತ್ತಿರಲಿಲ್ಲ. ವಾರದಲ್ಲಿ ಕೆಲವು ದಿನಗಳಾದರೂ ಕೆಲಸ ರಾತ್ರಿ ಮಾಡಬೇಕಾಗಿತ್ತು."[9] ಗುಲಾಮರಾಗಿ ಮಹಿಳೆಯರು ಅನೇಕ ಕಷ್ಟಗಳನ್ನು ಅನುಭವಿಸಿದ್ದಾರೆ, ವರ್ತಮಾನದಲ್ಲಿ ಅಥವಾ ಪ್ರಸ್ತುತ ಸಂದರ್ಭದಲ್ಲಿ ಸಿದ್ದಿ ಮಹಿಳೆಯರು ಕೂಡ ಇತರೆ ಮಹಿಳೆಯರಂತೆ, ಲಿಂಗ ತಾರತಮ್ಯ, ವಿವಾಹ ವಿಚ್ಛೇದನೆ, ಕಡ್ಡಾಯ ವಿವಾಹ, ವಿಧವಾ ವಿವಾಹ, ಕುಟುಂಬದಲ್ಲಿ ಎರಡನೇ ದರ್ಜೆಯ ಸ್ಥಾನಮಾನ, ಮುಂತಾದವುಗಳನ್ನು ಕೂಡ ಸಿದ್ದಿ ಮಹಿಳೆಯರು ಎದುರಿಸುತ್ತಿದ್ದಾರೆ.

ಸಾಮಾನ್ಯವಾಗಿ ಬುಡಕಟ್ಟು ಸಮುದಾಯಗಳಲ್ಲಿ ಹಾಗೂ ಕೆಳಜಾತಿಗಳಲ್ಲಿ ಮಹಿಳೆಯರನ್ನು ದೇವರ ಹೆಸರಲ್ಲಿ ಬಿಡುವ ಮತ್ತು ವೇಶ್ಯಾವೃತ್ತಿಗೆ ತಳ್ಳುವ ಹೀನವಾದ ನಡತೆಯ ಬಗ್ಗೆ ಕೆಲವು ಅಧ್ಯಯನಗಳ ಮೂಲಕ ಈ ಅಂಶಗಳು ಗೋಚರಿಸಿರುತ್ತವೆ. ಈ ಮೇಲಿನ ವಿಚಾರಗಳು ಕೆಲವು ಕೆಳಜಾತಿಗಳಲ್ಲಿ ಮಾತ್ರ ಸೀಮಿತವಾಗಿರಲಿಲ್ಲ. ಉನ್ನತ ಜಾತಿಗಳಲ್ಲೂ ಸಹ ಮಹಿಳೆಯರನ್ನು ದೇವದಾಸಿ ಮತ್ತು ವೇಶ್ಯಾವೃತ್ತಿಗೆ ಬಿಡುವ ಸಂಪ್ರದಾಯ ಕಂಡುಬರುತ್ತವೆ. ವೈಜ್ಞಾನಿಕವಾಗಿ, ವೈಚಾರಿಕ ನೆಲೆಯಲ್ಲಿ ಅಧ್ಯಯನ ಮಾಡುವ ಪ್ರಸ್ತುತ ಸಂದರ್ಭದಲ್ಲೂ ಸಹ ಮಹಿಳೆಯರನ್ನು ದೇವದಾಸಿ ಹಾಗೂ ವೇಶ್ಯಾವೃತ್ತಿಗೆ ತಳ್ಳುವ ಅನಾಗರಿಕ ಪದ್ಧತಿ ಈಗಲೂ ಸಹ ಕೆಲವೊಂದು ಸಮುದಾಯದಲ್ಲಿ ಅಲ್ಪ ಸ್ವಲ್ಪ ಬೇರೂರಿದೆ. ಹೀಗಾಗಲಿಕ್ಕೆ ಮುಖ್ಯ ಕಾರಣ ಆ ಸಮುದಾಯದ ಜನರಿಗೆ ಅನಿವಾರ್ಯವಾದ ಕೆಲವೊಂದು ಒತ್ತಡಕ್ಕೆ ಒಳಗಾಗಿ ಈ ಪದ್ಧತಿ ಜಾರಿಯಲ್ಲಿರುವುದು ಸಾಮಾನ್ಯ. ಈ ಅನಿಷ್ಟ ಸಂಪ್ರದಾಯದಿಂದ ಸಿದ್ದಿ ಸಮುದಾಯವು ಸಹ ಅದಕ್ಕೆ ಹೊರತಾಗಿಲ್ಲ. ಇಲ್ಲಿಯೂ ಮಹಿಳೆಯರಿಗೆ ದೇವರ ಹೆಸರಿಗೆ ಬಿಡುವುದು ಅಥವಾ ಬಸವಿ ಬಿಡುವ ಒಂದು ಕೆಟ್ಟ ಆಚರಣೆ ಇದ್ದಿತ್ತು. (ಮಾಹಿತಿ ನೀಡಿದವರು : ಲಕ್ಷ್ಮೀದೇವಿ, ರಾಮನಗೂಳಿ, ಅಂಕೋಲಾ ತಾಲ್ಲೂಕು).

ಈ ದೇವದಾಸಿ ಪದ್ಧತಿಯು ಸಿದ್ದಿ ಸಮುದಾಯದಲ್ಲಿ ಒಂದು ವಿಶಿಷ್ಟ ಪ್ರಕಾರದಲ್ಲಿದೆ. ದೇವದಾಸಿಯಾಗುವ ಮಹಿಳೆಯು ಮೊದಲು ದೇವರಲ್ಲಿ ಹರಕೆ ಹೋರುತ್ತಾಳೆ. ನನಗೆ ಹನ್ನೆರಡು ಜನ ಮಕ್ಕಳಾದರೆ ಅವರಲ್ಲಿ ಒಬ್ಬ ಮಗಳನ್ನು ದೇವರ ಹೆಸರಿನಲ್ಲಿ ಬಸವಿ ಬಿಡುವೇನೆಂದು ಬೇಡುಕೊಳ್ಳುವರು. ದೇವದಾಸಿಯಾಗುವ ಮಹಿಳೆಯನ್ನು ಹೊಸ ಸೀರೆ, ಬಳೆ, ಹೂವುಗಳಿಂದ ಶೃಂಗರಿಸಿ ಮುತ್ತೈದೆ ಹೆಣ್ಣಾಗುವಂತೆ ದೇವರ ಹೆಸರಿನಲ್ಲಿ ತಾಳಿಕಟ್ಟಿ ಅವರಿಗೆ ಅಕ್ಷತೆಯನ್ನು ಹಾಕಿದ ನಂತರ ಅವಳು ದೇವರಿಗೆ ಮೀಸಲು ಎಂಬ ರೀತಿಯಲ್ಲಿ ಕಾಣುತ್ತಿದ್ದರು. ಆದರೆ ಪ್ರಸ್ತುತ ಸಂದರ್ಭದಲ್ಲಿ ಸಿದ್ದಿ ಸಮುದಾಯದ ಮಹಿಳೆಯರನ್ನು ದೇವದಾಸಿಯಾಗಿ ಬಿಡುವ ಪದ್ಧತಿ ಕಂಡುಬರಲಾರದು. ನಾಗರಿಕ ಸಮುದಾಯದ

ಪ್ರಭಾವದಿಂದ ಈ ಜನಾಂಗ ಪ್ರಜ್ಞಾರಾಗುತ್ತಿದ್ದಾರೆ. ಹೀಗಾಗಿ ಈ ಪದ್ಧತಿಯೂ ಸಂಪೂರ್ಣ ಕಣ್ಮರೆಯಾಗಿದ್ದ ದೇವದಾಸಿ ಪದ್ಧತಿ, ಬಸವಿ ಪದ್ಧತಿ ಎಂಬ ಹೆಸರಲ್ಲಿ ಆಚರಣೆಯಲ್ಲಿದ್ದು ವೇಶ್ಯಾವೃತ್ತಿಯನ್ನು ಹೋಲುತ್ತಿತ್ತು. ತನ್ನ ಮೂಲ ಉದ್ದೇಶವನ್ನು ಕಳೆದುಕೊಂಡು ಅಕ್ರಮ ವೇಶಾವೃತ್ತಿಗೆ ಅವಕಾಶ ಕಲ್ಪಿಸಿತು. ಮಹಿಳೆಯರನ್ನು ಲೈಂಗಿಕವಾಗಿ ಶೋಷಿಸಲಾರಂಭಿಸಿತು. ಇತ್ತೀಚಿಗೆ ಅಕ್ಷರಸ್ತರಾಗುತ್ತಿರುವ ಈ ಸಮುದಾಯದಲ್ಲಿ ಸಹಜವಾಗಿ ಇಂತಹ ಅವೈಜ್ಞಾನಿಕ ಪದ್ಧತಿಯಿಂದ ದೂರ ಉಳಿದು ಇದನ್ನು ನಿರಾಕರಿಸುತ್ತಾರೆ.

೪.೧.೧. ವಿವಾಹ ವಿಚ್ಛೇದನೆ:

ವಿವಾಹ ಎಂಬುದು ಒಂದು ಪವಿತ್ರ ಬಂಧನ ಎಂದು ನಂಬಿರುವ ನಮ್ಮ ಸಮಾಜ ಮಹಿಳೆಯರಿಗೆ ವಿವಾಹ ವಿಚ್ಛೇದನಕ್ಕೆ ಅವಕಾಶವನ್ನು ನೀಡುವುದಿಲ್ಲ. ಆದರೆ ಪುರುಷರಿಗೆ ಮಾತ್ರ ಅವಕಾಶವನ್ನು ಕಲ್ಪಿಸಿದೆ. ಈ ಸಾಮಾಜಿಕ ವ್ಯವಸ್ಥೆಯು ಮಹಿಳೆಯಾದವಳು ಗಂಡ ಮಾಡುವ ಎಲ್ಲಾ ಕೃತ್ಯಗಳನ್ನು ಸಹಿಸಿಕೊಂಡು ಅವನ ಜೊತೆಯಲ್ಲಿಯೇ ಇರಬೇಕು ಎಂದು ಹೇಳುತ್ತೇವೆ. "ಸ್ತ್ರೀಯಾದವಳು ಎಂಥಹ ಪರಿಸ್ಥಿತಿಯಿದ್ದರೂ ವಿವಾಹವೆಂಬ ಸಾಂಸ್ಥಿಕ ಬಂಧನದಲ್ಲೇ ಉಳಿಯಬೇಕು. ಒಮ್ಮೆ ಮದುವೆಯಾದರೆ ಮತ್ತೊಂದು ವಿವಾಹದ ಯೋಚನೆಯನ್ನು ಅವಳು ಮಾಡಬಾರದು. ಪತಿಯನ್ನು ಕುರಿತು ಆಕೆಯ ನಿಷ್ಠೆ ಆತ ಜೀವದಿಂದರಲಿ, ಇಲ್ಲದಿರಲಿ, ಆಕೆ ಬದುಕಿರುವವರೆಗೂ ಇರಬೇಕು. ಮುಂತಾದ ಏಕ ಪಕ್ಷೀಯ ನಿಲುವುಗಳ ಕಾರಣದಿಂದಾಗಿ ಮಹಿಳೆಯರಿಗೆ ವಿವಾಹವೆಂಬ ಸಂಸ್ಥೆಯಿಂದ ಹೊರಬರಲು ಅವಕಾಶವಿಲ್ಲ. ಪತಿಬೇಕಾದರೆ ಪತ್ನಿಯನ್ನು ತ್ಯಜಿಸಬಹುದು, ಅಥವಾ ದಂಡಿಸಬಹುದು. ಆದರೆ ಪತ್ನಿಯಾದವಳು 'ಪತಿಯೇ ಪರದೈವ' ಎಂಬ ನಂಬಿಕೆಗೆ ಬದ್ಧರಾಗಿರಬೇಕು. ಹೀಗೆ ಅನೇಕ ನಿಬಂಧನೆಗಳು ಸ್ತ್ರೀಯರನ್ನು ಸುತ್ತುವರೆದಿದ್ದವು. ಆದರೆ ೧೯೫೫ರಲ್ಲಿ ಅಸ್ತಿತ್ವಕ್ಕೆ ಬಂದ ಹಿಂದೂ ವಿವಾಹ ಕಾಯಿದೆಯು ವಿವಾಹ ವಿಚ್ಛೇದನವನ್ನು ಕಾನೂನು ಬದ್ದವೆಂದು ಘೋಷಿಸಿ ವಿವಾಹ ಸಂಬಂಧವನ್ನು ಕಡಿಯುವ ತನ್ಮೂಲಕ ವಿವಾಹವೆಂಬ ಬಂಧನದಿಂದ ಹೊರಬರುವ ಅವಕಾಶವನ್ನು ಪತಿ-ಪತ್ನಿಯರಿಗೆ ಕಲ್ಪಿಸಿತು." ಆದರೆ ಇದು ವಾಸ್ತವದಲ್ಲಿ ಕೇವಲ ಪುರುಷರಿಗೆ ಮಾತ್ರ ಕಲ್ಪಿಸಿದಂತಾಗಿದೆ.

ಸಿದ್ದಿ ಸಮುದಾಯದಲ್ಲಿಯೂ ಕೂಡ ವಿವಾಹ ವಿಚ್ಛೇದನಕ್ಕೆ ಅವಕಾಶವನ್ನು ನೀಡುವುದಿಲ್ಲ. ಯಾವ ಅವಕಾಶಗಳು ಇದ್ದರೂ ಅದು ಪುರುಷರಿಗೆ ಸೀಮಿತ ಎಂಬಂತೆ ನಡೆಯುತ್ತದೆ. ಕ್ಷೇತ್ರ ಕಾರ್ಯದಲ್ಲಿ ವಿವಾಹ ವಿಚ್ಛೇದನಕ್ಕೆ ಅವಕಾಶವಿದೆಯೆ? ಎಂದು ಕೇಳಿದಾಗ ನೀಡಿದ ಉತ್ತರ ಈ ಕೆಳಗಿನ ಕೋಷ್ಟಕದ ಮೂಲಕ ತಿಳಿದುಬರುತ್ತದೆ.

ಕೋಷ್ಟಕ - ೧೧

ಅಭಿಪ್ರಾಯ	ಆವೃತ್ತಿ ಸಂಖ್ಯೆ	ಶೇಕಡಾವಾರು
ಹೌದು	೨೪	೪೦
ಇಲ್ಲ	೩೬	೬೦
ಒಟ್ಟು	೬೦	೧೦೦

ಅಧ್ಯಯನಕ್ಕೆ ಒಳಪಡಿಸಿದ ೬೦ ಜನ ಮಹಿಳೆಯರಲ್ಲಿ ಶೇಕಡಾ ೪೦ರಷ್ಟು ಮಹಿಳೆಯರು ವಿವಾಹ ವಿಚ್ಛೇದನಕ್ಕೆ ಅವಕಾಶವಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಮಹಿಳೆಯರ ಮೇಲೆ ದೌರ್ಜನ್ಯ ವಿಪರೀತವಾದಾಗ ಮಾತ್ರ ಅವಕಾಶವಿದೆ. ಖುಲಾ ಅಥವಾ ವಿಚ್ಛೇದನ ಪಡೆದುಕೊಳ್ಳಲು ಗಂಡನು ಕೊಡುವ ಹಿಂಸೆ ಸಹಿಸಿಕೊಂಡು ಮನೆ ಅಥವಾ ಸಂಸಾರವನ್ನು ನಡೆಸಿಕೊಂಡು ಹೋದರು ಕೊನೆಗೂ ಅವನ ಹಿಂಸೆ ತಾಳಲಾರದೆ ಊರಿನ ನಾಲ್ಕು ಜನ ಹಿರಿಯರಿಗೆ ತನ್ನ ಸಮಸ್ಯೆ ತಿಳಿಸಿದಾಗ ಅದು ನಿಜವೆಂದು ದೃಢಪಟ್ಟರೆ ಮಾತ್ರ ಖುಲಾ ಅಥವಾ ವಿಚ್ಛೇದನೆ ಪಡೆಯಲು ಅವಕಾಶ ಕಲ್ಪಿಸಿಕೊಡಲಾಗುತ್ತದೆ.

ಆದರೆ ಪ್ರತಿಶತ ಶೇ.೬೦ ರಷ್ಟು ಮಹಿಳೆಯರು ವಿವಾಹ ವಿಚ್ಛೇದನೆಕ್ಕೆ ಅವಕಾಶವಿಲ್ಲ ಎಂಬ ಅಭಿಪ್ರಾಯ ಪಡುತ್ತಾರೆ. ಏಕೆಂದರೆ ಗಂಡನೆ ಪರಮದೈವ ಎಂಬ ನಂಬಿಕೆ ಅವರಲ್ಲಿದೆ. ಗಂಡನಾದವನು ಎಷ್ಟೇ ಹಿಂಸೆಕೊಟ್ಟರು ಸಹಿಸಿಕೊಳ್ಳಬೇಕು. ಅದು ಪತ್ನಿಯ ಕರ್ತವ್ಯ. ಒಂದು ವೇಳೆ ಗಂಡನಿಂದ ವಿಚ್ಛೇದನೆ ಪಡೆದರೆ ಅವಳಿಗೆ ಸಮಾಜ ಕೀಳಾಗಿ ಕಾಣುತ್ತದೆ. ಒಬ್ಬಂಟಿಯಾಗಿ ಎಲ್ಲಾದರೂ ಓಡಾಡುತ್ತಿದ್ದರೆ ಗಂಡನನ್ನು ಬಿಟ್ಟವಳೆಂದು ಸಮಾಜದ ನಿಂದನೆಗೆ ಒಳಗಾಗುತ್ತಾಳೆ. ಆದ್ದರಿಂದ ವಿಚ್ಛೇದನೆಯನ್ನು ಪಡೆಯಲು ಹೆಚ್ಚು ಮಹಿಳೆಯರು ಬಯಸುವುದಿಲ್ಲ. ಕ್ರಿಶ್ಚಿಯನ್ ಸಿದ್ದಿ ಮಹಿಳೆಯರಲ್ಲಿ ವಿವಾಹ ವಿಚ್ಛೇದನಕ್ಕೆ ಅವಕಾಶಗಳಿಲ್ಲ. ಯಾಕೆಂದರೆ ಮದುವೆಗಿಂತ ಮುಂಚಿತವಾಗಿ ಸತತ ಮೂರು ತಿಂಗಳ ಕಾಲ ವೈವಾಹಿಕ ಜೀವನದ ಬಗ್ಗೆ ಹಾಗೂ ಮುಂದೆ ಬದುಕನ್ನು ಕಟ್ಟುವ ವಿಷಯವನ್ನು ಕುರಿತು ಪರಸ್ಪರ ಒಬ್ಬರನೊಬ್ಬರು ಅರ್ಥಮಾಡಿಕೊಳ್ಳುವಂತೆ ತರಬೇತಿಯನ್ನು ನೀಡುತ್ತಾರೆ. ಇಲ್ಲಿ ಮುಖ್ಯವಾಗಿ ಗಮನಿಸುವ ಅಂಶವೆಂದರೆ ತರಬೇತಿ ಪಡೆದ ಮೇಲೆ ವಿವಾಹವಾಗಬೇಕು. ತರಬೇತಿ ಪಡೆದ ಮೇಲೂ ವಿವಾಹ ನಿರಾಕರಿಸಲೂಬಹುದು. ಆದರೆ ವಿವಾಹವಾದ ಮೇಲೆ ಹೆಂಡತಿಯಿಂದ ಅಥವಾ ಗಂಡನಿಂದ ವಿಚ್ಛೇದನ ಪಡೆಯುವ ಅವಕಾಶವಿಲ್ಲ. ಈ ಕ್ರಿಶ್ಚಿಯನ್ ಸಿದ್ದಿ ಮಹಿಳೆಗೆ ಒಂದು ವೇಳೆ ಗಂಡನಾದವನು ಅನೇಕ ರೀತಿಯಿಂದ ಹಿಂಸೆ ನೀಡಿದರೂ ಸಹ ಗಂಡನೊಂದಿಗಿದ್ದು ಬದುಕನ್ನು ಕಟ್ಟಬೇಕಾಗುತ್ತದೆ. ಆದರೆ ವಿಚ್ಛೇದನೆ

ಎಂಬುದು ಇವರಲ್ಲಿ ಕಂಡುಬರಲಾರದು. (ಮೇರಿ, ತಾವರಕಟ್ಟಾ ಕ್ರಿಶ್ಚಿಯನ್ ಮಹಿಳೆ ನೀಡಿದ ಮಾಹಿತಿ).

ಒಟ್ಟಿನಲ್ಲಿ ಮಹಿಳೆಯಾದವಳು ಗಂಡನು ನೀಡಿದ ಹಿಂಸೆಯನ್ನು ಸಹಿಸಿಕೊಂಡು ಬದುಕನ್ನು ಕಟ್ಟಬೇಕು ಎಂಬ ರೀತಿಯಲ್ಲಿ ನಮ್ಮ ಸಾಮಾಜಿಕ ವ್ಯವಸ್ಥೆ ನಡೆಯುತ್ತಿದೆ. ಮಹಿಳೆಯರಿಗಾಗಿಯೇ ವಿವಾಹ ವಿಚ್ಛೇದನೆ, ಕೌಟುಂಬಿಕ ಹಿಂಸೆ ಕಾಯ್ದೆಗಳು ಜಾರಿಗೆ ಬಂದರೂ ಕೂಡ ಮಹಿಳೆಯರು ತಮ್ಮ ಮೇಲಾಗುತ್ತಿರುವ ದೌರ್ಜನ್ಯದ ಕುರಿತು ಹೊರಗೆ ತರಲು ಇಚ್ಛಿಸುವುದಿಲ್ಲ. ಹೀಗಾಗಿಯೇ ಮಹಿಳೆಯರ ಮೇಲೆ ಹಿಂಸೆ, ದೌರ್ಜನ್ಯ, ಕ್ರೌರ್ಯಗಳಂತಹ ಅಮಾಯಕ ಪದ್ಧತಿಗಳು ಮುಂದುವರೆಯುತ್ತಲೇ ಇವೆ.

೪.೧.೨. ಲಿಂಗತಾರತಮ್ಯ :

ಲಿಂಗ ತಾರತಮ್ಯ ಎಂಬುದು ಮೊದಲು ಕುಟುಂಬದಿಂದ ಪ್ರಾರಂಭವಾಗುತ್ತದೆ. ನಮ್ಮ ಸಮಾಜವು ಲಿಂಗಾಧಾರಿತ ಸಾಮಾಜೀಕರಣದ ಪ್ರಕ್ರಿಯೆಯಲ್ಲಿ ಹಿರಿಯರು ಮಕ್ಕಳಿಗೆ ಕೆಲವು ಮಾದರಿಗಳನ್ನು ಸಿದ್ದಿಗೊಳಿಸಿರುತ್ತಾರೆ. ಆದರೆ ಜೀವನದ ಅರಿವೇ ಇರದ ಬಾಲ್ಯಾವಸ್ಥೆಯಲ್ಲಿ ಮಕ್ಕಳಿಗೆ ತಾನು ಇಂಥ ಕೆಲಸ ಮಾಡಬೇಕು, ಮಾಡಬಾರದು ಎಂಬ ಕಲ್ಪನೆ ಇರುವುದಿಲ್ಲ. ಆದರೆ ಆ ಮಗು ಹಿರಿಯರನ್ನು ಅನುಕರಣೆ ಮಾಡುತ್ತಾ ಕಲಿಯುತ್ತದೆ. ಅದೇ ರೀತಿಯಾಗಿ ಸಿದ್ದಿ ಸಮುದಾಯದಲ್ಲಿಯೂ ಕೂಡ ಅಷ್ಟೇ ಆಗಿದೆ. ತಾಯಿ ಮಾಡುವ ಕೆಲಸವನ್ನು ಮಗಳು ಮಾಡಬೇಕು. ತಂದೆ ಮಾಡುವ ಕೆಲಸವನ್ನು ಮಗ ಮಾಡಬೇಕು. ಉದಾಹರಣೆಗೆ : ಅಡುಗೆ ಮಾಡುವುದು, ಕಸ ತೆಗೆಯುವುದು, ಮಕ್ಕಳನ್ನು ಜವಾಬ್ದಾರಿಯನ್ನು ನೋಡಿಕೊಳ್ಳುವುದು, ಹೆಣ್ಣಿನ ಕೆಲಸವಾದರೆ ಗಂಡಸು ಹೊರಗೆ ದುಡಿಯುವುದು, ಪುರುಷ ಹೊರಗೆ ದುಡಿದು ಬಂದರೆ ಮುಗಿತು. ಅವನು ಮನೆಯ ಕೆಲಸದಲ್ಲಿ ಭಾಗಿಯಾಗುವುದಿಲ್ಲ. ಆದರೆ ಮಹಿಳೆಗೆ ಮಾತ್ರ ಹೊರಗಿನ ಮತ್ತು ಮನೆಯ ಕೆಲಸ ತಪ್ಪಿದ್ದಲ್ಲ.

ಸಿದ್ದಿ ಹೆಣ್ಣು ಮಕ್ಕಳು ಲಿಂಗತಾರತಮ್ಯವನ್ನು ಎದುರಿಸುತ್ತಿದ್ದು ಹೆಚ್ಚಾಗಿ ಹೆಣ್ಣು ಸಂತಾನಕ್ಕಿಂತ ಗಂಡು ಸಂತಾನಕ್ಕೆ ಪ್ರಾಧಾನ್ಯತೆಯನ್ನು ನೀಡುತ್ತಾರೆ. ಗಂಡು ಸಂತಾನಕ್ಕೆ ಪ್ರಾಧಾನ್ಯತೆಯನ್ನು ನೀಡುವ ನಿಯಮ ಸಾಮಾನ್ಯವಾಗಿ ಎಲ್ಲಾ ಸಮುದಾಯದಲ್ಲಿ ಕಂಡುಬರುತ್ತದೆ. ಗಂಡು ಶಿಶುವನ್ನು ಗಂಡು ಮಕ್ಕಳನ್ನು ಹೆಚ್ಚಿನ ಆಸಕ್ತಿ ಶ್ರದ್ಧೆಯಿಂದ ಲಾಲನೆ, ಪಾಲನೆ ಮಾಡಿದರೆ ಹೆಣ್ಣು ಶಿಶುವನ್ನು ಅಷ್ಟಾಗಿ ಹೆಚ್ಚಿನ ನಿಗಾವಹಿಸಿ ಸಾಕದಿರುವುದು ಕೆಲವೊಂದು ಸಿದ್ದಿ ಕುಟುಂಬದಲ್ಲಿ ಕಂಡುಬಂದಿದೆ. ಆದರೆ ಇತ್ತೀಚಿಗೆ ನಾಗರಿಕ ಜನತೆಯ ಸಂಪರ್ಕದಿಂದ ಅಕ್ಷರಸ್ಥರಾಗಿರುವ ಸಿದ್ದಿ ಮಹಿಳೆಯನ್ನು ಸಮಾನತೆಯಿಂದ ಕಾಣುವರು.

ಆದರೆ ಈ ಸಿದ್ದಿ ಸಮುದಾಯದಲ್ಲಿ ವರದಕ್ಷಿಣೆ ಕಂಡುಬರಲಾರದು. ಇವರಲ್ಲಿ ಸಾಮಾನ್ಯವಾಗಿ ಕನ್ಯಾಶುಲ್ಕವಿದೆ. ಅವರವರ ಶಕ್ತನುಸಾರ ಕನ್ಯಾ ಶುಲ್ಕ ಕೊಟ್ಟು ಮದುವೆ ಮಾಡಿಕೊಳ್ಳುವ ಸಂಪ್ರದಾಯ ಕಂಡುಬರುತ್ತದೆ.

ಅಧ್ಯಾಯ ಎರಡರಲ್ಲಿನ ಕೋಷ್ಟಕ ಎರಡನ್ನು ನೋಡಿದರೆ ಕೇವಲ ೨೧.೬೬ ರಷ್ಟು ಮಹಿಳೆಯರು ಏಕೆ ಸ್ತ್ರೀಗೆ ಪ್ರಾಧಾನ್ಯತೆಯನ್ನು ನೀಡುತ್ತಾರೆ ಎಂದರೆ 'ಹೆಣ್ಣು ಗಂಡನ ಮನೆಗೆ ಹೋಗುವವಳು ತಂದೆ-ತಾಯಿಗೆ ವಿಧೇಯಳಾಗಿರುವವಳು, ಕರ್ತವ್ಯ ಪಾಲನೆ ಮಾಡುವವಳು. ಮುಂತಾದ ಕಾರಣಗಳಿಂದ ಮಾತ್ರ ಅವಳನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ. ಹೆಣ್ಣು ಮಕ್ಕಳಿಗೆ ವಿವಾಹವಾದರೆ ಗಂಡನ ಕುಟುಂಬದವರು ಹೇಗೆ ನೋಡಿಕೊಳ್ಳುತ್ತಾರೊ ಎಂಬುದರಗೋಸ್ಕರ ತಂದೆ ತಾಯಿಯದವರು ಅವಳ ಇಷ್ಟಗಳನ್ನು ಈಡೇರಿಸಬೇಕು ಎಂದು ಹೇಳುತ್ತಾರೆ.

ಆಹಾರ ಹಂಚಿಕೆಯಲ್ಲಿಯೂ ಸಿದ್ದಿ ಮಹಿಳೆಯರಲ್ಲಿ ಅಥವಾ ಸಮುದಾಯದಲ್ಲಿಯೂ ಕೂಡ ಅಸಮಾನತೆ ಇದೆ. **ಆಹಾರ ಸೇವನೆಯಲ್ಲಿ ಗಂಡು ಮೊದಲು ನಂತರ ಹೆಣ್ಣೆಂಬ ಪರಿಕಲ್ಪನೆ ಆಳವಾಗಿ ಬೇರೂರಿದೆ** ಎಂಬುದು ಕ್ಷೇತ್ರಕಾರ್ಯದಿಂದ ತಿಳಿದುಬಂದಿದೆ.

ಕೋಷ್ಟಕ - ೧೨

ಅಭಿಪ್ರಾಯ	**ಆವೃತ್ತಿ ಸಂಖ್ಯೆ**	**ಶೇ. ಪ್ರಮಾಣ**
ಹೌದು	೪೫	೭೫
ಇಲ್ಲ	೧೫	೨೫
ಒಟ್ಟು	೬೦	೧೦೦

ಅಧ್ಯಯನಕ್ಕೆ ಒಳಪಡಿಸಿದ ೬೦ ಜನ ಮಹಿಳೆಯರಲ್ಲಿ ಶೇ.೭೫ ರಷ್ಟು ಮಹಿಳೆಯರು ಕುಟುಂಬದ ಯಜಮಾನನಿಗೆ ಆಹಾರ ಸೇವನೆಗೆ ಮೊದಲು ಆದ್ಯತೆ ನೀಡುತ್ತಾರೆ. ಏಕೆಂದರೆ ಗಂಡಸು, ಸಂಪಾದನೆ ಮಾಡುವವನು ಆಹಾರದ ಸಿಂಹಪಾಲು ಪುರುಷನಿಗೆ ಹೋಗಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದರೆ ಶೇ.೨೫ರಷ್ಟು ಮಹಿಳೆಯರು ಮಾತ್ರ ಗಂಡನಿಗೆ ಹೆಚ್ಚಿನ ಮಹತ್ವ ನೀಡುವುದಿಲ್ಲ. ಕುಟುಂಬದ ಸದಸ್ಯರೆಲ್ಲರೂ ಒಂದೇ ಸಮನಾಗಿ ಆಹಾರ ಹಂಚಿಕೆಯಲ್ಲಿ ಭಾಗಿಯಾಗುತ್ತಾರೆ. ಬಡತನದಿಂದ ಬಳಲುವ ಕುಟುಂಬಗಳು ಇಬ್ಬರೂ ಜೊತೆಗೆ ದುಡಿಯಲು ಹೋಗಿ ಒಂದೇ ವೇಳೆ ಊಟಕ್ಕೆ ಕೂಡುತ್ತಾರೆ. ಅಥವಾ ಗಂಡನಾದವನು ಹೊರಗಡೆ ಹೋಗಿದ್ದರೆ ಕಾಯುವುದಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದರು.

"ಈ ಲಿಂಗತಾರತಮ್ಯ ನೀತಿ ಯಾವ ಕಾಲದಿಂದ ರೂಢಿಯಲ್ಲಿ ಬಂದಿತೋ ನಿಖರವಾಗಿ ಹೇಳಲಾಗದು. ಆದರೂ ಅದು ಎಲ್ಲರಲ್ಲೂ ರಕ್ತಗತವಾಗಿದೆ. ಈ ವ್ಯವಸ್ಥೆಯನ್ನು ಪ್ರಶ್ನಾತೀತವಾಗಿ ಎಲ್ಲರೂ ಒಪ್ಪಿಕೊಂಡುಬಿಟ್ಟಿದ್ದಾರೆ."[೬] ಹುಟ್ಟಿನಿಂದಲೇ ಈ ಭೇದಭಾವ ಪ್ರಾರಂಭವಾಗಿ ಹೆಣ್ಣನ್ನು ಕೀಳಾಗಿ ಕಾಣುವಂತೆ ಮಾಡಿದೆ. 'ಹೆಣ್ಣು ಹುಟ್ಟಿದರೆ ಹುಣ್ಣು ಹುಟ್ಟಿದಂತೆ' ಎಂಬ ಗಾದೆ ಮಾತಿನಂತೆ ಮಹಿಳೆಯರನ್ನು ಕುಟುಂಬದಲ್ಲಿ ಅವರ ಸ್ಥಾನಮಾನವನ್ನು ನಗಣ್ಯ ಮಾಡಿದೆ.

ಒಟ್ಟಿನಲ್ಲಿ ಸಿದ್ದಿ ಮಹಿಳೆಯು ಗಂಡನ ಜೊತೆ ಎಲ್ಲಾ ಕೆಲಸ ಕಾರ್ಯಗಳಲ್ಲೂ ಭಾಗವಹಿಸಿ ಕುಟುಂಬದ ನಿರ್ವಹಣೆಯಲ್ಲಿ ಉತ್ತಮ ಪಾತ್ರವಹಿಸುತ್ತಾಳೆ. ಸಾಮಾನ್ಯವಾಗಿ ಈ ಸಮುದಾಯ ಮಹಿಳೆಗೆ ತೀರ ನಿಕೃಷ್ಟ ಸ್ಥಿತಿಗೆ ಇಳಿಸಿಲ್ಲ.

೪.೧.೩. ನ್ಯಾಯ ಪಂಚಾಯಿತಿ:

ಪ್ರತಿಯೊಂದು ಬುಡಕಟ್ಟುಗಳು ತಮ್ಮದೇ ಆದ ನ್ಯಾಯಾಂಗ ವ್ಯವಸ್ಥೆಯನ್ನು ಹೊಂದಿರುತ್ತವೆ. ಹೀಗಾಗಿ ಈ ನ್ಯಾಯಾಂಗ ವ್ಯವಸ್ಥೆಯ ಅಡಿಯಲ್ಲಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುತ್ತ ನಡೆಯುತ್ತಿರುತ್ತವೆ. ಅದೇ ರೀತಿಯಾಗಿ ಸಿದ್ದಿ ಜನಾಂಗದಲ್ಲಿ ಸಹ ತಮ್ಮದೆ ಆದ ನ್ಯಾಯಾಂಗ ವ್ಯವಸ್ಥೆ ಇದೆ. "ಸಿದ್ದಿಗಳು ನೆಲೆಸಿರುವ ಗ್ರಾಮಗಳಲ್ಲಿ ಸಿದ್ದಿ ಕೂಟಗಳಿರುತ್ತವೆ. ಪ್ರತಿ ಗ್ರಾಮದ ಸಿದ್ದಿ ಕೂಟಕ್ಕೆ ಆಯಾ ಗ್ರಾಮದ ಪ್ರತಿಯೊಂದು ಸಿದ್ದಿ ಕುಟುಂಬದ ಮುಖ್ಯಸ್ಥನೂ ಸದಸ್ಯನಾಗಿರುತ್ತಾನೆ. ಸಿದ್ದಿ ಕೂಟದ ಸದಸ್ಯರಲ್ಲಿ ಐವರನ್ನು ಆಯ್ಕೆ ಮಾಡಿಕೊಂಡು ಅವರಿಗೆ 'ಪಂಚ'ರೆಂದು ಕರೆಯುತ್ತಾರೆ. ಈ ಪಂಚರಲೊಬ್ಬನನ್ನು 'ಗೌಡ' ಇಲ್ಲವೆ 'ಬುದುವಂತ'ನೆಂದು ಆಯ್ಕೆ ಮಾಡುವರು. 'ಗೌಡ' ಅಥವಾ 'ಬುದುವಂತ'ನ ಮಗನಿಗೂ ಪ್ರಾಧಾನ್ಯತೆಯನ್ನು ನೀಡಲಾಗುತ್ತದೆ. ಹೀಗೆ ಪ್ರಾಧಾನ್ಯತೆಯನ್ನು ನೀಡುವಾಗ ವಂಶ ಪಾರಂಪರ್ಯಕ್ಕೆ ಆದ್ಯತೆ ನೀಡುವುದಿಲ್ಲ. ಒಮ್ಮೊಮ್ಮೆ ಹಿಂದಿನ ಬುದುವಂತನ ಮಗ ಅಸಮರ್ಥನಿದ್ದರೆ ಆ ಕುಟುಂಬದ ಇನ್ನೊಬ್ಬನನ್ನು ಆಯ್ಕೆ ಮಾಡುತ್ತಾರೆ. ಆತನೂ ಅಯೋಗ್ಯನಾಗಿದ್ದರೆ, ಪಂಚರು ಬೇರೊಬ್ಬ ಸಮರ್ಥನನ್ನು ಆಯ್ಕೆ ಮಾಡುತ್ತಾರೆ. ಆದ್ದರಿಂದ ಗೌಡ ಇಲ್ಲವೆ ಬುದುವಂತರು ಇತರ ಪಂಚರೊಡನೆ ಸಮಾಲೋಚನೆಯನ್ನು ಮಾಡಿ ಒಂದು ತೀರ್ಮಾನಕ್ಕೆ ಬರುತ್ತಾರೆ. ಸಿದ್ದಿ ಕೂಟವು ಕೇವಲ ಒಂದೇ ಸಿದ್ದಿ ನೆಲೆಗೆ ಸೀಮಿತವಾಗಿರದೆ ಸೀಮಾ ಮಟ್ಟದಲ್ಲಿಯೂ ಇವರ ಕೂಟಗಳಿವೆ. ಸೀಮಾ ಮಟ್ಟದಲ್ಲಿ 'ಭರತನಹಳ್ಳಿ, ಯಲ್ಲಾಪುರ, ವೈದ್ಯ ಹೆಗ್ಗಾರಗಳಲ್ಲಿ ಮೂರು ಮುಖ್ಯಗೌಡರಿದ್ದಾರೆ.[೭] ಆದರೆ ಇತ್ತೀಚಿಗೆ ಗ್ರಾಮೀಣ ಸಂಘ, ಸ್ವಸಹಾಯ ಸಂಘ, ಪುರುಷ ಸಂಘ, ತಾಲೂಕು ಫೇಡರೇಷನ್,

ಗ್ರಾಮಫೇಡರೇಷನ್, ಇವುಗಳ ಮೂಲಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವರು. ಒಂದು ವೇಳೆ ಇವುಗಳ ಮೂಲಕ ಬಗೆಹರಿಯದೆ ಇದ್ದರೆ ಪೋಲಿಸ್ ಠಾಣೆ, ಕಛೇರಿಗಳಿಗೆ ಹೋಗುತ್ತಾರೆ. 'ಕೋಲಕಾರ' ಎಂಬವರು ಹಿಂದೂ, ಕ್ರಿಶ್ಚಿಯನ್‌ರಲ್ಲಿ ಕಂಡುಬಂದರೆ ಈ ಮುಸ್ಲಿಂರಲ್ಲಿ 'ಈಜ್ಜನಿ' ಎಂಬುವರು ಕಂಡುಬರುತ್ತಾರೆ. ಕೋಲಕಾರನ ಸ್ಥಾನಕ್ಕೆ ಮಹಿಳೆಯರನ್ನು ಏಕೆ ನೇಮಿಸುವುದಿಲ್ಲವೆಂದರೆ ಊರಿನಿಂದ ಮತ್ತೊಂದು ಊರಿಗೆ ಮಾಹಿತಿಯನ್ನು ತಿಳಿಸಬೇಕಾದ ಪ್ರಸಂಗಗಳು ಬಂದಾಗ ಮಹಿಳೆಗೆ ಓಡಾಡಲು ಸಾಧ್ಯವಿಲ್ಲ ಎಂಬ ಉದ್ದೇಶದಿಂದ ಮಹಿಳೆಯರನ್ನು ನೇಮಕ ಮಾಡುವುದಿಲ್ಲ. ಏಕೆ? ಮಹಿಳೆ ದೈಹಿಕವಾಗಿ ಅಶಕ್ತಳೆಂದೋ ಅಥವಾ ಆ ಕೆಲಸಕ್ಕೆ ಅಸಮರ್ಥಳೆಂದೋ? ತಿಳಿಯಲಾಗಿದೆ. ಆದರೂ ವಂಶಪರಂಪಾರ್ಯವಾಗಿ ಕೋಲಕಾರ ಒಂದು ಕುಟುಂಬಕ್ಕೆ ಬಂದರೆ ಆಗ ಕುಟುಂಬದಲ್ಲಿ ಪುರುಷ ನಿಲ್ಲದಿದ್ದರೆ ಮಹಿಳೆ ಕೋಲಕಾರ ಆಗಬಹುದು ಎಂದು ದಿಯೋಗ ಸಿದ್ದಿಯವರು ಅಭಿಪ್ರಾಯ ವ್ಯಕ್ತಪಡಿಸಿದರು.

ಸಿದ್ದಿ ಸಮುದಾಯದ ಪಂಚಾಯಿತಿ ನಡೆಯುವಾಗ ಮಹಿಳೆಯರು ಪಾಲಗೊಳ್ಳುವುದು ಎಷ್ಟರ ಮಟ್ಟಿಗೆದೆ ಎಂಬುದನ್ನು ಈ ಕೆಳಗಿನ ಕೋಷ್ಟಕದ ಮೂಲಕ ತಿಳಿದು ಬರುತ್ತದೆ.

ಕೋಷ್ಟಕ – ೧೩

ಅಭಿಪ್ರಾಯ	ಆವೃತ್ತಿ ಸಂಖ್ಯೆ	ಶೇಕಡಾವಾರು
ಹೌದು	೪೨	೭೦
ಇಲ್ಲ	೧೮	೩೦
ಒಟ್ಟು	೬೦	೧೦೦

ಕ್ಷೇತ್ರಕಾರ್ಯದಲ್ಲಿ ೬೦ ಜನ ಮಹಿಳೆಯರನ್ನು ಒಳಪಡಿಸಿದಾಗ ಗ್ರಾಮಪಂಚಾಯಿತಿ ಸಭೆ ನಡೆಯುವಾಗ ಶೇ.೭೦ ರಷ್ಟು ಮಹಿಳೆಯರು ಹೋಗುತ್ತಾರೆ. ಆದರೆ ಶೇ.೩೦ರಷ್ಟು ಮಹಿಳೆಯರು ಹೋಗುವುದಿಲ್ಲ. ಏಕೆಂದರೆ ಸಂಪ್ರದಾಯಸ್ಥರಾಗಿ, ಮನೆಯಿಂದ ಹೊರಗೆ ಹೋಗಬಾರದು ಗಂಡಸರೊಂದಿಗೆ ಬೇರೆಯಬಾರದು ಎಂಬ ಕಲ್ಪನೆವುಳ್ಳ ಮಹಿಳೆಯರಿದ್ದಾರೆ.

ಗ್ರಾಮಪಂಚಾಯಿತಿಗಳಲ್ಲಿ ಹಿಂದೂ ಸಿದ್ದಿ ಸಮುದಾಯದ ಮಹಿಳೆಯರಿಗೆ ಸ್ವಲ್ಪಮಟ್ಟಿಗೆ ಅವಕಾಶವನ್ನು ನೀಡಿದೆ. ಅದು ಹೇಗೆಂದರೆ ಮಹಿಳೆಯರು 'ಆಷಾಡ' ಎಂಬ ಸಂಸ್ಥೆಯ ಮೂಲಕ ಸಂಘಗಳನ್ನು ಕಟ್ಟಿಕೊಂಡು ಜಾಗೃತರಾಗಿ ಪಂಚಾಯಿತಿ ನಡೆಯುವಾಗ ಮಹಿಳೆಯರು ಭಾಗವಹಿಸುತ್ತಾರೆ. ಈ ಪಂಚಾಯಿತಿ ವ್ಯವಸ್ಥೆಯಲ್ಲಿ ನಡೆಯುವಂತಹ ಮಹಿಳಾ

ಪ್ರಕರಣಗಳೆಂದರೆ ಕೌಟುಂಬಿಕ ಕಲಹಗಳು, ವಿವಾಹ ವಿಚ್ಛೇದನ, ಹೊಂದಾಣಿಕೆ ಮುಂತಾದವುಗಳಾಗಿವೆ. ಒಂದು ವೇಳೆ ವಿವಾಹ ವಿಚ್ಛೇದನೆ ಪ್ರಕರಣಗಳು ಬಂದರೆ ಮೊದಲಿಗೆ ಗಂಡ-ಹೆಂಡತಿಯರಿಗೆ ಹೊಂದಾಣಿಕೆ ಅಥವಾ ಬುದ್ದಿವಾದ ಹೇಳಿ ಅಥವಾ ಒಳ್ಳೆಯ ಸಲಹೆಗಳನ್ನು ನೀಡಿ ದಂಪತಿಗಳನ್ನು ಒಂದು ಮಾಡಿ ಮನೆಗೆ ಕಳಿಸುತ್ತಾರೆ. ಸಿದ್ದಿಗಳು ಹೆಚ್ಚಾಗಿ ಕೋರ್ಟಿಗೆ ಹೋಗಲು ಅವಕಾಶ ಕಲ್ಪಿಸುವುದಿಲ್ಲ. ಆದರೆ ಇತ್ತಿತ್ತಲಾಗಿ ಮಹಿಳೆಯರು ತಮ್ಮದೇ ಆದ ಮಹಿಳಾ ಸ್ವಸಹಾಯ ಸಂಘಗಳ ಮೂಲಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುತ್ತಾರೆ. ಇಲ್ಲಿಯವರಿಗೆ ನಡೆದ ಪ್ರಕರಣಗಳು ಮಹಿಳೆಯರಿಗೆ ಯಾವುದೇ ರೀತಿಯ ಅನ್ಯಾಯವನ್ನು ಒದಗಿಸಿಲ್ಲ ಎಂದು ಕಲ್ಲೇಶ್ವರ ಗ್ರಾಮದ ಗೌರಿ ಎಂಬುವವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಆದರೆ ಮುಸ್ಲಿಂ ಸಿದ್ದಿಗಳಲ್ಲಿ ಮಹಿಳೆಯರಿಗೆ ಪಂಚಾಯಿತಿಗಳಲ್ಲಿ ಭಾಗವಹಿಸಲು ಅವಕಾಶವಿಲ್ಲ. ಮುಸ್ಲಿಂ ಸಿದ್ದಿ ಮಹಿಳೆಯರು ಅವರ ಕುಟುಂಬದ ಕಲಹಗಳು ಪಂಚಾಯಿತಿವರೆಗೆ ತರುವುದನ್ನು ಇಷ್ಟಪಡುವುದಿಲ್ಲ. ಗಂಡ ಹೊಡೆದಾಗ ಎಲ್ಲದನ್ನು ಪಂಚಾಯಿತಿ ನಡೆಸಿದರೆ ಗಂಡ ಮನೆಗೆ ಕರೆಸಿಕೊಳ್ಳುತ್ತಾನೆಯೇ? 'ಹಮಾರ್ ಮರದ್ ದೋ ಮಾರಾತ್ತಾ ಹೈ ಝೋಡ ತಾಹೈ ಸಬಕೊ ಮಿಟಿಂಗ್ ಬೈಟಾತೆ ನಹಿ' ಗಂಡ ಹೊಡೆದರು ಬಡೆದರು ಸಹಿಸಿಕೊಂಡು ಹೋಗಬೇಕು ಎಂಬ ಮಾತನ್ನು ಮುಸ್ಲಿಂ ಸಿದ್ದಿ ಮಹಿಳೆಯರು ವ್ಯಕ್ತಪಡಿಸಿದ್ದಾರೆ. ಒಂದು ವೇಳೆ ಕುಟುಂಬದ ಕಲಹಗಳು ಗಂಭೀರ ಸ್ವರೂಪ ಪಡೆದಾಗ ಊರಿನ ಹಿರಿಯರು ಸೇರಿ ಪಂಚಾಯಿತಿ ನಡೆಸುತ್ತಾರೆ. ಪಂಚಾಯಿತಿ ನಡೆಯುವಾಗ ಪುರುಷರ ಸಮಾನವಾಗಿ ಮಹಿಳೆಗೆ ಅವಕಾಶ ಕೊಡುವುದಿಲ್ಲ. ಮಹಿಳೆ ಒಳಕೋಣೆಯಿಂದಲೇ ತಮಗಾದ ಅನ್ಯಾಯ ಅಥವಾ ದೌರ್ಜನ್ಯದ ಕುರಿತು ಹೇಳಬೇಕು. ಆಗ ಮಾತ್ರ ಹಿರಿಯರು ಸೇರಿ ಚರ್ಚಿಸಿ ತಪ್ಪನ್ನು ಗುರುತಿಸಿ ಅವರಿಗೆ ದಂಡ ವಿಧಿಸುತ್ತಾರೆ. ಹೆಚ್ಚಾಗಿ ಸಿದ್ದಿಗಳಲ್ಲಿ ಹೊಂದಾಣಿಕೆಯಿಂದ ಜೀವಿಸುವರು. ತಲಾಖ್ ಪಡೆಯುವಂತಹ ಸ್ಥಿತಿ ಬಂದಾಗ ಪಂಚಾಯಿತಿ ನಡೆಸುವರು. ಆಗ ಪಂಚಾಯಿತಿ ಹಿರಿಯರು ಅಥವಾ ಮುಖಂಡರು ಬಗೆಹರಿಸಲು ಸಾಧ್ಯವಾಗದೆ ಇದ್ದರೆ ಕೋರ್ಟಿಗೆ ಹೋಗುತ್ತಾರೆ.

ಈ ಪಂಚಾಯಿತಿ ಪದ್ಧತಿಯಲ್ಲಿ ಇದುವರೆಗೆ ಯಾವ ಮಹಿಳೆಯು 'ಕೋಲಕಾರ' ಅಥವಾ 'ಬುದುವಂತ' ಆಗಿಲ್ಲ. ಮಹಿಳೆಯರಿಗೆ ಪಂಚಾಯಿತಿ ಪದ್ಧತಿಯಲ್ಲಿ ಸಮನಾದ ಅವಕಾಶವನ್ನು ಒದಗಿಸಿಕೊಟ್ಟಿಲ್ಲ. ಇದು ಮೊದಲಿನಿಂದಲೂ ಬಂದಂತಹ ಸಂಪ್ರದಾಯವಾಗಿದೆ. ಎಲ್ಲಿಯೂ ಕೂಡ ಸಂಪೂರ್ಣವಾದ ಸ್ವತಂತ್ರ್ಯತೆಯನ್ನು ನೀಡಿಲ್ಲ. ಒಂದು ವೇಳೆ

[illegible]

ಮಹಿಳೆಯರಿಗೂ ಪಂಚಾಯಿತಿದಲ್ಲಿ ಪುರುಷನಷ್ಟೇ ಅವಕಾಶವಿದ್ದರೆ ಅಸಮಾನತೆ ಎಂಬುದು ಇವತ್ತಿಗೆ ಇಷ್ಟೊಂದು ಭೀಕರ ಸ್ವರೂಪವನ್ನು ಪಡೆಯುತ್ತಿರಲಿಲ್ಲ.

೪.೨. ರಾಜಕೀಯದಲ್ಲಿ ಸಿದ್ದಿ ಮಹಿಳೆಯರ ಪಾತ್ರ:

ಪ್ರಾಚೀನ ಕಾಲದಿಂದಲೂ ಮಹಿಳೆಯರ ಸ್ಥಿತಿಗತಿಗಳು ಅತ್ಯಂತ ದುಸ್ಥಿತಿಗಳಿಯುತ್ತಲೇ ಬಂದಿದೆ. ಒಂದು ಸಾರಿ ಈ ಮಹಿಳಾ ಲೋಕವನ್ನು ಕಣ್ಣಾಹಿಸಿದರೆ ಅವರಿಗೆ ಪ್ರತಿಯೊಂದು ವಲಯಗಳಲ್ಲಿ ಆಗುತ್ತಿರುವ ಪುರುಷಶಾಹಿ ರಾಜಕಾರಣದ ಅಂಶಗಳು ನಮಗೆ ಗೋಚರಿಸುತ್ತವೆ. ರಾಜಕೀಯವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ಧಾರ್ಮಿಕವಾಗಿ ಹೀಗೆ ಹತ್ತಾರು ವಲಯಗಳಲ್ಲಿ ಮಹಿಳೆಯರ ಸ್ಥಾನಮಾನವನ್ನು ಅವಲೋಕಿಸಿದರೆ ಅತ್ಯಂತ ಹಿನ್ನಡೆಯನ್ನು ಸಾಧಿಸಿದೆ. "ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರಿಗೆ ಸುಮಾರು ನಲವತ್ತು ವರ್ಷಗಳಿಂದ ವಿಶ್ವವ್ಯಾಪಿಯಾಗಿ ಮತದಾನದ ಹಕ್ಕು ಲಭಿಸಿದ್ದರು ಅವರಿಗೆ ದೊರೆಯಬೇಕಾದ ನಿರ್ಣಾಯಾತ್ಮಕ ಸ್ಥಾನಮಾನಗಳು ಸಿಕ್ಕುತ್ತಿಲ್ಲ. ರಾಜಕೀಯ ವಿಷಯಗಳಲ್ಲಿ ಮುಖ್ಯವಾಗಿ ಸ್ತ್ರೀಯರ ಜೀವನವನ್ನು ಪ್ರಭಾವಿತಗೊಳಿಸುವ ತೀರ್ಮಾನಗಳನ್ನು ಜಾರಿಗೆ ತರುವ ಅಧಿಕಾರ ಇನ್ನು ಪುರುಷನ ಹಿಡಿತದಿಂದ ಬಿಡುಗಡೆಯಾಗಿಲ್ಲ. ಎಲ್ಲಿಯವರೆಗೆ ಆಡಳಿತ ವಿಭಾಗ ಉನ್ನತ ಸ್ಥಾನಗಳಿಗೆ ಸ್ತ್ರೀಯರು ಹೆಚ್ಚಿನ ಸಂಖ್ಯೆಯಲ್ಲಿ ಸ್ಪರ್ಧಿಸಿ ಅದರಲ್ಲಿ ಜಯಗಳಿಸಿ ಅಧಿಕಾರವನ್ನು ದಕ್ಕಿಸಿಕೊಳ್ಳಲು ಪ್ರಯತ್ನಿಸುವುದಿಲ್ಲವೋ ಅಲ್ಲಿಯವರೆಗೆ ಮಹಿಳೆಯರ ಪರಿಸ್ಥಿತಿಗಳು ಹೀಗೆಯೇ ಇರುತ್ತವೆ.[೮] "ಆದ್ದರಿಂದ ಮಹಿಳೆಯರಿಗೋಸ್ಕರವೇ ನಮ್ಮ ಸಂವಿಧಾನದಲ್ಲಿ ವಿಶೇಷ ಕಾಳಜಿ ವಹಿಸಿ ೧೯೯೨ ರಲ್ಲಿ ಸಂವಿಧಾನದ ಅನುಚ್ಛೇದ ೭೩-೭೪ಕ್ಕೆ ತಿದ್ದುಪಡಿ ತಂದು ಸ್ಥಳೀಯ ಆಡಳಿತ ಸಂಸ್ಥೆಗಳಲ್ಲಿ (ಗ್ರಾಮ ಪಂಚಾಯಿತಿ, ನಗರಸಭೆ) ಮಹಿಳೆಯರಿಗೆ ೩೩% ಮೀಸಲಾತಿ ನೀಡಲಾಗಿದೆ. ಮುಂದೆ ೧೯೯೩ರಲ್ಲಿ ಕರ್ನಾಟಕ ಸರ್ಕಾರ ಪಂಚಾಯಿತರಾಜ್ ಅಧಿನಿಯಮವನ್ನು ಜಾರಿಗೊಳಿಸಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಮಹಿಳೆಯರಿಗೆ ೨೫% ರಾಜಕೀಯ ಮೀಸಲಾತಿಯನ್ನು ಘೋಷಿಸಿತು."[೯] ಆದರೂ ಸಹ ರಾಜಕೀಯದಲ್ಲಿ ಮಹಿಳೆಯರು ಸಕ್ರೀಯವಾಗಿ ಭಾಗವಹಿಸಲು ಆಗುತ್ತಿಲ್ಲ. ಏಕೆಂದರೆ ಮಹಿಳಾ ಮತದಾರರಿಗೆ ರಾಜಕೀಯ ಸಿದ್ಧಾಂತದ ಸರಿಯಾದ ತಿಳುವಳಿಕೆ ಚುನಾವಣೆಯಲ್ಲಿ ಸ್ಪರ್ಧಿಸಲು ಸರಿಯಾದ ಮತಕ್ಷೇತ್ರ, ಚುನಾವಣೆಯ ಮಾರ್ಗಸೂಚಿ, ಹಣದ ಬಲ ಇಲ್ಲದೆ ಇರುವುದು, ರಾಜಕೀಯ ರಂಗ ಪ್ರವೇಶಿಸಲು ಕುಟುಂಬದ ಸದಸ್ಯರ ಒತ್ತಾಸೆ, ಕ್ಷೇತ್ರದ ಜನಸಾಮಾನ್ಯರ ಸಹಾನುಭೂತಿ, ಮಹಿಳಾ ಸಂಘ ಸಂಸ್ಥೆಗಳ ಅಭಯ ಹಸ್ತ ಹಾಗೂ ರಾಜಕೀಯ ಪಕ್ಷಕ್ಕೆ ಸದಸ್ಯಳಾಗಿ ಪಕ್ಷದ ಕಾರ್ಯ ಚಟುವಟಿಕೆಗಳಲ್ಲಿ ಸತತವಾಗಿ ಕ್ರಿಯಾಶೀಲವಾದ ಕಾರ್ಯಗಳನ್ನು ಮಾಡುವ ಪಕ್ಷ ಸಂಘಟಿಸುವ ಚಟುವಟಿಕೆ ಮುಂತಾದ ಎಲ್ಲಾ ಚಟುವಟಿಕೆಗಳ ಬಗ್ಗೆ ಅವಳನ್ನು ಚುರುಕುಗೊಳಿಸುವ ಕಾರ್ಯ ನಡೆಯಲಿಲ್ಲವೆಂದು ಹೇಳಬಹುದು.

ಸ್ತ್ರೀಪುರುಷರಿಗೆ ಸಮಾನ ಸ್ಥಾನಮಾನವನ್ನು ನಮ್ಮ ಸಂವಿಧಾನದಲ್ಲಿ ನೀಡುವ ಮೂಲಕ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸಲು ಮಹಿಳೆಗೆ ಅವಕಾಶ ಕಲ್ಪಿಸಿ ಕೊಡಲಾಗಿದೆ. ಸಿದ್ದಿ ಸಮುದಾಯ ಇಂದಿನ ದಿನಮಾನದಲ್ಲಿ ರಾಜಕೀಯದಲ್ಲಿ ಭಾಗವಹಿಸುವಂತಾಗಿವೆ. ಅದರಲ್ಲೂ ಈ ಜನಾಂಗದ ಮಹಿಳೆ ಸಹ ರಾಜಕೀಯದಲ್ಲಿ ಅಂಬೆಗಾಲಿಡುತ್ತಿದ್ದಾಳೆ. ಸಂವಿಧಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರಿಗೆ ಮೀಸಲಾತಿ ನೀಡಿದ್ದರಿಂದ ಮಹಿಳೆಯರಿಗೆ ಸಾರ್ವಜನಿಕ ವಲಯದಲ್ಲಿ ಭಾಗವಹಿಸಲು ಅವಕಾಶ ದೊರೆಯುವಂತಾಗಿವೆ.

"ಸಂವಿಧಾನದಲ್ಲಿ ಮಹಿಳೆಗೆ ರಾಜಕೀಯ ಸಮಾನತೆಯನ್ನು ನೀಡಿದ್ದು ರಾಜಕೀಯ ಪ್ರಕ್ರಿಯೆಯಲ್ಲಿ ಅವಳು ಭಾಗವಹಿಸುವಂತೆ ಮಾಡುವದತ್ತ ಇಟ್ಟ ಮಹತ್ವದ ಹೆಜ್ಜೆ ಎನ್ನಬಹುದು. ಆದರೆ ಮಹಿಳೆಗೆ ಸಮಾಜದಲ್ಲಿ ಇರುವ ಗೌಣ ಸ್ಥಾನಮಾನ, ಆರ್ಥಿಕ ಅವಲಂಬನೆ, ಅಸಮರ್ಥತೆ, ಸಾಂಸ್ಕೃತಿಕ ಕಟ್ಟುಪಾಡುಗಳು ಮತ್ತು ಮೌಲ್ಯಗಳು ಹಾಗೂ ರಾಜಕೀಯದಲ್ಲಿ ಮಹಿಳೆ ಭಾಗವಹಿಸುವುದರ ಬಗ್ಗೆ ಸಮಾಜ ತಳೆದಿರುವ ದೃಷ್ಟಿಕೋನ ಇವುಗಳಿಂದಾಗಿ ಭಾರತದ ಮಹಿಳೆ ಇನ್ನೂ ರಾಜಕೀಯ ಪ್ರಕ್ರಿಯೆಯ ಹೊರ ವಲಯದಲ್ಲಿಯೇ ಉಳಿದಿದ್ದಾಳೆ."[೭೦] ಇತ್ತೀಚ್ಚಿಗೆ ಕೆಲವೊಂದು ಬುಡಕಟ್ಟು ಸಮುದಾಯಗಳು ರಾಜಕೀಯ ರಂಗದಲ್ಲಿ ಅದರಲ್ಲೂ ಜಿಲ್ಲಾ, ತಾಲೂಕು, ಗ್ರಾಮಪಂಚಾಯಿತಿ ಹಂತದಲ್ಲಿಯೇ ಇರುವರು. ಸಿದ್ದಿ ಸಮುದಾಯದ ಮಹಿಳೆಯರು ರಾಜಕೀಯ ಕ್ಷೇತ್ರದಲ್ಲಿ ಭಯ ಭರಿತಳಾಗಿ ಕುಟುಂಬದವರ ಒತ್ತಾಯದ ಮೇರೆಗೆ ಕಾಲಿಡುತ್ತಿದ್ದಾಳೆ. ಇಂದು ಇವರು ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಗಳಲ್ಲಿ ಹೇಗೆ ಪ್ರವೇಶವನ್ನು ಪಡೆಯುತ್ತಿದ್ದಾಳೆ ಎಂಬುದನ್ನು ಕೆಲವು ಪ್ರಕರಣಗಳಿಂದ ತಿಳಿದುಕೊಳ್ಳಬಹುದು.

ಪ್ರಕರಣ : ೧

ಹೆಸರು : ಮೇರಿ, ಬೌತಿಸ, ಗರಿಬಾ ಸಿದ್ದಿ

ವಯಸ್ಸು : ೩೨

ಶಿಕ್ಷಣ : ಎಸ್.ಎಸ್.ಎಲ್.ಸಿ.

ಕ್ಷೇತ್ರಕಾರ್ಯ ಅಧ್ಯಯನದಲ್ಲಿ ಮೇರಿಯವರನ್ನು ಸಮಗ್ರ ಅಧ್ಯಯನಕ್ಕೆ ಒಳಪಡಿಸಿದಾಗ ಅವರು ಈ ಕೆಳಗಿನಂತೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲೂಕಿನ ಕಾಮತಿಕೊಪ್ಪದಲ್ಲಿ ತುಂಬಾ ಬಡತನದಿಂದ ಕೂಡಿದ ಕುಟುಂಬದಲ್ಲಿ ಜನಿಸಿದ ಇವರಿಗೆ ೧೮ ವರ್ಷ ತುಂಬಿದ ಮೇಲೆ ಅವಿದ್ಯಾವಂತನಾಗಿದ್ದ, ಕೂಲಿ ಕೆಲಸ ಮಾಡಿಬದುಕುತ್ತಿದ್ದವನಿಗೆ ಕೊಟ್ಟು ಮದುವೆ ಮಾಡಿದರು. ಸ್ವಲ್ಪ ಮಟ್ಟಿಗೆ

ಓದನ್ನು ಬಲ್ಲವರಾದ ಇವರು ಮುಂದೆ ತಮ್ಮ ಮಕ್ಕಳನ್ನಾದರೂ ಚೆನ್ನಾಗಿ ಓದಿಸಬೇಕೆಂಬ ಸಂಕಲ್ಪದಿಂದ ಇಬ್ಬರೂ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ನೀಡುತ್ತಿರುವರು. ಅವರಲ್ಲಿ ಒಬ್ಬ ಮಗಳು ಪಿ.ಯು.ಸಿ. ಕಲಿಯುತ್ತಿದ್ದಾರೆ. ಮಗ ಏಳನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವನು. ಪ್ರಸ್ತುತ ಸಂದರ್ಭದಲ್ಲಿ ಮೇರಿಯವರು ಗುಂಡಳ್ಳಿ ಗ್ರಾಮದ ಗ್ರಾಮ ಪಂಚಾಯತಿಯಲ್ಲಿ ಸದಸ್ಯರಾಗಿರುವರು.

ಮೇರಿಯವರು ಕೆಡಿಡಿಸಿ ಎಂಬ ಸಂಸ್ಥೆಯಲ್ಲಿ ಸಮಾಜ ಸೇವಕಿಯಾಗಿ ಕೆಲಸವನ್ನು ನಿರ್ವಹಿಸುತ್ತಿದ್ದು, ಸಂಸ್ಥೆಯ ಪರವಾಗಿ ಮಹಿಳೆಯರಿಗೆ ಗ್ರಾಮ ಪಂಚಾಯಿತಿ ಚುನಾವಣೆಯ ಕುರಿತು ಅರಿವು, ಜಾಗೃತಿಯನ್ನು ಮೂಡಿಸುತ್ತಿದ್ದಾರೆ. ಸಂಸ್ಥೆಯಲ್ಲಿ ಸಂಘಟಿಸಿದ ಮಹಿಳೆಯರಿಗೆ ಗ್ರಾಮ ಪಂಚಾಯಿತಿಯಲ್ಲಿ ಪ್ರತಿನಿಧಿಯಾಗಿ ನಿಲ್ಲುವಂತೆ ಪ್ರೋತ್ಸಾಹವನ್ನು ನೀಡುತ್ತಿದ್ದಾಗ ಸಂಘದ ಮಹಿಳೆಯರು ಮೇರಿಯರನ್ನು ಚುನಾವಣೆಗೆ ಪ್ರತಿನಿಧಿಯಾಗಿ ನಿಲ್ಲುವಂತೆ ಒತ್ತಾಯಿಸಿದರು. ಎಸ್.ಎಸ್.ಎಲ್.ಸಿ.ಯವರಗೆ ಓದಿದ ಇವರು ಸಿದ್ದಿ ಜನಾಂಗದ ಬಗ್ಗೆ ಅಥವಾ ಇತರ ಸಮುದಾಯದ ಪ್ರತಿಯೊಂದು ಸಮಸ್ಯೆಗಳಿಗೆ ಬೇಗನೆ ಸ್ಪಂಧಿಸುವರಾಗಿದ್ದರು. ಹೀಗಾಗಿ ಊರಿನ ಜನ ಮೇರಿಯವರನ್ನು ಗ್ರಾಮ ಪಂಚಾಯಿತಿ ಚುನಾವಣೆಗೆ ನಿಲ್ಲುವಂತೆ ಒತ್ತಾಯಿಸಿದರು. ಆದರೆ ಮೇರಿಯವರ ಪತಿ ರಾಜಕೀಯದಲ್ಲಿ ಹೋಗುವುದು ಬೇಡ ಎಂದು ನಿರಾಕರಿಸಿದರು. ಆಗ ಊರಿನ ಜನರು ಪರಿಶಿಷ್ಟ ಪಂಗಡದ ಮಹಿಳೆಗೆ ಮೀಸಲಾತಿ ಇರುವುದರಿಂದ ಅದಕ್ಕೆ ಮೇರಿಯವರೆ ಸೂಕ್ತರಾದವರು ಎಂದು ಅವರ ಪತಿಯ ಹತ್ತಿರ ಪ್ರಸ್ತಾಪಿಸಿದಾಗ ಕೊನೆಗೆ ಒಪ್ಪಿಗೆ ನೀಡಿದರು. ಆಗ ಮೇರಿಯವರು ಗುಂಡಳ್ಳಿ ಗ್ರಾಮ ಪಂಚಾಯಿತಿಗೆ ಪ್ರತಿನಿಧಿಯಾಗಿ ನಿಂತುಕೊಂಡಾಗ ೧೭ ಜನ ಸದಸ್ಯರು ಗ್ರಾಮ ಪಂಚಾಯಿತಿ ಚುನಾವಣೆಗೆ ನಾಮಪತ್ರ ಸಲ್ಲಿಸಿದರು. ಆದರೆ ಮೇರಿಯವರು ನಾಮಪತ್ರವನ್ನು ತಡವಾಗಿ ಸಲ್ಲಿಸಿದ್ಯಾಗೂ ಕೂಡ ಎಲ್ಲಾ ಸದಸ್ಯರು ತಮ್ಮ ನಾಮಪತ್ರಗಳನ್ನು ಹಿಂದಕ್ಕೆ ತೆಗೆದುಕೊಂಡು ಮೇರಿಯವರನ್ನು ಅವಿರೋಧವಾಗಿ ಆಯ್ಕೆ ಮಾಡಿದರು.

ಮೇರಿಯವರು ಗ್ರಾಮ ಪಂಚಾಯಿತಿ ಸದಸ್ಯರಾಗಿ ಯಾವುದೇ ತರಹದ ಸಮಸ್ಯೆಯನ್ನು ಎದುರಿಸಿಲ್ಲ. ಸತತವಾಗಿ ೧೩ ವರ್ಷಗಳಿಂದ ಸಮಾಜ ಸೇವಕಿಯಾಗಿ ಕೆಲಸ ಮಾಡುತ್ತಿದ್ದರಿಂದ ಗ್ರಾಮ ಪಂಚಾಯಿತಿ ಅಧ್ಯಕ್ಷರು ತಾಲೂಕು ಪಂಚಾಯಿತಿ ಅಧ್ಯಕ್ಷರು ಮತ್ತು ಜಿಲ್ಲಾ ಪಂಚಾಯತ ಅಧ್ಯಕ್ಷರು ಅಥವಾ ಇತರೆ ಸದಸ್ಯರೊಂದಿಗೆ ಬೆರೆಯಲು ಅಥವಾ ಮಾತನಾಡಲು ಯಾವುದೇ ರೀತಿಯ ಹಿಂಜರಿಕೆ ಇಲ್ಲದೆ ಮುಕ್ತವಾಗಿ ಜನರ ಸಮಸ್ಯೆಯನ್ನು ಅವರೊಂದಿಗೆ ಚರ್ಚಿಸುತ್ತಾರೆ. ಮೊದಲಿನಿಂದಲೂ ಅಂದರೆ ಸಮಾಜ ಸೇವಕಿಯಾಗಿ ಕೆಲಸ ಮಾಡುತ್ತಿದ್ದರಿಂದ ಜನರೊಂದಿಗೆ ಹೇಗೆ ಬೆರೆಯಬೇಕು ಮತ್ತು ಜನರ ಸಮಸ್ಯೆಗಳಿಗೆ ಹೇಗೆ ಸ್ಪಂಧಿಸಬೇಕು

ಎಂಬುದನ್ನು ಸರಿಯಾಗಿ ಅರ್ಥೈಸಿಕೊಂಡಿದ್ದಾರೆ. ಇವರು ಗ್ರಾಮ ಪಂಚಾಯಿತಿ ಸದಸ್ಯರಾಗಿ ಮತ್ತು ಕೆಡಿಡಿಸಿ ಎಂಬ ಸಂಸ್ಥೆಯ ಸಮಾಜ ಸೇವಕಿಯಾಗಿ ಜನರಿಗೆ ಮತ್ತು ಮಹಿಳೆಯರಿಗಾಗಿ "ನ್ಯೂ ಪೂರ್ಣಿಮಾ ಯೋಜನೆ'ಯ ಅಡಿಯಲ್ಲಿ ಮಹಿಳಾ ಸಂಘಗಳಿಗೆ ಬ್ಯಾಂಕುಗಳಿಂದ ಸಾಲ ಕೊಡಿಸುವುದು, ಜನರಿಗೆ ಒಳ್ಳೆಯ ಶೌಚಾಲಯಗಳನ್ನು, ಮನೆಗಳನ್ನು ದುರಸ್ಥಿಗೊಳಿಸುವ ಕೆಲಸ, ಚರಂಡಿ, ರಸ್ತೆಗಳನ್ನು ದುರಸ್ಥಿಗೊಳಿಸುವುದು, ಆರೋಗ್ಯ ಶಿಬಿರ, ಏಡ್ಸ್ ಕುರಿತು ಜಾಗೃತಿ ಶಿಬಿರ ಮತ್ತು ಪರಿಶಿಷ್ಟ ಜನಾಂಗದ ಜನರಿಗೆ ಮೈಕ್ರೋ ಕ್ರೆಡಿಟ್ ಯೋಜನೆಯಡಿಯಲ್ಲಿ ೨೫ ಸಾವಿರ ರೂಪಾಯಿ ಸಾಲಕ್ಕೆ ೧೦ ಸಾವಿರ ರೂ. ಸಬ್‌ಸಿಡಿ ಕೊಡಿಸಿ ಅತಿ ಕಡಿಮೆ ಬಡ್ಡಿ ದರಕ್ಕೆ ಸಾಲವನ್ನು ಕೊಡಿಸಿದ್ದಾರೆ. ಮೇರಿಯವರು ಗ್ರಾಮ ಪಂಚಾಯಿತಿ ಸದಸ್ಯೆಯಾಗಿ ಯಾವುದೇ ರೀತಿಯ ತಾರತಮ್ಯವನ್ನು ಮೂರುವರ್ಷದ ಅವಧಿಯಲ್ಲಿ ಎದುರಿಸಿಲ್ಲ. ಆದರೆ ಮುಂದಿನ ಎರಡು ವರ್ಷಗಳಲ್ಲಿ ಏನಾಗುತ್ತೆ ಎಂಬುದು ತಿಳಿಯದಾಗಿದೆ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಮೇರಿಯವರು ರಾಜಕೀಯದಲ್ಲಿ ಮುಂದುವರೆಯಲು ಇಷ್ಟಪಡುತ್ತಾರೆ. ಆದರೆ ಮುಂದಿನ ಚುನಾವಣೆಯಲ್ಲಿ ತಾಲೂಕು ಪಂಚಾಯಿತಿ ಅಥವಾ ಜಿಲ್ಲಾ ಪಂಚಾಯಿತಿ ಸದಸ್ಯರಾಗಿ ನಿಲ್ಲಲು ಇಚ್ಛಿಸಿರುವರು. ಕನ್ನಡ ವಿಶ್ವವಿದ್ಯಾಲಯದಲ್ಲಿ ಡಾ.ಗಂಗಾಧರ ದೈವಜ್ಞರವರು ಬುಡಕಟ್ಟುಗಳಿಗಾಗಿ ರಾಜಕೀಯ ತರಬೇತಿ ಶಿಬಿರ ಏರ್ಪಡಿಸಿದ್ದು ತುಂಬಾ ಉಪಯುಕ್ತವಾಗಿದೆ. ಮತ್ತು ಮುಂದಿನ ದಿನಗಳಲ್ಲಿ ಏನೇನು ಕೆಲಸಗಳನ್ನು ಮಾಡಬೇಕು? ಅವುಗಳನ್ನು ಕ್ರಿಯಾತ್ಮಕವಾಗಿ ಮುಂದವರೆಸಲು ಪ್ರೋತ್ಸಾ ನೀಡಿದಂತಾಗಿದೆ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಪ್ರಕರಣ : ೨

ಹೆಸರು : **ಪ್ರಾಸಿನ, ಕುಸ್ತಾವ, ಕ್ರಿಶ್ಚಿಯನ್ ಸಿದ್ದಿ**

ವಯಸ್ಸು : **೩೮**

ಶಿಕ್ಷಣ : **ಅನಕ್ಷರಸ್ಥೆ.**

ಕ್ಷೇತ್ರ ಕಾರ್ಯ ಅಧ್ಯಾಯನದಲ್ಲಿ ಪ್ರಾಸಿನರವರನ್ನು ಸಮಗ್ರವಾಗಿ ಅಧ್ಯಯನಕ್ಕೆ ಒಳಪಡಿಸಿದಾಗ ಅವರು ತಮ್ಮ ಅಭಿಪ್ರಾಯವನ್ನು ಈ ಕೆಳಗಿನಂತೆ ವ್ಯಕ್ತಪಡಿಸಿದರು. ಇವರು ಸಹ ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲೂಕಿನ ದಡಕೊಪ್ಪ ಗ್ರಾಮದವರಾಗಿದ್ದವರು. ಇವರ ತಂದೆ ಗುಸ್ತಿನ, ತಾಯಿ ಬಸ್ತಿನ. ಇವರು ಸಹ ಬಡತನದಲ್ಲಿ ಬದುಕುತ್ತಿರುವರು. ಅಲ್ಪಸ್ವಲ್ಪ ತುಂಡು ಭೂಮಿಯಲ್ಲಿ ಕೃಷಿಯ ಜೊತೆಗೆ ಬೇರೆಯವರ ಕೂಲಿ ಕೆಲಸವನ್ನು ಮಾಡಿಕೊಂಡು ಅಣ್ಣಂದಿರ ಜೊತೆಯಲ್ಲಿ ಬೆಳೆದವರು. ಕೊನೆಗೆ ತನಗೆ

ಇಷ್ಟವಾದ ಹುಡುಗನ ಜೊತೆ ಅಣ್ಣಂದಿರ ಒಪ್ಪಿಗೆ ಪಡೆದು ಹದಿನೆಂಟನೆಯ ವಯಸ್ಸಿಗೆ ವಿವಾಹವಾದರು. ಪ್ರಾಸಿನರವರಿಗೆ ಒಟ್ಟು ಮೂರು ಮಕ್ಕಳು, ಅವರಲ್ಲಿ ಒಬ್ಬ ಮಗಳು ಎಸ್.ಎಸ್.ಎಲ್.ಸಿ. ಮತ್ತೊಬ್ಬ ಮಗಳು ಏಳನೆಯ ತರಗತಿ ಓದುತ್ತಿದ್ದಾರೆ. ಒಬ್ಬ ಮಗ ಎರಡನೆಯ ವರ್ಗದಲ್ಲಿ ಕಲಿಯುತ್ತಿರುವನು. ದಡಕೊಪ್ಪ ಗ್ರಾಮದ ಗ್ರಾಮಪಂಚಾಯಿತಿಯಲ್ಲಿ ಸದಸ್ಯರಾಗಿರುವರು.

ಪ್ರಾಸಿನರವರು ದಡಕೊಪ್ಪಾದಲ್ಲಿ ಮಹಿಳಾ ಸಂಘವಾದ 'ಕಿರಣ ಮಹಿಳಾ ಮಂಡಳಿ'ಯ (೧೩ ಜನ ಸಂಘದಲ್ಲಿ) ಉಪಾಧ್ಯಕ್ಷರಾಗಿದ್ದರಿಂದ ಸಂಘದ ಮಹಿಳೆಯರು ಪರಿಶಿಷ್ಟ ಪಂಗಡಕ್ಕೆ ಮೀಸಲಾತಿ ಇರುವುದಿರಂದ ಪ್ರಾಸಿನರವರಿಗೆ ಗ್ರಾಮ ಪಂಚಾಯಿತಿ ಚುನಾವಣೆಗೆ ನಿಲ್ಲುವಂತೆ ಪ್ರೋತ್ಸಾಹಿಸಿದರು. ಹೀಗಾಗಿ ಪ್ರಾಸಿನರವರ ಗಂಡನ ಅನುಮತಿ ಪಡೆದುಕೊಂಡು ಗ್ರಾಮ ಪಂಚಾಯಿತಿ ಚುನಾವಣೆಗೆ ನಿಂತು ದಡಕೊಪ್ಪಾ ಮತ್ತು ಬಂಡರಗಾಳಿ ಎಂಬ ಗ್ರಾಮದಿಂದ ಆರಿಸಿ ಬಂದರು. ಇವರು ಮೊದಲಿಗೆ ಗ್ರಾಮ ಪಂಚಾಯಿತಿ ಸದಸ್ಯರೊಂದಿಗೆ ಮತ್ತು ಇತರೇ ವ್ಯಕ್ತಿಗಳು ಬಂದರೆ ಮಾತನಾಡಲು ಹೆದರುತ್ತಿದ್ದರು. ತಾವು ಗ್ರಾಮ ಪಂಚಾಯಿತಿ ಸದಸ್ಯರಾದ ಮೇಲೆ ಜನರ ಸಮಸ್ಯೆಯನ್ನು ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಸದಸ್ಯರೊಂದಿಗೆ ಚರ್ಚಿಸಲು ಪ್ರಾರಂಭಿಸಿದರು. ಆದರೆ ಇವರು ತನ್ನ ಗಂಡನಿಗೆ ಅಧಿಕಾರದಲ್ಲಿ ಭಾಗವಹಿಸಲು ಅವಕಾಶ ನೀಡಲಿಲ್ಲ. ಪ್ರಾಸಿನರವರು ಗ್ರಾಮ ಪಂಚಾಯಿತಿ ಸದಸ್ಯರಾಗಿ ಶೌಚಾಲಯ, ಚರಂಡಿ ವ್ಯವಸ್ಥೆ, ವಿಧವೆಯರ ವೇತನ, ವಿದ್ಯುತ್ ಸೌಕರ್ಯ, ರಸ್ತೆಗಳ ದುರಸ್ಥಿಗೊಳಿಸುವುದು, ಪಂಚಾಯಿತಿ ವತಿಯಿಂದ ಸ್ವಸಹಾಯ ಸಂಘಗಳನ್ನು ರಚಿಸಿದ್ದಾರೆ. ಪ್ರಾಸಿನರವರು ತಮ್ಮ ಮೂರು ವರ್ಷದ ಅಧಿಕಾರ ಅವಧಿಯಲ್ಲಿ ಇಷ್ಟೆಲ್ಲ ಕೆಲಸಗಳನ್ನು ಕೈಗೊಂಡಿರುವರು. ಮತ್ತು ಡಾ. ಗಂಗಾಧರ ದೈವಜ್ಞರವರು ಕೈಗೊಂಡ ಬುಡಕಟ್ಟು ಜನಾಂಗದವರಿಗೆ ರಾಜಕೀಯ ತರಬೇತಿ ಶಿಬಿರದಿಂದ ಪ್ರಾಸಿನರವರು ಮತ್ತುಷ್ಟು ಜನರಿಗೋಸ್ಕರ ಮತ್ತು ಮಹಿಳೆಯರಿಗೋಸ್ಕರ ಕೆಲಸ ಮಾಡಲು ಸಿದ್ಧರಾಗಿದ್ದಾರೆ. ಯಾವುದೇ ಸಮಸ್ಯೆ ಬಂದರು ಎದುರಿಸುವ ಧೈರ್ಯ ಹೊಂದಿದ್ದಾರೆ. ಇವರು ಮುಂಬರುವ ದಿನಗಳಲ್ಲಿ ತಾಲೂಕು ಅಥವಾ ಜಿಲ್ಲಾ ಪಂಚಾಯಿತಿ ಚುನಾವಣೆಗೆ ನಿಲ್ಲಲು ಹಾಗೂ ರಾಜಕೀಯದಲ್ಲಿ ಮುಂದುವರೆಯಲು ಇಚ್ಛಿಸಿರುವರು.

ಪ್ರಕರಣ : ೩

ಹೆಸರು : ಈದಾಲೀನ್, ಇಂತ್ರೋಜ್, ಬೆಳಗಾಂಕರ

ವಯಸ್ಸು : ೨೭

ಶಿಕ್ಷಣ : ಐದನೆಯ ತರಗತಿ

ರಾಜಕೀಯ ಹಿನ್ನಲೆಯಲ್ಲಿ 'ಈದಾಲೀನ' ಎಂಬ ಮಹಿಳೆಯನ್ನು ಕ್ಷೇತ್ರ ಕಾರ್ಯ ಅಧ್ಯಯನದಲ್ಲಿ ಸಮಗ್ರವಾಗಿ ಅಧ್ಯಯನಕ್ಕೆ ಒಳಪಡಿಸಿದಾಗ ಅವರು ತಮ್ಮ ಅನಿಸಿಕೆಗಳನ್ನು ಈ ಕೆಳಗಿನಂತೆ ಹೇಳಿದರು. ಇವರು ಸಹ ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲೂಕಿನ ಬುಕೇನ ಕೊಪ್ಪಾ ಗ್ರಾಮದವರು. ಬಡಕುಟುಂಬಕ್ಕೆ ಸೇರಿದ ಈದಾಲೀನ ತಂದೆ-ತಾಯಿ ಕೃಷಿ ಕೆಲಸದಲ್ಲಿ ತೊಡಗಿರುವರು. ಏಳನೇ ತರಗತಿಯವರೆಗೆ ಅಭ್ಯಾಸ ಮಾಡಿದ ಇಂತ್ರೋಜನೊಂದಿಗೆ ಹದಿನೆಂಟು ವರುಷಕ್ಕೆ ಈದಾಲೀನವರವ ಮದುವೆಯಾಯಿತು. ಎರಡು ಮಕ್ಕಳನ್ನು ಹೊಂದಿರುವ ಈ ದಂಪತಿಗಳು ಅವರಿಗೆ ಒಳ್ಳೆಯ ಶಿಕ್ಷಣ ಕೊಡಲು ಇಚ್ಚಿಸಿರುವರು. ಒಬ್ಬ ಮಗಳು ಎರಡನೇ ತರಗತಿಯಲ್ಲಿ ಓದುತ್ತಿರುವಳು. ಈದಾಲೀನರವರ ಸದಸ್ಯಕ್ಕೆ ಬುಕೇನ ಕೊಪ್ಪಾ ಗ್ರಾಮದ ಗ್ರಾಮ ಪಂಚಾಯಿತಿ ಸದಸ್ಯರಾಗಿರುವರು.

ಈದಾಲೀನರವರು ರಾಜಕೀಯ ಪ್ರವೇಶ ಸ್ವ ಇಚ್ಛೆಯಿಂದಾಗಲಿ ಅಥವಾ ಯಾವುದೇ ಮಹಿಳಾ ಸಂಘಟನೆಗಳಿಂದ ಪಡೆದಿಲ್ಲ. ಇವರು ಗಂಡನ ಒತ್ತಾಯದ ಮೇರೆಗೆ ರಾಜಕೀಯದಲ್ಲಿ ಪ್ರವೇಶ ಪಡೆದಿದ್ದಾರೆ. ಈಕೆಯ ಗಂಡನಾದ ಇಂತ್ರೋಜರವರಿಗೆ ಊರಿನ ಜನರು ಹೆಂಡತಿಗೆ ಚುನಾವಣೆಗೆ ನಿಲ್ಲಿಸುವಂತೆ ಪ್ರೋತ್ಸಾಹಿಸಿದರು. ಹೀಗಾಗಿ ಈದಾಲೀನರವರು ಇಷ್ಟವಿಲ್ಲದಿದ್ದರೂ ಗಂಡನಿಗೆ ಅವಮಾನವಾಗಬಾರದೆಂಬ ಕಾರಣಕ್ಕಾಗಿ ಗ್ರಾಮ ಪಂಚಾಯಿತಿ ಚುನಾವಣೆಗೆ ನಿಂತು ಜಯಗಳಿಸಿದರು. ಇವರು ಗ್ರಾಮ ಪಂಚಾಯತಿಯಲ್ಲಿ ತಿಂಗಳಗೊಮ್ಮೆ ನಡೆಯುವ ಗ್ರಾಮ ಸಭೆಗಳಿಗೆ ಹಾಜರಾಗಿ ಬರುತ್ತಾರೆ. ಬೇರೆ ಏನಾದರೂ ಕೆಲಸ ಮಾಡುವುದಿದ್ದರೆ ಗಂಡನೆ ಮಾಡುತ್ತಾನೆ. ಈದಾಲೀನರವರು ಹೆಚ್ಚು ಜನರೊಂದಿಗೆ ಸಂಪರ್ಕ ಹೊಂದದೆ ಇರುವುದಕ್ಕೆ ಜನರ ಸಮಸ್ಯೆ ಏನು? ಅವರಿಗಾಗಿ ಏನು ಮಾಡಬೇಕೆಂಬುದರ ಬಗ್ಗೆ ಅರಿವು ಕಡಿಮೆ. ಗಂಡ ಜನರ ಸಮಸ್ಯೆ ಏನೇನು ಇದೆ ಎಂಬುದನ್ನು ಈದಾಲೀನರವರಿಗೆ ತಿಳಿಸಿದಾಗ ಮಾತ್ರ ಮುಂದಿನ ಸಭೆಯಲ್ಲಿ ಭಾಗವಹಿಸಿ ಜನರ ಸಮ್ಯಸೆಗಳ ಬಗ್ಗೆ ಪ್ರಸ್ತಾಪ ಮಾಡುತ್ತಾರೆ. ಇವರು ಗ್ರಾಮ ಪಂಚಾಯತಿ ಸದಸ್ಯರಾಗಿ, ಮನೆ ದುರಸ್ಥಿ, ಅಂಗನವಾಡಿ ಕೆಲಸ, ಚರಂಡಿ ವ್ಯವಸ್ಥೆ ಕೆಲಸ ಮೂರು ವರ್ಷದ ಅಧಿಕಾರ ಅವಧಿಯಲ್ಲಿ ಮಾಡಿದ್ದಾರೆ. ಇವರು ಸಿದ್ದಿ ಜನಾಂಗದ ಕುರಿತು ಒಳ್ಳೆಯ ಅಭಿವೃದ್ಧಿ ಕೆಲಸ ಮಾಡುತ್ತಿದ್ದಾರೆ. ಇವರು ರಾಜಕೀಯದಲ್ಲಿ ಮುಂದುವರೆಯಲು ಇಷ್ಟಪಡುವುದಿಲ್ಲ. ಏಕೆಂದರೆ ಈ ರಾಜಕೀಯದಲ್ಲಿ ಪ್ರವೇಶಿಸಿದ ಮೇಲೆ ಸಮಾಜದಲ್ಲಿ ಅವಹೇಳನಕ್ಕೆ ಪಾತ್ರರಾಗುತ್ತೇವೆ ಎಂಬ ಕಾರಣಕ್ಕಾಗಿ ಮತ್ತು ಸಂಸಾರ ಮಾಡಿಕೊಂಡು ರಾಜಕೀಯ ಕೆಲಸ ಮಾಡಲು ಆಗುವುದಿಲ್ಲ. ಡಾ. ಗಂಗಾಧರ ದೈವಜ್ಞರವರು ಕೈಗೊಂಡ ಬುಡಕಟ್ಟು ಜನಾಂಗದವರೆಗೆ ರಾಜಕೀಯ ತರಬೇತಿ ಶಿಬಿರದಿಂದ ಇವರಿಗೆ ಯಾವುದೇ ರೀತಿಯ ಪ್ರಭಾವವಾಗಿಲ್ಲವೆಂದು ಇವರನ್ನು ವಿಚಾರಿಸಿದಾಗ ಕಂಡುಬಂತು.

ಪ್ರಕರಣ : ೪

ಹೆಸರು : **ಲೂಜಿಯಾ ಮಿಂಗೆಲ್, ಸಿದ್ದಿ**

ವಯಸ್ಸು : ೪೦

ಶಿಕ್ಷಣ : ಅನಕ್ಷರಸ್ಥೆ.

ಕ್ಷೇತ್ರಕಾರ್ಯಕ್ಕೆ ಲೂಜಿಯಾರವರನ್ನು ಸಮಗ್ರ ಅಧ್ಯಯನಕ್ಕಾಗಿ ಒಳಪಡಿಸಿದಾಗ ತಮ್ಮ ಅಭಿಪ್ರಾಯ ಈ ಕೆಳಗಿನಂತೆ ವ್ಯಕ್ತಪಡಿಸಿದರು. ಈಕೆಯು ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲೂಕಿನ ಜತಕಾ ಹೊಸೂರುದವರಾಗಿದ್ದಾರೆ. ಈಕೆಯ ತಂದೆ-ಕತಿತ, ತಾಯಿ ಸಂತಾನಿ ಇವರು ಬಡಕುಟುಂಬದಿಂದ ಬಂದವರಾಗಿದ್ದು, ಕೃಷಿ, ಕೂಲಿ, ಕೆಲಸವನ್ನು ಅವಲಂಬಿಸಿದ್ದಾರೆ. ಇವರಿಗೆ ೧೮ನೆಯ ವಯಸ್ಸಿಗೆ ಮಿಂಗೆಲ್‌ರವರೊಂದಿಗೆ ವಿವಾಹವಾಯಿತು. ಲೂಜಿಯಾರವರಿಗೆ ಮೂರು ಜನ ಗಂಡು ಮಕ್ಕಳು ಒಂದು ಹೆಣ್ಣು ಮಗುವನ್ನು ಹೊಂದಿದ್ದಾರೆ. ಗಂಡು ಮಕ್ಕಳಲ್ಲಿ ಒಂದು ಪಿ.ಯು.ಸಿ., ಮತ್ತೊಬ್ಬ ೭ನೇ ತರಗತಿ ಓದುತಿದ್ದು, ಹೆಣ್ಣು ಮಗಳು ನಾಲ್ಕನೇ ತರಗತಿಯವರಿಗೆ ಓದಿ, ಓದನ್ನು ಮುಂದುವರೆಸದೆ ಕೂಲಿ ಕೆಲಸಕ್ಕೆ ಕಳುಹಿಸುತ್ತಾರೆ. ಸದ್ಯಕ್ಕೆ ಲೂಜಿಯಾರವರು ಜತಕಾ ಹೊಸೂರು ಗ್ರಾಮ ಪಂಚಾಯಿತ ಸದಸ್ಯರಾಗಿದ್ದಾರೆ. ಲೂಜಿಯಾರವರು ಗಂಡನ ಮತ್ತು ಊರಿನ ಹಿರಿಯರ ಒತ್ತಾಯಕ್ಕೆ ರಾಜಕೀಯಕ್ಕೆ ಪ್ರವೇಶವನ್ನು ಪಡೆದಿದ್ದಾರೆ. ಇವರು ರಾಜಕೀಯದಲ್ಲಿ ಯಾವುದೇ ರೀತಿಯ ಆಸಕ್ತಿ ಹೊಂದಿಲ್ಲ. ಇವರು ಗ್ರಾಮಪಂಚಾಯಿತಿ ಸದಸ್ಯರೊಂದಿಗೆ ಅಷ್ಟೊಂದು ಬೆರೆಯಲು ಹಿಂಜರಿಯುತ್ತಾರೆ. ಮೂರು ವರ್ಷದ ಅವಧಿಯಲ್ಲಿ ಶೌಚಾಲಯ, ಚರಂಡಿ, ರಸ್ತೆ ದುರಸ್ಥಿಗೊಳಿಸುವ ಕೆಲಸವನ್ನು ಮಾಡಿದ್ದಾರೆ. ಲೂಜಿಯಾರವರು ತಮ್ಮ ಯಾವುದೇ ಕೆಲಸಕ್ಕೆ ಗಂಡನನ್ನು ಅವಲಂಬಿಸಿರುವರು. ಇವರು ರಾಜಕೀಯದಲ್ಲಿ ಮುಂದುವರೆಯಲು ಇಷ್ಟಪಡುವುದಿಲ್ಲ. ತಾವು ತಮ್ಮ ಸಂಸಾರ ಎಂಬ ಬಂಧನದಿಂದ ಹೊರಗೆ ಬರಲು ಸಾಧ್ಯವಿಲ್ಲ. ಹೀಗಾಗಿ ಲೂಜಿಯಾರವರ ಹಿಂಜರಿಕೆ ಸ್ವಭಾವ ಇವರನ್ನು ಮುಂದುವರೆಯಲು ಅಡ್ಡಿಗೊಳಿಸಿವೆ. ಕನ್ನಡ ವಿಶ್ವವಿದ್ಯಾಲಯದ ಹಂಪಿ ಬುಡಕಟ್ಟು ಅಧ್ಯಯನ ವಿಭಾಗದ ಡಾ. ಗಂಗಾಧರ ದೈವಜ್ಞರವರು ಸತತವಾಗಿ ಐದು ದಿನಗಳವರೆಗೆ ಬುಡಕಟ್ಟು ಜನರಿಗೆ ರಾಜಕೀಯ ತರಬೇತಿ ಶಿಬಿರ ಏರ್ಪಡಿಸಿದರೂ ಕೂಡ ಇವರಲ್ಲಿ ಯಾವುದೇ ರೀತಿಯ ಬದಲಾವಣೆ ಮಾಡಲು ಸಾಧ್ಯವಿಲ್ಲವೆಂಬ ಮಾತು ಇವರದು.

ಪ್ರಕರಣ : ೫

ಹೆಸರು : **ರಾಜಬಿ, ಮುದ್ದಿನ್‌ಸಾಬ್, ಸಿದ್ದಿ**

ವಯಸ್ಸು : ೩೦

ಶಿಕ್ಷಣ : ಅನಕ್ಷರಸ್ಥೆ.

ಕ್ಷೇತ್ರಕಾರ್ಯಕ್ಕೆ ರಾಜಬಿಯವರನ್ನು ಸಮಗ್ರ ಅಧ್ಯಯನಕ್ಕೆ ಒಳಪಡಿಸಿದಾಗ ತಮ್ಮ ಅಭಿಪ್ರಾಯ ಈ ಕೆಳಗಿನಂತೆ ವ್ಯಕ್ತಪಡಿಸಿದರು. ಇವರು ಕಾರವಾರದವರಾಗಿರುತ್ತಾರೆ. ಈಕೆಯ ತಂದೆ–ತಾಯಿ ಭಾಗವತಿ ಎಂಬ ಚಿಕ್ಕಗ್ರಾಮದಲ್ಲಿ ಕೂಲಿಕೆಲಸ ಮಾಡಿಕೊಂಡಿದ್ದಾರೆ. ಇವಳ ತಂದೆ–ತಾಯಿ ೧೨ನೆಯ ವಯಸ್ಸಿಗೆ ಇವರ ಒಪ್ಪಿಗೆ ಪಡೆಯದೇ ಕಂದಲ್‌ಗಿರಿ ಗ್ರಾಮದ ಮುದ್ದಿನ್‌ಸಾಬ್ ಎಂಬುವವರಿಗೆ ವಿವಾಹ ಮಾಡಿ ಗಂಡನ ಮನೆಗೆ ಕಳಿಸಿದರು. ರಾಜಬಿಯರು ಅತಿ ಚಿಕ್ಕ ವಯಸ್ಸಿನಲ್ಲಿ ಗಂಡ ಅವಿಭಕ್ತ ಕುಟುಂಬಕ್ಕೆ ಹೊಂದಿಕೊಂಡು ಸಂಸಾರ ಮಾಡಿದರು. ಕಾಲನಂತರ ಗಂಡನೊಂದಿಗೆ ಕಾರವಾರಕ್ಕೆ ಬಂದು ನೆಲೆಸಿದರು. ಇವರು ಕಾರವಾರಕ್ಕೆ ಬಂದು ೨೦ ವರ್ಷಗಳೇ ಆಗಿದ್ದು ಆಗಾಗ ಕಂದಲ್‌ಗಿರಿಗೆ ಹೋಗಿ ಬರುತ್ತಿರುತ್ತಾರೆ. ರಾಜಬಿಯವರಿಗೆ ೩ ಜನ ಗಂಡು ಮಕ್ಕಳು ಪಿ.ಯು.ಸಿ., ಎಸ್.ಎಸ್.ಎಲ್.ಸಿ., ೭ನೆಯ ತರಗತಿಯವರೆಗೆ ಮಕ್ಕಳು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಇವರಿಗೆ ಹೆಣ್ಣು ಮಕ್ಕಳು ಇಲ್ಲ. ಆದರೂ ಹೆಣ್ಣಿನ ಮೇಲೆ ಅತಿಯಾದ ಪ್ರೀತಿ ಇರುವುದರಿಂದ ಬಡಕುಟುಂಬಕ್ಕೆ ಸೇರಿದ ಇಬ್ಬರು ಹೆಣ್ಣುಮಕ್ಕಳಿಗೆ ವಿವಾಹ ಮಾಡಿಸಿದ್ದಾರೆ. ರಾಜಬಿಯವರು ಸದ್ಯಕ್ಕೆ ತಾಲೂಕು ಪಂಚಾಯಿತಿ ಸದಸ್ಯೆಯಾಗಿರುವರು.

ರಾಜಬಿಯವರು ಕಾರವಾರದ 'ದಲಿತ ರಕ್ಷಣ ವೇದಿಕೆ' ಸಂಘದ ಸದಸ್ಯರಾಗಿದ್ದು, ಪರಿಶಿಷ್ಟ ಪಂಗಡಕ್ಕೆ ತಾಲೂಕು ಪಂಚಾಯಿತಿಗೆ ಮೀಸಲಾತಿ ಇರುವುದರಿಂದ ರಾಜಬಿಯವರನ್ನು ನಿಲ್ಲುವಂತೆ ಪ್ರೋತ್ಸಾಹಿಸಿದರು. ಇದಕ್ಕೆ ಗಂಡ, ಅತ್ತೆ, ಮಾವ ಒಪ್ಪಿಗೆ ನೀಡಿದ್ದರಿಂದ ಕಾರವಾರದ ಸಮಜವಾದ ಪಕ್ಷದಿಂದ ನಿಂತು ಗಡಸಾಯಿ ಮತ್ತು ಹಣಕುಣ ಎಂಬ ಗ್ರಾಮದಿಂದ ಆರಿಸಿಬಂದರು. ರಾಜಬಿಯವರು ತಾಲೂಕು ಪಂಚಾಯಿತಿ ಸದಸ್ಯರೊಂದಿಗೆ ಮಾತನಾಡಲು ಯಾವುದೇ ಹಿಂಜರಿಕೆ ಇಲ್ಲದೆ ಜನರ ಸಮಸ್ಯೆಗಳಲ್ಲಿ ಅವರೊಂದಿಗೆ ಪ್ರಸ್ತಾಪ ಮಾಡುತ್ತಾರೆ. ತಮ್ಮ ಮೂರು ವರ್ಷದ ಅಧಿಕಾರ ಅವಧಿಯಲ್ಲಿ ಚರಂಡಿ ವ್ಯವಸ್ಥೆ, ಕುಡಿಯುವ ನೀರು, ಶಾಲೆ, ಅಂಗನವಾಡಿ ಕಟ್ಟಡ, ರಸ್ತೆ ಕೆಲಸಗಳನ್ನು ಮಾಡಿಸಿದ್ದಾರೆ. ಇವರು ಯಾವುದೇ ಕಾರ್ಯಕ್ರಮವಾಗಲಿ ಅಥವಾ ಸಭೆಗಳಿಗಾಗಲಿ ಮಹಿಳೆಯರನ್ನು ಕರೆದುಕೊಂಡು ಹೋಗುತ್ತಾರೆ. ಹೀಗಾಗಿ ಇವರು ಆಯ್ಕೆಯಾದ ಕ್ಷೇತ್ರದ ಜನರೊಂದಿಗೆ ಅವರ ಸಕಲ ಸಮಸ್ಯೆಗಳನ್ನು ಸರಿಯಾಗಿ ತಿಳಿದುಕೊಂಡು ಜನರೊಂದಿಗೆ ತಾಲೂಕು ಪಂಚಾಯಿತಿ ಅಧ್ಯಕ್ಷರೊಂದಿಗೆ ಸಮಸ್ಯೆಗಳ ಬಗ್ಗೆ ಚರ್ಚಿಸಿ ಪರಿಹಸರಿಸುವಂತೆ ಒತ್ತಾಯಿಸುವರು. ರಾಜಬಿಯವರು ರಾಜಕೀಯದಲ್ಲಿ ಮುಂದುವರೆಯಲು ಇಷ್ಟಪಡುತ್ತಾರೆ. ಮುಂದಿನ ಚುನಾವಣೆಯಲ್ಲಿ ಜಿಲ್ಲಾ ಪಂಚಾಯಿತಿ ಚುನಾವಣೆಗೆ ಸ್ಪರ್ಧಿಸುವ ಆಸೆಯನ್ನು ಹೊಂದಿದ್ದಾರೆ. ಇವರು ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗದಿಂದ ಡಾ. ಗಂಗಾಧರ

ದೈವಜ್ಞರವರು ಸತತವಾಗಿ ಐದು ದಿನಗಳವರೆಗೆ ಬುಡಕಟ್ಟು ಜನರಿಗೆ ರಾಜಕೀಯ ತರಬೇತಿ ಶಿಬಿರದಲ್ಲಿ ತರಬೇತಿ ಹೊಂದಿದ ರಾಜಬಿಯವರು ಮುಂದಿನ ದಿನಗಳಲ್ಲಿ ಕೆಲಸವನ್ನು ಇನ್ನಷ್ಟು ಕ್ರಿಯಾತ್ಮಕವಾಗಿ ಮಾಡುವಂತೆ ಹುಮ್ಮಸ್ಸು ನೀಡಿದಂತಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಈ ಐದು ಪ್ರಕರಣಗಳನ್ನು ಸೂಕ್ಷ್ಮವಾಗಿ ನೋಡಿದಾಗ ತಿಳಿದು ಬರುವುದೇನೆಂದರೆ ಮಹಿಳೆಯರು ಸ್ವ-ಇಚ್ಛೆಯಿಂದ ರಾಜಕೀಯ ಪ್ರವೇಶವನ್ನು ಮಾಡಿಲ್ಲ. ಇವರು ಊರಿನ ಹಿರಿಯರು, ಗಂಡ ಹಾಗೂ ಸಂಬಂಧಿಕರಿಂದ, ಮುಂತಾದವರ ಒತ್ತಾಯಕ್ಕೆ ಒಳಗಾಗಿ ರಾಜಕೀಯ ಪ್ರವೇಶವನ್ನು ಪಡೆದಿದ್ದಾರೆ. ಅನಕ್ಷರತೆ, ರಾಜಕೀಯ ತಿಳುವಳಿಕೆ ಇಲ್ಲದಿರುವುದು ರಾಜಕೀಯಕ್ಕೆ ಹೋಗಲು ಭಯ, ಹಾಗೂ ಬಡತನದಿಂದಾಗಿ ಮಹಿಳೆಯರು ಮತ್ತೊಬ್ಬರ ಒತ್ತಾಯಕ್ಕೆ ಒಳಗಾಗಿ ರಾಜಕೀಯಕ್ಕೆ ಬಂದಿರುವರು. ಆದ್ದರಿಂದ ಮಹಿಳೆಯರಿಗೆ ರಾಜಕೀಯದ ಬಗ್ಗೆ ಇರುವ ಕೆಟ್ಟ ಅಭಿಪ್ರಾಯವನ್ನು ತೊಡೆದುಹಾಕಿ ಅವರಲ್ಲಿ ಜಾಗೃತಿಯನ್ನು ಮೂಡಿಸಬೇಕಾಗಿದೆ. ಕೇವಲ ಮೀಸಲಾತಿಯಿಂದ ಮಹಿಳೆಯರಿಗೆ ಸೀಟು ಕೊಡಬೇಕೆಂದು ಕಾರಣಕ್ಕೆ ರಾಜಕೀಯ ಪ್ರವೇಶವನ್ನು ಪಡೆಯದೆ ತಮ್ಮ ಸ್ವ-ಇಚ್ಛೆಯಿಂದ ರಾಜಕೀಯ ಪ್ರವೇಶವ ಪಡೆಯುವಂತೆ ಅವರಿಗೆ ತಿಳುವಳಿಕೆ ನೀಡಬೇಕು. ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ ಅಥವಾ ಮಹಿಳಾ ಸಂಸ್ಥೆಗಳು ಮಹಿಳೆಯರಿಗೆ ರಾಜಕೀಯ ಪ್ರವೇಶ ಕುರಿತು ಜಾಗೃತಿ ಮನವರಿಕೆ ಮಾಡಬೇಕು. ಅವರಿಗೆ ಶಿಕ್ಷಣ ಅವಶ್ಯಕವಾಗಿದೆ. ಹೀಗಾಗಿ ಮಹಿಳೆಯರಿಗೆ ರಾಜಕೀಯದ ಜ್ಞಾನ ಸರಿಯಾದ ನೆಲೆಯಲ್ಲಿ ದೊರೆತರೆ ಅವರು ರಾಜಕೀಯದಲ್ಲಿ ಭಾಗವಹಿಸಲು ಸಾಧ್ಯವಾಗುವುದು.

೪.೩. ಸಿದ್ದಿ ಸಮುದಾಯದ ಮಹಿಳೆಯರ ಶೈಕ್ಷಣಿಕ ಸ್ಥಿತಿಗತಿ:

ಪ್ರತಿಯೊಬ್ಬ ವ್ಯಕ್ತಿಯ ವಿಕಾಸಕ್ಕೆ ಅಥವಾ ಮಾನವನ ಅಭಿವೃದ್ಧಿಗೆ ಜ್ಞಾನವೇ ಕಾರಣ. ಈ ಜ್ಞಾನ ಮುಖ್ಯವಾಗಿ ಲಭಿಸುವುದು ಶಿಕ್ಷಣದಿಂದ. ಶಿಕ್ಷಣದ ಬಗ್ಗೆ ಸಾಕ್ರೇಟಿಸ್ ಹೀಗೆ ಹೇಳುವನು. 'ತಪ್ಪನ್ನು ತ್ಯಜಿಸಿ ಸತ್ಯವನ್ನು ಕಂಡುಹಿಡಿಯುವುದೇ ಶಿಕ್ಷಣ. ಇದರ ಪ್ರಕಾರ ಶಿಕ್ಷಣವು ವ್ಯಕ್ತಿಯನ್ನು ಅಸತ್ಯದಿಂದ ಸತ್ಯದ ಕಡೆಗೆ ಕತ್ತಲೆಯಿಂದ ಬೆಳಕಿನ ಕಡೆಗೆ, ಅಜ್ಞಾನದಿಂದ ಸುಜ್ಞಾನಕ್ಕೆ, ಕೆಟ್ಟತನದಿಂದ ಒಳ್ಳೆಯತನಕ್ಕೆ ಒಯ್ಯುವುದೇ ಶಿಕ್ಷಣದ ಗುರಿಯಾಗಿದೆ. ಇಂತಹ ಸಮೃದ್ಧವಾದ ಶಿಕ್ಷಣ ಬುಡಕಟ್ಟು ಜನಾಂಗಕ್ಕೆ ದೊರತಿದ್ದರೆ ಇಂದಿನವರೆಗೆ ಅಜ್ಞಾನದ ಕೂಪಕದಲ್ಲಿ ಬದುಕನ್ನು ಕಟ್ಟಿ ಜೀವಿಸುತ್ತಿರಲಿಲ್ಲ. ನಾಗರಿಕ ಜನರ ಸಂಪರ್ಕದ ಕೊಂಡಿ ಕಳಚಿಕೊಂಡ 'ದ್ವೀಪ'ದಂತೆ ಈ ಸಮುದಾಯ ಬದುಕುತ್ತಿದೆ. ಕರ್ನಾಟಕದ

ಬುಡಕಟ್ಟು ಜನಾಂಗ ಸಾಮಾನ್ಯವಾಗಿ ಅರಣ್ಯವಾಸಿಗಳು. ಹೀಗಾಗಿ ಅಲ್ಲಿ ಯಾವುದೇ ಹೊರ ಜಗತ್ತಿನ ನಂಟನ್ನು ಬೆಳಿಸಿಕೊಳ್ಳದೇ ಅನೇಕ ಸಮಸ್ಯೆಗಳಲ್ಲಿ ಒಳಗಾಗಿದ್ದಾಳೆ. ಗುಲಾಮರಾಗಿ ಈ ನಾಡಿಗೆ ವಲಸೆ ಬಂದ ಸಿದ್ದಿ ಜನಾಂಗವು ಇವರು ವಾಸವಾಗಿರುವ ಪ್ರದೇಶಗಳಲ್ಲಿ ಅವರ ಪ್ರದೇಶಕ್ಕೆ ಹೊಂದಿಕೊಂಡು ಶಿಕ್ಷಣ ಕೊಡುವ ಶಿಕ್ಷಕರ ಕೊರತೆ ಆ ಪ್ರದೇಶದಲ್ಲಿ ಮುಖ್ಯವಾಗಿ ಎದ್ದು ಕಾಣುತ್ತಿದೆ. ಯಾವ ಶಿಕ್ಷಕರು ಸಹ ಅಲ್ಲಿ ಹೋಗಿ ಅವರಿಗೆ ಶಿಕ್ಷಣ ಕೊಡಲು ಬಯಸುತ್ತಿಲ್ಲ. ಏಕೆಂದರೆ ಆಧುನಿಕ ನಾಗರಿಕತೆಯಿಂದ ತುಂಬಾ ಹಿಂದುಳಿದಿರುವ ಈ ಭಾಗವು ಅನೇಕ ಸಮಸ್ಯೆಗಳಿಂದ ಕೂಡಿರುವುದು. ಹೀಗಾಗಿ ಯಾವುದಾದರೂ ಕುಂಟು ನೆಪವೊಡ್ಡಿ ರಾಜಕೀಯ ಮಾಡಿ ಅಲ್ಲಿಂದ ಬೇಗ ಜಾಗ ಖಾಲಿ ಮಾಡುವ ಶಿಕ್ಷಕರು ಕಂಡುಬರುತ್ತಾರೆ. ಮಕ್ಕಳಿಗೆ ನಾಲ್ಕು ಅಕ್ಷರ ಕಲಿಸಿಕೊಡುವ ಮನೋಭಾವ ಉಳ್ಳುವ ಶಿಕ್ಷಕರು ಕಡಿಮೆ. ಆದ್ದರಿಂದ ಸಿದ್ದಿ ಜನಾಂಗದ ಮಕ್ಕಳಿಗೆ ಸರಿಯಾದ ಶಿಕ್ಷಣ ದೊರೆಯದ ಕಾರಣ ಅವರ ವಿದ್ಯಾಭ್ಯಾಸ ತುಂಬಾ ಕುಂಟಿತವಾಗಿದೆ. ಇಲ್ಲಿಯ ಶಾಲೆಗಳು ಹೆಚ್ಚಾಗಿ ಏಕೋಪಾಧ್ಯಾಯ ಶಾಲೆಗಳಾಗಿರುತ್ತವೆ. ಹೀಗಾಗಿ ಶಿಕ್ಷಕರು ಮೂರು ದಿನ ಶಾಲೆಯಲ್ಲಿದ್ದರೆ ಇನ್ನು ನಾಲ್ಕು ದಿನ ಮತ್ತೆಲ್ಲೂ ಇರುವಂತಹ ವಾತಾವರಣ ಅಲ್ಲಿ ಸೃಷ್ಟಿಯಾಗಬಹುದು. ರಸ್ತೆಸಾರಿಗೆ, ವಿದ್ಯುಚ್ಛಕ್ತಿಯ ಸರಿಯಾದ ಸಂಪರ್ಕವಿಲ್ಲದಿರುವುದರಿಂದ ಸಾಮಾನ್ಯವಾಗಿ ಎಲ್ಲಾ ಬುಡಕಟ್ಟುಗಳು ವಾಸಿಸುತ್ತಿರುವ ಪ್ರದೇಶದಲ್ಲಿ ಶಿಕ್ಷಕರಾಗಿ ಹೋಗಲು ಯಾರು ಮುಂದಾಗುವುದಿಲ್ಲ.

ಸಿದ್ದಿ ಸಮುದಾಯದ ಮಕ್ಕಳು ಸಹ ಅನೇಕ ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ಅವರಿಗೆ ಸರಿಯಾದ ಕಟ್ಟಡ, ಶಿಕ್ಷಕರ ಕೊರತೆ, ಕೆಲವೊಮ್ಮೆ ಪಠ್ಯಪುಸ್ತಕದ ಕೊರತೆಯನ್ನು ಸಹ ಅನುಭವಿಸುವರು. ಇದರಿಂದ ಈ ಮಕ್ಕಳು ಶಿಕ್ಷಣ ಪಡೆಯಲು ಕಷ್ಟ ಪಡುತ್ತಿದ್ದಾರೆ. ಆದರೆ ಈ ಎಲ್ಲಾ ಸಮಸ್ಯೆಗಳ ನಡುವೆ ಮಹಿಳೆಯರ ಶಿಕ್ಷಣದ ಮಾತು ದೂರನೇ ಉಳಿಯಿತು.

ಸಿದ್ದಿ ಮಹಿಳೆಯರಿಗೆ ಶಿಕ್ಷಣವನ್ನು ಕೊಡಿಸಲು ಪೋಷಕರು ಹಿಂಜರಿಯುವರು. ಅವರಿಗೆ ಎಷ್ಟು ಕಲಿಸಿದರು ಅಷ್ಟೇ ಏಕೆಂದರೆ ಬೇರೆಯವರ ಮನೆಗೆ ಹೋಗುವರು ಎಂಬ ಮನೋಭಾವ ಹೊಂದಿದ್ದಾರೆ. ಹೀಗಾಗಿ ಹೆಚ್ಚಾನುಹೆಚ್ಚು ಮಹಿಳೆಯರು ಮನೆಯ ಕೆಲಸದಲ್ಲಿ ಮಕ್ಕಳ ಲಾಲನೆ ಪಾಲನೆಯಲ್ಲಿಯೇ ತೊಡಗುವರು. ಇದರಿಂದ ಸಿದ್ದಿ ಮಹಿಳೆ ಶಿಕ್ಷಣದ ವಿಚಾರದಲ್ಲಿ ತುಂಬಾ ಹಿಂದುಳಿರುವಳು. ಇತ್ತೀಚ್ಚಿಗೆ ಸರ್ಕಾರವು ಮಹಿಳೆಯರಿಗಾಗಿ ಏನೆಲ್ಲಾ ಸೌಕರ್ಯ ಒದಗಿಸಿದೆ. ಆದರೂ ಸಹ ಕಡಿಮೆ ಪ್ರಮಾಣದಲ್ಲಿ ಶಾಲೆಗೆ ಕಳಿಸುವ ಪೋಷಕರಿದ್ದಾರೆ. ಈ ಬುಡಕಟ್ಟುಗಳು ವಾಸಿಸುವ ಪ್ರದೇಶದಲ್ಲಿ ಶಿಕ್ಷಕರು ಮತ್ತು ಉತ್ತಮ

ಶೈಕ್ಷಣಿಕ ಸೌಲಭ್ಯಗಳನ್ನು ಸರ್ಕಾರ ಸರಿಯಾದ ಕ್ರಮದಲ್ಲಿ ಒದಗಿಸಿದರೆ ಈ ಜನಾಂಗ ಅನಕ್ಷರಸ್ಥ ಲೋಕದಿಂದ ಅಕ್ಷರ ಲೋಕಕ್ಕೆ ಹೆಚ್ಚಾಗಿ ಮುಂದೆ ಬರಲು ಸಾಧ್ಯ. ಗುಲಾಮರಾಗಿ ಈ ನಾಡಿಗೆ ಬಂದಂದಿನಿಂದ ಅವರಿಗೆ ಯೋಗ್ಯ ಶಿಕ್ಷಣ ದೊರತ್ತಿದ್ದರೆ ಸಹಜವಾಗಿ ಅವರು ಗುಲಾಮಗಿರಿಯಿಂದ ಸ್ವತಂತ್ರ್ಯವಾದ ಬದುಕನ್ನು ಕಟ್ಟಿ ಜೀವಿಸಬಹುದಾಗಿತ್ತು. ಒಡೆಯರ ಮನೆಕೆಲಸದಿಂದ ಕಳಿಚಿಕೊಂಡು ಸರ್ಕಾರದ ಉದ್ಯೋಗದಲ್ಲಿರುತ್ತಿದ್ದರು.

೧೯೮೭ ರಿಂದ ಶಿಕ್ಷಣವನ್ನು ಪಡೆಯುತ್ತಾ ಬಂದ ಸಿದ್ದಿಯರು, ಶಿಕ್ಷಣದಲ್ಲಿ ಇನ್ನೂ ಅತ್ಯಂತ ಕೆಳಮಟ್ಟದಲ್ಲಿರುವರು. ೧೯೮೭ ರಿಂದ ಶಿಕ್ಷಣ ಪಡೆದ ಇವರು ಇಲ್ಲಿಯವರೆಗೆ ಉನ್ನತ ಹಂತದ ಶಿಕ್ಷಣವನ್ನು ಪಡೆದಿರುವುದು ಎಲ್ಲಿಯು ಕಂಡುಬಂದಿಲ್ಲ. ಏಕೆಂದರೆ ೩-೪ನೆಯ ತರಗತಿಯಲ್ಲಿಯೇ ಸಿದ್ದಿ ಮಕ್ಕಳನ್ನು ಅನುತ್ತೀರ್ಣರನ್ನಾಗಿ ಮಾಡುತ್ತಿದ್ದರಿಂದ ಇವರು ಮತ್ತೇ ಅದೇ ತರಗತಿಯಲ್ಲಿ ಅಭ್ಯಾಸ ಮಾಡಲು ನಿರಾಕರಿಸುತ್ತಿದ್ದರು. ಶಿಕ್ಷಕರು ಇವರನ್ನು ಯಾಕೆ ಅನುತ್ತೀರ್ಣರನ್ನಾಗಿ ಮಾಡುತ್ತಿದ್ದರೆಂದರೆ ಏಳು-ಎಂಟು ವರ್ಷಗಳವರೆಗೆ ಮಕ್ಕಳು ಶ್ರೀಮಂತರ ಮನೆಗಳಲ್ಲಿ ದನ ಕಾಯುತ್ತಿದ್ದರು. ಹೀಗಾಗಿ ಈ ಮಕ್ಕಳು ಶಾಲೆಗೆ ಹೋದರೆ ದನ ಕಾಯಲು ಯಾರು ಇಲ್ಲದಂತಾಗುವುದು. ಅದಕ್ಕೆ ಶಾಲೆಯ ಶಿಕ್ಷಕರು ಒಡೆಯರ ಅಥವಾ ಶ್ರೀಮಂತರ ಮಾತನ್ನು ಕೇಳಿ ಈ ಮಕ್ಕಳು ದಡ್ಡರಾಗಿರುವರು ಎಂದು ಅನುತ್ತೀರ್ಣರಾಗಿ ಮಾಡುತ್ತಿದ್ದರು. (ಮಾಹಿತಿ ನೀಡಿದವರು: ದಿಯೋಗ ಸಿದ್ದಿ, ಹಳಿಯಾಳ).

ಹೆಣ್ಣು ಮಕ್ಕಳ ಶಿಕ್ಷಣದ ವಿಷಯದಲ್ಲಂತೂ ಪೋಷಕರು ತುಂಬಾ ತಿರಸ್ಕಾರ ಮಾಡುತ್ತಿರುವರು. ಪಂಪ ಕವಿ ಸ್ತ್ರೀಯರ ಶಿಕ್ಷಣದ ಅವಶ್ಯಕತೆ ಕುರಿತು "ಸ್ತ್ರೀಯರಿಗೆ ಶೀಲ ಮತ್ತು ವಿನಯ ಗುಣದೊಡನೆ ವಿದ್ಯೆಯು ಪರಮಾವಶ್ಯಕ. ಇದರಿಂದಲೇ ಅವರು ಜಗತ್ಪಾವನೆಯರಾಗಿರುತ್ತಾರೆ" ಎಂದು ಆದಿಕಾಲದಿಂದಲೂ ಸ್ತ್ರೀಯರ ಶಿಕ್ಷಣ ಎಷ್ಟು ಮಹತ್ವವಾದುದು ಎಂಬುದು ಗೊತ್ತಾಗುತ್ತದೆ. ತಂದೆ-ತಾಯಿ ಕೆಲಸಕ್ಕೆ ಹೋದಾಗ ಚಿಕ್ಕಮಕ್ಕಳನ್ನು ನೋಡಿಕೊಳ್ಳುವ ಕೆಲಸ ಹೆಣ್ಣುಮಕ್ಕಳ ಪಾಲಿಗೆ ಬರುವುದು. ಅಲ್ಲದೇ 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ' ಎಂಬ ಗಾದೆಯಂತೆ ಹೆಣ್ಣಿಗೇಕೆ ಶಿಕ್ಷಣ ಬೇರೆಯವರ ಮನೆಗೆ ಹೋಗುವವಳು ಎಂಬ ಭಾವನೆ ಶಿಕ್ಷಣದಿಂದ ವಂಚಿತಳನ್ನಾಗಿ ಮಾಡಿದೆ. ಸಾಂಬ್ರಾಣಿಯಲ್ಲಿ ಬಾಲಕ ಬಾಲಕಿಯರ ವಸತಿ ನಿಲಯದಲ್ಲಿ ೩೦ ರಿಂದ ೩೫ ಜನ ಮಕ್ಕಳು ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು. ಈ ವಸತಿ ನಿಲಯವು ದಿಯೋಗರವರ ನೇತೃತ್ವದಲ್ಲಿ ಮುಂದುವರೆಯುತ್ತಿದ್ದಾಗ ಸರ್ಕಾರ ವಸತಿ ನಿಲಯದ ಜವಾಬ್ದಾರಿ ವಹಿಸಿಕೊಂಡು ವಿದ್ಯಾರ್ಥಿಗಳ ಬಗ್ಗೆ ನಿರ್ಲಕ್ಷ್ಯ ತೋರಿಸಿದರು. ಒಟ್ಟಿನಲ್ಲಿ ಆ ವಸತಿ ನಿಲಯದಲ್ಲಿ ಮಕ್ಕಳಿಲ್ಲದಂತೆ ಮಾಡಿದರು. ಸಿದ್ದಿ ಸಮುದಾಯದ ಮಕ್ಕಳು ಶಿಕ್ಷಣದಲ್ಲಿ ಮುಂದುವರೆಯಬಾರದೆಂಬ ಮೇಲ್ಜಾತಿಯವರ

ಕುತಂತ್ರವಾಗಿದೆ. ಸಿದ್ದಿಗಳು ಶಿಕ್ಷಣ ರಂಗದಲ್ಲಿ ಅನೇಕ ರೀತಿಯ ತೊಂದರೆಗೆ ಒಳಗಾಗುತ್ತಿದ್ದಾರೆ. ಹಳಿಯಾಳ ತಾಲೂಕಿನ ಶಿವಾಜಿ ಕಾಲೇಜಿನ ಇಬ್ಬರು ಹೆಣ್ಣುಮಕ್ಕಳ ಶಿಷ್ಯವೇತನದಲ್ಲಿ ಮೋಸ ಮಾಡಿದ್ದನ್ನು ದಾಖಲೆ ಸಮೇತ ದಿಯೋಗ ಸಿದ್ದಿಯರು ತೋರಿಸಿದ್ದಾರೆ. (ಹಳಿಯಾಳ ತಾಲೂಕಿನ ಸಹಕಾರಿ ಸಂಘದ ಅಧ್ಯಕ್ಷರಾಗಿ ದಿಯೋಗರವರು ನೀಡಿದ ಮಾಹಿತಿ ವಿವರ) ಮಹಿಳೆಯರಿಗಾಗಿ ಸರ್ಕಾರವು ಕೆಲವು ಸೌಲಭ್ಯಗಳನ್ನು ಕೊಟ್ಟರೆ ಅವುಗಳು ಕೂಡ ಸರಿಯಾಗಿ ತಲುಪದಂತೆ ಅಧಿಕಾರಿಗಳು ತಮ್ಮ ನಿರ್ಲಕ್ಷ್ಯ ತೋರಿಸುವರು.

ಪ್ರಸ್ತುತ ಸಂದರ್ಭದಲ್ಲಿ ನಾಗರಿಕ ಜನತೆಯ ಪ್ರಭಾವದಿಂದ ಸಿದ್ದಿ ಮಹಿಳೆಯರು ತಾವು ಕಲಿಯಲು ಮುಂದಾಗಿರುವುದು ಕಂಡುಬರುವುದು. ಅತ್ಯಂತ ನಿಕೃಷ್ಟವಾದ ಬಡತನದಲ್ಲಿ ಬದುಕುತ್ತಿರುವ ಬುಡಕಟ್ಟುಗಳು ಸಹಜವಾಗಿಯೇ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳಿಸಲು ಹಿಂಜರಿಯುತ್ತಿದ್ದರು. ಅದೇ ಮಕ್ಕಳನ್ನು ಕೂಲಿ ಕೆಲಸಕ್ಕೆ ಕಳಿಸುವ ವ್ಯವಸ್ಥೆ ಅವರಲ್ಲಿತ್ತು. ಹೀಗಾಗಿ ಅಕ್ಷರ ಜ್ಞಾನ ಸಿದ್ದಿ ಮಕ್ಕಳಲ್ಲಿ ಮರೆಯಾಯಿತು. ಶಿಕ್ಷಣವನ್ನು ಪಡೆಯುವಲ್ಲಿ ಸಿದ್ದಿ ಸಮುದಾಯ ಬುಡಕಟ್ಟುಗಳ ಅಂಚಿನಲ್ಲಿ ಇಲ್ಲದಂತಾಯಿತು. ಇವರಿಗೆ ತಮ್ಮ ನೆಲದಲ್ಲಿ ನಿಲ್ಲುವ ಶಿಕ್ಷಣದ ಪರಿಸರವು ಕಳಚಿದಂತಿದೆ. ಅದರಲ್ಲಿ ಮಹಿಳೆಯರು ಶಿಕ್ಷಣವನ್ನು ಪಡೆಯುವುದು ಅಸಾಧ್ಯವಾದ ಮಾತೆ ಸರಿ. ಇಂತಹ ಕಷ್ಟಕರವಾದ ಬದುಕಿನ ನಡುವೆ ಜೀವನ ನಡೆಸಿದ ಸಿದ್ದಿಗಳು ಇತ್ತಿತ್ತಲಾಗಿ ಶಿಕ್ಷಣದ ಕಡೆಗೆ ತಮ್ಮ ಒಲವನ್ನು ತೋರಿಸಿದ್ದಾರೆ. ಸಿದ್ದಿ ಸಮುದಾಯ ಶಿಕ್ಷಣವನ್ನು ಪಡೆದ ಗಂಡುಹೆಣ್ಣಿನ ಸಂಖ್ಯೆಯನ್ನು ಕಿರಣ ಕಮಲ ಪ್ರಸಾದವರು ನೀಡಿದ ಅಂಕಿಗಳನ್ನು ಗಮನಿಸಬೇಕಾಗಿದೆ.

ಕೋಷ್ಟಕ– ೧೪

ಕರ್ನಾಟಕದಲ್ಲಿ ಸಿದ್ದಿ ಸಮುದಾಯದ ಜನಸಂಖ್ಯೆ

ಸಂ.	ತಾಲ್ಲೂಕು	ಜಿಲ್ಲೆ	ಒಟ್ಟು ಕುಟುಂಬ	ಧರ್ಮ ಹಿಂದೂ	ಇಸ್ಲಾಂ	ಕ್ರಿಶ್ಚಿಯನ್	ಒಟ್ಟು ಜನಸಂಖ್ಯೆ	ಪುರುಷರು	ಮಹಿಳೆಯರು	ಪ್ರೌಢರು	ಮಕ್ಕಳು	ಒಬ್ಬಂಟಿ	ವಿವಾಹಿತ	ವಿಧುವೆ ವಿಧುರ	ವಿಚ್ಛೇದಿತ	ಕುಟುಂಬ ಶೇಕಡಾ ವಾರು
೧.	ಅಂಕೋಲಾ	ಉ.ಕನ್ನಡ	೯೯	೯೯	–	–	೫೮೭	೨೯೫	೨೯೨	೩೪೮	೨೩೯	೩೩೯	೨೧೯	೨೪	೫	೬.೫
೨.	ಹಳಿಯಾಳ	ಉ.ಕನ್ನಡ	೪೫೮	೦	೨೦೧	೨೫೭	೨೨೮೦	೧೧೪೩	೧೧೩೭	೧೩೧೭	೯೬೩	೧೨೧೬	೮೮೪	೧೬೮	೧೨	೫೫.೦
೩.	ಮುಂಡಗೋಡ	ಉ.ಕನ್ನಡ	೮೯	೧	೫೧	೩೭	೪೯೯	೨೬೩	೨೩೬	೨೮೦	೨೧೯	೨೮೨	೧೯೭	೨೦	–	೫.೫
೪.	ಶಿರಶಿ	ಉ.ಕನ್ನಡ	೯	೯	–	–	೬೮	೩೩	೩೫	೩೬	೩೨	೪೩	೨೨	೨	೧	೭.೪
೫.	ಸುಫಾ	ಉ.ಕನ್ನಡ	೭	–	–	೭	೩೩	೧೬	೧೭	೧೬	೧೭	೧೬	೧೫	೨	–	೫.೫
೬.	ಯಲ್ಲಾಪೂರ	ಉ.ಕನ್ನಡ	೩೭೭	೧೭೯	೫೫	೧೪೩	೧೮೯೪	೯೮೭	೯೦೭	೧೦೬೫	೮೨೯	೧೦೮೬	೯೧೯	೭೫	೧೪	೫.೨
೭.	ಕಲಘಟಗಿ	ಧಾರವಾಡ	೩೪ (+೧೪)	–	೩೪ (+೧೪)	–	೧೫೯	೮೫	೭೪	೯೯	೬೦	೭೦	೭೪	೧೫	–	೪.೨
೮.	ಖಾನಾಪೂರ	ಬೆಳಗಾಂ	೧೪	–	೩	೧೧	೫೮	೨೬	೩೨	೩೬	೨೨	೩೭	೧೪	೭	–	೩.೯
	ಒಟ್ಟು		೧೦೮೭ (+೧೪)	೨೮೮ ೨೬.೫೦%	೩೪೪ ೩೧.೬೦%	೪೫೫ ೪೧.೯೦%	೫೫೭೮ ೧೦೦%	೨೮೪೮	೨೭೩೦	೩೧೯೧	೨೩೮೧	೩೦೮೯	೨೧೪೪	೩೧೩	೩೨	೫.೫

–ಕಿರಣ್‌ಕಮಲ ಪ್ರಸಾದ

ಈ ಕೋಷ್ಟಕದ ಪ್ರಕಾರ ತಿಳಿದುಬರುವುದೇನೆಂದರೆ ಶಿಕ್ಷಣ ಕ್ಷೇತ್ರದಲ್ಲಿ ಮಹಿಳೆಯರಿಗಿಂತ ಪುರುಷರೇ ಮೇಲುಗೈ ಸಾಧಿಸಿರುವರು. ಇಲ್ಲಿ ಮಹಿಳೆಯರು ಕಡಿಮೆ ಪ್ರಮಾಣದಲ್ಲಿ ಶಿಕ್ಷಣವನ್ನು ಪಡೆದಿದ್ದಾರೆ. ನಾನು ಕೈಗೊಂಡ ಕ್ಷೇತ್ರ ಕಾರ್ಯದಲ್ಲಿ ಮಾಹಿತಿ ಪಡೆದ ಮಹಿಳೆಯರ ಶಿಕ್ಷಣದ ಗುಣಮಟ್ಟ ಈ ಕೆಳಗಿನ ಕೋಷ್ಟಕದ ಮೂಲಕ ತಿಳಿದುಬರುತ್ತದೆ.

ಕೋಷ್ಟಕ – ೧೫

ಶಿಕ್ಷಣ ಮಟ್ಟ	ಮಹಿಳೆಯರು	ಶೇಕಡಾವಾರು	ಪುರುಷರು	ಶೇಕಡಾವಾರು
ಪ್ರಾಥಮಿಕ	೧೪	೨೩.೩೩	೧೪	೨೨.೩೩
ಪ್ರೌಢ	೩	೫	೧	೧.೬೬
ಪದವಿಪೂರ್ವ	೧	೧.೬೬	–	–
ಅನಕ್ಷರಸ್ಥರು	೪೨	೭೦	೪೫	೭೫

ಕ್ಷೇತ್ರಕಾರ್ಯಕ್ಕೆ ಒಳಪಡಿಸಿದ ೬೦ ಜನ ಮಹಿಳೆಯರಲ್ಲಿ ಪ್ರಾಥಮಿಕ ಶಿಕ್ಷಣವನ್ನು ಶೇ.೨೩.೩೩ರಷ್ಟು ಮಹಿಳೆಯರು ಪಡೆದಿದ್ದರೆ, ಪುರುಷರು ೨೩.೩೩ರಷ್ಟು ಪಡೆದಿರುವರು. ಪ್ರೌಢ ಶಿಕ್ಷಣವನ್ನು ಶೇಕಡಾ ೫ರಷ್ಟು ಮಹಿಳೆಯರು ಪಡೆದರೆ ಪುರುಷರು ಶೇ.೧.೬೬ರಷ್ಟು ಪಡೆದಿದ್ದಾರೆ. ಪದವಿ ಪೂರ್ವ ಶಿಕ್ಷಣವನ್ನು ಮಹಿಳೆ ಶೇಕಡಾ. ೧.೬೬ರಷ್ಟು ಪಡೆದರೆ ಪುರುಷರು ಪಡೆದಿರುವುದಿಲ್ಲ. ಶೇಕಡಾ. ೭೦ರಷ್ಟು ಮಹಿಳೆಯರು ಅನಕ್ಷರಸ್ಥರಾಗಿದ್ದರೆ ಪುರುಷರು ೭೫ರಷ್ಟು ಅನಕ್ಷರಸ್ಥರಾಗಿರುವುದು ಕಂಡುಬಂದಿದೆ.

ಇತ್ತೀಚಿಗೆ ಸಿದ್ದಿ ಸಮುದಾಯದವರು ಉನ್ನತ ಮಟ್ಟದ ಶಿಕ್ಷಣದಲ್ಲಿ ಪ್ರವೇಶವನ್ನು ಪಡೆಯುತ್ತಿದ್ದಾರೆ. ಸಧ್ಯ ಇಬ್ಬರು ಹುಡುಗರು ಇಂಜಿನಿಯರಿಂಗ್ ವಿಭಾಗದಲ್ಲಿ ಅಭ್ಯಾಸ ಮಾಡುತ್ತಿದ್ದಾರೆ. ಎಲ್.ಎಲ್.ಬಿ. ಪದವಿಯಲ್ಲಿ ನಾಲ್ಕು ಜನ (ಇಬ್ಬರು ಹುಡುಗಿಯರು, ಇಬ್ಬರು ಹುಡುಗರು) ಡಿ.ಎಡ್. (ಟಿ.ಸಿ.ಎಚ್) ಮೂರು ಜನ ಹೆಣ್ಣು ಮಕ್ಕಳು, ನರ್ಸಿಂಗ್‌ನಲ್ಲಿ ಇಬ್ಬರು ಹೆಣ್ಣುಮಕ್ಕಳು, ಎಂ.ಬಿ.ಬಿ.ಎಸ್.ಗೆ ಒಬ್ಬ ಹುಡುಗ ವ್ಯಾಸಂಗ ಮಾಡುತ್ತಿರುವರು. ಪ್ರಾಧ್ಯಾಪಕರಾಗಿ ಒಬ್ಬರು ಕೆಲಸ ಮಾಡುತ್ತಿರುವರು. (ಅಹಮದಾಬಾದ್ ತತ್ವಣಗಿಯವರಾಗಿದ್ದರು) ಈ ಮೇಲಿನವು ಕ್ಷೇತ್ರಕಾರ್ಯ ಕೈಗೊಂಡ ಮಾಹಿತಿ ಪ್ರಕಾರ ತಿಳಿದುಬಂದಿದೆ.

ಅಡಿಟಿಪ್ಪಣಿಗಳು :

೧. ಭಾರತೀಯ ಸಮಾಜ ಪರಿಚಯ – ಪ್ರೊ. ಕೆ. ಭೈರಪ್ಪ, ಪುಟ ೧೪, ೨೦೦೬.

೨. ಕಪ್ಪು ಹಕ್ಕಿಯ ಬೆಳಕಿನ ಹಾಡು, ಕಮಲಾ ಎಂ.ಆರ್. ಪುಟ ೭, ೨೦೦೪.

೩. ಕಪ್ಪು ಹಕ್ಕಿಯ ಬೆಳಕಿನ ಹಾಡು, ಕಮಲಾ ಎಂ.ಆರ್. ಪುಟ ೧೯, ೨೦೦೪.

೪. ಕಪ್ಪು ಹಕ್ಕಿಯ ಬೆಳಕಿನ ಹಾಡು, ಕಮಲಾ ಎಂ.ಆರ್. ಪುಟ ೧೫, ೨೦೦೪.

೫. ಮಹಿಳೆ ಸಮಾಜ ಮತ್ತು ಸಂಸ್ಕೃತಿ – ಡಾ ಆರ್. ಇಂದಿರಾ, ಪುಟ ೪೦, ೨೦೦೨.

೬. ಮಹಿಳೆ ಸಮಾಜ –ಡಾ. ವಿಜಯ್ ಕರಿಕಲ್, ಪುಟ ೧೩, ೨೦೦೭.

೭. ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಜನರು – ಎನ್.ಆರ್. ನಾಯಕ, ಪುಟ ೧೨, ೧೯೯೨.

೮. ವಿಜಯಾನ್ವೇಷಣೆ – ಡಾ. ಎಸ್.ಡಿ.ಶಶಿಕಲಾ ಪುಟ ೪೭೯, ೨೦೦೪.

೯. ಮಹಿಳಾ ಸಂಕಥನ – ಡಾ. ಗಾಯತ್ರಿ ನಾವಡ, ಪುಟ ೫೪, ೨೦೦೩.

೧೦. ಮಹಿಳೆ ಮತ್ತು ರಾಜಕಾರಣ, ಪುಟ ೧೯೬, ಗೀತಾ ಕೃಷ್ಣಮೂರ್ತಿ, ೨೦೦೦.

ಅಧ್ಯಾಯ : ಐದು

ಸಿದ್ದಿ ಸಮುದಾಯದ ಮಹಿಳೆಯರ ಆರ್ಥಿಕ ಸ್ಥಿತಿಗತಿ

೫.೧. ವೇತನ ತಾರತಮ್ಯ.

ಅಧ್ಯಾಯ : ಐದು

ಸಿದ್ದಿ ಸಮುದಾಯದ ಮಹಿಳೆಯರ ಆರ್ಥಿಕ ಸ್ಥಿತಿಗತಿ

ಯಾವುದೇ ಒಬ್ಬ ವ್ಯಕ್ತಿ ಅಥವಾ ಸಮುದಾಯದ ಸಾಮಾಜಿಕ ಸ್ಥಾನಮಾನಗಳನ್ನು ನಿರ್ಧರಿಸುವಲ್ಲಿ ಆರ್ಥಿಕ ಚಟುವಟಿಕೆಗಳು ಮುಖ್ಯ ಪಾತ್ರ ವಹಿಸುತ್ತದೆ. ಸಮಾಜದಲ್ಲಿ ಉಳ್ಳವರು, ಉಳ್ಳದೇ ಇರುವವರು, ಮೇಲು-ಕೀಳು, ಬಡವ ಬಲ್ಲಿದ ಎಂಬ ಶ್ರೇಣೀಕರಣ ಇರುವುದನ್ನು ಕಾಣುತ್ತೇವೆ. ಸಿದ್ದಿಗಳನ್ನು ಹಲವು ವರ್ಷಗಳಿಂದ ಗುಲಾಮರಾಗಿ ನಮ್ಮ ಭಾರತಕ್ಕೆ ಪೋರ್ಚುಗೀಸರು ತಂದು ಮಾರಿದರು. ಆಗ ಅವರದೇ ಆದ ಆರ್ಥಿಕತೆ ಎಂಬುದು ಇರಲಿಲ್ಲ. ಗುಲಾಮರಾಗಿ ಶ್ರೀಮಂತರ ಕೆಲಸ ಮಾಡಿಕೊಂಡು ತಮ್ಮ ಜೀವನವನ್ನು ಅಥವಾ ಬದುಕನ್ನು ಸಾಗಿಸುತ್ತಿದ್ದರು. ತಮ್ಮದೇ ಆದ ವ್ಯಾಪಾರ, ನೌಕರಿ, ಸ್ವಂತ ಭೂಮಿಯನ್ನು ಹೊಂದಿರದೆ ಶ್ರೀಮಂತರ ಜಮೀನಿನಲ್ಲಿ ದುಡಿದು ಅವರು ಕೊಟ್ಟ ಅಲ್ಪ ಕಾಳುಕಡ್ಡಿಗಳಿಂದ ತಮ್ಮ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದರು. ತುಂಬಾ ಶ್ರಮಜೀವಿಗಳಾದ ಸಿದ್ದಿಗಳು ಯುರೋಪಿಯನ್ನರ ಗುಲಾಮಿ ಪದ್ಧತಿಗೆ ಒಳಗಾಗಿ ಭಾರತದ ಹಲವಡೆ ಚದುರಿದರು. ಅವರು ತಮ್ಮದೇ ಆದ ಪಾರಂಪರಿಕ ವೃತ್ತಿಯನ್ನಾಗಲೀ ಹೊಂದಿರಲಿಲ್ಲ. ಯುರೋಪಿಯನ್ನರು ಇವರನ್ನು ಭಾರತಕ್ಕೆ ದುಡಿಸಿಕೊಳ್ಳಲು ಅಥವಾ ಕೆಲಸಕ್ಕೆ ಬಳಸಿಕೊಳ್ಳಲೆಂದು ತಂದು ಮಾರಿದರು. ಇವರ ದೇಹ ದಾಢ್ಯತೆಯನ್ನು ನೋಡಿ ಎಲ್ಲಾ ಕೆಲಸವನ್ನು ಮಾಡಬಲ್ಲರು ಎಂದು ಅವರಿಂದ ತುಂಬ ಶ್ರಮದಾಯಕವಾದ ಕೆಲಸ ಕಾರ್ಯಗಳನ್ನು ಮಾಡಿಸಿಕೊಳ್ಳುತ್ತಿದ್ದರು.

ಆಧುನೀಕರಣಗೊಂಡ ಇಂದಿನ ಈ ಸಮಾಜದಲ್ಲಿ ಆರ್ಥಿಕತೆಗೆ ಹೆಚ್ಚಿನ ಪ್ರಾತಿನಿಧ್ಯವನ್ನು ನೀಡಲಾಗುತ್ತದೆ. ಸಿದ್ದಿಗಳು ಈಗ ಆರ್ಥಿಕ ಬದಲಾವಣೆಗೆ ಒಳಗಾಗುತ್ತಿದ್ದಾರೆ. ಕಳೆದ ಇಪ್ಪತ್ತು-ಇಪ್ಪತ್ತೈದು ವರ್ಷಗಳ ಹಿಂದೆ ಇವರ ಆರ್ಥಿಕ ಸ್ಥಿತಿ ತುಂಬಾ ಶೋಚನೀಯವಾಗಿತ್ತು. ಏಕೆಂದರೆ ಇವರಿಗೆ ಸ್ವಂತ ಜಮೀನು, ಮನೆಗಳು ಇರಲಿಲ್ಲ. ಆದರೆ ಇತ್ತೀಚಿಗೆ ನಾಗರಿಕರೊಂದಿಗೆ ಬೆರೆತು ಹಣ, ಆಸ್ತಿಗಳಿಗೆ ಪ್ರಾಮುಖ್ಯತೆಯನ್ನು ನೀಡುತ್ತಿದ್ದಾರೆ. ಸಮಾಜದ ಮುಖ್ಯ ವಾಹಿನಿಗೆ ಬರಲು ಹಾತೊರೆಯುತ್ತಿರುವರು.

ಸಿದ್ದಿಗಳು ತಮ್ಮ ಪಾರಂಪರಿಕ ವೃತ್ತಿಯಾದ ಕೃಷಿಯನ್ನೇ ಅವಲಂಬಿಸಿದ್ದಾರೆ. ಕೃಷಿ ಇಲ್ಲದೆ ಕೃಷಿಗೆ ಸಂಬಂಧಿಸಿದ ಉಪಕಸುಬುಗಳನ್ನು ಮಾಡುತ್ತ ಒಂದೆಡೆ ಇಂದು ನೆಲೆನಿಂತಿದ್ದಾರೆ. ಜೀವನ ನಿರ್ವಹಣೆಗಾಗಿ ಇಂದು ಇವರು ಹಲವು ಕಸುಬುಗಳನ್ನು ಕೂಡ ಅವಲಂಬಿಸಿರುವರು. ಬದಲಾದ ಆರ್ಥಿಕ ಪರಿಸ್ಥಿತಿಯೊಂದಿಗೆ ಇವರ ಜೀವನ ಕ್ರಮವು

ಸಹ ಬದಲಾವಣೆಗೆ ಒಳಪಡುತ್ತಿದೆ. ಹಿಂದೆ ಸಿದ್ದಿಗಳಲ್ಲಿ ಸಾಮಾನ್ಯವಾಗಿ ಗುಡಿಸಲು ಮನೆಗಳಿದ್ದವು. ಇತ್ತಿತ್ತಲಾಗಿ ಸರ್ಕಾರದ ಜನತಾ ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಆದರೆ ಇಂದು ಇವರು ವ್ಯಾಪಾರ, ಪಶುಪಾಲನೆ, ಕೂಲಿ, ಸಣ್ಣಪುಟ್ಟ ದಿನಸಿ ಅಂಗಡಿ, ತರಕಾರಿ, ಹಣ್ಣಿನ ಅಂಗಡಿ, ಇತ್ಯಾದಿ ಕಸುಬುಗಳನ್ನು ಮಾಡುತ್ತಿದ್ದಾರೆ. ಹೆಚ್ಚಾಗಿ ಕೃಷಿ, ಕೂಲಿಯನ್ನು ಅವಲಂಬಿಸಿ ಜೀವನ ಸಾಗಿಸುವುದನ್ನು ಕಾಣಬಹುದಾಗಿದೆ. ಅಲ್ಲದೇ ಅರಣ್ಯ ಉತ್ಪನ್ನಗಳಾದ ಲವಂಗ, ಜೇನುತುಪ್ಪ, ಬಿದಿರು, ಮರದ ತೊಗಟೆ ಮುಂತಾದವುಗಳನ್ನು ಸಂಗ್ರಹಿಸಿ ಮಾರಾಟ ಮಾಡಿ ತಮ್ಮ ಉಪಜೀವನ ಸಾಗಿಸುತ್ತಿದ್ದರು. ಆದರೆ ಇಂದು ಸರಕಾರದ ಅರಣ್ಯ ಕಾಯಿದೆ ಪ್ರಕಾರ ಅರಣ್ಯ ಉತ್ಪನ್ನಗಳನ್ನು ಮುಟ್ಟದಂತೆ ನಿಷೇಧವನ್ನು ಹೇರಿದ್ದರ ಪರಿಣಾಮ ಸಿದ್ದಿಗಳ ಆರ್ಥಿಕ ಸ್ಥಿತಿಯು ಇಂದು ತುಂಬ ಕೆಳಮಟ್ಟದ್ದಾಗಿದೆ. ಸಿದ್ದಿಗಳು ಮಾಡುವ ಕೆಲಸ ಯಾವುವು ಎಂಬುದು ಕಿರಣಕಮಲ ಪ್ರಸಾದರವರು ನೀಡುವ ಮಾಹಿತಿ ಈ ಕೆಳಗಿನ ಕೋಷ್ಟಕದ ಮೂಲಕ ತಿಳಿದು ಬರುತ್ತದೆ.

ಕೋಷ್ಟಕ – ೧೬

ಸಿದ್ದಿಗಳು ತೊಡಗಿಸಿಕೊಂಡಿರುವ ವಿವಿಧ ಉದ್ಯೋಗ ಕ್ಷೇತ್ರಗಳು	ಕುಟುಂಬದ ಸಂಖ್ಯೆ	ಶೇಕಡಾವಾರು
೧. ಕೂಲಿಕಾರ್ಮಿರು	೭೦೪(+೧೪)	೬೪.೮
೨. ಕೃಷಿ	೩೬೪	೩೩.೫
೩. ಸೇವೆ (ತಾಂತ್ರಿಕತೆ, ಸುಚಿ ಮಾಡುವರು, ಚಾಲಕ, ಅರಣ್ಯ ಅಧಿಕಾರಿ.	೯	೦.೮
೪. ವೃದ್ಯಾಪ್ಯ ವೇತನ	೭	೦.೬
೫. ಚಿಲ್ಲರೆ ವ್ಯಾಪಾರ	೨	೦.೨
೬. ಭಿಕ್ಷುಕರು	೧	೦.೧
ಒಟ್ಟು	೧೦೮೭(+೧೪)	೧೦೦.೦೦

ಈ ಕೋಷ್ಟಕದ ಮೂಲಕ ತಿಳಿದು ಬರುವುದೇನೆಂದರೆ ಕೂಲಿಕಾರ್ಮಿಕರೆ ಹೆಚ್ಚಾಗಿ [೭೦೪(+೧೪)] ಇರುವುದು ಕಂಡುಬರುತ್ತದೆ. ಅದರಂತೆ ಕೃಷಿಯನ್ನು ಅವಲಂಬಿಸಿದ ಕುಟುಂಬಗಳು ೩೬೪ರಷ್ಟು ಕಂಡುಬರುತ್ತವೆ. ಸಿದ್ದಿಗಳು ಕೂಲಿ, ಕೃಷಿಯನ್ನೇ ತಮ್ಮ ಬದುಕಿನ ಉದ್ದಕ್ಕೂ ಅಥವಾ ಜೀವನದ ಉದ್ದಕ್ಕೂ ಮುಂದುವರೆಸಿಕೊಂಡು ಹೋಗುವ

ವೃತ್ತಿಯಾಗಿದೆ. ಸಿದ್ದಿಗಳು ಕೃಷಿ ಕೂಲಿಯನ್ನು ಬಿಟ್ಟು ಬೇರೆ ಕ್ಷೇತ್ರಕ್ಕೆ ಹೋಗಬೇಕಾದರೆ ಅವರಿಗೆ ಶಿಕ್ಷಣದ ಅವಶ್ಯಕತೆ ಇದೆ. ಆದರೆ ಸಿದ್ದಿಗಳಲ್ಲಿ ತುಂಬಾ ಜನ ಶಿಕ್ಷಣದಿಂದ ವಂಚಿತರಾಗಿರುವರು. ಆದ್ದರಿಂದ ಸಿದ್ದಿಗಳು ಆರ್ಥಿಕವಾಗಿ, ಸಾಮಾಜಿಕವಾಗಿ ಸಬಲರಾಗಬೇಕಾದರೆ ಅವರಿಗೆ ಶಿಕ್ಷಣದ ಮಟ್ಟವನ್ನು ಹೆಚ್ಚಿಸಬೇಕಾಗಿದೆ. ಇಂತಹ ದುಃಸ್ಥಿತಿಯಲ್ಲಿ ಬದುಕನ್ನು ಸಾಗಿಸುತ್ತಿರುವ ಸಿದ್ದಿ ಸಮುದಾಯವು ಅದರಲ್ಲಿ ಮಹಿಳೆಯರ ಆರ್ಥಿಕ ಸ್ಥಿತಿಗತಿಯಂತು ತುಂಬ ಶೋಚನಿಯವಾಗಿದೆ.

ಸಿದ್ದಿಯರ ಗುಣಲಕ್ಷಣ ಹಾಗೂ ಅವರ ಸ್ವಭಾವದ ಬಗ್ಗೆ ಕೆಲವು ವಿದ್ವಾಂಸರು ಈ ಕೆಳಗಿನಂತೆ ಹೇಳಿದ್ದಾರೆ. ಸಿದ್ದಿಗಳು "ನಾಳಿನ ಚಿಂತೆಯಲ್ಲಿದೆ ತಿರುಗುವ ಇವರಿಗೆ ಪ್ರಾಣಿಗಳಂತೆ ಇಂದು ಹೊಟ್ಟೆ ತುಂಬಿದರಾಯ್ತು. ತಮ್ಮ ಭವಿಷ್ಯದ ಬದುಕಿಗಾಗಿ ಸಂಗ್ರಹಿಸಿಟ್ಟುಕೊಳ್ಳುವುದು ಇವರಿಗೆ ಗೊತ್ತಿಲ್ಲ. ಮನೆಯಲ್ಲಿ ಒಂದು ದಿನದ ಊಟಕ್ಕಿದ್ದರೂ ಸಾಕು, ದುಡಿಯಲು ಹೋಗುವುದೇ ಇಲ್ಲ. ಹಾಗಂತ ಇವರು ಸೋಮಾರಿಗಳು ಅಲ್ಲ. ಇವರು ಕ್ರಿಯಾಶೀಲರಾಗಬೇಕಾದರೆ ಇವರ ಹೊಟ್ಟೆ ಹಸಿಯಬೇಕು. ಆಗ ಕೆಲಸಕ್ಕೆ ಇವರು ಹುಲಿಗಳು" ಎಂದು ಡಾ.ಎನ್.ಆರ್. ನಾಯಕರು ಹೇಳುತ್ತಾರೆ. ಹಾಗಾದರೆ ಸಿದ್ದಿಗಳು ದುಡಿಯುತ್ತಿರಲಿಲ್ಲವೆ? ಕೂಲಿ ಕೆಲಸ ಮಾಡುತ್ತಿರಲಿಲ್ಲವೇ? ಎಂಬ ಪ್ರಶ್ನೆಗಳು ಉದ್ಭವವಾಗುತ್ತವೆ. ಸಿದ್ದಿಗಳ ಇತಿಹಾಸವನ್ನು ನೋಡಿದರೆ ಅವರು ಗುಲಾಮರಾಗಿದ್ದಾಗಿ ಮಾಡಿಸಿದ್ದ ಕೆಲಸಗಳು ಮತ್ತು ಅವರು ಮೇಲ್ವರ್ಗದ ಜನರ ತುಳಿತಕ್ಕೆ ಒಳಗಾಗಿ ದಿನವಿಡಿ ಶ್ರೀಮಂತರ ಮನೆಗಳಲ್ಲಿ ತೋಟಗಳಲ್ಲಿ ಕೆಲಸ ಮಾಡಿದ್ದನ್ನು ಕಾಣಬಹುದು. ಅಂಥ ಕೆಲಸವನ್ನು ನಿರ್ವಹಿಸಿದ ಸಿದ್ದಿಗಳಿಗೆ ಹೊಟ್ಟೆ ಹಸಿದಾಗ ಮಾತ್ರ ಕ್ರಿಯಾಶೀಲರಾಗುತ್ತಾರೆ ಎಂದರೆ ಅಪವಾದವಾಗುತ್ತದೆ.

ಆದರೆ ಭಾರತದ ಇತಿಹಾಸದಲ್ಲಿ ಯಾವುದೇ ಕಾಲಘಟ್ಟದಲ್ಲಿ ಉನ್ನತ ಸಮುದಾಯಗಳು ಅವು ಅವಲಂಬಿಸಿದ್ದ ವೃತ್ತಿಯಿಂದಾಗಿ ಸಾಮಾಜಿಕ ಸ್ಥಾನಮಾನಗಳನ್ನು ಪಡೆಯಲಿಲ್ಲ. ಕೆಳಜಾತಿಗಳು ಬುಡಕಟ್ಟು ಸಮುದಾಯಗಳು ಅವಲಂಬಿಸಿರುವ ವೃತ್ತಿಗಳು ಸಮಾಜಕ್ಕೆ ಅನಿವಾರ್ಯವಾದರೂ ಈ ಸಮುದಾಯಗಳು ಮಾತ್ರ ಜಾತಿವ್ಯವಸ್ಥೆಯಲ್ಲಿ ಕೆಳಸ್ಥಾನವನ್ನೇ ಹೊಂದಿದ್ದವು. ಒಂದೆಡೆ ಪಾರಂಪರಿಕ ವೃತ್ತಿಯು ಕೈಗಾರೀಕರಣ, ತಂತ್ರಜ್ಞಾನಗಳಿಂದ ನಾಶವಾಗುತ್ತ ಸಮುದಾಯಗಳಿಗೆ ನಷ್ಟವನ್ನು ಉಂಟು ಮಾಡುತ್ತಿದ್ದವು. ಸಮುದಾಯಗಳು ಪಾರಂಪರಿಕ ವೃತ್ತಿಯನ್ನು ಅವಲಂಬಿಸುತ್ತಾ ಬದಲಾವಣೆಗೆ ತಮ್ಮನ್ನು ತೊಡಗಿಸಿಕೊಳ್ಳುವತ್ತ ಜಾತಿ ವ್ಯವಸ್ಥೆ ಇದಕ್ಕೆ ಅವಕಾಶವನ್ನು ನೀಡುವಲ್ಲಿ ಸ್ವಲ್ಪ ಮಟ್ಟಿಗೆ ವಿಫಲವಾಗಿದೆ.

ಸಿದ್ದಿ ಸಮುದಾಯದಲ್ಲಿ ಜನ ಜಾಗೃತರಾಗಿ ತಮ್ಮ ಪಾರಂಪರಿಕ ವೃತ್ತಿ (ಕೃಷಿ, ಕೂಲಿ ಮುಂತಾದ) ಒಟ್ಟು ಆಧುನಿಕ ಹೊಸ ಉದ್ಯೋಗಗಳಲ್ಲಿ ತಮ್ಮನ್ನು

ತೊಡಗಿಸಿಕೊಂಡಿದ್ದಾರೆ. ಸ್ವಲ್ಪ ಮಟ್ಟಿಗೆ ಶಿಕ್ಷಣ ಪಡೆದಿದ್ದರು. ಎನ್.ಜಿ.ಓ.ಗಳಂತಹ ಸರ್ಕಾರೇತರ ಸಂಸ್ಥೆಗಳಲ್ಲಿ ಕೆಲಸಕ್ಕೆ ಸೇರಿರುವರು. ಇವರು ಕೂಡ ಆಧುನಿಕ ಹೊಸ ಉದ್ಯೋಗ ಅವಕಾಶಗಳನ್ನು ಪಡೆದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಸಮಾಜದಲ್ಲಿ ಮೇಲ್ವರ್ಗದವರಂತೆ ತಾವೂ ಕೂಡ ಬದುಕಬೇಕೆಂಬ ನಿರೀಕ್ಷೆಯಲ್ಲಿದ್ದಾರೆ. ಇವರು ನಾಗರಿಕ ಸಮುದಾಯದಂತೆ ಒಳ್ಳೆಯ ರೀತಿಯಲ್ಲಿ ಬದುಕನ್ನು ರೂಪಿಸಿಕೊಳ್ಳಬೇಕು ಎಂದು ಬೆರಳಣಿಕೆಯಷ್ಟೇ ಜನ ಮಾತ್ರ ಪ್ರಯತ್ನಿಸುತ್ತಿದ್ದಾರೆ. ಸಿದ್ದಿಯರಲ್ಲಿ ಆರ್ಥಿಕವಾಗಿ ಶೈಕ್ಷಣಿಕವಾಗಿ ಸ್ವಲ್ಪ ಸಬಲರಾದ ಜನರಲ್ಲಿ ಈ ಮೇಲಿನ ಪ್ರಜ್ಞೆ ಮೂಡುತ್ತದೆ.

ನಾನು ಕ್ಷೇತ್ರಕಾರ್ಯದಲ್ಲಿ ಸೂಕ್ಷ್ಮವಾಗಿ ಗಮನಿಸಿದಾಗ ಒಟ್ಟು ಸಿದ್ದಿ ಸಮುದಾಯದ ಆರ್ಥಿಕ ವ್ಯವಸ್ಥೆ ಕೆಳಮಟ್ಟದಾಗಿರುವಾಗ ಅದರಲ್ಲಿ ಮಹಿಳೆಯರ ಆರ್ಥಿಕ ಸ್ಥಿತಿಗತಿಯ ಬಗ್ಗೆ ತಿಳಿದುಕೊಳ್ಳುವುದು ಅತಿ ಅವಶ್ಯಕ ಕೂಡ. ಅನಾದಿ ಕಾಲದಿಂದಲೂ ಕೃಷಿ ಚಟುವಟಿಕೆಗಳ ಮೇಲೆ ಹಿಡಿತವನ್ನು ಹೊಂದಿದ ಮಹಿಳೆ ಇಂದು ತನ್ನ ಹಿಡಿತದಿಂದ ಕೃಷಿರಂಗ ದೂರವಾಗಿದೆ. ಹೀಗೆ ದೂರವಾದದ್ದು ಒಂದು ದೊಡ್ಡ ವಿಪರ್ಯಾಸವಾಗಿದೆ. ಆಹಾರ ಸಂಗ್ರಹಣೆಯಿಂದ ಹಿಡಿದು ಆಹಾರ ಉತ್ಪಾದನೆಯವರೆಗೆ ನೋಡಿದರೆ ಕ್ರಮೇಣ ಸ್ತ್ರೀಯರ ಹಸ್ತಕ್ಷೇಪ, ಎಲ್ಲಾ ಕಡಿಮೆಯಾಗಿ ಇಂದು ಪುರುಷರ ಕೈವಶವಾಗಿದೆ. "ಜೀವನಾವಶ್ಯಕ ವಸ್ತುಗಳನ್ನು ಸಂಗ್ರಹಿಸುವುದು ಆದಿಯಿಂದಲೂ ಗಂಡಸಿನ ಕರ್ತವ್ಯವಾಗಿತ್ತು. ಆದುದರಿಂದಲೇ ಸಂಪತ್ತಿನ ಸಂಗ್ರಹ ಮತ್ತು ಒಡೆತನ ಈಗ ಅವನ ಕೈವಶವಾಯಿತು. ಪ್ರಾಣಿಗಳು ಹೊಸ ರೂಪದ ಸಂಪತ್ತಾಗಿದ್ದವು. ಅವುಗಳನ್ನು ಹಿಡಿದು ಬೇರೆ ಬೇರೆ ಕೆಲಸಗಳಿಗೆ ಬಳಸುವ ಕೆಲಸ ಅವನದ್ದಾಯಿತು. ಹೀಗಾಗಿ ಅವನು ಕೆಲವೊಮ್ಮೆ ಸಾಕುಪ್ರಾಣಿಗಳ ವಿನಿಮಯದಿಂದ ದೊರೆತ ವಸ್ತು ಮತ್ತು ಗುಲಾಮರನ್ನು ಪಡೆಯುವುದು ಸಾಧ್ಯವಾಯಿತು. ಉತ್ಪಾದನೆಯಲ್ಲಿ ದೊರೆತ ಎಲ್ಲಾ ಹೆಚ್ಚುವರಿ ಸಂಪತ್ತನ್ನು ಅನುಭವಿಸಲು ಸಾಧ್ಯವಾಯಿತೆ ವಿನಾಃ ಅದರ ಮೇಲೆ ಯಾವುದೇ ರೀತಿಯ ಅಧಿಕಾರವನ್ನು ಹೊಂದುವಂತಿರಲಿಲ್ಲ. ಆದಿಕಾಲದ ಯೋಧ ಮತ್ತು ಬೇಟಗಾರನಾಗಿದ್ದ ಅನಾಗರಿಕವೆಂದು ಕಾಣುವ ಗಂಡಸು ತನ್ನ ಮನೆಯಲ್ಲಿ ಎರಡನೆಯ ದರ್ಜೆಯ ಸ್ಥಾನಮಾನಗಳಲ್ಲೇ ತೃಪ್ತಿ ಹೊಂದಿದ್ದ. ಆದರೆ ಮುಂದಿನ ಹಂತದ ನಗಾಹಿ 'ನಾಗರಿಕ' ಗಂಡಸು ಸಂಪತ್ತನ್ನು ತನ್ನ ಕೈವಶಮಾಡಿಕೊಂಡು ಹೆಂಗಸನ್ನು ದ್ವಿತೀಯ ದರ್ಜೆಗೆ ತಳ್ಳಿ ತಾನು ಕುಟುಂಬ ಸಾರ್ವಭೌಮನಾದ. ಹೆಂಗಸು ಈ ಬಗ್ಗೆ ಏನು ಮಾಡುವಂತಿರಲಿಲ್ಲ. ಕುಟುಂಬದೊಳಗಿನ ಶ್ರಮ ವಿಭಜನೆಯು ಸಂಪತ್ತಿನ ಮೇಲೆ ಪತಿ-ಪತ್ನಿಯರಿಗಿರುವ ಅಧಿಕಾರವನ್ನು ಸಂಪೂರ್ಣವಾಗಿ ನಿಯಂತ್ರಿಸಿತು, ಮಾತ್ರವಲ್ಲದೆ ಶ್ರಮ ವಿಭಜನೆಯು ಯಾವುದೇ ಬದಲಾವಣೆಯಿಲ್ಲದೆ ಮುಂದುವರೆಯಿತು. ಕುಟುಂಬದೊಳಗಿನ

ಶ್ರಮ ವಿಭಜನೆಯ ಬದಲಾವಣೆ ಹೊಂದಿದ್ದರೂ ಕುಟುಂಬದ ಹೊರಗಿನ ವ್ಯವಸ್ಥೆಗಳು ಸಂಪೂರ್ಣ ಏರುಪೇರಾದವು. ಗೃಹಕೃತ್ಯದ ಕೆಲಸಗಳಿಂದಾಗಿಯೇ ಮೊದಲು ಮನೆಯ ಯಜಮಾನಿಕೆಯನ್ನು ಹೊಂದಿದ್ದ ಹೆಂಗಸು ಈಗ ಅದೇ ಕೆಲಸಗಳಿಂದಾಗಿ ಮನೆಯಲ್ಲಿ ತನ್ನ ಪ್ರಥಮ ಸ್ಥಾನವನ್ನು ಕಳೆದುಕೊಳ್ಳಬೇಕಾಯಿತು."[೧] ಅಂದರೆ ಈಗ ಗೃಹಕೃತ್ಯ ಕೇವಲ ಮೌಲ್ಯರಹಿತವಾಯಿತು. ಮಹಿಳೆಯರ ದುಡಿಮೆಗೆ ಮಹತ್ವವನ್ನು ನೀಡದಿದ್ದರಿಂದ ನಮ್ಮ ಆರ್ಥಿಕ ವ್ಯವಸ್ಥೆಯಲ್ಲಿ ಮಹಿಳೆಯರ ದುಡಿಮೆ ಸೇರಿಕೊಂಡಿಲ್ಲ. ಏಕೆಂದರೆ "ಆರ್ಥಿಕತೆಯ ಅಭಿವೃದ್ಧಿಯ ಮಟ್ಟವನ್ನು ಹಾಗೂ ಸಂಪತ್ತಿನ ಪ್ರಮಾಣವನ್ನು ಅದರ ರಾಷ್ಟ್ರೀಯ ವರಮಾನ, ಉತ್ಪನ್ನದ ರೂಪದಲ್ಲಿ ವ್ಯಕ್ತಪಡಿಸಲಾಗುತ್ತದೆ. ಒಂದು ವರ್ಷದ ಅಭಿವೃದ್ಧಿಯಲ್ಲಿ ಆರ್ಥಿಕತೆಯೊಂದು ಉತ್ಪಾದಿಸಿದ ಎಲ್ಲಾ ಸರಕು ಮತ್ತು ಸೇವೆಗಳ ಒಟ್ಟು ಮೊತ್ತದ ಹಣ ರೂಪಮೌಲ್ಯವೇ ರಾಷ್ಟ್ರೀಯ ವರಮಾನ ಉತ್ಪನ್ನ. ಉತ್ಪಾದನೆಯು ನಾಲ್ಕು ಉತ್ಪಾದನಾಂಗಗಳ ಒಟ್ಟು ಸಂಯುಕ್ತ ಪ್ರಯತ್ನದ ಫಲವಾಗಿದೆ. ರಾಷ್ಟ್ರೀಯ ಉತ್ಪನ್ನದಲ್ಲಿ ಭೂ ಸಂಪನ್ಮೂಲ, ಶ್ರಮ, ಬಂಡವಾಳ ಮತ್ತು ಉದ್ಯಮ ಸಂಘಟನೆಗಳ ಪಾಲು ಮತ್ತು ಪಾತ್ರ"[೨] ಇಲ್ಲಿ ಮುಖ್ಯವಾಗಿರುತ್ತವೆ. ಈ ರೀತಿಯಾಗಿ ಆರ್ಥಿಕತೆಯನ್ನು (ಅಭಿವೃದ್ಧಿಯನ್ನು) ಅಳೆಯುವುದರಿಂದ ಇಡೀ ಆರ್ಥಿಕ ವ್ಯವಸ್ಥೆಯಲ್ಲಿ ಮಹಿಳೆಯ ದುಡಿಮೆ ಅಗೋಚರವಾಗಿದೆ. ಅದೇ ರೀತಿಯಾಗಿ ಸಿದ್ದಿ ಸಮುದಾಯದ ಮಹಿಳೆಯರ ಗೃಹಕೃತ್ಯವು ಸೇವೆಯಾಗಿ ಕರ್ತವ್ಯವಾಗಿ ಪರಗಣಿಸಿದೆ. ಸಿದ್ದಿ ಸಮುದಾಯದ ಮಹಿಳೆ ಮನೆಯ ಸಂಪೂರ್ಣ ಜವಾಬ್ದಾರಿ ಹೊಂದಿದ್ದರು ಕೂಡ ಅವಳ ದುಡಿಮೆಯನ್ನು ಕೇವಲ ಗೃಹಕೃತ್ಯಕ್ಕೆ ಸೀಮಿತ ಪಡಿಸಿದೆ.

೫.೧. ವೇತನ ತಾರತಮ್ಯ

ಪ್ರಾಚೀನ ಕಾಲದಿಂದಲೂ ಭಾರತೀಯ ಸಮಾಜವು ಮಹಿಳೆಯರನ್ನು ದುರ್ಬಲಳು, ಅವಳು ಸರಳವಾದ ಕೆಲಸಕಾರ್ಯವನ್ನು ಮಾತ್ರ ಮಾಡಬಲ್ಲಳು. ಕಠಿಣ ಕೆಲಸಕಾರ್ಯಗಳು ಅವಳಿಂದ ಸಾಧ್ಯವಿಲ್ಲವೆಂದು ಹಿಂದೆ ಪರಿಭಾವಿಸಿತ್ತು. ಆದರೆ ಇಂದು ಮಹಿಳೆ ಎಂತಹ ಕಷ್ಟಮಯವಾದ ಕೆಲಸಗಳಿದ್ದರೂ ನಿಭಾಯಿಸುವವಳಾಗಿದ್ದಾಳೆ. ಆದರೆ ಪುರುಷಶಾಹಿ ವ್ಯವಸ್ಥೆ ಮಹಿಳೆಗೆ ಪ್ರತಿಯೊಂದರಲ್ಲಿ ಖಾಸಗಿ ವಲಯದಲ್ಲಾಗಲಿ, ಕೆಲವೊಂದು ಸರ್ಕಾರಿ ಕೆಲಸ ಕಾರ್ಯಗಳಲ್ಲಾಗಲಿ, ಇವಳ ವೇತನದಲ್ಲಿ ತಾರತಮ್ಯ ಮಾಡುತ್ತಿದೆ. ಹೀಗಿದ್ದರೂ ಕೃಷಿ ರಂಗವಲ್ಲದೆ ಬೇರೆ ಬೇರೆ ವಲಯದಲ್ಲೂ ಸ್ತ್ರೀ-ಪುರಷರು ಒಂದೇ ಕೆಲಸ ಕೈಗೊಂಡರು. ಇವರಲ್ಲಿ ವೇತನ ತಾರತಮ್ಯ ಕಂಡುಬರುತ್ತದೆ. ಈ ರೀತಿಯ ತಾರತಮ್ಯ ಎಲ್ಲಾ ಸಮುದಾಯದ ಮಹಿಳೆಯರು ಅನುಭವಿಸುತ್ತಿರುವುದು ಸರ್ವೇಸಾಮಾನ್ಯವಾಗಿ ಕಂಡುಬರುವುದು. ಹೀಗಾಗಿ ಭಾರತೀಯ ಸಮಾಜ ವ್ಯವಸ್ಥೆಯಲ್ಲಿ ಕಂಡುಬರುವ ಇದೊಂದು ದೊಡ್ಡ ಸಮಸ್ಯೆಯಾಗಿ ಕಾಡುತ್ತಿದೆ.

ನಾನು ಕೈಗೊಂಡ ಕ್ಷೇತ್ರ ಕಾರ್ಯದಲ್ಲಿ ವೇತನ ತಾರತಮ್ಯವನ್ನು ಎದುರಿಸುತ್ತಿದ್ದಿರಾ? ಎಂದು ಕೇಳಿದಾಗ ಮಹಿಳೆಯರು ನೀಡಿದ ಉತ್ತರ ಈ ಕೆಳಗಿನ ಕೋಷ್ಟಕದ ಮೂಲಕ ತಿಳಿದುಬರುತ್ತಾರೆ.

ಕೋಷ್ಟಕ – ೧೭

ಅಭಿಪ್ರಾಯ	ಆವೃತ್ತಿ ಸಂಖ್ಯೆ	ಶೇಕಡಾವಾರು
ಹೌದು	೬೦	೧೦೦
ಇಲ್ಲ	೦	೦
ಒಟ್ಟು	೬೦	೧೦೦

ಕ್ಷೇತ್ರಕಾರ್ಯದಲ್ಲಿ ಅರವತ್ತು ಜನ ಮಹಿಳೆಯರನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಶೇಕಡಾ ೧೦೦ರಷ್ಟು ಮಹಿಳೆಯರು ವೇತನ (ಕೂಲಿ) ತಾರತಮ್ಯವನ್ನು ಎದುರಿಸುತ್ತಿದ್ದಾರೆ. ಏಕೆಂದರೆ 'ಗಂಡಸು ಎಂಬ ಕಾರಣಕ್ಕಾಗಿ' ಪುರುಷರಿಗೆ ಹೆಚ್ಚು ಕೂಲಿಯನ್ನು ನೀಡಿ, ಮಹಿಳೆಗೆ ಕಡಿಮೆ ಕೂಲಿಯನ್ನು ನೀಡುತ್ತಿದ್ದಾರೆ. ನಾನು ಮಹಿಳೆಯರಿಗೆ ಏಕೆ ಕಡಿಮೆ ಕೂಲಿ ಕೊಡುತ್ತೀರಾ ಎಂದು ಕೇಳಬೇಕು ಎಂದಾಗ, ಅವರು ನೀಡಿದ ಉತ್ತರ ಮರುದಿನ ಕೆಲಸಕ್ಕೆ ಕರೆದುಕೊಳ್ಳುವುದಿಲ್ಲ. ನಾವು ನಂಬಿಕೊಂಡಿರುವುದು ಕೂಲಿಯನ್ನು ಅದರಿಂದ ವಂಚಿತರಾದರೆ ಸಂಸಾರ ನಡೆಸಿಕೊಂಡು ಹೋಗುವುದು ಕಷ್ಟಕರವಾಗುತ್ತದೆ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಮಹಿಳೆಯರು ಮಾಡುವಂತಹ ಕೆಲಸಗಳಾದ ಕಟಾವು, ಸಸಿನೆಡುವುದು, ಕಳೆತಗೆಯುವುದು, ನೀರು ಹಾಕುವುದು, ಕಟ್ಟಡ ನಿರ್ಮಾಣಕ್ಕೆ ಕಲ್ಲು ಮಣ್ಣುಗಳನ್ನು ಕೊಡುವುದು (ಸಹಾಯಕಿಯಾಗಿ) ಮುಂತಾದ ಕೆಲಸಗಳನ್ನು ಸಿದ್ದಿ ಮಹಿಳೆಯರು ಕೈಗೊಳ್ಳುತ್ತಾರೆ. ಅದೇ ಪುರುಷರು ಸಂಪನ್ಮೂಲಗಳ ನಿರ್ವಹಣೆ, ನಿರ್ಣಯ ತೆಗೆದುಕೊಳ್ಳುವ ಕಾರ್ಯ, ಬೆಳೆದ ತರಕಾರಿ ಕಾಯಿಪಲ್ಲೆಗಳನ್ನು ಮಾರುಕಟ್ಟೆಗೆ ಸಾಗಿಸುವುದು. ಮುಂತಾದ ಕೆಲಸಗಳು ಪುರುಷರಿಗೆ ಸೀಮಿತವಾಗಿದೆ.

"ಆರ್ಥಿಕತೆಯ ಚೌಕಟ್ಟಿನಲ್ಲಿ ನಡೆಯುವ ಉತ್ಪಾದನಾ ಚಟುವಟಿಕೆಗಳಲ್ಲಿ ಪುರುಷರ ಪಾಲು ಅಧಿಕವಾಗಿರುತ್ತದೆ. ಆರ್ಥಿಕ ಚೌಕಟ್ಟಿನಿಂದ ಆಚೆಗೆ ನಡೆಯುವ ಚಟುವಟಿಕೆಗಳು ಬಹಳಷ್ಟು ಮಟ್ಟಿಗೆ ಮಹಿಳೆಯರಿಗೆ ಮೀಸಲಾಗಿವೆ. ಸಾಮಾಜಿಕವಾಗಿ ಮನ್ನಣೆಯಿಲ್ಲದ, ಕೇವಲ ಉಪಯೋಗಿ ಮಹತ್ವವುಳ್ಳ ಚಟುವಟಿಕೆಗಳನ್ನೆಲ್ಲ ಮಹಿಳೆಯರಿಗೆ ಮುಡುಪಾಗಿಡಲಾಗಿದೆ.

[illegible]

ಅತ್ಯಂತ ವಿಶಾಲವಾದ ಅರ್ಥದಲ್ಲಿ ಇಂತಹ ಚಟುವಟಿಕೆಗಳನ್ನು ಸಂತಾನೋತ್ಪತ್ತಿ ಚಟುವಟಿಕೆಗಳು ಎನ್ನಲಾಗಿದೆ. ಹೀಗೆ ಆರ್ಥಿಕತೆ ಎಂಬುದು ಪುರುಷರ ಪ್ರಪಂಚವಾಗಿ ಪುರುಷ ಪ್ರಧಾನವಾಗಿ ರೂಪಗೊಂಡುಬಿಟ್ಟಿದೆ. ಆರ್ಥಿಕತೆಂಯು ಚೌಕಟ್ಟಿನಲ್ಲಿ, ಆರ್ಥಿಕೊತ್ಪಾದನೆಯಲ್ಲಿ ಮಹಿಳೆಯರೂ ಇರುತ್ತಾರೆ. ಆದರೆ ಅವರ ಆರ್ಥಿಕೋತ್ಪಾದನೆ ಚಟುವಟಿಕೆಗಳಿಗೆ ಸಾಮಾಜಿಕ ಮಹತ್ವವಿರುವುದಿಲ್ಲ. ಏಕೆಂದರೆ ಅವರು ಆರ್ಥಿಕೊತ್ಪಾದನೆಯಲ್ಲಿ ತೊಡಗಿದ್ದರೂ ಅವರ ಚಟುವಟಿಕೆಗಳಿಗೆ ಅವರು ಉತ್ಪಾದಿಸುವ ಸರಕು–ಸೇವೆಗಳಿಗೆ 'ಉಪಯೋಗಿ ಮಹತ್ವ' ಇರುತ್ತದೆ. ವಿನಾಃ ವಿನಿಮಯ ಮಹತ್ವ ಇರುವುದಿಲ್ಲ. ಸಮಾಜ ವಿಜ್ಞಾನಗಳು 'ಸಂಪಾದನೆ'ಯನ್ನು ಪುರುಷ ವರ್ಗಕ್ಕೆ ಮೀಸಲಿಟ್ಟು 'ಸಂಗೋಪನೆ'ಯನ್ನು ಮಹಿಳೆಯರಿಗೆ ಮೀಸಲಿಟ್ಟಿವೆ. ಉದಾಹರಣೆಗೆ – 'ಗೃಹಣಿಯು ಅಡುಗೆ ಮಾಡಿದರೆ ಅದು ಸಂಗೋಪನೆ ಕಾರ್ಯವೇ ವಿನಾಃ ಸಂಪಾದನೆ ಕಾರ್ಯವಲ್ಲ. ಸಂತಾನೋತ್ಪತ್ತಿ ಮತ್ತು ಸಂಗೋಪನೆಗಳು ಮಹಿಳೆಯರನ್ನು ಜವಾಬ್ದಾರಿಯನ್ನಾಗಿಯೂ ಮಾಡಲಾಗಿದೆ. ಏಕೆಂದರೆ ಮಹಿಳೆಯ ಕಾರ್ಯಕ್ಷೇತ್ರ ಕುಟುಂಬವೆಂದು ಮನೆಯ ಒಳಗಿನ ಜಗತ್ತು ಎಂದೂ ನಂಬಲಾಗಿದೆ. ಪುರುಷರ ಕಾರ್ಯಕ್ಷೇತ್ರವು ಮನೆಯ ಹೊರಗಿನ ಜಗತ್ತು ಎಂದೂ ಸಮಾಜ ಪ್ರತಿಪಾದಿಸುತ್ತಾ ಬರಲಾಗಿದೆ."[೩]

"ಸಿದ್ದಿ ಹೆಂಗಸರಿಗೆ ಗಂಡಸರಿಗಿಂತ ಉನ್ನತ ಸ್ಥಾನವನ್ನು ಕೊಡುತ್ತಾರೆ. ಕಾರಣ ಸಿದ್ದಿ ಹೆಂಗಸರೂ ಕೂಡ ಗಂಡಿನ ಸಮಜೋಡಿಯಾಗಿ ಅಥವಾ ಅವರಿಗಿಂತಲೂ ಮಿಗಿಲಾಗಿ ದುಡಿಯುವ ಸಾಮರ್ಥ್ಯವನ್ನು ಹೊಂದಿದ್ದಾಳೆ" ಎಂದು ಅಭಿಪ್ರಾಯಪಡುವ ಡಾ. ಎಂ. ಭೈರೇಗೌಡರವರು ಮಹಿಳೆಯರ ಸ್ಥಾನಮಾನದ ಬಗ್ಗೆ ಸೂಕ್ಷ್ಮವಾಗಿ ಗ್ರಹಿಸುವಲ್ಲಿ ವಿಫಲರಾಗಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ಗಂಡಸಿಗೆ ಸಮಜೋಡಿಯಾಗಿ ದುಡಿಯುವ ಸಾಮರ್ಥ್ಯವನ್ನು ಹೊಂದಿದ ಮಹಿಳೆ ಕೂಲಿ ತಾರತಮ್ಯ (ವೇತನ ತಾರತಮ್ಯ)ವನ್ನು ಎದುರಿಸುತ್ತಿದ್ದಾಳೆ. ಅಂಥಹ ಸಂದರ್ಭದಲ್ಲಿ ಸಿದ್ದಿ ಹೆಂಗಸರಿಗೆ ಗಂಡಸರಿಗಿಂತ ಉನ್ನತ ಸ್ಥಾನವಿದೆ ಎಂದು ಹೇಳುವುದು ಎಷ್ಟು ಔಚಿತ? ನಾನು ಕೈಗೊಂಡ ಕ್ಷೇತ್ರ ಕಾರ್ಯದಲ್ಲಿ ಮಹಿಳೆಯರು ಮಾಡುವಂತಹ ಕೆಲಸಗಳಾದ ಕೂಲಿಕೆಲಸ, ಕಟಾವು, ಸಸಿನೆಡುವುದು, ಕಳೆತಗೆಯುವುದು, ಕಟ್ಟಡ ನಿರ್ಮಾಣದಲ್ಲಿ ಕಲ್ಲು, ಇಟ್ಟಿಗೆಗಳನ್ನು ಕೊಡುವುದು ಮುಂತಾದ ಕೆಲಸಗಳನ್ನು ಮಾಡುವ ಮಹಿಳೆ ಉತ್ಪಾದನೆಯಿಂದ ಬಂದ ಲಾಭ ಹಂಚಿಕೆಯಲ್ಲಿ ಮಹಿಳೆಯರ ಪಾತ್ರ ಎಷ್ಟರಮಟ್ಟಿಗೆ ಇದೆ ಎಂದು ತಿಳಿದುಕೊಳ್ಳಲು ಈ ಕೆಳಗಿನ ಕೋಷ್ಟಕದ ಮೂಲಕ ತಿಳಿದುಬರುತ್ತದೆ.

ಕೋಷ್ಟಕ - ೧೮

ಅಭಿಪ್ರಾಯ	ಆವೃತ್ತಿ ಸಂಖ್ಯೆ	ಶೇಕಡಾವಾರು
ಹೌದು	೧೮	೩೦
ಇಲ್ಲ	೪೨	೭೦
ಒಟ್ಟು	೬೦	೧೦೦

ಕ್ಷೇತ್ರಕಾರ್ಯದಲ್ಲಿ ಅರವತ್ತು ಜನ ಮಹಿಳೆಯರನ್ನು ಒಳಪಡಿಸಿದಾಗ ಕೇವಲ ಶೇ.೩೦ ರಷ್ಟು ಮಹಿಳೆಯರು ಮಾತ್ರ ಉತ್ಪಾದನೆ ಹಂಚಿಕೆ, ಲಾಭಗಳಲ್ಲಿ ಪಾಲ್ಗೊಳ್ಳಲು ಅವಕಾಶವಿದೆ ಎಂದು ಅಭಿಪ್ರಾಯ ಪಡಿಸಿದರೆ, ಶೇಕಡಾ ೭೦ರಷ್ಟು ಮಹಿಳೆಯರು ಉತ್ಪಾದನೆ, ಹಂಚಿಕೆ ಮತ್ತು ಲಾಭಗಳಲ್ಲಿ ಪಾಲ್ಗೊಳ್ಳಲು ಅವಕಾಶವಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಏಕೆಂದರೆ ಮಹಿಳೆಯರು ದುಡಿಮೆಯಿಂದ ತಂದ ಹಣವು ತನ್ನ ಕಡೆ ಇದ್ದರೂ ಕೂಡ ಗಂಡನ ಅನುಮತಿ ಇಲ್ಲದೆ ಉಪಯೋಗಿಸುವಂತೆ ಇಲ್ಲ. ಮಹಿಳೆ ತನ್ನ ಶ್ರಮದ ಪ್ರತಿಫಲವನ್ನು ತಾನೇ ಉಪಯೋಗಿಸಿಕೊಳ್ಳುವ ಅಧಿಕಾರವನ್ನು ಹೊಂದಿಲ್ಲ. ಹೀಗಾಗಿ ಸಿದ್ದಿ ಸಮುದಾಯದ ಮಹಿಳೆ ಆರ್ಥಿಕ ಸ್ವತಂತ್ರ್ಯತೆಯನ್ನು ಹೊಂದಿರುವುದಿಲ್ಲ.

ತಮ್ಮ ಮೂಲನಾಡನ್ನು ಬಿಟ್ಟು ಮತ್ತೊಂದು ನಾಡಿನಲ್ಲಿ ಗುಲಾಮರಾಗಿ ಬದುಕನ್ನು ಸಾಗಿಸುವ ಈ ಸಿದ್ದಿ ಮಹಿಳೆಯರಿಗೆ ಸ್ವಂತ ಜಮೀನಿನಲ್ಲಿ, ವಾಸಿಸಲು ಯೋಗ್ಯ ಮನೆಗಳಿಲ್ಲ. ಒಡೆಯರ ಅನುಮತಿಯನ್ನು ಪಡೆದು ಅವರ ತೋಟದಲ್ಲಿಯೇ ಗುಡಿಸಲನ್ನು ಕಟ್ಟಿಕೊಂಡು ಅವರಲ್ಲಿ ಜೀತದ ಆಳುಗಳಂತೆ ಹೊಲಮನೆ ಗದ್ದೆ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿರಬೇಕು. ಸಾಮಾನ್ಯವಾಗಿ ಹೊಟ್ಟೆ ಪಾಡಿಗಾಗಿ ಜೀವನ ಸಾಗಿಸುವ ಅಮಾಯಕ ಜನ ಈ ಸಿದ್ದಿ ಮಹಿಳೆಯರಾಗಿರುವರು. ಮೇಲ್ವರ್ಗದ ಪ್ರತಿಯೊಂದು ಹಿಂಸೆಗೆ ಒಳಗಾದ ಈ ಮಹಿಳೆ ಇಂದು ತನ್ನ ಕುಟುಂಬ ಸಾಗಿಸಲು ಏನೆಲ್ಲ ಕಷ್ಟ ಪಡಬೇಕಾಗಿದೆ. ಬಾಹ್ಯ ಪ್ರಪಂಚದಿಂದ ದೂರವಿದ್ದ ಇವರು ಗುಡ್ಡಗಾಡು ಅರಣ್ಯಗಳಲ್ಲಿ ದೊರೆಯುವ ಕೆಲವೊಂದು ಅರಣ್ಯೋತ್ಪನ್ನದಿಂದ ತಮ್ಮ ಆರ್ಥಿಕ ಸ್ಥಿತಿಗತಿ ಸುಧಾರಿಸಿತ್ತು. ಮಾರುಕಟ್ಟೆಯಂತಹ ಆರ್ಥಿಕತೆಯನ್ನು ಹೊಂದಿದ ಅತೀ ಮುಂದುವರಿದ ಜನಗಳೊಂದಿಗೆ ಸಂಪರ್ಕವನ್ನು ಹೊಂದಿದ್ದವರು ತುಂಬಾ ಕಡಿಮೆ. ಕೃಷಿಗಾಗಿ ತಮಗೆ ಸ್ವಂತ ಜಮೀನಿಲ್ಲ, ತಾತ್ಕಾಲಿಕ ಅವಧಿಗೆ ಸರಕಾರದ ಜಮೀನನ್ನು ಉಳುವ ಸಾಧ್ಯತೆ ಇಲ್ಲ. ಹೀಗಾಗಿ ಈ ಸಿದ್ದಿಗಳಿಗೆ ಇರುವ ಒಂದೇ ಒಂದು ಮಾರ್ಗವೆಂದರೆ ಭೂಒಡೆಯರ ಉನ್ನತ ಶ್ರೀಮಂತರ ಹೊಲಗದ್ದೆಗಳಲ್ಲಿ ಕೃಷಿ ಕಾರ್ಮಿಕರಾಗಿ ಅಥವಾ ಕೂಲಿಕರರಾಗಿ ಕೆಲಸ ಮಾಡುವುದು.

ದೈಹಿಕವಾಗಿ ಹೆಚ್ಚು ಬಲಶಾಲಿಗಳಾದ ಈ ಸಿದ್ದಿ ಮಹಿಳೆಯರು ಕೇವಲ ಕುಟುಂಬದ ಕೆಲಸ ಕಾರ್ಯಗಳಲ್ಲಿ ಮಾತ್ರ ನಿರತಳಾಗದೆ, ಗಂಡನೊಂದಿಗೆ ಇತರೆ ಉಳ್ಳವರ ಹೊಲಗದ್ದೆಯ ಕೆಲಸ ಮಾಡುವಳು. ಪ್ರಾರಂಭದಲ್ಲಿ ಕಾಡಿನಲ್ಲಿ ದೊರೆಯುವ ಕೆಲವೊಂದು ಹಣ್ಣು, ಹಂಪಲು, ಜೇನು, ಅಂಟುರಾಳಗಳಂತಹ ಹಲವಾರು ವಸ್ತುಗಳನ್ನು ಮಾರಿ ತಮ್ಮ ಆರ್ಥಿಕತೆಯನ್ನು ನೀಗಿಸುತ್ತಿದ್ದರು. ಅರಣ್ಯ ಕಾಯ್ದೆಯಿಂದ ಎಲ್ಲವು ನಿಂತುಹೋಗಿವೆ. ಪುರುಷರು ಹೊರಗಡೆ ಕೂಲಿ, ಕೃಷಿ ಕೆಲಸಕ್ಕೆ ಹೋದರೆ, ಮಹಿಳೆಯರು ಮನೆಯಲ್ಲಿ, ಕಾಡಿನಲ್ಲಿ ದೊರೆಯುವ ಬಿದಿರುಗಳಿಂದ ಪುಟ್ಟಿಯಂತಹ ಕೆಲವೊಂದು ಅಲಂಕಾರ ವಸ್ತುಗಳನ್ನು ಮಾರಿ ತಮ್ಮ ಬದುಕನ್ನು ಸಾಗಿಸುತ್ತಿದ್ದರು. ಆದರೆ ಇಂದು ಸರ್ಕಾರದ ಅನೇಕ ಕಟ್ಟಳೆಗಳಿಂದ ಈಗ ಅವೆಲ್ಲ ಗುಡಿಗಾರಿಕೆ ಮಾಯವಾಗಿಬಿಟ್ಟಿದೆ. ಇದರಿಂದ ಕೇವಲ ಸಿದ್ದಿ ಮಹಿಳೆಗೆ ಮಾತ್ರವಲ್ಲ ಸಾಮಾನ್ಯವಾಗಿ ಕಾಡಿನಲ್ಲಿ ವಾಸಿಸಿರುವ ಎಲ್ಲಾ ಬುಡಕಟ್ಟು ಮಹಿಳೆಯರ ಸ್ಥಿತಿ ತುಂಬ ಶೋಚನೀಯವಾಗಿದೆ. ಹೀಗಾಗಿ ಇಂದು ಸಿದ್ದಿ ಮಹಿಳೆ ಪಟ್ಟಣದಲ್ಲಿ ಮನೆಕಟ್ಟುವ ಕೆಲಸ, ಗಾರಿ ಕೆಲಸಗಳಿಗೆ ಸಹಾಯಕಗಳಾಗಿ ಹೋಗುವಳು. ಪ್ರಸಂಗ ಬಂದರೆ ಪುರುಷರಂತೆ ಮನೆಗಳನ್ನು ಸಹ ಕಟ್ಟುವಳಾಗಿದ್ದಾಳೆ. ಅವಳ ದುಡಿಮೆಯ ಗುರಿಯು ಕುಟುಂಬದ ಹೊಟ್ಟೆ ಬಟ್ಟೆ ತುಂಬಿಸುವದಾಗಿರುತ್ತದೆ. ಇಲ್ಲಿ ಮುಖ್ಯವಾಗಿ ಸಿದ್ದಿ ಮಹಿಳೆಯರಲ್ಲಿ ವರಮಾನಗಳಿಸುವುದಕ್ಕಿಂತ ಬದುಕು ಸಾಗಿಸುವುದು ಅವಶ್ಯಕವಾಗಿದೆ. ನಗರೀಕರಣ, ಜಾಗತೀಕರಣದ ಅಬ್ಬರದ ವ್ಯವಸ್ಥೆಯ ಅಡಿಯಲ್ಲಿ ಸಾಮಾನ್ಯ ವರ್ಗದ ಪುರುಷನ ದುಡಿಮೆ ಇಂದು ಸಾಲದಾಗಿದೆ ಕುಟುಂಬದ ನಿರ್ವಾಹಣೆ ಇಂದು ಒಬ್ಬನಿಂದ ಅಸಾಧ್ಯ ಹೀಗಾಗಿ ನಾಲ್ಕು ಗೋಡೆಯ ನಡುವೆ ಬಂಧಿಯಾಗಿರುವ ಮಹಿಳೆ ಇಂದ ಸರ್ವ ವಲಯಗಳಲ್ಲಿ ದುಡಿಯುತ್ತಿದ್ದಾಳೆ.

ಪುರುಷಶಾಹಿ ಧೋರಣೆಯಿಂದ ಹಿಂದೆ ಅತ್ಯಂತ ತುಳಿತಕ್ಕೆ ಒಳಗಾದ ಮಹಿಳೆ ಇಂದು ಅನಿವಾರ್ಯವಾಗಿ ಹೊರಜಗತ್ತಿಗೆ ಪಾದಾರ್ಪಣೆ ಮಾಡುತ್ತಿದ್ದಾಳೆ. ಪ್ರಸ್ತುತ ಸಂದರ್ಭದಲ್ಲಿ ಕುಟುಂಬವನ್ನು ನಿರ್ವಾಹಣೆ ಮಾಡುವುದರಗೋಸ್ಕರ ಎಲ್ಲಾ ಕೆಲಸ ಕಾರ್ಯಗಳಲ್ಲಿ ಗಂಡಿನೊಂದಿಗೆ ಭಾಗಿಯಾಗುತ್ತಿದ್ದಾಳೆ. "ಪುರುಷಶಾಹಿ ವ್ಯವಸ್ಥೆಯು ಪುರುಷರಿಗೆ ಅತಿಯಾದ ಪ್ರಾಧಾನ್ಯತೆಯನ್ನು ನೀಡಿ, ಅವರ ಪಾತ್ರವನ್ನು ಶ್ರೇಷ್ಠವೆಂದು ಪರಿಗಣಿಸಿದೆ. ಇದೇ ವ್ಯವಸ್ಥೆಯು ಸ್ತ್ರೀಯರ ಪಾತ್ರವನ್ನು ಅವರು ಮಾಡುವ ಕಾರ್ಯಗಳನ್ನು ಅತಿ ಗೌಣವಾಗಿ ಕಂಡು, ಸ್ತ್ರೀಯರ ಮೇಲೆ ನಾನಾ ಬಗೆಯ ನಿಬಂಧನೆಗಳನ್ನು ಹೇರಿ ಲಿಂಗ ಅಸಮಾನತೆಯನ್ನು ಸೃಷ್ಟಿಸಿ ಬಿಟ್ಟಿದೆ. ಸ್ತ್ರೀ- ಪುರುಷರ ನಡುವಿನ ವ್ಯತ್ಯಾಸವನ್ನು ಸಮರ್ಥಿಸುವ ಜೈವಿಕ ನೀತಿಯನ್ನು ಒಪ್ಪಿಕೊಳ್ಳುವ ಸಮಾಜವಿಜ್ಞಾನಗಳು ಲಿಂಗ ಅಸಮಾನತೆಗೆ ಕಾರಣವಾಗಿದೆ."[೪] ಆದರೆ ಇಂದು ಮಹಿಳೆಯು ಈ ಮೇಲಿನ ಚಿಂತಕರ ದೃಷ್ಟಿಕೋನವನ್ನು ಬದಲಿಸುತ್ತಿದ್ದಾಳೆ. ಸಿದ್ದಿ

[illegible]

[illegible]

ಪುರುಷರು ತೋಟಗಳಲ್ಲಿ ಹೊಲಗದ್ದೆಗಳಲ್ಲಿ ವಿಪರೀತ ದುಡಿದು ಬಂದು ಸಂಜೆ ವೇಳೆಯಲ್ಲಿ ಮಧ್ಯಪಾನ, ಸೇವಿಸುವುದರಿಂದ ಅಲ್ಲದೆ ಅನೇಕ ದುಂದುಗಾರಿಕೆಯಿಂದ ಇವರ ಕುಟುಂಬವು ಆರ್ಥಿಕವಾಗಿ ಅತಿ ಕೆಳಮಟ್ಟಕ್ಕೆ ಇಳಿದಿದೆ. ಹೀಗಾಗಿ ಅದನ್ನು ನಿಭಾಯಿಸಲು ಸಿದ್ದಿ ಮಹಿಳೆ ಪುರುಷರೊಂದಿಗೆ ದುಡಿದು ಕುಟುಂಬವನ್ನು ಮುನ್ನಡೆಸುವಳು. ಬಡತನವು ತೀವ್ರವಾಗುತ್ತಾ ನಡೆದಂತೆ ಅದರ ನಿರ್ವಹಣೆಯ ಜವಾಬ್ದಾರಿ ಆರ್ಥಿಕವಾಗಿ ಮಹಿಳೆಯರ ಮೇಲೆ ಬೀಳುತ್ತದೆ. ದುಡಿಸಿಕೊಳ್ಳುವ ಭೂಒಡೆಯರುಗಳು ಕಡಿಮೆ ಕೂಲಿಗೆ ಹೆಚ್ಚು ಕಾಲ ದುಡಿಸಿಕೊಳ್ಳುವರು. ಇದರಿಂದ ಇವರ ಆರ್ಥಿಕ ಪ್ರಗತಿ ಅಸಾಧ್ಯ.

ಕಡುಬಡತನದ ಕುಟುಂಬಗಳಲ್ಲಿ ಪುರುಷರು ಮಕ್ಕಳ ಲಾಲನೆ, ಪೋಷಣೆಯ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುತ್ತಾರೆ. ಆಗ ಮಕ್ಕಳ ಲಾಲನೆ–ಪಾಲನೆಯ ಜವಾಬ್ದಾರಿಯು ತಾಯಿಯ ಮೇಲೆ ಬೀಳುತ್ತವೆ. ಹೀಗೆ ಕೆಳವರ್ಗದ ಮಹಿಳೆಯರು ಮೂರು ಬಗೆಯ ದುಡಿಮೆಯ ಬಾಬ್ತು ದಿನದಲ್ಲಿ ೧೬ರಿಂದ ೧೮ಗಂಟೆಗಳ ಕಾಲ ದುಡಿಯುವ ಸಂಭವವಿದೆ. ಇಲ್ಲವೆ ದುಡಿಮೆಯು ಅತ್ಯಂತ ಶ್ರಮದಾಯಕವಾದುದಾಗಿರುತ್ತದೆ. ಅಷ್ಟು ಗಂಟೆಗಳ ಕಾಲ ದುಡಿದರೂ ಬಡಕುಟುಂಬಗಳಿಗೆ ಹೊಟ್ಟೆ ತುಂಬ ಊಟ ದೊರೆಯದಿರುವ ಸಂಭವವೇ ಹೆಚ್ಚು.[೫] ಈ ರೀತಿಯ ವ್ಯವಸ್ಥೆಯು ಸಿದ್ದಿ ಕುಟುಂಬದಲ್ಲಿ ಕಂಡುಬರುವುದು. ಸಿದ್ದಿ ಮಹಿಳೆಯು ಹೊರಗಡೆಗೆ ಶ್ರಮದಾಯಕವಾದ ಕೆಲಸ ಮಾಡಿ ಬಂದು ಕುಟುಂಬದ ನಿರ್ವಾಹಣೆ ಮಾಡುವಳು. ಹೀಗಾಗಿ ಪುರುಷರಿಗಿಂತ ಹೆಚ್ಚು ಕೆಲಸ ಕಾರ್ಯಗಳನ್ನು ಮಾಡುವವಳಾಗಿ ಕಂಡುಬರುವಳು.

ಭೂರಹಿತ ಕೃಷಿ ಕಾರ್ಮಿಕರಾಗಿ ಬದುಕನ್ನು ಸಾಗಿಸುತ್ತಿರುವ ಸಿದ್ದಿ ಮಹಿಳೆ ಸಾಮಾಜಿಕವಾಗಿ ಅತ್ಯಂತ ಕೆಳಮಟ್ಟದಲ್ಲಿದ್ದಾಳೆ. ಶೈಕ್ಷಣಿಕವಾಗಿ ನಿರಕ್ಷರಸ್ಥರಾಗಿರುವ ಇವರು ರಾಜಕೀಯವಾಗಿ ಯಾವುದೇ ಅಧಿಕಾರವನ್ನು ಹೊಂದಿಲ್ಲ. ಸಿದ್ದಿ ಸಮುದಾಯದಲ್ಲಿ ಸುಮಾರು ತೊಂಬತ್ತಕ್ಕಿಂತ ಹೆಚ್ಚು ಮಹಿಳೆಯರು ಹೊರಗಡೆ ಕೂಲಿ ಕೆಲಸಗಳಿಗೆ ಹೋಗುವರು. ಇವರು ಮನೆಗೆಲಸ ರಸ್ತೆ, ಕಟ್ಟಡ, ನಿರ್ಮಾಣ, ಗುತ್ತಿಗೆದಾರರ ಕೆಳಗೆ ಕೆಲಸ ಮಾಡುವುದು, ಕೃಷಿ ಕೆಲಸ, ಹೀಗೆ ಹಲವಾರು ಕೆಲಸಕಾರ್ಯಗಳಲ್ಲಿ ತೊಡಗಿರುವ ಈ ಮಹಿಳೆಯ ಬದುಕು ಇಂದು ತುಂಬ ದುಸ್ಥಿತಿಯಲ್ಲಿದೆ.

ಒಟ್ಟಿನಲ್ಲಿ ಸಿದ್ದಿ ಸಮುದಾಯದ ಮಹಿಳೆಯು ಆರ್ಥಿಕ ಅಭಿವೃದ್ಧಿಯಲ್ಲಿ ತುಂಬ ಹಿನ್ನಡೆಯುತ್ತಿದ್ದಾಳೆ. ಮೊದಲು ಕಾಡಿನ ರಾಜರುಗಳಂತೆ ಮೆರದ ಇವರು ಈಗ ಸರ್ಕಾರದ ಕೆಲವೊಂದು ಅರಣ್ಯದ ಕಟ್ಟಳೆಗಳಿಂದ ತಮ್ಮ ಕೂಲಿ ಕೆಲಸಗಳನ್ನು ಮಾಡಲು ಪಟ್ಟಣ ನಗರಗಳಿಗೆ ವಲಸೆ ಹೋಗುವ ಸ್ಥಿತಿ ಒದಗಿಬಂದಿದೆ. ಇವರು ಪಡುವ ಶ್ರಮಕ್ಕೆ ತಕ್ಕಂತೆ ಕೂಲಿ ಹಣ ಸರಿಯಾದ

ರೀತಿಯಲ್ಲಿ ಸಿಗದ ಕಾರಣ ಇವರಲ್ಲಿ ಕೂಡಿಡುವ ಪ್ರಮೇಯವೇ ಬರಲಾರದು. ಇವರ ಗಳಿಕೆ ಇವರಿಗೆ ಕೇವಲ ಊಟ ಬಟ್ಟೆಗಳಿಗೆ ಮಾತ್ರ ಸಾಕಾಗುವಂತಿದೆ. ಎಲ್ಲಾ ದೃಷ್ಟಿಯಿಂದ ಇವರನ್ನು ಗಮನಿಸಿದರೆ ಇವರು ಸಾಮಾಜಿಕವಾಗಿ ರಾಜಕೀಯವಾಗಿ, ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ತುಂಬ ಹಿಂದುಳಿದವರಾಗಿ ಕಂಡುಬಂದಿದೆ.

ಆಧಾರ ಗ್ರಂಥಗಳು

೧. ಸಂಘ ಜೀವನದಿಂದ ಗುಲಾಮಗಿರಿಗೆ, ಶ್ರೀಪಾದ ಡಾಂಗೆ (ಅನು) ಅನಂತಕೃಷ್ಣಮೂರ್ತಿ ಹೆಬ್ಬಾರ, ಪುಟ ೯೯-೧೦೦, ೧೯೯೩.

೨. ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ, ಟಿ.ಆರ್.ಚಂದ್ರಶೇಖರ, ಪುಟ ೧೫, ೨೦೦೦.

೩. ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ, ಟಿ.ಆರ್.ಚಂದ್ರಶೇಖರ, ಪುಟ ೧೨, ೨೦೦೦.

೪. ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ, ಟಿ.ಆರ್.ಚಂದ್ರಶೇಖರ, ಪುಟ ೩೯, ೨೦೦೦.

೫. ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ, ಟಿ.ಆರ್.ಚಂದ್ರಶೇಖರ, ಪುಟ ೫೯, ೨೦೦೦.

ಅಧ್ಯಾಯ : ಆರು

ಸಿದ್ದಿ ಮಹಿಳೆಯರ ಸಾಂಸ್ಕೃತಿಕ ಚಟುವಟಿಕೆಗಳು

೬.೧. ಧರ್ಮ

೬.೨. ಧಾರ್ಮಿಕ ಆಚರಣೆಗಳು.

೬.೩. ತೆಂಗು ಕಟ್ಟುವ ಪದ್ಧತಿ.

೬.೪. ಅಳಿಯನ ಅಮವಾಸೆ

೬.೫. ಸಿದ್ದಿನಾಸ.

೬.೬. ಸಿದ್ದಿಯರ ಭಾಷೆ ಮತ್ತು ಕಲೆ.

೬.೭. ಡಮಾಮಿ ಕುಣಿತ.

೬.೮. ಪುಗಡಿ ಕುಣಿತ.

ಅಧ್ಯಾಯ : ಆರು

ಸಿದ್ದಿ ಮಹಿಳೆಯರ ಸಾಂಸ್ಕೃತಿಕ ಚಟುವಟಿಕೆಗಳು

'ಸಂಸ್ಕೃತಿ' ಎಂಬ ಪದಕ್ಕೆ ಸೀಮಿತವಾದ ಅರ್ಥವಿಲ್ಲ. ಅನೇಕ ಮಂದಿ ವಿದ್ವಾಂಸರು ಈ ಸಂಸ್ಕೃತಿ ಎಂಬ ಪದಕ್ಕೆ ತಮ್ಮದೇ ಆದ ವ್ಯಾಖ್ಯಾನವನ್ನು ನೀಡುತ್ತ ಬಂದಿದ್ದಾರೆ. ಇದು ತುಂಬ ವಿಶಾಲವಾದ ಅರ್ಥವನ್ನೊಳಗೊಂಡದಾಗಿದ್ದು, ಹಲವಾರು ವಲಯಗಳಲ್ಲಿ ತನ್ನದೇ ಆದ ಅರ್ಥದಲ್ಲಿ ಬಳಕೆಯಾಗಿದೆ. ಪ್ರಾಚೀನ ಕಾಲದಿಂದಲೂ ಈ ಸಂಸ್ಕೃತಿ ಎಂಬ ಪದವು ಕಾಲಕ್ಕೆ ತಕ್ಕಂತೆ ಹೊಸ ಹೊಸ ಅರ್ಥಗಳನ್ನು ಪಡೆಯುತ್ತಾ ಬಂದಿದೆ. ಹೀಗಾಗಿ ಇದೊಂದು ಬಹುರೂಪಿಯ ಅರ್ಥದಲ್ಲಿ ಬಳಕೆಯಾಗುವ ಶಬ್ದವಾಗಿ ಮಾರ್ಪಟ್ಟಿದೆ.

ಒಂದು ಜನಾಂಗದ ಧಾರ್ಮಿಕ ಆಚರಣೆ, ನಡೆ, ನುಡಿ, ಕಲೆ ಸಾಹಿತ್ಯ ಸಂಗೀತಗಳಲ್ಲದೇ ಅದು ಆ ಸಮುದಾಯದ ಸಮಗ್ರ ಜೀವನದ ಚಿತ್ರಣವನ್ನು ಪ್ರತಿಬಿಂಬಿಸುತ್ತದೆ. ಸಾಮಾನ್ಯವಾಗಿ ಸಂಸ್ಕೃತಿ ಎಂದರೆ ಒಂದು ಜನಾಂಗದ ಜೀವನ ವಿಧಾನದ ಒಟ್ಟು ಮೊತ್ತವಾಗಿದೆ. ಯಾವುದೇ ಸಮುದಾಯದ ರೂಢಿ ಸಂಪ್ರದಾಯ, ನಂಬಿಕೆ, ಆಚರಣೆಗಳು, ಅವರ ಆಚಾರ-ವಿಚಾರ, ಭಾಷೆ, ವೇಷ-ಭೂಷಣಗಳು, ಆಹಾರ, ಉಡುಗೆ ತೊಡಗೆ, ಧರ್ಮ ದೇವರುಗಳು ಹಾಗೂ ಕಲೆಗಳು, ಬುಡಕಟ್ಟು ಸಂಸ್ಕೃತಿಗೆ ಒಂದು ರೂಪ ಕೊಡುವ ಘಟಕಗಳಾಗಿವೆ. ಇಷ್ಟೆಲ್ಲ ವೈವಿಧ್ಯತೆಯನ್ನು ಬದುಕಿನಲ್ಲಿ ಅಳವಡಿಸಿಕೊಂಡು ಜೀವಿಸಲು ಬುಡಕಟ್ಟುಗಳ ಸಂಸ್ಕೃತಿ ಅತ್ಯಂತ ಮಹತ್ತರವಾದದ್ದಾಗಿದೆ. ಸಾಮಾಜಿಕವಾಗಿ, ರಾಜಕೀಯವಾಗಿ ಹಾಗೂ ಶೈಕ್ಷಣಿಕವಾಗಿ ಅತ್ಯಂತ ಕೆಳಮಟ್ಟದಲ್ಲಿದ್ದರೂ ಇವರ ಸಾಂಸ್ಕೃತಿಕ ಬದುಕು ಮಾತ್ರ ಶ್ರೇಷ್ಠವಾದುದಾಗಿದೆ. ಕರ್ನಾಟಕದಲ್ಲಿ ಸುಮಾರು ಐವತ್ತರಷ್ಟು ಬುಡಕಟ್ಟುಗಳು ಕಂಡುಬರುತ್ತವೆ. ಪ್ರತಿ ಬುಡಕಟ್ಟು ಜನಾಂಗದ ಜೀವನದ ವಿಧಾನ, ವೃತ್ತಿ ಸಂಪ್ರದಾಯಗಳಲ್ಲಿ ವೈವಿಧ್ಯತೆಯನ್ನು ಕಾಣಲು ಸಾಧ್ಯವಾಗಿದೆ.

ಇತ್ತೀಚಿನ ದಿನಮಾನಗಳಲ್ಲಿ ಈ ಬುಡಕಟ್ಟುಗಳು ಕಾಡಿನ ಸಂಸ್ಕೃತಿಯನ್ನು ತೊರೆದು ನಾಡಿನ ಸಂಸ್ಕೃತಿಯಲ್ಲಿ ಲೀನವಾಗುತ್ತಿವೆ. ಹಾಗೂ ಮೇಲ್ವರ್ಗದ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿ ತಮ್ಮದಲ್ಲದ ಆಚಾರ-ವಿಚಾರ, ರೂಢಿ ಸಂಪ್ರದಾಯಗಳಲ್ಲಿ ಆಸಕ್ತಿ ವಹಿಸುತ್ತಿರುವರು. ಯಾವುದೇ ಒಂದು ಜನಾಂಗದ ಸಂಸ್ಕೃತಿಯು ನಿಂತ ನೀರಲ್ಲ. ಅದು ಹರಿಯುತ್ತಿರುವ ನೀರು. ನಿತ್ಯ ಪರಿವರ್ತನ ಶೀಲವಾದದು. ಅನ್ಯ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗದೇ ಪ್ರತ್ಯೇಕತೆಯನ್ನು ಕಾಯ್ದುಕೊಂಡಿರುವ ಬುಡಕಟ್ಟಿನ ಸಂಸ್ಕೃತಿಗಳಲ್ಲಿಯೂ ಕಾಲಾಂತರದಲ್ಲಿ

ಎಷ್ಟೋ ಬದಲಾವಣೆಯಾಗಿರುವುದನ್ನು ಮನಗಾಣುತ್ತೇವೆ."[೧] ಭಾರತದಲ್ಲಿ ಬುಡಕಟ್ಟುಗಳ ಸಂಸ್ಕೃತಿ ಕಾಲಕಾಲಕ್ಕೆ ನಿರಂತರವಾಗಿ ಬದಲಾವಣೆ ಹೊಂದುತ್ತಲೇ ಬಂದಿದೆ. ಇದು ಅನಿವಾರ್ಯವಾದದು. ಹೀಗಾಗಿ ಈ ಬುಡಕಟ್ಟುಗಳ ಸಾಂಸ್ಕೃತಿಕ ಜೀವನದ ಬಗ್ಗೆ ತಳ ಸ್ಪರ್ಶಿಯವಾಗಿ ಅಧ್ಯಯನ ಮಾಡಿ ಅವುಗಳನ್ನು ಪರಿಚಯಿಸುವುದು ಇಂದಿನ ದಿನಮಾನಗಳಲ್ಲಿ ಅತ್ಯಂತ ಅಗತ್ಯವಾಗಿದೆ.

ದೇಶ ಬಿಟ್ಟು ಮತ್ತೊಂದು ದೇಶಕ್ಕೆ ಗುಲಾಮರಾಗಿ ಬಂದು ಏನೆಲ್ಲ ತೊಂದರೆಗಳನ್ನು ನೀಡಿದರೂ ಅದನ್ನು ಸಹಿಸಿಕೊಂಡು ಕಾಡಿನಲ್ಲಿ ಬದುಕನ್ನು ಕಟ್ಟಿಕೊಂಡು ಜೀವಿಸುವ ಸಿದ್ದಿಗಳು ತಮ್ಮ ಮೂಲ ಸಂಸ್ಕೃತಿಯ ಚಹರೆಗಳನ್ನೆಲ್ಲ ಕಳಚಿಕೊಂಡವರಾಗಿದ್ದಾರೆ. ತಾವು ಬಂದು ನೆಲೆಸಿದ ಮನೆಯ ಒಡೆಯರ ಅಥವಾ ಪ್ರದೇಶದ ಸಾಮಾಜಿಕ ವ್ಯವಸ್ಥೆಯನ್ನು, ಜೀವನ ಮೌಲ್ಯಗಳನ್ನು ಅನುಸರಿಸಿದರು. ಹೀಗಾಗಿ ಇವರ ಮೂಲ ಸಾಮಾಜಿಕ ಸಾಂಸ್ಕೃತಿಕ ವೈಶಿಷ್ಟಗಳನ್ನು ಗುರುತಿಸುವುದು ಸ್ವಲ್ಪ ಕಠಿಣ ಕೆಲಸವಾಗಿದೆ. ಅಲ್ಪಸ್ವಲ್ಪ ತಮ್ಮ ಹಾಗೂ ನಮ್ಮ ಸಂಸ್ಕೃತಿಯ ಜೊತೆಯಲ್ಲಿ ತಮ್ಮದಲ್ಲದ ಬೇರೆ ಸಂಸ್ಕೃತಿಯಲ್ಲಿ ಹೆಚ್ಚಾಗಿ ಕರಗಿ ಹೋಗಿರುವವರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಡಾ.ಹಿ.ಚಿ.ಬೋರಲಿಂಗಯ್ಯರವರು ಸಿದ್ದಿಯರ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ಈ ಅಂಶಗಳನ್ನು ಮುಂದಿಟ್ಟುಕೊಂಡು ಚರ್ಚಿಸುತ್ತಾರೆ. ಅವುಗಳು ಈ ಕೆಳಗಿನಂತಿವೆ.

೧. ದಾಸ್ಯದ ಬದುಕಿನ ಅಳಿಸಲಾಗದ ಸ್ಮೃತಿ.
೨. ಇದರ ಪರಿಣಾಮವಾಗಿ ಕಾಡುತ್ತಿರುವ ಕೀಳರಿಮೆ.
೩. ಕೀಳರಿಮೆಯ ಕಾರಣಕ್ಕಾಗಿ ಮೇಲ್ವರ್ಗ ಅಥವಾ ಭೂಮಾಲೀಕ ವರ್ಗದ ಅನುಕರಣೆ.
೪. ಸುತ್ತಲ ಪರಿಸರದ ಇನ್ನಿತರೆ ಜನಾಂಗಗಳ ಜೀವನ ವಿಧಾನಗಳ ಪ್ರಭಾವ.
೫. ಕಾಡಿನ ಪ್ರಭಾವ.

ಸಿದ್ದಿ ಸಮುದಾಯವನ್ನು ಕುರಿತು ಹೆಚ್ಚು ಅಧ್ಯಯನ ಮಾಡಿರುವ ಡಾ. ಹಿ.ಚಿ. ಬೋರಲಿಂಗಯ್ಯನವರು ಈ ಮೇಲಿನ ಅಂಶವನ್ನು ಕುರಿತು "ನಮ್ಮೊಳಗೊಂದು ಪುಟ್ಟ ಆಫ್ರಿಕಾ" ಎಂಬ ಕೃತಿಯಲ್ಲಿ ವಿವರವಾಗಿ ಚರ್ಚಿಸಿರುವರು. ನಾನು ಕ್ಷೇತ್ರ ಕಾರ್ಯ ಕೈಗೊಂಡ ಸಂದರ್ಭದಲ್ಲಿ ಅವರ ಆಚಾರ-ವಿಚಾರವನ್ನು ನೋಡಿದಾಗ ಈ ಮೇಲಿನ ಅಂಶಗಳು ಅವರ ಮೇಲೆ ಪ್ರಭಾವ ಬೀರಿರುವುದು ಗೋಚರಿಸುತ್ತದೆ. ಬದುಕು ನಿಂತ ನೀರಲ್ಲ. ಅದು ಹರಿಯುವ ಹೊಳೆ-ಹಳ್ಳಗಳಂತೆ ಸದಾ ಚಲನಾಶೀಲವಾಗಿರುತ್ತದೆ. ಹಾಗೆಯೇ ಈ ಸಂಸ್ಕೃತಿ ಕೂಡ. ಚಲನಶೀಲತೆಯಿಂದ ಕೂಡಿದೆ. ಈ ಸಿದ್ದಿ ಸಮುದಾಯದ ವೃತ್ತಿ ಜೀವನ ವಿಧಾನ ಪರಿಸರ, ಸಂಸ್ಕೃತಿ ಹಲವಾರು ವೈಶಿಷ್ಟಗಳನ್ನೊಳಗೊಂಡಿವೆ. ಈ

ಸಮುದಾಯವು ಗುಲಾಮರಾಗಿ ಬಂದು ಈ ನಾಡಿನಲ್ಲಿ ನೆಲೆನಿಂತ ಮೇಲೆ ಇವರ ಮೈಬಣ್ಣ, ಶಾರೀರಕ ಲಕ್ಷಣಗಳಿಂದ ಇವರನ್ನು ಕೀಳಾಗಿ ಕಾಣುವ ಪರಿಸರ ನಿರ್ಮಾಣವಾಗಿದುಂಟು. ಆದರೆ ಅವರದೇ ಆದ ಸಾಂಸ್ಕೃತಿಕ ಬದುಕು ಮಾತ್ರ ಶ್ರೇಷ್ಠಮಟ್ಟದ್ದಾಗಿದೆ. ಕರ್ನಾಟಕದಲ್ಲಿ ವಾಸವಾಗಿರುವ ಬುಡಕಟ್ಟುಗಳ ಸಂಸ್ಕೃತಿ ತುಂಬಾ ವೈಶಿಷ್ಟಮಯವಾಗಿದೆ. ಹೀಗಾಗಿ ಈ ಸಂದರ್ಭದಲ್ಲಿ ಸಿದ್ದಿ ಜನಾಂಗದ ಸಾಂಸ್ಕೃತಿಕ ಬದುಕನ್ನು ಕುರಿತು ಅಧ್ಯಯನ ಮಾಡುವುದು ತುಂಬಾ ಅವಶ್ಯವಾಗಿದೆ. ಉತ್ತರ ಕರ್ನಾಟಕದ ಸುತ್ತಮುತ್ತಲಿನ ಪ್ರದೇಶದಲ್ಲಿ ನೆಲೆ ನಿಂತಿರುವ ಸಿದ್ದಿಯರನ್ನು ಸವರ್ಣೀಯರು ಕೀಳಾಗಿ ಕಂಡು ತಮ್ಮ ಗುಲಾಮರನ್ನಾಗಿಸಿಕೊಂಡು ಪರಾವಲಂಬಿಗಳಾಗಿ ಬದುಕುವಂತೆ ಮಾಡಿದೆ. ಇವರ ವೈಯಕ್ತಿಕ ಆಸೆ ಆಕಾಂಕ್ಷೆಗಳಿಗೆ ಎಂದೂ ಸ್ವತಂತ್ರ ಪಡೆದವರಲ್ಲ. ತಮ್ಮನ್ನು ಗುಲಾಮರನ್ನಾಗಿ ಮಾಡಿಕೊಂಡ ಉನ್ನತ ಸಮುದಾಯದವರು ಹೇಳಿದಂತೆ ಕೇಳಿಕೊಂಡು ನಡೆದವರು. ಹೀಗಾಗಿ ತಮ್ಮ ಮೂಲ ಸಂಸ್ಕೃತಿಯನ್ನು ಕಳಚಿ ತನ್ನದಲ್ಲದ ಸಂಸ್ಕೃತಿಯಲ್ಲಿ ಬದುಕು ಸಾಗಿಸಿದವರು. ದೈಹಿಕವಾಗಿ, ಶಾರೀರಕವಾಗಿ ತುಂಬ ಸಬಲರಾದ ಈ ಸಮುದಾಯದ ಮಹಿಳೆಯರ ಸ್ಥಿತಿಯಂತು ತುಂಬಾ ಶೋಚನೀಯವಾಗಿದೆ. ಕುಟುಂಬದಲ್ಲಿ ಎರಡನೇ ದರ್ಜೆಯ ಪ್ರಜೆಯಾಗಿ ಈ ಮಹಿಳೆಯನ್ನು ಪುರುಷಶಾಹಿ ವ್ಯವಸ್ಥೆ ನೋಡುತ್ತಿದೆ.

೬.೧. ಧರ್ಮ:

ಪ್ರತಿಯೊಂದು ಸಮುದಾಯದಲ್ಲಿ ಸಾಮರಸ್ಯವನ್ನು ಉಂಟುಮಾಡಲು ಕೆಲವೊಂದು ಸಾಮಾಜಿಕ-ಧಾರ್ಮಿಕ ಕರ್ತವ್ಯಗಳಿರುತ್ತವೆ. ಆದರೆ ಧಾರ್ಮಿಕ ವಿಷಯದಲ್ಲಿ ಪುರುಷರಿಗಿರುವಷ್ಟು ಸರಳತೆ ಸಾಮಾನ್ಯವಾಗಿ ಸ್ತ್ರೀಯರಲ್ಲಿ ಕಂಡು ಬರಲಾರದು. ಪ್ರತಿಯೊಂದು ಧರ್ಮವು ಸ್ತ್ರೀಯನ್ನು ಶೋಷಣೆಯ ಕಡೆ ಮುಖ ಮಾಡಿ ತೋರಿಸಿವೆ ಹೊರತು ಎಲ್ಲಿಯೂ ಉದ್ಧಾರದ ಕಡೆ ದಾರಿ ತೋರಿಸಿಲ್ಲ. ಯಾಕೆಂದರೆ ಎಲ್ಲಾ ಧರ್ಮಗಳು ಹುಟ್ಟಿದ್ದು ಪುರುಷರಿಂದ, ಹೀಗಾಗಿ ಪುರುಷಶಾಹಿ ವ್ಯವಸ್ಥೆ ಧಾರ್ಮಿಕ ವಲಯದಲ್ಲಿ ಸ್ತ್ರೀಯರನ್ನು ಅನೇಕ ರೀತಿಯಲ್ಲಿ ಶೋಷಿಸುತ್ತಿದೆ. ಈ ರೀತಿಯ ವ್ಯವಸ್ಥೆ ಸಿದ್ದಿ ಸಮುದಾಯದಲ್ಲೂ ಕಂಡುಬರುವುದು ಸಹಜ. ತಮ್ಮ ಸ್ವಧರ್ಮವನ್ನು ಬಿಟ್ಟು ಗುಲಾಮರಾಗಿ ಈ ನಾಡಿಗೆ ಬಂದ ಮೇಲೆ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಹೊಂದಿದರು.

ಈ ಮೂರು ಧರ್ಮವನ್ನು ಸ್ವೀಕರಿಸಿದ ಸಿದ್ದಿಗಳು ಸ್ವತಂತ್ರವಾಗಿ ಯಾರು ಸ್ವೀಕರಿಸಿದವರಲ್ಲ. ಅಲ್ಲದೇ ಸ್ವ-ಇಚ್ಛೆಯಿಂದ ಸ್ವೀಕರಿಸಿದ ಧರ್ಮಗಳಾಗಿರಲಿಲ್ಲ. ತಮ್ಮ ಮೂಲ ಧರ್ಮವಲ್ಲದ ಈ ಮೂರು ಧರ್ಮಗಳನ್ನು ಇವರ ಮೇಲೆ ಬಲವಂತವಾಗಿ

ಹೇರಲಾಯಿತು. ಮೊದಲಿಗೆ ಅರಬ್ಬರ ದಾಳಿಗೆ ಒಳಗಾದ ಇವರು ಇಸ್ಲಾಂ ಧರ್ಮದಲ್ಲಿ ನಂತರ ಪೋರ್ಚುಗೀಸರ ಒತ್ತಡಕ್ಕೆ ಒಳಗಾಗಿ ಕ್ರೈಸ್ತ ಧರ್ಮ, ಕೊನೆಗೆ ನೆಲೆನಿಂತ ಸ್ಥಳಗಳಲ್ಲಿ ಹೇರಿದ ಹಿಂದೂ ಧರ್ಮ "ಈ ಮೂರು ರೀತಿಯ ಧಾರ್ಮಿಕ ವ್ಯವಸ್ಥೆಯ ಅಡಿಯಲ್ಲಿ ಸಿದ್ದಿಗಳು ಹಂಚಿಹೋದರು. ಪ್ರಾರಂಭದಲ್ಲಿ ಈ ನಾಡಿನಲ್ಲಿ ನೆಲೆನಿಂತ ಮೇಲೆ ಇವರಿಗೆ ಮಸೀದಿ, ಗುಡಿ, ಚರ್ಚುಗಳಿಗೆ ಪ್ರವೇಶವನ್ನು ನಿರಾಕರಿಸಿದರು. ಮೂಲದಲ್ಲಿ ಒಂದೇ ಸಂಸ್ಕೃತಿಗೆ ಸೇರಿದ ಈ ಜನ ತಮ್ಮ ಪಯಣದ ಹಾದಿಯಲ್ಲಿ ತಮ್ಮದಲ್ಲದ ಈ ಮೂರು ಧರ್ಮಗಳನ್ನು ಅನುಸರಿಸಬೇಕಾಗಿ ಬಂದಿದ್ದು ಒಂದು ನಾಗರಿಕತೆಯ ದುರಂತ. ಈ ದಾಸ್ಯದ ಬದುಕಿನ ಕಾರಣಕ್ಕಾಗಿ ಗತಕಾಲದಲ್ಲಿ ಘಟಿಸಿ ಹೋದ ಆ ದುರಂತದ ಸ್ಮೃತಿ ಮತ್ತೆ ಮತ್ತೆ ಇವರನ್ನು ತಲ್ಲಣಗೊಳ್ಳುವಂತೆ ಮಾಡುತ್ತಿದೆ. ಆಯಾ ಧರ್ಮವನ್ನು ಸ್ವೀಕರಿಸಿದವರು ಆಯಾ ಧರ್ಮಗಳ ಸಾಗರದಲ್ಲಿ ಲೀನವಾಗಿ ಹೋಗಿದ್ದರೆ ಅದೊಂದು ದುರಂತದ ಸ್ಮೃತಿಯಾಗಿ ಇಂದು ಇವರನ್ನು ಕಾಡುತ್ತಿರಲಿಲ್ಲ. ಆದರೆ ಆದದ್ದೇ ಬೇರೆ, ಬಲವಂತವಾಗಿ ಧರ್ಮವನ್ನು ಹೇರಲಾಯಿತೇ ಹೊರತು ಸ್ವೀಕರಣ ಆಗಲೇ ಇಲ್ಲ. ಬಣ್ಣದಲ್ಲಿ, ನಡವಳಿಕೆಯಲ್ಲಿ ಮತ್ತು ಸಂಸ್ಕೃತಿಯ ವಿಚಾರದಲ್ಲಿ ಅಹಂಕಾರಿಗಳಾಗಿ ವರ್ತಿಸಿದ ಆ ಬಹುಸಂಖ್ಯಾತ ಧರ್ಮಾಂಧ ಜನತೆ ಎಂದೂ ಇವರನ್ನು ತಮ್ಮವರನ್ನಾಗಿ ಆಲಂಗಿಸಲೇ ಇಲ್ಲ. ಗುಡಿ, ಚರ್ಚು, ಮಸೀದಿಗಳಿಗೆ ಹೋಗಿಯೂ ಆ ಜನರ ಮನೆಗಳನ್ನೂ, ಮನಗಳನ್ನೂ ಪ್ರವೇಶಿಸಲಾರದೇ ಹೋದ ಸಿದ್ದಿಗಳು ಕಾಂಪೌಂಡಿನಾಚೆಯೇ ಹುಲ್ಲುಗಳಾಗೇ ಉಳಿದು ಹೋದರು."[೨] ಇತ್ತೀಚೆಗೆ ಇವರಿಗೆ ಕೆಲ ದೇವಾಲಯಗಳಿಗೆ ಮಾತ್ರ ಪ್ರವೇಶವುಂಟು. ಆದರೆ ಗರ್ಭಗುಡಿಯನ್ನು ಪ್ರವೇಶಿಸುವಂತಿಲ್ಲ. ಈ ರೀತಿಯ ವ್ಯವಸ್ಥೆ ಪುರುಷರಿಗೆ ಕಂಡುಬಂದರೆ ಸ್ತ್ರೀಯರಿಗೆ ಹತ್ತಿರ ಬರಗೊಡಿಸಲಾರರು. ಹೆಣ್ಣಿನ ಬಗ್ಗೆ ಯಾವ ಧರ್ಮದಲ್ಲೂ ಪವಿತ್ರಳಂತೆ ಭಾವಿಸಲಾರರು ಅವಳನ್ನು ಎರಡನೇ ದರ್ಜೆಯ ವ್ಯಕ್ತಿಯಂತೆ ಕಾಣುವರು. ಹೀಗಾಗಿ ಮಡಿ-ಮೈಲಿಗೆ ಎಂದು ಗುಡಿಗಳಿಗೆ ಚರ್ಚುಗಳಿಗೆ ಹಾಗೂ ಮಸೀದಿಗಳಿಗೆ ಪ್ರವೇಶವಿಲ್ಲದಂತಾಗಿದೆ. ಸಿದ್ದಿ ಮಹಿಳೆ ಪ್ರತಿಯೊಂದರಲ್ಲಿ ಆಯಾ ಧರ್ಮದ ನಿಯಾಮಾವಳಿಗಳಿಗೆ ಒಳಗಾಗಿ ಶೋಷಿತ ಬದುಕನ್ನು ಅನುಭವಿಸುವಳು. ಪ್ರಾಚೀನ ಕಾಲದಿಂದ ಹಿಡಿದು ಇಂದಿನ ದಿನಮಾನದವರೆಗೆ ನೋಡಿದರೆ ದೈಹಿಕವಾಗಿ ದಷ್ಟಪುಷ್ಟಳಾದ ಸಿದ್ದಿ ಮಹಿಳೆ ಗಂಡಿಗೆ ಸಮಾನವಾಗಿ ಕೆಲಸ ಮಾಡಿದರೂ ಅವಳಿಗೆ ಕೆಳಮಟ್ಟದ ಸ್ಥಾನಮಾನ ನೀಡಿದೆ.

ಭಾರತೀಯ ಪರಂಪರೆಯಲ್ಲಿ ಪತಿಯೇ ಪರದೈವ. ಪತಿವ್ರತಾ ಧರ್ಮವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗಿದೆ. ಪುರುಷಶಾಹಿ ಚಿಂತನೆಗಳು ಧರ್ಮವನ್ನು ತಮಗೆ ಇಷ್ಟಬಂದಂತೆ ಪ್ರತಿಯೊಂದು ಸಮುದಾಯದಲ್ಲಿ ಹೆಣ್ಣಿನ ಮೇಲೆ ಕೆಲವೊಂದು ನಿರ್ಬಂಧ ಹೇರಿದೆ.

ಹೀಗಾಗಿ ಅವಳ ಪ್ರತಿಯೊಂದು ಅಸ್ತಿತ್ವವನ್ನು ಈ ಧರ್ಮವು ಕಸಿದುಕೊಂಡಿದೆ. ಧರ್ಮದ ವಿಷಯದಲ್ಲಿ ಸ್ತ್ರೀಯರ ಬಗ್ಗೆ ಕಂಡುಬರುವ ಧೋರಣೆಗೆ ಪುರುಷಶಾಹಿ ಹೂಡಿರುವ ಕಪಟವೆಂದು ಹೇಳಬಹುದು. ಈ ಸಿದ್ದಿ ಮಹಿಳೆಯರು ತಮ್ಮದಲ್ಲದ ಹಿಂದೂ, ಮುಸ್ಲಿಂ, ಕ್ರೈಸ್ತಧರ್ಮವನ್ನು ಅನುಸರಿಸಿದ್ದರು. ಇವರಲ್ಲಿ ಕಂಡುಬರುವ ಸಾಮರಸ್ಯ ಅದ್ಭುತವಾದದ್ದು. ನಮ್ಮ ನಾಡಿನಲ್ಲಿರುವ ಮೂಲ ಕ್ರೈಸ್ತ ಹಿಂದೂ, ಮುಸ್ಲಿಂ, ಧರ್ಮದವರು ಇವರನ್ನು ಬೇರೆ ಜನಾಂಗದ ಲಕ್ಷಣವುಳ್ಳ ಇವರನ್ನು ನಮ್ಮವರೆಂದು ಪ್ರೀತಿಯಿಂದ ಹತ್ತಿರ ಸೇರಿಸಲಿಲ್ಲ. ಹೀಗಾಗಿ ಇವರ ವೈವಾಹಿಕ ಸಂಬಂಧವು ಕ್ರೈಸ್ತ ಸಿದ್ದಿ, ಮುಸ್ಲಿಂ ಸಿದ್ದಿ, ಹಿಂದೂ ಸಿದ್ದಿಗಳು ಪರಸ್ಪರ ವಿವಾಹ ಮಾಡಿಕೊಳ್ಳುವರು. ಇದರಿಂದ ಇವರಲ್ಲಿ ಪರಸ್ಪರ ಐಕ್ಯತೆಯ ಮನೋಭಾವವು ಉಂಟಾಗಿವೆ.

೬.೨. ಧಾರ್ಮಿಕ ಆಚರಣೆಗಳು:

ತಮ್ಮ ಮೂಲ ಸಂಸ್ಕೃತಿಯನ್ನು ತೊರೆದ ಸಿದ್ದಿಗಳು ಈ ನಾಡಿಗೆ ಬಂದ ಮೇಲೆ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಧರ್ಮಗಳನ್ನು ಮತ್ತೊಬ್ಬರ ಒತ್ತಡಕ್ಕೆ ಮಣಿದು ಸ್ವೀಕರಿಸಿದರು. ಇವರು ಪಾಲನೆ ಮಾಡುವ ಧರ್ಮದಲ್ಲಿರುವ ಕೆಲವು ಆಚರಣೆಗಳನ್ನು ಪಾಲಿಸುವುದರಲ್ಲಿ ಪುರುಷರಿಗಿಂತ ಹೆಚ್ಚು ನಿಯಮಬದ್ಧವಾಗಿ ಮಹಿಳೆಯರು ಪಾಲಿಸುವವರು. ತಮ್ಮ ತಮ್ಮ ಧರ್ಮಗಳಿಗನುಸಾರವಾಗಿ ಉಪಾಸನೆ ಮಾಡುವರು. ಹಿಂದೂ ಸಿದ್ದಿಗಳು ಚೌತಿ ಹಬ್ಬಕ್ಕೆ, ಶಿವರಾತ್ರಿ, ಸಂಕಷ್ಟಿ ಮುಂತಾದ ಸಂದರ್ಭದಲ್ಲಿ ಉಪವಾಸ ವ್ರತವನ್ನು ಮಾಡುವರು. ಅದೇ ರೀತಿಯಾಗಿ ಕ್ರಿಶ್ಚಿಯನ್ ಸಿದ್ದಿಗಳಲ್ಲಿ ಗುಡ್ ಪ್ರೈಡ್‌ಕ್ಕಿಂತಲೂ ಮುಂಚಿತವಾಗಿ ನವಲತ್ತು ದಿನಗಳವರೆಗೆ ಉಪವಾಸ ಮಾಡುತ್ತಾರೆ. ಇವರಲ್ಲಿ ಹೆಚ್ಚಾಗಿ ಮಹಿಳೆಯರೇ ಉಪವಾಸ ಕೈಗೊಳ್ಳುವರು. ಹೀಗೆ ಉಪವಾಸ ಮಾಡುವುದರಿಂದ ತಾವು ಮಾಡಿದ ಪಾಪ ಹಾಗೂ ಕೆಟ್ಟ ಕೆಲಸಗಳಿಗೆ ಈ ಸಮಯದಲ್ಲಿ ಪ್ರಾಯಶ್ಚಿತ್ತ ಎಂಬಂತೆ ದೇಹದಂಡನೆ ಮಾಡುವರು. ಒಂದೇ ಹೊತ್ತು ಸರಳವಾಗಿ ಊಟ ಮಾಡುವರು. ಪುರುಷರಿಗಿಂತ ಈ ಉಪವಾಸ ಆಚರಣೆಯಲ್ಲಿ ಹೆಚ್ಚು ಭಾಗವಹಿಸುವರು ಸ್ತ್ರೀಯರಾಗಿದ್ದಾರೆ. ಪುರುಷರು ಏಕೆ ಹೆಚ್ಚು ಉಪವಾಸ ಕೈಗೊಳ್ಳುವುದಿಲ್ಲ ಎಂಬ ಪ್ರಶ್ನೆಗೆ ಮಹಿಳೆಯರು ನೀಡಿದ ಉತ್ತರ ಹೀಗಿದೆ. ಪುರುಷರು ಹೊರಗಡೆ ದುಡಿಯಲಿಕ್ಕೆ ಹೋಗುವರು ಹೀಗಾಗಿ ಅವರಿಗೆ ಸರಿಯಾದ ಊಟ ಬೇಕಾಗುತ್ತದೆ. ಅವರು ನಮ್ಮ ಹಾಗೆ ಉಪವಾಸ ಕೈಗೊಂಡರೆ ಕುಟುಂಬದ ನಿರ್ವಹಣೆ ಮಾಡುವುದು ತುಂಬ ಕಷ್ಟವಾಗುವುದು. ಪುರುಷರು ಕೂಲಿ ಕೆಲಸಗಳಿಗೆ ಹೋಗುವ ಪ್ರಮೇಯ ಬರುವುದುಂಟು. ಆದ್ದರಿಂದ ಉಪವಾಸ ನಮ್ಮ ಪಾಲಿಗೆ ಬಂದಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರೆ, ಅದಕ್ಕೆ ಪ್ರತಿಯಾಗಿ "ನೀವು ಮನೆ ಕೆಲಸ ತುಂಬ

ಮಾಡುತ್ತೀರಲ್ಲಾ?" ಎಂದು ಪ್ರಶ್ನೆ ಕೇಳಿದಾಗ "ಪುರುಷರು ಮಾಡುವ ಕೆಲಸಕ್ಕಿಂತ ನಾವು ಮಾಡುವ ಮನೆಕೆಲಸ ತುಂಬ ಕಡಿಮೆ" ಎಂದು ಹೇಳುವರು. ಕ್ಷೇತ್ರ ಕಾರ್ಯದಲ್ಲಿ ಪಡೆದ ಮಾಹಿತಿ ಪ್ರಕಾರ ಶೇಕಡಾ ನೂರರಷ್ಟು ಮಹಿಳೆಯರು ವ್ರತಾಚರಣೆಯನ್ನು ಕೈಗೊಳ್ಳುವರು. ಅದೇ ರೀತಿಯಾಗಿ ಮುಸ್ಲಿಂ ಸಿದ್ದಿ ಮಹಿಳೆಯರು ಕೂಡ ರಂಜಾನ ಹಬ್ಬದಲ್ಲಿ ಒಂದು ತಿಂಗಳವರೆಗೆ ಕುಟುಂಬದವರು ಎಲ್ಲರೂ ಚೆನ್ನಾಗಿರಲಿ ಎಂದು ಉಪವಾಸ ಮಾಡುವರು. ಒಟ್ಟಿನಲ್ಲಿ ಮಹಿಳೆಯರು ಕುಟುಂಬದಲ್ಲಿ ಗಂಡ, ಮಕ್ಕಳು ಉತ್ತಮ ಆರೋಗ್ಯದಿಂದರಲಿ ಎಂದು ಉಪವಾಸ ವ್ರತಗಳನ್ನು ಕೈಗೊಳ್ಳುವರು. ಆದರೆ ಪುರುಷ ಮಾತ್ರ ಯಾವುದೇ ರೀತಿಯಲ್ಲಿ ಹೆಂಡತಿ, ಮಕ್ಕಳು ಕುಟುಂಬದವರು ಚೆನ್ನಾಗಿ ಇರಲಿ ಎಂದು ಯಾವುದೇ ವ್ರತಾಚರಣೆಯನ್ನು ಕೈಗೊಳ್ಳುವುದಿಲ್ಲ. ಒಟ್ಟಿನಲ್ಲಿ ಮಹಿಳೆಯರಿಗೆ ಪುರುಷಶಾಹಿ ವ್ಯವಸ್ಥೆ ದೇವರು ಧರ್ಮದ ಹೆಸರಿನಲ್ಲಿ ಅವಳಿಗೆ ಅಶಕ್ತಳನ್ನಾಗಿ ದುರ್ಬಲಳನ್ನಾಗಿ ಮಾಡುತ್ತಿದೆ.

೬.೩. ತೆಂಗು ಕಟ್ಟುವ ಪದ್ಧತಿ:

ಪ್ರತಿಯೊಂದು ಬುಡಕಟ್ಟು ಸಮುದಾಯಗಳಲ್ಲಿ ಹಿರಿಯರನ್ನು ಪೂಜಿಸುವ ವ್ಯವಸ್ಥೆ ಕಂಡುಬರುತ್ತದೆ. ತಮ್ಮ ತಾತಾ ಮುತ್ತಾತರಂತಹವರು ಸ್ವರ್ಗವಾಸಿಗಳಾದವರಿಗೆ ಪೂಜೆ ಪುನಸ್ಕಾರ ಮಾಡುವ ಪದ್ಧತಿ ನಮ್ಮ ಭಾರತೀಯ ಸಮಾಜದಲ್ಲಿ ಸಹ ಗೋಚರಿಸುವುದು. ಅದರಂತೆ "ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಸಿದ್ದಿಗಳೆಲ್ಲರೂ ಹಿರಿಯರ ಉಪಾಸನೆಯಲ್ಲಿ ನಂಬಿಕೆಯುಳ್ಳವರು. ಪಿತೃಪೂಜೆ ಸಾಮಾನ್ಯವಾಗಿ ಪ್ರಪಂಚದ ಅನೇಕ ಸಂಸ್ಕೃತಿಗಳಲ್ಲಿ ಬಳಕೆಯಲ್ಲಿದೆ. ಸುಲಿಯದ ಎರಡು ತೆಂಗಿನ ಕಾಯಿಗಳನ್ನು ಮಣೆ ಅಥವಾ ಗದ್ದುಗೆಯ ಮೇಲಿಟ್ಟು ಪೂಜಿಸುತ್ತಾರೆ. ಮೃತಪಟ್ಟ ಸ್ತ್ರೀಯರ ಸಂಕೇತವಾಗಿ ಒಂದು ತೆಂಗಿನ ಕಾಯಿಯಾದರೆ ಪುರುಷರ ಸಂಕೇತ ಇನ್ನೊಂದು. ಇದು ಹಿಂದೂ ಸಿದ್ದಿಯರ ಪದ್ಧತಿ. ಆದರೆ ಕ್ರಿಶ್ಚಿಯನ್ ಮತ್ತು ಮುಸ್ಲಿಂ ಸಿದ್ದಿಗಳಲ್ಲಿ ಕಂಡುಬರಲಾರದು. ಅಲ್ಲದೇ ಹಿರಿಯರ ಪೂಜೆಗೆ ತೆಂಗಿನ ಕಾಯಿ ಬಳಸುವುದಿಲ್ಲ."[೩] ಹಿಂದೂ ಸಿದ್ದಿಗಳು ಗಣಪತಿ, ಲಕ್ಷ್ಮೀ, ದುರ್ಗಾದೇವಿ, ಹನುಮಂತ ಮುಂತಾದ ದೇವರುಗಳನ್ನು ಪೂಜಿಸಿದರೆ, ಕ್ರಿಶ್ಚಿಯನ್ ಸಿದ್ದಿಗಳು ಏಸುಕ್ರೈಸ್ತನನ್ನು, ಮುಸ್ಲಿಂ ಸಿದ್ದಿಗಳು ಅಲ್ಲಾನನ್ನು ಪೂಜಿಸುವರು. ಈ ತೆಂಗು ಕಟ್ಟುವ ಪದ್ಧತಿಯ ಬಗ್ಗೆ ದಿಯೋಗ ಸಿದ್ದಿಯವರ ಪ್ರಕಾರ ಕ್ರಿಶ್ಚಿಯನ್ ಮತ್ತು ಮುಸ್ಲಿಂ ಸಿದ್ದಿಗಳು ಯಾವುದೇ ಒಳ್ಳೆಯ ಕಾರ್ಯಗಳನ್ನು ಕೈಗೊಂಡರು, ಮೊದಲು ತಮ್ಮ ಕುಟುಂಬದ ಹಿರಿಯರ ಹೆಸರಿನಲ್ಲಿ ತೆಂಗನ್ನು ಇಟ್ಟು ಪೂಜಿಸುವರು. ಪೂಜೆಯಾದ ಮೇಲೆ ಮನೆಯಲ್ಲಿ ಆ ತೆಂಗನ್ನು ಇಡುವುದಿಲ್ಲ. ಏಕೆಂದರೆ ಸಿದ್ದಿಗಳನ್ನು ಪಾದ್ರಿಗಳು, ಮೌಲಾನಗಳು ಅವರು ನಂಬಿದ ಹಿರಿಯರನ್ನು ಸುಳ್ಳು ಎಂಬಂತೆ ದೋಷಿಸಿ ಆದರಿಂದ ದೂರ ಇರುವಂತೆ ಪ್ರೋತ್ಸಾಹಿಸುತ್ತಿರುವುದರಿಂದ ಇವರ ಮನೆಗಳಲ್ಲಿ ತೆಂಗಿನಕಾಯಿ ಕಂಡುಬರುವುದಿಲ್ಲ.

"ಈ ತೆಂಗು ಕಟ್ಟುವ ಪದ್ಧತಿಯು ಹೊಸ ಮನೆ ಕಟ್ಟುವಾಗ ಅಥವಾ ಮೃತರಾದ ಹಿರಿಯರ ಹೆಸರಿನಲ್ಲಿ ಸುಲಿಯದ ತೆಂಗನ್ನು ಇಡುವರು. ಪ್ರತಿ ವರ್ಷ ಮೃತರಾದ ಹಿರಿಯರಿಗೆ ಇಡುವ ತೆಂಗನ್ನು ಬದಲಿಸುವರು. ಮೃತರಾದ ಪಿತೃಗಳು ಅಗೋಚರವಾದ ಶಕ್ತಿಗಳು ಹೊರಗಿನಿಂದ ಬರುವ ಯಾವುದೇ ತೊಂದರೆ ತೊಡಕುಗಳನ್ನು ನಿವಾರಿಸಿ ಕುಟುಂಬದ ಶಕ್ತಿಯನ್ನು ಹೆಚ್ಚಿಸುವವು. ಈ ಹಿರಿಯ ಜೀವದ ಅಗೋಚರವಾದ ಶಕ್ತಿಗಳು ಕುಟುಂಬದ ಜೊತೆಗೆ ನಿರಂತರ ಸಂಬಂಧ ಇಟ್ಟುಕೊಳ್ಳುವದೆಂದು ಸಿದ್ದಿಗಳು ನಂಬುತ್ತಾರೆ. ಆ ಶಕ್ತಿಗಳು ವಿಶಿಷ್ಟ ಸಮಯಗಳಲ್ಲಿ ಕುಟುಂಬದ ಸದಸ್ಯರ ಕನಸಿನಲ್ಲಿ ಇಲ್ಲವೆ ಮೈಮೇಲೆ ಬಂದು ತಮ್ಮ ವಾಂಛೆಗಳನ್ನು ಹಾಗೂ ಭವಿಷ್ಯತ್ತಿನ ಕುಟುಂಬಕ್ಕೆ ಬಂದೊಗಬಹುದಾದ ಯಶಸ್ಸು, ಆಪತ್ತುಗಳನ್ನು ತಿಳಿಸುತ್ತವೆ ಎಂಬ ನಂಬಿಕೆ ಸಿದ್ದಿಗಳಲ್ಲಿ ಬಲವಾಗಿವೆ. ಹೀಗೆ ಭೂತ, ವರ್ತಮಾನಗಳ ಸಂಪರ್ಕ ಸೇತುವೆಯಾಗಿ 'ಹಿರಿಯರು' ಬರುತ್ತಾರೆ. 'ಹಿರಿಯರಿಗೆ' ಸರಿಯಾಗಿ ಗೌರವ ಕುಟುಂಬದ ಕರ್ತನಿಂದ ಸಲ್ಲದಿದ್ದಲ್ಲಿ ಕುಟುಂಬವಿತ್ತ ಜೀವಿತಗಳಿಗೆ ಹಾನಿಯಾಗುವುದೆಂದು ಸಿದ್ದಿಯರು ಬಗೆಯುತ್ತಾರೆ."[೫]

"ಕೆಲವೊಮ್ಮೆ ಹಿರಿಯರು ಅನ್ಯದೈವಗಳ ಚಿತಾವಣೆಗೊಳಗಾಗಿ, ಅವುಗಳೊಡನೆ ಬೆರೆತು, ಕುಟುಂಬದ ಯೋಗಕ್ಷೇಮದಡೆಗೆ ಗಮನ ಹರಿಸುವುದಿಲ್ಲವೆಂದು ಸಿದ್ದಿಯರು ಭಾವಿಸುತ್ತಾರೆ. ಸಿದ್ದಿಯರ ಸಮಾನರಾದ ಇಲ್ಲವೆ ಅವರಕ್ಕಿಂತ ಕೆಳಜಾತಿಯ ದೈವಗಳು ಸಿದ್ದಿ ಹಿರಿಯರನ್ನು ನಿಯಂತ್ರಿಸಲಾರವು ಎಂದು ಬಗೆಯುತ್ತಾರೆ. ಆದರೆ ಅವರಿಗಿಂತ ಮೇಲ್ವರ್ಗದ ಬ್ರಾಹ್ಮಣ ದೈವಗಳಿಗೆ ಸಿದ್ದಿ ಹಿರಿಯರನ್ನು ನಿಯಂತ್ರಿಸುವ ಸಾಮರ್ಥ್ಯವಿದ್ದುದರಿಂದ ತಮ್ಮ ಹಿರಿಯರ ಕಾರ್ಯ ನಿರ್ವಹಣೆಗೆ ಬ್ರಾಹ್ಮಣ ದೈವಗಳಿಂದ ಅಡ್ಡಿಯಾಗುವುದೆಂದೂ ಅವರು ನಂಬುತ್ತಾರೆ. ಇಂಥ ಪ್ರಸಂಗಗಳಲ್ಲಿ ಮಂತ್ರವಾದಿಗಳಿಂದ ಹಿರಿಯರ ಆತಂಕವನ್ನು ದೂರ ಮಾಡಿ ಅವರ ಕುಟುಂಬದಲ್ಲಿ ನೆಲೆಸಿ ಕುಟುಂಬದ ಕ್ಷೇಮಾಭಿವೃದ್ಧಿಗೆ ನೆರವಾಗುವಂತೆ ಮುಂಜಾಗ್ರತೆಯನ್ನು ವಹಿಸುತ್ತಾರೆ. ಸಿದ್ದಿಯರು ತಮ್ಮ ಜೀವಿತ ಕಾಲದಲ್ಲಿ ತಮ್ಮ ನೆರೆಯ ಸುತ್ತಲಿನ ಬ್ರಾಹ್ಮಣರ ಒಡೆತನವನ್ನು ಒಪ್ಪಿ ಬಾಳಿದವರು. ಅದಕ್ಕಾಗಿ ಅವರನ್ನು ಅವರ ಭೂತಗಳ ಯಜಮಾನಿಕೆಯನ್ನು ಒಟ್ಟಾಗಿಯೇ ಒಪ್ಪಿಕೊಂಡವರು. ಆದರೂ ಮಂತ್ರವಾದಿಗಳ ಬೆಂಬಲದಿಂದ ಬ್ರಾಹ್ಮಣದೈವಗಳನ್ನು ನಿಯಂತ್ರಿಸಿ, ತಮ್ಮ ಹಿರಿಯರ ಬಿಡುಗಡೆಯ ದಾರಿಯನ್ನು ಕಂಡುಕೊಂಡರು."[೬]

ಸಿದ್ದಿಗಳಲ್ಲಿ ಮಾಯ, ಮಾಟ, ಮಂತ್ರ, ದೈವ, ದೇವರು ಮುಂತಾದವುಗಳ ಬಗ್ಗೆ ಅಪಾರವಾದ ನಂಬಿಕೆ ಇರುವಾಗ "ಮೂಢ ನಂಬಿಕೆಗೆ ಕಿಲುಬು ಕಾಸಿನ ಬೆಲೆಯನ್ನು ಇವರು ಕೊಡರು"[೭] ಎಂದು ಡಾ.ಎಂ. ಬೈರೇಗೌಡರವರು ಹೇಳುವುದು ಔಚಿತವಲ್ಲದಾಗಿದೆ. ಸಾಮಾನ್ಯವಾಗಿ ಬುಡಕಟ್ಟುಗಳು ಮೂಢನಂಬಿಕೆಯಲ್ಲಿ ಬದುಕುವಂತಹ ಸಂದರ್ಭದಲ್ಲಿ ಈ

ಮೇಲಿನ ವಾಕ್ಯವು ಸಮರ್ಥನೀಯ ವಲ್ಲದಾಗಿದೆ. ಸುಲಿಯದ ತೆಂಗಿನ ಕಾಯಿಯನ್ನು ಕುರಿತು ಲೇಖಕರು ಕ್ಷೇತ್ರಕಾರ್ಯದ ಪ್ರಕಾರ ಮಾಹಿತಿಯನ್ನು ಒದಗಿಸಿದ್ದಾರೆ. ಈ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಸಿದ್ದಿಗಳಲ್ಲಿ ಕಾಯಿಯನ್ನು ಹಿರಿಯರ ಸಂಕೇತವಾಗಿ ಬಳಸುತ್ತಾರೇ? ಬಳಿಸಿದರೆ ಯಾವಾಗ? ಹೇಗೆ? ಏಕೆ? ಮನೆಗಳಲ್ಲಿ ಇಡುವುದಿಲ್ಲ ಮುಂತಾದ ವಿಷಯಗಳ ಬಗ್ಗೆ ದಿಯೋಗ ಸಿದ್ದಿಯವರು ಈ ಹಿಂದೆ ತಿಳಿಸಿರುವರು. ಒಟ್ಟಿನಲ್ಲಿ ತೆಂಗುಕಟ್ಟು ಎಂಬ ಪದ್ಧತಿಯಿಂದ ಸಿದ್ದಿಗಳು ಹಿರಿಯರನ್ನು ತೃಪ್ತಿ ಪಡಿಸುವರು.

೬.೪. ಅಳಿಯನ ಅಮವಾಸೆ:

ಹಿಂದೂ ಸಿದ್ದಿಗಳಲ್ಲಿ ಅಳಿಯನ ಅಮವಾಸೆ ಎಂದು ಪ್ರತಿ ವರ್ಷ ಆಚರಣೆ ಮಾಡುತ್ತಾರೆ. ಮದುವೆಯಾದ ನವದಂಪತಿಗಳನ್ನು ಹುಡುಗಿಯರ ತಂದೆ ತಾಯಿ ಮನೆಗೆ ಕರಿಸಿ ಹೊಸ ಬಟ್ಟೆ, ಶ್ರೀಮಂತರಿದ್ದರೆ ಅಳಿಯನಿಗೆ ಬಂಗಾರದ ಒಡವೆ ಹಾಕಿ ಆರತಿ ಮಾಡಿ ಮನೆಯೊಳಗೆ ಬರಮಾಡಿಕೊಂಡು ಹಿರಿಯರಿಗೆ ನಮಸ್ಕರಿಸಿ ಆಶಿವಾರ್ದವನ್ನು ಪಡೆಯುತ್ತಾರೆ.

೬.೫. ಸಿದ್ದಿನಾಸ:

"ಸಿದ್ದಿನಾಸವೆಂದರೆ ಸುಲಿಯದ ತೆಂಗಿನ ಕಾಯಿಯನ್ನು ಗೊತ್ತಾದ ಒಂದು ಸ್ಥಳದಲ್ಲಿ ಇಟ್ಟು ಪೂಜಿಸುವುದು."[೮] ಆದರೆ ಸಿದ್ದಿಯರು ತಮ್ಮ ಮೂಲ ದೇವತೆಯನ್ನು ಮರೆತು ಲಕ್ಷ್ಮಿಗೌರಿ, ಗಣಪತಿ, ಹನುಮಂತ, ತುಳಸಿ, ಏಸುಕ್ರಿಸ್ತ, ಅಲ್ಲಾ ಮುಂತಾದ ದೇವರುಗಳನ್ನು ಕುಲದೇವರಾಗಿ ಆರಾಧಿಸುತ್ತಾರೆ. ಹೆಚ್ಚಾಗಿ ಹಿಂದೂ ಸಿದ್ದಿಗಳು ಸಿದ್ದಿನಾಸ ಪೂಜೆಯಲ್ಲಿ ಪಾಲ್ಗೊಳ್ಳುವರು. (ನಾನು ಕೈಗೊಂಡ ಕ್ಷೇತ್ರಕಾರ್ಯದ ಪ್ರಕಾರ) ಮುಸ್ಲಿಂ ಮತ್ತು ಕ್ರಿಶ್ಚಿಯನ್ ಪುರುಷರಿಗೆ ಸಿದ್ದಿನಾಸವೆಂಬ ಆಚರಣೆಯ ಬಗ್ಗೆ ಗೊತ್ತಿದೆ ಆದರೆ ಮಹಿಳೆಯರಿಗೆ ಸಿದ್ದಿನಾಸವಿದೆ ಎಂಬುದರ ಅರಿವು ಇಲ್ಲಿ ಪ್ರತಿವರ್ಷ ಏಪ್ರಿಲ್ ತಿಂಗಳಿನಲ್ಲಿ 'ಸಿದ್ದಿನಾಸ' ಪೂಜೆ ನಡೆಯುತ್ತದೆ. ಪೂಜೆಯಲ್ಲಿ ಪುರಷರು ಮತ್ತು ಮಹಿಳೆಯರು ಪಾಲ್ಗೊಳ್ಳುತ್ತಾರೆ. ಆದರೆ ಮಹಿಳೆಯರು ಪೂಜೆ ಮಾಡುವಂತಿಲ್ಲ. ಪೂಜೆಗೆ ಅವಶ್ಯಕವಾದ ವಸ್ತುಗಳನ್ನು ಜೋಡಿಸಿಕೊಡುವರು. ಪೂಜೆಗೆ ಋತುಮತಿಯಾಗದ ಹುಡುಗಿಗೆ ಮತ್ತು ಮುಟ್ಟು ನಿಂತ ಮಹಿಳೆಗೆ ಮಾತ್ರ ಅವಕಾಶವನ್ನು ನೀಡಿದೆ. ಸಿದ್ದಿ ಸಮುದಾಯ ಮಹಿಳೆಯರ ಮುಟ್ಟನ್ನು ಮೈಲಿಗೆ ಎಂದು ಪರಿಗಣಿಸಿ ಅವರನ್ನು ದೇವರ ಪೂಜೆಯಲ್ಲಿ ಪಾಲ್ಗೊಳ್ಳುವ ಅವಕಾಶದಿಂದ ವಂಚಿತರನ್ನಾಗಿ ಮಾಡಿದೆ. ಸಾಮಾನ್ಯವಾಗಿ ಈ ಪದ್ಧತಿ ಸಿದ್ದಿಯರಲ್ಲಿ ಮಾತ್ರವಲ್ಲ ಭಾರತೀಯ ಸಮಾಜ ವ್ಯವಸ್ಥೆಯಲ್ಲಿಯೂ ಸಹ ಮಹಿಳೆಯರನ್ನು ೧೨ ರಿಂದ ೪೫ರವರೆಗಿನ ಅವಧಿಯನ್ನು ಅಪವಿತ್ರಳಂತೆ ಮೈಲಿಗೆಯಂತೆ ಕಾಣುತ್ತಾರೆ.

೬.೬. ಸಿದ್ದಿಯರ ಭಾಷೆ ಮತ್ತು ಕಲೆ:

ಭಾಷೆ ಎಂಬುದು ಒಂದು ಸಂವಹನ ಮಾಧ್ಯಮ. ಒಂದು ನಿರ್ದಿಷ್ಟ ಸಮಾಜವು ಒಪ್ಪಿಕೊಂಡ, ತನ್ನ ನಿತ್ಯ ವ್ಯವಹರಣೆಯಲ್ಲಿ ಅದನ್ನು ದುಡಿಸಿಕೊಂಡ ಯಾದೃಚ್ಛಿಕ ಧ್ವನಿ ಸಂಕೇತಗಳ ಮೊತ್ತ ಎಂದು ಬ್ಲಾಕ್ ಮತ್ತು ಟ್ರಾಗರ್‌ರವರ ಅಭಿಪ್ರಾಯ. ಸಂಸ್ಕೃತಿ ಅಧ್ಯಯನದಲ್ಲಿ ಭಾಷೆಗೆ ವಿಶಿಷ್ಟ ಸ್ಥಾನವಿದೆ. ಭಾಷೆ ಸಂಸ್ಕೃತಿಯ ಒಂದು ಭಾಗ, ಮಾನವ ಭಾಷೆಯಿಲ್ಲದಿದ್ದರೆ ಇಷ್ಟೊಂದು ವೇಗವಾಗಿ ನಾಗರಿಕನಾಗುತ್ತಿರಲಿಲ್ಲ. 'ದಂಡಿ' ಹೇಳುವಂತೆ ಮಾನವನ ಅಂಧಕಾರವನ್ನು ಹೊಡೆದೊಡಿಸುವ ಜ್ಯೋತಿಯೇ ಈ ಭಾಷೆ ಎನ್ನಬಹುದು. ಸಮಾಜದಲ್ಲಿ ಅನೇಕ ರೀತಿಯ ಭಾಷೆಯನ್ನು ಆಡುವ ಸಮುದಾಯಗಳಿವೆ. ಅದರಲ್ಲಿ ಲಿಪಿ ಇರುವ ಭಾಷೆ, ಲಿಪಿ, ಇಲ್ಲದೆ ಭಾಷೆಗಳು ಕಂಡು ಬರುವುದು. ಸಾಮಾನ್ಯವಾಗಿ ಹಲವು ಬುಡಕಟ್ಟುಗಳ ತಮ್ಮ ಭಾಷೆ ಲಿಪಿ ಇಲ್ಲದವಾಗಿವೆ. ಇವರ ಸಾಹಿತ್ಯ ಸೃಷ್ಟಿಗಳು ಮೌಖಿಕವಾಗಿರುತ್ತವೆ. ಬುಡಕಟ್ಟುಗಳು ಸಾಂಸ್ಕೃತಿಕ ನಾಯಕರನ್ನು ಕುರಿತಾದ ಹಾಡುಗಳು ಮತ್ತು ಕಾವ್ಯಗಳನ್ನು ವಾರಗಟ್ಟಲೇ ತಮ್ಮ ನೆನಪಿನಾಳದಿಂದ ಹಾಡುವರು. ಉದಾ: ಬುರ್ರಕಥಾ ಈರಮ್ಮ, ಸುಕ್ರಿಬೊಮ್ಮನಗೌಡ ಮುಂತಾದವರು. ಲಿಪಿಯಿಲ್ಲದ ಹಲವು ಭಾಷೆಗಳನ್ನು ರೂಢಿಸಿಕೊಂಡು ತಮ್ಮದೇ ಆದ ಒಂದು ಭಾಷೆಯನ್ನು ಮಾತನಾಡುವ ಅನೇಕ ಬುಡಕಟ್ಟುಗಳು ಕಂಡುಬರುತ್ತದೆ. ಅದರಂತೆ ಸಿದ್ದಿ ಸಮುದಾಯವು ಒಂದಾಗಿದೆ. ಹೀಗಾಗಿ ಯಾವುದೇ ಒಂದು ಬುಡಕಟ್ಟು ಸಮುದಾಯವನ್ನು ಅರಿಯುವಲ್ಲಿ ಅವರ ಮೂಲ ಪರಂಪರೆಯನ್ನು ಅರಿಯಬೇಕಾಗುತ್ತದೆ.

ಗುಲಾಮರಾಗಿ ಈ ನಾಡಿಗೆ ಬಂದ ಪೂರ್ವದಲ್ಲಿ ಸಿದ್ದಿಗಳು ಯಾವ ಭಾಷೆ ಮಾತಾಡುತ್ತಿದ್ದರೊ ತಿಳಿಯದ ವಿಷಯ. ಆದರೆ ಈ ನಾಡಿಗೆ ಬಂದ ಮೇಲೆ ತಮ್ಮ ಮೂಲ ಮಾತೃ ಭಾಷೆಯನ್ನು ಮರೆತು ಈ ನಾಡಿನಲ್ಲಿರುವ ಮೂರು ಧರ್ಮಕ್ಕೆ ಒಳಗಾದರಲ್ಲದೇ ಮೂರು ಭಾಷೆಗೂ ಒಳಗಾಗಿರುವರು. ಮೂರು ಧರ್ಮಗಳಲ್ಲಿ ಚದುರಿದ ಸಿದ್ದಿಯರು ಅವರವರ ಧರ್ಮಕ್ಕೆ ಅನುಗುಣವಾಗಿ ಮಾತನಾಡುವರು ಆದರೂ ಉತ್ತರ ಕನ್ನಡದಲ್ಲಿ ನೆಲೆ ನಿಂತಿರುವ ಸಿದ್ದಿಯರು ತಾವು ಪ್ರಾರಂಭದಲ್ಲಿ ಬಂದಾಗ ಕನ್ನಡ, ಮರಾಠಿ, ಕೊಂಕಣಿ, ಮಾತಾಡುವ ಜನರ ಸಂಪರ್ಕದಲ್ಲಿಯೇ ತಮ್ಮ ಹೆಚ್ಚು ವ್ಯವಹಾರ ನಡೆಸುತ್ತಿದ್ದರು. ಹೀಗಾಗಿ "ಈ ಎಲ್ಲಾ ಭಾಷೆಗಳ ಮಿಶ್ರಣವೆನ್ನಬಹುದಾದ, ಕೊಂಕಣಿ ಮರಾಠಿ, ಕನ್ನಡ ಆದರೂ ಹೆಚ್ಚು ಬಳಕೆ ಕೊಂಕಣಿಯದು. ಇದಲ್ಲದೆ ಕನ್ನಡಿಗರ ಜೊತೆ ಕನ್ನಡವನ್ನು ಕೊಂಕಣಿಯನ್ನು ಅರ್ಥವಾಗುವಂತೆ ಮಾತನಾಡಬಲ್ಲ ಇವರು ಮನೆಯಲ್ಲಿ ಮಾತನಾಡುವುದು ಮಾತ್ರ ಇವುಗಳ ಮಿಶ್ರಣವೇನೊ ಹೀಗಾಗಿ ಸಿದ್ದಿಯರ ಈ ದಿನಬಳಕೆ ಭಾಷೆ, ಪ್ರಬೇಧವನ್ನು 'ಸಿದ್ದಿ ಉಪಭಾಷೆ' ಎಂದೇ ಕರೆಯಬಹುದು."[7]

[illegible]

ಹಿಂದೂ ಸಿದ್ದಿಗಳು ಕೊಂಕಣಿ, ಮರಾಠಿ, ಕನ್ನಡ ಮಾತನಾಡುವರು, ಅದೇ ರೀತಿ ಮುಸ್ಲಿಂ ಸಿದ್ದಿ ಮತ್ತು ಕ್ರಿಶ್ಚಿಯನ್ ಸಿದ್ದಿಗಳು ಉರ್ದು, ಹಿಂದಿ, ಕೊಂಕಣಿ ಕನ್ನಡ ಮಾತನಾಡುತ್ತಾರೆ. ಲಿಪಿಯಿಲ್ಲದೇ ಇರುವ ಸಿದ್ದಿಮಿಶ್ರಿತ ಭಾಷೆಯ ಬದಲಾಗಿ ಕನ್ನಡದಲ್ಲಿ ತಮ್ಮ ಬರವಣಿಗೆಯನ್ನು ಮಾಡುವರು.

ಬುಡಕಟ್ಟುಗಳು ಬದುಕನ್ನು ಸುಂದರವಾಗಿಸುವತ್ತಾ ಸಾರ್ಥಕವಾಗಿಸುತ್ತಾ ಸಾಗುವ ಹಂತದಲ್ಲಿ ಉಂಟಾದ ಬೇಸರ, ಆಯಾಸ, ಆನಂದ, ಭಯ, ಉತ್ಸಾಹ, ದುಃಖ ದುಮ್ಮಾನಗಳ ಪ್ರತೀಕವಾಗಿ ಕಾಣಿಸಿಕೊಂಡ ನೂರಾರು ಚಟುವಟಿಕೆಗಳನ್ನು ಕಲೆ ಎಂಬ ಅರ್ಥದಲ್ಲಿ ವಿದ್ವಾಂಸರು ಗುರುತಿಸಿರುವರು. ಬುಡಕಟ್ಟುಗಳು ಬದುಕಿಗಾಗಿ ಪಟ್ಟ ಪಾಡು ಕಲೆಯಾಗಿದೆ. ಈ ಸಿದ್ದಿ ಸಮುದಾಯವು ದುಡಿಯುವ ಸಮಯದಲ್ಲಿ ತಮ್ಮ ಆಯಾಸ ಪರಿಹಾರಕ್ಕಾಗಿ ವಿರಾಮಿಸುವಾಗಲು, ಹಲವಾರು ಕಲೆಗಳು ಅವರ ಮಧ್ಯೆ ತಲೆಯೆತ್ತಿ ಬಂದಿದೆ.

ಬುಡಕಟ್ಟುಗಳ ಕಲೆಗಳನ್ನು ಎರಡು ರೀತಿಯಾಗಿ ವಿಂಗಡಿಸಬಹುದು. ಒಂದು ಪ್ರದರ್ಶನಾತ್ಮಕ ಕಲೆ, ಎರಡನೆಯದು ಚಿತ್ರಕಲೆ, ಸಿದ್ದಿ ಸಮುದಾಯದಲ್ಲಿ ಹೆಚ್ಚಾಗಿ ಚಿತ್ರಕಲೆ ಕಂಡುಬರುವುದಿಲ್ಲ. ಆದರೆ ಎಂ. ಕಾಚಾಪುರ ನೀಡಿದ ಮಾಹಿತಿ ಪ್ರಕಾರ "ಸಿದ್ದಿಗಳಿಗೆ ಮನೆಯ ಗೋಡೆಗಳ ಮೇಲೆ ಚಿತ್ರ ಬರೆಯುವ ಕಲೆ ಗೊತ್ತಿದೆ. ಹಲವು ಸಿದ್ದಿಗಳು ತಮ್ಮ ಮನೆಯ ಗೋಡೆಗಳ ಮೇಲೆ ರಂಗೋಲಿ ಆಕಾರದಲ್ಲಿ ಚಿತ್ರ ಬರೆಯುವ ಕಲೆಯನ್ನು ರೂಢಿಸಿಕೊಂಡಿದ್ದಾರೆ."[೧೦] ಆದರೆ ನಾನು ಕೈಗೊಂಡ ಕ್ಷೇತ್ರ ಕಾರ್ಯದಲ್ಲಿ ಯಾವುದೇ ಚಿತ್ರಕಲೆಗಳು ಗೋಚರಿಸಿಲ್ಲ. ಬುಡಕಟ್ಟುಗಳು ಕೇವಲ ಗೋಡೆಯ ಮೇಲೆ ತಮ್ಮ ಕಲಾ ಪ್ರತಿಭೆಯನ್ನು ತೋರ್ಪಡಿಸಿಲ್ಲ. ತಾವು ಧರಿಸುವ ಬಟ್ಟೆಗಳ ಮೇಲು ತಮ್ಮ ಕಲಾ ಸಾಮ್ರಾಜ್ಯವನ್ನು ತೋರ್ಪಡಿಸುವರು. ಉದಾ: ಲಂಬಾಣಿ ಸಮುದಾಯ, ಹಾಲಕ್ಕಿ ಸಮುದಾಯ

೬.೭. ಡಮಾಮಿ ಕುಣಿತ :

ಪ್ರತಿಯೊಂದು ಸಮುದಾಯವು ಕೆಲವೊಂದು ಪ್ರದರ್ಶನಾತ್ಮಕ ಕಲೆಯಲ್ಲಿ ಹೆಚ್ಚು ಪ್ರಸಿದ್ಧಿಯನ್ನು ಪಡೆದಿರುವರು. ಅದರಂತೆ ಸಿದ್ದಿ ಸಮುದಾಯವು ಪ್ರದರ್ಶನಾತ್ಮಕವಾದ ಈ 'ಡಮಾಮಿ' ಕಲೆಯಲ್ಲಿ ತುಂಬ ನೈಪುಣ್ಯತೆಯನ್ನು ಹೊಂದಿದ್ದಾರೆ. ಸಿದ್ದಿಯರಲ್ಲಿ ಅತ್ಯಂತ ಹೆಚ್ಚು ಪ್ರಸಿದ್ಧವಾದ ಕಲೆ 'ಡಮಾಮಿ'ಯಾಗಿದೆ. ಈ ಕಲೆಯಲ್ಲಿ ಸ್ತ್ರೀಪುರುಷರು ಇಬ್ಬರು ಭಾಗಿಯಾಗುವರು. ಆದರೆ ಹೆಚ್ಚಾಗಿ ಸ್ತ್ರೀಯರು ಕುಣಿಯುವರು. ಈ ಕಲೆಯ ಪ್ರದರ್ಶನ ಸಾಮಾನ್ಯವಾಗಿ ಹಿರಿಯರ ಪುಣ್ಯ ತಿಥಿ, ನವರಾತ್ರಿ, ಯುಗಾದಿ, ಹಬ್ಬಹರಿದಿನಗಳಲ್ಲಿ, ಹೆಣ್ಣು ಋತುಮತಿಯಾದಾಗ ಈ ಡಮಾಮಿ ಕುಣಿತವನ್ನು ಕಾಣಬಹುದು. ಇಲ್ಲಿ ಡಮಾಮಿ

ವಾದ್ಯವನ್ನು ಪುರುಷರು ಬಾರಿಸುವರು. ಅಲ್ಲದೇ ಕೆಲವೊಂದು ವೇಳೆ ಪುರಷರಿಲ್ಲದಿದ್ದರೆ ಮಹಿಳೆಯರು ಬಾರಿಸುವರು. ಈ ಪ್ರದರ್ಶನ ಕಲೆಯಲ್ಲಿ ಪ್ರಮುಖವಾಗಿ ಡಮಾಮಿ ವಾದ್ಯದ ಹಿನ್ನೆಲೆಯಲ್ಲಿ ಕುಣಿಯುವುದರಿಂದ ಈ ಕುಣಿತಕ್ಕೆ ಡಮಾಮಿ ಕುಣಿತ ಎಂದು ಹೆಸರು ಬಂದಿದೆ. ಕುಣಿತ ಪ್ರಾರಂಭಿಸುವ ಮುನ್ನ ದೇವರಿಗೆ ಪೂಜೆ ಸಲ್ಲಿಸಿ ಪ್ರಾರ್ಥನೆ ಮಾಡಿಕೊಂಡು ಕುಣಿತಕ್ಕಿಳಿಯುವರು. ವಿಶೇಷ ವೇಷ ಭೂಷಣಗಳಾಗಲೀ, ಮುಖಾಲಂಕಾರವಾಗಲೀ ಇರುವುದಿಲ್ಲ. ಒಂದು ಗುಂಪಿನಲ್ಲಿ ಇಬ್ಬರೇ ಇರುತ್ತಿದ್ದು, ಒಬ್ಬಾರಾದ ಮೇಲೊಬ್ಬರು ಸರದಿಯ ಮೇಲೆ ವಿವಿಧ ರೀತಿಯಲ್ಲಿ ಮೈಮಣಿಸುತ್ತ, ತಿರುಗಿಸುತ್ತ ಹಾಡು ಹೇಳುತ್ತ ಕುಣಿಯವರು. ಮಹಿಳೆಯರು ಒಬ್ಬಳು ಕುಣಿಯುವಾಗ ಇನ್ನೊಬ್ಬಳು ವಿಶ್ರಾಂತಿ ತೆಗೆದುಕೊಳ್ಳುವಳು. ಕುಣಿತದಲ್ಲಿ ಮೈಮರೆತು ಕೆಲವರು ಪ್ರಜ್ಞೆ ತಪ್ಪಿ ಬೀಳುವುದುಂಟು. ಈ ಕುಣಿತದಲ್ಲಿ ಹಾಡುವ ಹಾಡಿನ ತುಣಕು ಹೀಗಿದೆ.

"ಬರ ಬರಗಾಳಿಯೇ ..... ಹುಡುಹುಡುಡು ಮಹಿಳೆಯೇ
ಭೂಮಿ ಮ್ಯಾಲೆ ಬೀಳ ಮಹಿಳೆಯೇ... ಏ ಮಳಿಯೇ
ಭೂಮಿ ಮ್ಯಾಲೆ ಬೀಳ ಮಳಿಯೇ॥
ಸುರಾಸುರು ಮಳಿಯೆ..... ದಗದಗ ಮಹಿಳೆಯೇ
ಬಡತನ ಬಂತು ಮಹಿಳೆಯೇ... ಏ ಮಳಿಯೇ
ಭೂಮಿ ಮ್ಯಾಲೆ ಬೀಳ ಮಳಿಯೇ॥

೬.೮. ಪುಗಡಿ ಕುಣಿತ:

ಸಿದ್ದಿಯರಲ್ಲಿ ವಿಶಿಷ್ಟವಾದ ಮತ್ತೊಂದು ಕುಣಿತ ಪುಗಡಿ ಕುಣಿತ ಈ ಕುಣಿತವನ್ನು ವಿಶೇಷವಾಗಿ ಚೌತಿಹಬ್ಬಕ್ಕೆ ಗೌರಿ ಗಣಪತಿಯರ ಮುಂದೆ ಕುಣಿಯುತ್ತಾರೆ. "ಉತ್ತರ ಕನ್ನಡ ಮಿನುಗಾರ ಮಹಿಳೆಯರಲ್ಲಿ ಹಾಗೂ ಗೌಳಿಗರ ಮಹಿಳೆಯರಲ್ಲಿ ಪ್ರಚಲಿತವಿರುವ ಈ ರೀತಿಯನ್ನು ಸಿದ್ದಿಯರು ಎರವಲು ಪಡೆದಿದ್ದಾರೆ."[೨] ಈ ಪುಗಡಿ ಕುಣಿತದಲ್ಲಿ ಮಹಿಳೆಯರು ಬರಿದಾದ ಕೊಡಗಳನ್ನು ಕೈಯಲ್ಲಿ ಹಿಡಿದುಕೊಂಡು ಸಮಸಂಖ್ಯೆಯಲ್ಲಿ ಎದುರಬದರು ನಿಂತು, ಪುರುಷರು ಬಾರಿಸುವ ಗುಮಟೆಯ ಮತ್ತು ಹಾಡುಗಳ ತಾಳ ಲಯಕ್ಕೆ ತಕ್ಕಂತೆ ಕುಣಿಯುತ್ತಾರೆ. ಹೇಗೆ ಪುರುಷರು ಹಾಡುಗಳನ್ನು ಬದಲಿಗೆ ಗುಮಟೆಯ ಬಡಿತ ಬದಲಾದಂತೆ ಮಹಿಳೆಯರು ಹೆಜ್ಜೆಗಳನ್ನು ಬದಲಿಸುತ್ತಾ ಮೈಮಣಿಸಿ ಬರಿದಾದ ಕೊಡಗಳನ್ನು ತಿರಿಗಿಸುತ್ತಾ ಕೊಡದೊಳಗೆ ಗಾಳಿಯನ್ನುದುತ್ತಾ ಮೈಮರೆತು ಕುಣಿಯುವ ಕಲೆಯನ್ನು ಸಿದ್ದಿ ಮಹಿಳೆಯರು ಹೊಂದಿದ್ದಾರೆ. "ಕುಣಿಯುವಾಗ ಹಾಡುವ ಹಾಡುಗಳು ಗೌರಿಗಣೇಶರನ್ನು ಸ್ವಾಗತಿಸುವ ಸ್ತುತಿಪರ ಹಾಡನ್ನು ಹಾಡುವ ವಾಡಿಕೆಯಿದೆ. ಹಾಡುಗಳು ಕೊಂಕಣಿಯಲ್ಲಿವೆ. ಪುಗಡಿ ಕುಣಿತದ ಹಾಡಿನ ತುಣುಕು ಈ ಕೆಳಗಿನಂತಿವೆ.

ಸಿದ್ದಿಯರ ಕೊಂಕಣಿ ಹಾಡು

ಆಹೋ ಗೌರ ಗೌರಮ್‌ಗೊ
ಗೌರಿಚಿ ಪರಬ್ ಆಯ್ಲಿಮುಗೊ
ಹಂಚಿ ಗೌರಿ ಎಲ್‌ಮುಗೊ
ಹಂಚಿ ಗೌರಿ ಎಲ್ ಮುಗೊ
ಆಜು ಗೌರಿಚಿ ಪರಬ್‌ಮುಗೊ
ಆಜು ಗೌರಿಚಿ ಪರಬು ಮುಗೊ
ಹೊಡ್ಲಿದು ಆಯ್ಲಿ ಮುಗೊ
ನಾವೂನು ಮಡಿನೆಸ್ಲಿ ಮುಗೊ
ಫೊಲಿಸಿ ಪತ್ರೆ ನೈಯ್ಲಾ ಮುಗೊ
ಆಹೊ ಗೌರ ಗೌರಮ್ಗೊ
ಆಜು ಗೌರಿಚಿ ಪೂಜಾಮುಗೊ
ಆಜು ಗೌರಿಚಿ ಪೂಜಾಮುಗೊ
ಬಾವಿಡಿ ಪೂಜಾ ಕರಕಾಮುಗೊ
ಗಾಂಧನಿ ಫೂಲ್ ಫೇವ ಕುದುಗೊ
ಚಂಬುಲ್ ಪಾನಿ ಫೇವಕಾಮುಗೊ
ಆಜು ಗೌರಿ ಯೌಚಿಮುಗೊ

ಕನ್ನಡ ಅನುವಾದ

ಅಗೋ ಗೌರಿ ಗೌರಿ ಬರ್ತದೆ
ಗೌರಿ ಹಬ್ಬ ಬರ್ತದೆ
ನಮ್ಮ ಗೌರಿ ಬರ್ತದೆ
ನಮ್ಮ ಗೌರಿ ಬರ್ತದೆ
ಇಂದು ಗೌರಿ ಹಬ್ಬವೆ
ಇಂದು ಗೌರಿ ಹಬ್ಬವೆ
ದೊಡ್ಡ ಮಗಳು ಬರ್ತದೆ
ನಾವು ಸ್ನಾನ ಮಾಡಿ ಮಡಿ ಉಡೋಣ
ನಾವು ಹೂವು ಪತ್ರ ಕೊಂಡಿದ್ದೇವೆ.
ಆಗೋ ಗೌರ ಗೌರಿ ಬರ್ತತೆ

ಇಂದೇ ಗೌರಿ ಪೂಜೆಯು
ಇಂದೇ ಗೌರಿ ಪೂಜೆಯು
ಬಾವಿ ಪೂಜೆ ಮಾಡಬೇಕು
ಗಂಧಾ ಹೂವು ತರಬೇಕು
ತುಂಬಿಗೆ ನೀರು ತರಬೇಕು.
ಇಂದೇ ಗೌರಿ ಬರ್ತದೆ"[೧೩]

ಈ ಕುಣಿತಗಳು ಹೆಚ್ಚಾಗಿ ಹಿಂದೂ ಸಿದ್ದಿಯರಲ್ಲಿ ಕಂಡುಬರುತ್ತದೆ. "ಉತ್ತರ ಕನ್ನಡ ಜಿಲ್ಲೆಯ ಇತರ ಬುಡಕಟ್ಟುಗಳಲ್ಲಿ ಕಂಡುಬರುವ ಸುಗ್ಗಿ ಕುಣಿತವು ಸಿದ್ದಿಯರಲ್ಲಿ ಕಂಡುಬರುತ್ತದೆ. ಸಿದ್ದಿಗಳು ಇದನ್ನು 'ಸಿಗ್ಮಾ'ವೆಂದು ಹೋಳಿ ಹುಣ್ಣಿಮೆಯ ಐದು ದಿನ ಮುಂಚಿತವಾಗಿ ಪ್ರಾರಂಭಿಸಿದ ಕುಣಿತ ಹುಣ್ಣಿಮೆಯಾದ ಮೇಲೆ ಕೊನೆಯಗೊಳ್ಳುತ್ತದೆ. ಈ ಕುಣಿತದಲ್ಲಿ ಸ್ತ್ರೀಪುರುಷರು ಭಾಗಿಯಾಗುತ್ತಾರೆ. ಸಿದ್ದಿ ಸಮುದಾಯವು "ಸಂಗ್ರಾಬಾಳ್ಯಾನ ಸಣ್ಣಿವ" ಸಿದ್ದಿಯರಲ್ಲಿ ಜನಪ್ರಿಯತೆ ಪಡೆದ ಇನ್ನೊಂದು ಕಲೆಯಾಗಿದೆ. ಇದರ ಜನಪ್ರಿಯತೆ ಎಷ್ಟೆಂದರೆ ಗಂಡಸರ ಈ ಸಣ್ಣಾಟದ ಪದಗಳನ್ನು ಹೆಂಗಸರೂ ಕಂಠಪಾಠ ಮಾಡಿ, ಹಾಡಿ ಸಂತೋಷ ಪಡುತ್ತಾರೆ."[೧೪]

ಸಿದ್ದಿ ಸಮುದಾಯವು ಸಾಂಸ್ಕೃತಿಕ ಆಚರಣೆಯಲ್ಲಿ ಪುರುಷರ ಸರಿಸಮಾನವಾಗಿ ಅವಕಾಶ ನೀಡಿಲ್ಲ. ಕೆಲವೊಂದು ನಿಷೇಧಗಳನ್ನು ಹೇರಿದೆ. ಸಿದ್ದಿಯರಲ್ಲಿ ಕಂಡುಬರುವ ಕೆಲವೊಂದು ಆಚರಣೆಗಳನ್ನು ನೋಡಿದರೆ ಅಲ್ಲಿ ಮಹಿಳೆಯರಿಗೆ ಪ್ರಾಧಾನ್ಯತೆ ದೊರೆತಿಲ್ಲ. (ಅಧ್ಯಾಯ ಇನ್ನು ನೋಡಿ) ಸಿದ್ದಿಯರ ವಿಶಿಷ್ಟವಾದ ಕಲೆಗಳಲ್ಲಿ ಅಂದರೆ ಡಮಾಮಿ ಕುಣಿತ ಈ ಕುಣಿತದಲ್ಲಿ ಮಹಿಳೆಯರು ಕೇವಲ ಕುಣಿಯುವವರಾಗಿ ಪ್ರದರ್ಶನದ ವಸ್ತುವಾಗುತ್ತಾರೆ.

ಪುರುಷರು ಬಾರಿಸುವ ವಾದ್ಯಕ್ಕೆ (ಡಮಾಮಿಗೆ) ತಾಳಕ್ಕೆ ತಕ್ಕಂತೆ ಮಹಿಳೆಯರು ಹೆಜ್ಜೆ ತಪ್ಪದೇ ಕುಣಿಯುತ್ತಾರೆ. ಮಹಿಳೆಯರು ಯಾವಾಗಲು ಈ ಪಿತೃ ಪ್ರಧಾನ ವ್ಯವಸ್ಥೆಯ ಅಡಿಯಲ್ಲಿ ಪುರುಷರು ಆಡಿಸುವ ಕೀಲುಗೊಂಬೆಗಳಾಗಿದ್ದಾರೆ. "ಪುರುಷರೇ ಹೆಚ್ಚಾಗಿ ಗುಮಟೆ ಬಾರಿಸುವುದು ಅಭ್ಯಾಸ. ಮಹಿಳೆಯರು ಬಾರಿಸುವುದನ್ನು ನಾನು ನೋಡಿಲ್ಲ"[೧೫] ಎಂದು ಅಭಿಪ್ರಾಯ ಪಡುವ ಎನ್.ಆರ್.ನಾಯಕರಂತೆ ಮಹಿಳೆಯರು ಸಾರ್ವಜನಿಕವಾಗಿ ಅಂದರೆ ಮದುವೆಯ ಸಂದರ್ಭದಲ್ಲಿ ದೊಡ್ಡ ಪ್ರಮಾಣದ ಕಾರ್ಯಕ್ರಮವಿದ್ದಲ್ಲಿ ಮಹಿಳೆಯರಿಗೆ ಡಮಾಮಿ ಬಾರಿಸಲು ಅವಕಾಶವನ್ನು ನೀಡುವುದಿಲ್ಲ. ಕೇವಲ ಸಾರ್ವಜನಿಕ ವಲಯವಲ್ಲದ ತಮ್ಮ ಕುಟುಂಬದೊಳಗೆ ಮಾತ್ರ ಮಹಿಳೆಯರು ಬಾರಿಸುತ್ತಾರೆ. ಮಹಿಳೆಯರದೇ ಆದ

ವಿಶೇಷ ಕಾರ್ಯಕ್ರಮವಿಲ್ಲದಿದ್ದರೆ ಮಾತ್ರ ಗುಮಟೆ ಬಾರಿಸುವರು. ಆದರೆ ಸಾರ್ವಜನಿಕ ವಲಯದಲ್ಲಿ ನಿರಾಕರಿಸಿದೆ. ಆದ್ದರಿಂದ ನಮ್ಮ ಸಮಾಜದಲ್ಲಿ ಅಸಮಾನತೆವೆಂಬುದು ಮತ್ತಷ್ಟು ವ್ಯಾಪಕವಾಗುತ್ತಿದೆ. ಪಿತೃ ಪ್ರಧಾನ ಸಮಾಜವನ್ನು ತೊಡೆದು ಹಾಕಿ ಸಮಾನತೆಯ ಸಮಾಜವನ್ನು ಸ್ಥಾಪಿಸಲು ಹೋದಷ್ಟು ಈ ಪುರುಷಶಾಹಿ ವ್ಯವಸ್ಥೆಯು ಮತ್ತಷ್ಟು ಮಹಿಳೆಯರಿಗೆ ತುಳಿತಕ್ಕೆ ಒಳಪಡಿಸುತ್ತದೆ. ಪ್ರತಿಯೊಂದು ಸಮಾಜದ ಮಹಿಳೆ ಅಥವಾ ಬುಡಕಟ್ಟು ಮಹಿಳೆ ತಮ್ಮದೇ ಆದ ಸಂಸ್ಕೃತಿಯ ಹಿನ್ನೆಲೆಯಲ್ಲಿ ಅಸಮಾನತೆಯನ್ನು ಎದುರಿಸುತ್ತಿದ್ದಾಳೆ. ಸಂಸ್ಕೃತಿ ಎಂಬುದು ಮಹಿಳೆಯರಿಗೆ ನಾಲ್ಕು ಗೋಡೆಗಳ ನಡುವೆ ಅಲುಗಾಡದಂತೆ ಕುಳ್ಳಿರಿಸಿ ಬಿಟ್ಟಿದೆ. ಅದನ್ನು ಮೀರಿ ಆಚೆ ಹೋಗದಂತೆ ಕಟ್ಟಿ ಹಾಕಿವೆ. ಅದೇ ರೀತಿಯಾಗಿ ಸಿದ್ದಿ ಮಹಿಳೆಯರು ಎಷ್ಟೇ ದೇಹದಾಢ್ಯತೆಯನ್ನು ಹೊಂದಿದ್ದರೂ ಅವಳು, ಅವಳ ಸಮಾಜದಲ್ಲಿ ಪುರುಷನಷ್ಟು ಸ್ವತಂತ್ರ್ಯತೆಯನ್ನು ಪಡೆದಿಲ್ಲ. ಈ ಸಮಾಜದಲ್ಲಿಯು ಹೊಸ ಪಿತೃ ಪ್ರಧಾನ ಮೌಲ್ಯಗಳು ಆಳವಾಗಿ ಬೇರೂರಿವೆ. ಏಕೆಂದರೆ ಭಾರತಕ್ಕೆ ಬಂದು ಬೇರೆ ಬೇರೆ ಧರ್ಮಗಳಲ್ಲಿ ಹಂಚಿ ಹೋದ ನಂತರ ಅವರವರ ಧರ್ಮದಲ್ಲಿ ಮಹಿಳೆಯರನ್ನು ಅಧೀನತೆಗೆ ಒಳಪಡಿಸಿದ್ದರೋ ಅದೇ ರೀತಿಯಾಗಿ ಸಿದ್ದಿ ಸಮುದಾಯದ ಮಹಿಳೆಯರನ್ನು ಅಧೀನತೆಗೆ ಒಡಪಡಿಸಿದ್ದಾರೆ ಎಂದು ಹೇಳಬಹುದು. ಆದರೆ ಪೋರ್ಚುಗೀಸರು ಭಾರತಕ್ಕೆ ಗುಲಾಮರಾಗಿ ಮಾರುವುದಕ್ಕಿಂತ ಮುಂಚಿತವಾಗಿ ಮಹಿಳೆಯರು ಪುರುಷನಷ್ಟೇ ಸ್ವತಂತ್ರ್ಯತೆಯನ್ನು ಹೊಂದಿದ್ದಳೇ? ಎಂಬುದರ ಬಗ್ಗೆ ಸ್ಪಷ್ಟ ಮಾಹಿತಿ ದೊರೆಯಲಾರದು.

ಸಂಸ್ಕೃತಿ ಯಾವುದೇ ವ್ಯಕ್ತಿಯ ಹುಟ್ಟಿನಿಂದ ಕರಗತವಾಗಿರದೇ ಕಲಿಕೆಯಿಂದ ಬಂದಿರುವುದಾಗಿದೆ. ಬಂದಿರುವುದಾಗಿದೆ. ಇದರಿಂದಾಗಿ ಸಂಸ್ಕೃತಿಯು ವ್ಯಕ್ತಿಯ ಜೀವನದ ಉದ್ದಕ್ಕೂ ಸಾಗುತ್ತ ಹೋಗುತ್ತದೆ. ಯಾವುದೇ ಬುಡಕಟ್ಟು ಸಮುದಾಯಗಳು ತಮ್ಮ ಸಂಸ್ಕೃತಿಯನ್ನು ಬಿಟ್ಟಿರಲಾರರು. ಇದರಿಂದಾಗಿ ಬುಡಕಟ್ಟುಗಳು ಪೀಳಿಗೆಯಿಂದ ಪೀಳಿಗೆಗೆ ಸಂಸ್ಕೃತಿ ಹೇಗೆ ಸಾಗುತ್ತ ಬಂದಿದೆ ಅದೇ ರೀತಿಯಾಗಿ ಮುಂದುವರೆಸಿಕೊಂಡು ಹೋಗಲು ಇಷ್ಟಪಡುತ್ತಾರೆ. ಆದರೆ ಪೀಳಿಗೆಯಿಂದ ಪೀಳಿಗೆಗೆ ಸಾಗುತ್ತ ಬಂದ ಸಂಸ್ಕೃತಿ ಅದು ಮಹಿಳೆಯರನ್ನು ಅಧೀನ ನೆಲೆಯಲ್ಲಿಯೇ ಗುರುತಿಸುತ್ತಾ ಸಾಗಿದೆ. ಅದನ್ನು ಮುಂದುವರೆಸುತ್ತಾ ಎಲ್ಲಾ ಸಮುದಾಯಗಳು ಸಾಗಿವೆ ಅದೇ ರೀತಿಯಾಗಿ ಪಾರಂಪರಿಕವಾಗಿ ಬಂದ ಸಂಸ್ಕೃತಿಯನ್ನು ಇಂದಿನ ಸಿದ್ದಿ ಸಮುದಾಯ ಮುಂದುವರೆಸಿದರೆ ಮಹಿಳೆಯರ ಸ್ಥಾನಮಾನ ಸುಧಾರಿಸಲು ಸಾಧ್ಯವಿಲ್ಲ. ಆಧುನಿಕತೆಗೆ ಸ್ವಲ್ಪಮಟ್ಟಿಗೆ ಮುಖ ಮಾಡಿನಿಂತರೂ ಮಹಿಳೆಯರು ಅಷ್ಟೊಂದು ಸಾರ್ವಜನಿಕ ವಲಯಗಳಿಗೆ ಪ್ರವೇಶ ಪಡೆಯುತ್ತಿಲ್ಲ. ಆದ್ದರಿಂದ ಸಿದ್ದಿ ಸಮುದಾಯದ ಅಭಿವೃದ್ಧಿಯ ಜೊತೆಗೆ ಮಹಿಳೆಯರ ಅಭಿವೃದ್ಧಿ ಸಾಧಿಸಬೇಕಾಗಿದೆ.

[illegible]

ಅಡಿಟಿಪ್ಪಣಿಗಳು:

೧. ದಲಿತ ಬದುಕು ಮತ್ತು ಸಂಸ್ಕೃತಿ – ಡಾ. ಅರ್ಜುನ ಗೊಳಸಂಗಿ, ಪುಟ ೩ ವಿಮೋಚನಾ ಪ್ರಕಾಶನ, ೨೦೦೩.

೨. ನಮ್ಮೊಳಗೊಂದು ಪುಟ್ಟ ಆಫ್ರಿಕಾ – ಡಾ. ಹಿ.ಚಿ.ಬೋರಲಿಂಗಯ್ಯ, ಪುಟ ೨೭, ೨೦೦೪.

೩. ನಮ್ಮೊಳಗೊಂದು ಪುಟ್ಟ ಆಫ್ರಿಕಾ – ಡಾ. ಹಿ.ಚಿ.ಬೋರಲಿಂಗಯ್ಯ, ಪುಟ ೩೦, ೨೦೦೪.

೪. ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಜನಾಂಗ – ಎನ್.ಆರ್.ನಾಯಕ, ಪುಟ ೨೨, ೧೯೯೨.

೫. ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಜನಾಂಗ – ಎನ್.ಆರ್.ನಾಯಕ, ಪುಟ ೨೨–೨೩, ೧೯೯೨.

೬. ಜಾನಪದ ವೈವಿಧ್ಯ – ಡಾ. ಎಮ್. ಭೈರೇಗೌಡ, ಪುಟ ೨೩. ೧೯೯೯.

೭. ಸಿದ್ದಿಯರ ಸಂಸ್ಕೃತಿ – ಡಾ. ಹಿ.ಚಿ.ಬೋರಲಿಂಗಯ್ಯ, ಪುಟ ೬೦, ೧೯೯೩.

೮. ನಮ್ಮೊಳಗೊಂದು ಪುಟ್ಟ ಆಫ್ರಿಕಾ – ಡಾ. ಹಿ.ಚಿ.ಬೋರಲಿಂಗಯ್ಯ, ಪುಟ ೩೫, ೨೦೦೪.

೯. ಜನಪದ ಸಾಹಿತ್ಯ ದರ್ಶನ ಭಾಗ – ೧೭ – ಎಸ್.ಎಮ್.ಕಾಚಾಪುರ, ಪುಟ ೬೮, ೧೯೯೩.

೧೦. ಕರ್ನಾಟಕ ಜನಪದ ಕಲೆಗಳು – ಗೊರು. ಚೆನ್ನಬಸಪ್ಪ, ಪುಟ ೭೮, ೧೯೭೭.

೧೧. ಸಿದ್ದಿಯರ ಸಂಸ್ಕೃತಿ – ಡಾ. ಹಿ.ಚಿ.ಬೋರಲಿಂಗಯ್ಯ, ಪುಟ ೭೪, ೧೯೯೩.

೧೨. ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಜನಾಂಗ – ಎನ್.ಆರ್.ನಾಯಕ, ಪುಟ ೩೧, ೧೯೯೨.

೧೩. ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಜನಾಂಗ – ಎನ್.ಆರ್.ನಾಯಕ, ಪುಟ ೩೫, ೧೯೯೨.

೧೪. ಉತ್ತರ ಕನ್ನಡ ಜನಪದ ಕಲೆ – ಜಿ.ಪಿ.ನಾಯಕ್, ಪುಟ ೩೫, ೧೯೯೯.

ಅಧ್ಯಾಯ : ಏಳು

ವರ್ತಮಾನದಲ್ಲಿ ಸಿದ್ದಿ ಮಹಿಳೆ

೭.೧. ಪ್ರೇಮದ ನಕ್ಷತ್ರ ಆಶ್ರಮ.

೭.೨. ಗೃಹ ವಿಜ್ಞಾನ.

೭.೩. ಸ್ನೇಹ ಸದನ.

ಅಧ್ಯಾಯ : ಏಳು

ವರ್ತಮಾನದಲ್ಲಿ ಸಿದ್ದಿ ಮಹಿಳೆ

ಪ್ರಾಚೀನ ಕಾಲದಿಂದಲೂ ಪುರುಷಶಾಹಿ ವ್ಯವಸ್ಥೆಯ ಅಡಿಯಲ್ಲಿ ಅನೇಕ ರೀತಿಯ ತೊಂದರೆಗೆ ಒಳಗಾದ ಮಹಿಳೆ, ಪ್ರಸ್ತುತ ಸಂದರ್ಭದಲ್ಲಿ ಪ್ರವೇಶ ಮಾಡದ ಕ್ಷೇತ್ರವೇ ಇಲ್ಲ. ಹಲವಾರು ವಲಯಗಳಲ್ಲಿ ಕೈಯಾಡಿಸುತ್ತಿರುವ ಮಹಿಳೆ ಇಂದು ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ವಲಯಗಳಲ್ಲಿ ತನ್ನ ಹಸ್ತಕ್ಷೇಪ ಮಾಡುತ್ತಿದ್ದಾಳೆ. ಕೇವಲ ಪುರುಷರಿಗಷ್ಟೇ ಸೀಮಿತವಾಗಿದ್ದ ಕೆಲಸ ಕಾರ್ಯಗಳಲ್ಲಿಯೂ ಭಾಗಿಯಾಗಿ ತಾನು ಪುರುಷರಿಗಿಂತ ಏನು ಕಡಿಮೆಯಲ್ಲ ಎಂಬುದನ್ನು ಸಾಬೀತು ಪಡಿಸಿದ್ದಾಳೆ. "ಉದ್ಯೋಗಂ ಪುರುಷ ಲಕ್ಷಣಂ" ಎಂಬ ನಾಣ್ಣುಡಿಯನ್ನು ಬದಲಾಯಿಸುತ್ತಿದ್ದಾಳೆ. ಹಿಂದೆ ಕೇವಲ ನಾಲ್ಕು ಗೋಡೆಗಳ ನಡುವೆ ಬಂಧಿಯಾಗಿದ್ದ ಮಹಿಳೆ ಇಂದು ಸಮಾಜದ ಮುಖ್ಯ ವಾಹಿನಿಗೆ ಬಂದು ಅನೇಕ ಕ್ಷೇತ್ರಗಳಲ್ಲಿ ತನ್ನ ಸಾಧನೆಯನ್ನು ತೋರ್ಪಡಿಸುತ್ತಿರುವಳು. ಕಲೆ, ಸಾಹಿತ್ಯ, ಕ್ರೀಡೆ ಹಾಗೂ ಬಾಹ್ಯಕಾಶಗಳಲ್ಲಿ ಪ್ರಯಾಣ ಮಾಡಿ ತನ್ನ ಸಾಧನೆಯ ಶಿಖರವನ್ನೇರಿದ್ದಾಳೆ. ಪರಂಪರೆಯಿಂದ ಬಂದಂತಹ ಕೆಲವೊಂದು ಸಾಮಾಜಿಕ ವ್ಯವಸ್ಥೆ ಅವಳನ್ನು ಕಟ್ಟಿ ಹಾಕಿತು. ಹೀಗಾಗಿ ಅವಳ ಪ್ರತಿಯೊಂದು ಚಟುವಟಿಕೆಯನ್ನು ಗಮನಿಸುತ್ತಿದ್ದ ಪುರುಷಶಾಹಿ ವ್ಯವಸ್ಥೆ ಅವಳನ್ನು ಮುಂದೆ ಬರಲು ಬಿಡುತ್ತಿರಲಿಲ್ಲ. ಪ್ರತಿಯೊಂದನ್ನು ಹತ್ತಿಕ್ಕುವ ಪ್ರಯತ್ನ ಮಾಡುತ್ತಿತ್ತು. ಆದರೆ ಇತ್ತೀಚಿಗೆ ಅಕ್ಷರ ಜ್ಞಾನ ಕಲಿತ ಮಹಿಳೆ ಪ್ರತಿಯೊಂದು ವಿಷಯದಲ್ಲಿ ವೈಚಾರಿಕವಾಗಿ ಯೋಚಿಸುವವಳಾಗಿದ್ದಾಳೆ. ಕುಟುಂಬದಲ್ಲಿಯೇ ತನ್ನ ಜೀವಮಾನದ ಪೂರ್ಣ ಬದುಕನ್ನು ಕಳೆಯಬೇಕಾಗಿದ್ದ ಇವಳು ಹೊರ ಹೋಗಿ ದುಡಿಯುವದನ್ನು ಸಮಾಜವು ಒಪ್ಪುತ್ತಿರಲಿಲ್ಲ. ಮನೆಯಲ್ಲಿ ಮಕ್ಕಳ ಲಾಲನೆ, ಪಾಲನೆ, ಪೋಷಣೆಯಲ್ಲಿಯೇ ಜೀವನ ಸಾಗಿಸುತ್ತಿದ್ದ ಮಹಿಳೆ ಹೊರಜಗತ್ತಿಗೆ ಸ್ಪಂಧಿಸುವ ಅವಕಾಶವಿರಲಿಲ್ಲ. ಮಹಿಳೆಯರನ್ನು ಕುರಿತು ಸಾಮಾಜಿಕ ನಂಬಿಕೆಗಳು ಎಷ್ಟು ಅಮಾಯಕವಾಗಿದ್ದವೆಂದರೆ ಅವರು ಕೆಲವೇ ಕೆಲಸ ಕಾರ್ಯಗಳಿಗೆ ಮಾತ್ರ ಸೀಮಿತ ಎನ್ನುವ ಮಟ್ಟಿಗಿದ್ದವು. ಆದರೆ ಕುಟುಂಬದ ಘನತೆ ಗೌರವವನ್ನು ಕಾಪಾಡುವವಳಾದ ಇವಳು ಆಧುನಿಕತೆಯ ಜಾಗತೀಕರಣದ ಸಂದರ್ಭದಲ್ಲಿ ಎಲ್ಲಾ ರಂಗದಲ್ಲೂ ತಾನು ಭಾಗಿಯಾಗುವಳು. ಇವಳು ಹಿಂದಿನಿಂದ ಇಂದಿನವರೆಗೂ ಸಮಾಜದಲ್ಲಿ, ಕುಟುಂಬದಲ್ಲಿ ತನ್ನದೇ ಆದ ಸ್ಥಾನಮಾನಗಳನ್ನು ಕಾಪಾಡಿಕೊಂಡು ಬಂದಿದ್ದಾಳೆ. ದೈಹಿಕವಾಗಿ ದುರ್ಬಲಳಾದ ಇವಳಿಗೆ

ಹಗುರವಾದ ಕಾರ್ಯಗಳಿಗೆ ಮಾತ್ರ ಅರ್ಹಳೆಂದು ಸಾಮಾಜಿಕ ವ್ಯವಸ್ಥೆಯು ಅವಳನ್ನು ಗುರುತಿಸಿತು.

ಆದರೆ ಇಂದು ಎಂತಹ ಕಠಿಣ ಕೆಲಸಗಳಿದ್ದರೂ ಅದರಲ್ಲಿ ಗೆಲವು ಸಾಧಿಸಿದ್ದಾಳೆ. ಮಹಿಳೆಯರ ಅಭಿವೃದ್ಧಿಗಾಗಿ ಅನೇಕ ಶಿಕ್ಷಣ ಸಂಸ್ಥೆಗಳು, ಸಂಘ ಸಂಸ್ಥೆಗಳು ಹಲವಾರು ಕೆಲಸ ಕಾರ್ಯಗಳನ್ನು ಕೈಗೊಂಡಿದ್ದರಿಂದ ಇಂದು ಜಾಗೃತಳಾಗಿದ್ದಾಳೆ. ತಾನು ಸಹ ಪುರುಷರಿಗಿಂತ ಏನು ಕಡಿಮೆಯಲ್ಲ ಎಂದು ಹಲವಾರು ಕ್ಷೇತ್ರಗಳಲ್ಲಿ ಮುನ್ನುಗ್ಗುತ್ತಿದ್ದಾಳೆ. ಆದರೂ ಪ್ರಸ್ತುತ ಸಂದರ್ಭದಲ್ಲಿ ಅನೇಕ ಸರ್ಕಾರಿ ಕಛೇರಿ, ಕಾರ್ಖಾನೆ, ಹಾಗೂ ಸರ್ಕಾರೇತರ ಸಂಸ್ಥೆಗಳಲ್ಲಿ ಮಹಿಳೆಯು ಹಲವಾರು ತೊಂದರೆ ಅಥವಾ ಕಿರುಕುಳಗಳನ್ನು ಅನುಭವಿಸುತ್ತಿದ್ದಾಳೆ. ಆದರೂ ಅವುಗಳನ್ನೆಲ್ಲ ಮೆಟ್ಟಿನಿಂತು ತನ್ನ ಬದುಕನ್ನು ಸಾಗಿಸುತ್ತಿದ್ದಾಳೆ. ಇಂತಹ ಶೋಷಣೆಯ ವಿರುದ್ಧ ಮಹಿಳಾ ಸಂಘಟನೆಗಳು ಹೋರಾಡುತ್ತಲೇ ಬಂದರೂ ಸಹ ಅವುಗಳಿಗೆ ಯಾವುದೇ ಕಡಿವಾಣ ಹಾಕಿಲ್ಲ. ಏನೆಲ್ಲ ಸೌಲಭ್ಯಗಳಿಂದ ವಂಚಿತಳಾದ ಮಹಿಳೆ ಇಂದು ಪುರುಷಶಾಹಿ ವ್ಯವಸ್ಥೆಯ ವಿರುದ್ಧ ಸಮರ ಸಾರುತ್ತಿದ್ದಾಳೆ. ಅಕ್ಷರಸ್ಥ ಮಹಿಳೆಯ ಬದುಕು ಹೀಗಾದರೆ ಏನು ಕಲಿಯದ ಅವಿದ್ಯಾವಂತ ದಲಿತ ಹಾಗೂ ಬುಡಕಟ್ಟು ಮಹಿಳೆಯರ ಸ್ಥಿತಿಯಂತು ಇನ್ನು ಶೋಚನೀಯವಾಗಿದೆ. ತಮ್ಮ ಪ್ರಾಚೀನ ಪರಂಪರೆಯಿಂದ ಬಂದಿರುವ ಕೆಲವೊಂದು ಆಚಾರ–ವಿಚಾರಗಳನ್ನು ಪಾಲಿಸಿಕೊಂಡು ಬಂದಿರುವ ಬುಡಕಟ್ಟು ಮಹಿಳೆಯರ ಬದುಕು ತುಂಬಾ ನಿಕೃಷ್ಟವಾಗಿದೆ. ನಾನು ಅಧ್ಯಯನ ಕೈಗೊಂಡಿರುವ ಸಿದ್ದಿ ಸಮುದಾಯವು ತಮ್ಮ ಮೂಲ ಪರಂಪರೆಯ ಪೊರೆಯನ್ನು ಕಳಚಿ ಮತ್ತೊಂದು ಪರಂಪರೆಯ ವ್ಯವಸ್ಥೆಯ ಅಡಿಯಲ್ಲಿ ಬದುಕನ್ನು ಸಾಗಿಸುವವರಾಗಿರುವರು. ಯಾವುದೋ ದೇಶದಿಂದ ಮತ್ತ್ಯಾವುದೋ ದೇಶಕ್ಕೆ ಗುಲಾಮರಾಗಿ ಬಂದು ಬದುಕನ್ನು ಆರಂಭಿಸಿದ ಸಿದ್ದಿ ಮಹಿಳೆ ಪ್ರಾರಂಭದಲ್ಲಿ ಉನ್ನತ ಸಮುದಾಯವರಿಂದ ಅನೇಕ ರೀತಿಯ ಶೋಷಣೆಗೆ ಒಳಗಾಗಿದ್ದಳು. ಕಾಡಿನ ಮಧ್ಯದಲ್ಲಿ ಸೀಮಿತ ವ್ಯವಸ್ಥೆಯ ಅಡಿಯಲ್ಲಿ ಬದುಕನ್ನು ಆರಂಭಿಸಿದ ಸಿದ್ದಿ ಮಹಿಳೆ ಇಂದು ಹೊರ ಜಗತ್ತಿಗೆ ಪರಿಚಯವಾಗುತ್ತಿದ್ದಾಳೆ. ಮಕ್ಕಳು ಇಂದು ಶಿಕ್ಷಣ, ಸಾಹಿತ್ಯ, ಕಲೆ, ಕ್ರೀಡೆ, ಹಾಗೂ ರಾಜಕೀಯ ವಲಯಗಳಲ್ಲಿ ಅಂಬೇಗಾಲಿಡುತ್ತಿದ್ದಾಳೆ. ಸರ್ಕರದ ಶಿಕ್ಷಣದಂತಹ ಮೂಲಭೂತ ವ್ಯವಸ್ಥೆಯ ಸಮಸ್ಯೆಗಳ ನಡುವೆ ತಮ್ಮ ಊರಿಂದ ಎಷ್ಟೋ ದೂರದ ಬೇರೊಂದು ಊರಿಗೆ ಹೋಗಿ ಶಿಕ್ಷಣ ಪಡೆಯುವ ಪರಿಸ್ಥಿತಿ ಈ ಸಿದ್ದಿ ಸಮುದಾಯದಲ್ಲಿ ಕಂಡುಬರುತ್ತದೆ.

ನಾಗರಿಕ ಸಮುದಾಯದ ಆಚಾರ–ವಿಚಾರಗಳು, ನಡೆನುಡಿಗಳು ಸಹ ಈಗ ಇವರಲ್ಲಿ ಬರತೊಡಗಿವೆ. ಆಧುನಿಕ ವ್ಯವಸ್ಥೆಯ ಸಂಪರ್ಕದಿಂದ ಈ ಸಿದ್ದಿ ಮಹಿಳೆ ಈಗ

ಬದಲಾಗುತ್ತಿದ್ದಾಳೆ. ಸಿದ್ದಿ ಸಮುದಾಯದ ಮಕ್ಕಳು ಐದು–ಆರು ವರ್ಷಕ್ಕೆ ಬಂದ ಮೇಲೆ ಅವರನ್ನು ಶ್ರೀಮಂತರ ಅಥವಾ ಒಡೆಯರುಗಳ ಮನೆಯಲ್ಲಿ ದನಗಳನ್ನು ಕಾಯಲಿಕ್ಕೆ ಅವರ ಮನೆಯ ಕೆಲಸ ಕಾರ್ಯಗಳನ್ನು ಮಾಡಲು ಕಳಿಸುವ ಪರಿಸ್ಥಿತಿಯಿತ್ತು. ಆದರೆ ಇಂದು ಸರ್ಕಾರ ಮಹಿಳೆಯರಿಗಾಗಿ ನೀಡಿದ ಸೌಲಭ್ಯಗಳಿಂದ ತಮ್ಮ ಮಕ್ಕಳಿಗೆ ಶಾಲೆಗೆ ಕಳುಹಿಸುತ್ತಿದ್ದಾರೆ. ನಾನು ಕ್ಷೇತ್ರ ಕಾರ್ಯ ಕೈಗೊಂಡ ಕೆಲವೊಂದು ಪ್ರದೇಶದಲ್ಲಿ ಹೆಣ್ಣು ಮಕ್ಕಳಿಗೆ ಇತ್ತೀಚಿಗೆ ಶಾಲೆಗಳಿಗೆ ಕಳಿಸುವುದರಲ್ಲಿ ಪೋಷಕರು ಕಾಳಜಿ ವಹಿಸುವವರಾಗಿದ್ದಾರೆ. ಅಂದು ಹೆಣ್ಣು ಮಕ್ಕಳಿಗೆ ಶಾಲೆಗಳಿಗೆ ಕಳಿಸುವ ವ್ಯವಸ್ಥೆ ಇರಲಿಲ್ಲ. ಆದರೆ ಇಂದು ಹೆಣ್ಣು ಮಕ್ಕಳು ಶಾಲೆಗಳಿಗೆ ಹೋಗಿ ಉತ್ತಮವಾದ ಶಿಕ್ಷಣ ಪಡೆದು ಆಧುನಿಕತೆಯ ಸಂಪರ್ಕ ಪಡೆಯುತ್ತಿದ್ದಾರೆ. ಒಟ್ಟಿನಲ್ಲಿ ಯಾವುದೇ ಕ್ಷೇತ್ರದಲ್ಲಿ ಮಹಿಳೆ ಬೆಳೆಯಬೇಕಾದರೆ ಅವಳಿಗೆ ಅಕ್ಷರ ಜ್ಞಾನ ಮುಖ್ಯ. ಹೀಗಾಗಿ ಈ ಸಿದ್ದಿ ಸಮುದಾಯದಲ್ಲಿ ಅನೇಕ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿರುವ ಇವಳು ಇತ್ತೀಚಿಗಷ್ಟೇ ಬೆರಳಣಿಕೆಯಷ್ಟು ಮಹಿಳೆಯರು ನಗರಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಈ ಮಹಿಳೆಗೆ ನಾಗರಿಕತೆಯ ಸಂಕಲ್ಪಕೊಡಿಸಲು ಸರ್ಕಾರ ಮಾತ್ರವಲ್ಲ ಜಗತ್ತಿನ ಎಲ್ಲಾ ರಾಷ್ಟ್ರಗಳು ಹಾಗೂ ಸಂಘ ಸಂಸ್ಥೆಗಳು ಹಲವಾರು ಯೋಜನೆಗಳನ್ನು ಹಾಕಿಕೊಂಡಿವೆ. ಈ ಮಹಿಳೆಯರಿಗೆ ರಾಜಕೀಯ, ಸಾಮಾಜಿಕ, ಹಾಗೂ ಶೈಕ್ಷಣಿಕದಂತಹ ಮಹತ್ವದ ವಿಚಾರಧಾರೆಗಳನ್ನೆರೆಯಲು ವಿಶ್ವವಿದ್ಯಾಲಯಗಳು ಸಹ ಅವರಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ದೈಹಿಕವಾಗಿ ದಷ್ಟಪುಷ್ಟರಾದ ಈ ಸಿದ್ದಿ ಸಮುದಾಯದ ಮಕ್ಕಳನ್ನು ಸರ್ಕಾರ ಸ್ವಾರ್ಥಕ್ಕಾಗಿ ಈ ಕೆಳಗಿನಂತೆ ಬಳಿಸಿಕೊಳ್ಳುತ್ತಿವೆ. "ಸಿದ್ದಿ ಮಕ್ಕಳಿಗೆ ಆಧುನಿಕ ರೀತಿಯ ತರಬೇತಿ ನೀಡುವ ಮೂಲಕ ಕರ್ನಾಟಕ ಕ್ರೀಡಾ ಕ್ಷೇತ್ರದಲ್ಲಿ ಒಂದು ಹೊಸ ಆಸೆ ಅಂಕುರಿಸಿದೆ. ಉತ್ತರ ಕನ್ನಡದ ಹಲವು ಗಂಡು ಮತ್ತು ಹೆಣ್ಣು ಮಕ್ಕಳು ಈ ಕಾರಣಕ್ಕಾಗಿ ಬೆಂಗಳೂರಿನಂಥ ನಗರಕ್ಕೆ ಬಂದಿದ್ದಾರೆ. ಇದು ನಮ್ಮ ಸಿದ್ದಿ ಮಕ್ಕಳ ಆತ್ಮ ವಿಶ್ವಾಸವನ್ನು ಹೆಚ್ಚಿಸಿದೆ. ಆದರೆ ನಮ್ಮ ವ್ಯವಸ್ಥೆಗಳು ಆ ಮಕ್ಕಳ ಸಾಮಾಜಿಕ ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳದೆ, ಮಾನಸಿಕವಾಗಿ ಅವರನ್ನು ಚೈತನ್ಯಗೊಳಿಸದೆ ಏಕಾಏಕಿ ಬೆಂಗಳೂರಿನ ಪ್ರತಿಷ್ಠಿತ ಕಾನ್ವೆಂಟ್‌ಗಳಿಗೆ ಸೇರಿಸಿ ಶಿಕ್ಷಣ ಕೊಡಲು ಆರಂಭಿಸಿದ್ದು ಮತ್ತು ಆ ಮಕ್ಕಳ ಆಹಾರ ಪದ್ಧತಿ ತಿಳಿಯದೇ ಅವರು ವಾಸಿಸುತ್ತಿದ್ದ ಪ್ರಕೃತಿ ಪರಿಸರವನ್ನು ಅರ್ಥಮಾಡಿಕೊಳ್ಳದೆ ಕಾಂಕ್ರಿಟ್ ಹಾಸ್ಟೆಲ್‌ಗಳಲ್ಲಿ ಬಂಧಿಸಿದ್ದು ಅಷ್ಟು ಸರಿಯಾದ ಕ್ರಮವಲ್ಲ ಎಂದೇ ನನ್ನ ನಂಬಿಕೆ. ಅವರದೇ ಪರಿಸರದಲ್ಲಿ ತರಬೇತಿ ಮತ್ತು ಸವಲತ್ತುಗಳನ್ನು ನೀಡುವ ಮೂಲಕ ಈ ಕಾರ್ಯವನ್ನು ಇನ್ನಷ್ಟು ಅರ್ಥಪೂರ್ಣವಾಗಿ ಮಾಡಬಹುದು. ಇಷ್ಟಲ್ಲದೆ, ಕೇವಲ ಅವರ ದೈಹಿಕ ಬಲವನ್ನು ಉಪಯೋಗಿಸಿಕೊಂಡು ದೇಶಕ್ಕೆ ಕೀರ್ತಿ ತರುವ ಸಾಹಸ

ಮಾಡದೆ ಒಟ್ಟಾರೆಯಾಗಿ ಇದೇ ಜನಾಂಗವನ್ನು ಆತ್ಮ ವಿಶ್ವಾಸದ ನೆಲೆಗೆ ಕೊಂಡೊಯ್ಯುವ ಆರ್ಥಿಕ ಮತ್ತು ಶೈಕ್ಷಣಿಕ ಯೋಜನೆಗಳನ್ನು ಹಾಕಿಕೊಳ್ಳಬಹುದಾಗಿದೆ."[೧]

ಹೀಗೆ ನಾಗರಿಕ ಸಮುದಾಯ ಅಥವಾ ಉನ್ನತ ಜನಾಂಗದ ಸಂಪರ್ಕದಿಂದ ಸಿದ್ದಿ ಮಹಿಳೆಯ ಆಚಾರ ವಿಚಾರಗಳಲ್ಲಿ ಈಗ ಅಲ್ಪ ಸ್ವಲ್ಪ ಬದಲಾವಣೆ ಕಂಡು ಬಂದಿದೆ. ಗುಲಾಮರಾಗಿ ಈ ನಾಡಿಗೆ ಬಂದ ಮೇಲೆ ಈ ಸಿದ್ದಿ ಮಹಿಳೆಯರನ್ನು ತಮ್ಮ ಮನೆಯ ಅಥವಾ ತೋಟದ ಕೆಲಸಕ್ಕೆಂದು ಬರಮಾಡಿಕೊಂಡ ಉನ್ನತ ಶ್ರೀಮಂತ ಸಮುದಾಯಗಳು ಇವರನ್ನು ಲೈಂಗಿಕವಾಗಿ ಅನೇಕ ರೀತಿಯ ಶೋಷಣೆಗಳನ್ನು ಮಾಡಿದರೆಂಬುದರ ಬಗ್ಗೆ ಹಲವಾರು ದಾಖಲೆಗಳಿವೆ. ಅವರಲ್ಲೆ ಕಂಡುಬರುವ ಕೆಲವೊಂದು ಕಥೆ ಕಾವ್ಯಗಳಲ್ಲಿ ಶೋಷಣೆಯ ಕೆಲವೊಂದು ಪ್ರಸ್ತಾಪ ಸಹ ಬರುವುದುಂಟು. "ಮೇಲ್ವರ್ಗ, ಮೇಲ್ಜಾತಿ ಮತ್ತು ಮೇಲ್ವರ್ಗದ ಪುರುಷರು ತಳಸಮುದಾಯದ ಮಹಿಳೆಯರನ್ನು ಮತ್ತು ಬುಡಕಟ್ಟು ಮಹಿಳೆಯರನ್ನು ಲೈಂಗಿಕ ಕ್ರಿಯೆಗೆ ಒತ್ತಾಯಿಸುವುದು, ಅವರ ಒತ್ತಾಯಕ್ಕೆ ಮಹಿಳೆಯರು ತಲೆಬಾಗುವುದು ಇಂತಹ ಚಿತ್ರಣಗಳು ಜನಪದ ಮತ್ತು ಬುಡಕಟ್ಟು ಕಾವ್ಯಗಳಲ್ಲಿ, ಕಥೆಗಳಲ್ಲಿ ಹೇರಳವಾಗಿ ದೊರೆಯುತ್ತವೆ. ಇಂತಹ ಉದಾಹರಣೆಗಳು ಮೇಲ್ಜಾತಿ ಮತ್ತು ಮೇಲ್ವರ್ಗದ ಪುರುಷರು ಶೂದ್ರ ದಲಿತ ಮತ್ತು ಬುಡಕಟ್ಟು ಮಹಿಳೆಯರ ಮೇಲೆ ನಡೆಸಿದ ಲೈಂಗಿಕ ದೌರ್ಜನ್ಯವನ್ನು ಸಾಬೀತು ಪಡೆಸುತ್ತವೆ."[೨] ಆದರೆ ಇಂದು ಅಂತಹ ಅವ್ಯವಸ್ಥೆಯ ವಿರುದ್ಧ ಸಿದ್ದಿ ಮಹಿಳೆಯರು ಜಾಗೃತರಾಗಿರುವರು.

ಸಿದ್ದಿ ಸಮುದಾಯದ ಮಹಿಳೆ ಅತ್ಯಂತ ನಿಕೃಷ್ಟವಾದ ಸ್ಥಿತಿಯಲ್ಲಿ ಬದುಕುತ್ತಿದ್ದಾಳೆ. ನಾಗರಿಕ ಸಮುದಾಯದ ಯಾವುದೇ ಸೌಲಭ್ಯಗಳಿಲ್ಲದೆ ಕಾಡಿನ ನಡುವೆ ಗೂಡು ಕಟ್ಟಿಕೊಂಡಿದ್ದಾಳೆ. ತಮ್ಮ ಮೂಲ ಪರಂಪರೆಯ ಬೇರನ್ನು ಕಳಚಿಕೊಂಡಿರುವ ಇವಳು ಬೇರೆ ಉನ್ನತ ಸಮುದಾಯದ ಕೆಲಸದಾಳಾಗಿ ಅವರ ಆಚಾರ ವಿಚಾರವನ್ನು ಪಾಲನೆ ಮಾಡುವ ಪರಿಸ್ಥಿತಿ ಇವರಲ್ಲಿ ಸಾಮಾನ್ಯವಾಗಿ ಕಂಡುಬಂದಿದೆ. ದೈಹಿಕವಾಗಿ ದಷ್ಟಪುಷ್ಟಳಾದ ಇವಳು ಗಂಡಿಗೆ ಸಮನಾಂತರವಾಗಿ ಸರ್ವ ಕೆಲಸಗಳಲ್ಲಿ ಭಾಗಿಯಾಗುವಳು. ಮನೆ ಕೆಲಸವಲ್ಲದೆ ಕೃಷಿಯಂತಹ ಕೆಲಸದಲ್ಲಿ ಗಂಡಿಗೆ ಸಹಕರಿಸುವಳು. ಪ್ರಾರಂಭದಲ್ಲಿ ಸಿದ್ದಿ ಸಮುದಾಯದವರು ಒಂದೇ ಮೂಲದವರು ಆದರೆ ಈ ದೇಶಕ್ಕೆ ಗುಲಾಮರಾಗಿ ಬಂದ ನಂತರ ಮೂರು ಮತ ಧರ್ಮದವರಾಗಿ ಬೇರ್ಪಟ್ಟರು. ಈಗ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಸಿದ್ದಿಗಳಾಗಿರುವರು. ಭಾರತದಲ್ಲಿರುವ ಮೂಲ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್‌ಗಳು ಇವರ ದೈಹಿಕ ಲಕ್ಷಣವನ್ನು ನೋಡಿ ಇವರನ್ನು ಅತ್ಯಂತ ಕೀಳಾಗಿ ಕಾಣಲಾರಂಭಿಸಿದರು. ಹೀಗಾಗಿ ಕೊಡುಕೊಳ್ಳುವಿಕೆ ವಿಚಾರದಲ್ಲಿ ಸಿದ್ದಿ ಮಹಿಳೆಯರು ತಮ್ಮ ತಮ್ಮಲ್ಲಿಯೇ ಅಂದರೆ

ಹಿಂದೂ, ಕ್ರಿಶ್ಚಿಯನ್, ಮುಸ್ಲಿಂ ಸಿದ್ದಿಗಳ ನಡುವೆಯೇ ಪರಸ್ಪರ ಮದುವೆ ಮಾಡಿಕೊಳ್ಳ ತೊಡಗಿದರು. ಇವರ ಸಂಪ್ರದಾಯಗಳು ಕೆಲವೊಂದು ಆಚರಣೆಗಳು ಮೂಲ ಹಿಂದೂ, ಮುಸ್ಲಿಂ, ಕ್ರೈಸ್ತರು ಅನುಸರಿಸುವ ಮತಧರ್ಮವನ್ನೊಳಗೊಂಡಿದೆ. ಅಕ್ಷರ ಜ್ಞಾನ ಮತ್ತು ಆಧುನಿಕತೆಯ ಹಿನ್ನೆಲೆಯಲ್ಲಿ ಇಂದು ಸಿದ್ದಿ ಮಹಿಳೆ ರಾಜಕೀಯ ರಂಗದಲ್ಲಿ ಬೆಳೆಯುವ ಕೂಸಾಗಿದ್ದಾಳೆ. ಇಂದು ಮಹಿಳೆಯು ಗ್ರಾಮ ತಾಲ್ಲೂಕು, ಜಿಲ್ಲಾ ಪಂಚಾಯಿತಿಯಲ್ಲಿ ಸದಸ್ಯರಾಗಿರುವರು. ರಾಜಕೀಯ ವಲಯದಲ್ಲಿ ಸಿದ್ದಿ ಮಹಿಳೆಯ ಪಾತ್ರದ ಬಗ್ಗೆ ಹಿಂದಿನ ಅಧ್ಯಯನದಲ್ಲಿ ಚರ್ಚಿಸಿರುವೆನು.

ಸ್ತ್ರೀಯರಿಗೆ ಸಮಾನ ಸ್ಥಾನಮಾನ ಸಿಗಲು ಅವರಿಗೆ ಶಿಕ್ಷಣ, ಉದ್ಯೋಗದಲ್ಲಿ ಸಮಾನತೆಯ ಅವಕಾಶಗಳು ಅತ್ಯಗತ್ಯವಾಗಿದೆ. ರಾಜಕೀಯ ರಂಗದಲ್ಲಿ ಬರಲು ಅಂಜುತ್ತಿದ್ದ ಈ ಮಹಿಳೆ ಇಂದು ಮೀಸಲಾತಿ ನೀಡಿದ್ದರ ಪರಿಣಾಮವಾಗಿ ಕುಟುಂಬದ ಪ್ರೋತ್ಸಾಹದಿಂದ ರಾಜಕೀಯದಲ್ಲಿ ಸ್ಥಾನ ಪಡೆಯುವ ಅವಕಾಶ ಲಭಿಸುವಂತಾಗಿದೆ. ಎಲ್ಲಾ ಸಮುದಾಯದ ಮಹಿಳೆಗೆ ಸರ್ಕಾರ ನೀಡಿದ್ದ ಮೀಸಲಾತಿಯಿಂದ ಇಂದು ಶಿಕ್ಷಣ, ರಾಜಕೀಯದಂತಹ ಹಲವಾರು ವಲಯಗಳಲ್ಲಿ ಮಹಿಳೆ ಪಾದಾರ್ಪಣೆ ಮಾಡತೊಡಗಿದ್ದಾಳೆ. ಈ ಸಿದ್ದಿ ಮಹಿಳೆಯರಲ್ಲಿ ಅಕ್ಷರಸ್ಥರಿರುವರು ತುಂಬಾ ಕಡಿಮೆ. ಹೀಗಾಗಿ ರಾಜಕೀಯದಲ್ಲಿ ಕೇವಲ ಪ್ರಾಥಮಿಕ ಶಿಕ್ಷಣ ಪಡೆದವರು ಅಥವಾ ಅವಿದ್ಯಾವಂತರೇ ಕಂಡುಬರುವರು. ಕೆಲವೊಂದು ಸಂದರ್ಭದಲ್ಲಿ ಹೆಸರಿಗೆ ಮಾತ್ರ ಅಧ್ಯಕ್ಷೆ, ಸದಸ್ಯೆಳಾಗಿರುವಳು. ಆದರೆ ಅಧಿಕಾರ ತಮ್ಮ ಮನೆಯ ಯಜಮಾನರಿಗೆ ಬಿಟ್ಟು ಕೊಡುವ ಪ್ರಮೇಯಗಳು ಕಂಡುಬಂದಿವೆ.

ಸಾಮಾಜಿಕ ಅನನ್ಯತೆಯನ್ನು ಗುರುತಿಸುವ ಹೊಸ ಮಾನದಂಡಗಳು ಪ್ರಮುಖವಾಗಿ ಅಧಿಕಾರ ಮತ್ತು ಸೌಲಭ್ಯಗಳು ದೊರಕುವಿಕೆಯಿಂದ ಎಂದು ಹೇಳಬಹುದು. ಆದರೆ ಇಂದು ಸಿದ್ದಿ ಸಮುದಾಯದ ಮಹಿಳೆಗೆ ಅನಿವಾರ್ಯವಾಗಿ ಪಟ್ಟಣ, ನಗರದ ಸಂಪರ್ಕ ಪಡೆಯುವಂತಾಗಿದೆ. ಮೊದಲಿಗೆ ತಾವು ವಾಸಿಸುತ್ತಿದ್ದ ಪರಿಸರದಲ್ಲಿ ದೊರೆಯುವ ಕಾಡುತ್ಪನ್ನದ ಜೊತೆಗೆ ತಮ್ಮ ಬದುಕನ್ನು ಕಟ್ಟಿಕೊಂಡಿದ್ದರು. ಆದರೆ ಇಂದು ಸರ್ಕಾರ ಕೆಲವೊಂದು ಅರಣ್ಯ ನಿಯಮಾವಳಿಯನ್ನು ಹೊರಡಿಸಿದ್ದರಿಂದ ಅಲ್ಲಿ ಯಾವುದೇ ತರಹದ ಚಟುವಟಿಕೆಗಳನ್ನು ಕೈಗೊಳ್ಳಲು ಸಾಧ್ಯವಾಗಲಾರದು. ತನ್ನ ಹೊಟ್ಟೆಪಾಡಿಗಾಗಿ ಇಂದು ಎಷ್ಟೊ ದೂರದ ಗ್ರಾಮ ಪಟ್ಟಣಗಳಿಗೆ ಕೂಲಿ ಕೆಲಸಕ್ಕೆ ಹೋಗುವ ವ್ಯವಸ್ಥೆ ಅಲ್ಲಿ ನಿರ್ಮಾಣವಾಗಿದೆ. ತಮ್ಮ ಒಡೆಯರ ಹೊಲಗದ್ದೆಗಳಲ್ಲಿ ಕೆಲಸಕ್ಕೆ ಹೋದರೆ ಅವರು ಕೊಡುವ ಕೂಲಿ ಅಷ್ಟಕಷ್ಟೇ ಇರುತ್ತದೆ. ಹೀಗಾಗಿ ನಗರ ಪಟ್ಟಣದ ಕಡೆ ಮುಖ ಮಾಡುತ್ತಿದ್ದಾಳೆ. ಅಂದರೆ ನಾಗರಿಕ ಪ್ರಪಂಚದ ಆಚಾರ-ವಿಚಾರಗಳು ಸಹಜವಾಗಿ ಈ ಮಹಿಳೆಯ ಮೇಲೆ ಪ್ರಭಾವ ಬೀರಿದೆ.

ದಿನನಿತ್ಯ ಧರಿಸುವ ಬಟ್ಟೆಯಿಂದ ಹಿಡಿದು ಉಡುಗೆ ತೊಡುಗೆ ಮುಂತಾದ ವಿಷಯಗಳಲ್ಲಿ ಬದಲಾಗುತ್ತಿದ್ದಾಳೆ. ಸಾಮಾಜಿಕ, ಆರ್ಥಿಕ, ರಾಜಕೀಯವಾಗಿ ಅತ್ಯಂತ ಹಿಂದುಳಿದಿರುವ ಈ ಸಮುದಾಯದ ಮಹಿಳೆಯರ ಅಭಿವೃದ್ಧಿಗಾಗಿ ಅನೇಕ ಸಂಘ ಸಂಸ್ಥೆಗಳು ಸಹ ಈ ಸಮುದಾಯದ ಮಹಿಳೆಯರ ಬಗ್ಗೆ ಕಾಳಜಿ ವಹಿಸುತ್ತಿದೆ. ಅವು ಈ ಕೆಳಗಿನಂತಿವೆ.

೭.೧. ಪ್ರೇಮದ ನಕ್ಷತ್ರ ಆಶ್ರಮ (Premada Nakshatra Ashrama)

"ಈ ಸಂಸ್ಥೆಯು ಸೆಂಟ್ ಜೋಸೆಫ್ ಶೈಕ್ಷಣಿಕ ಮತ್ತು ವೈದ್ಯಕೀಯ ಪರಿಹಾರ ಸಂಸ್ಥೆಯಾಗಿ ಬಾಂಬೆಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಇದು ಹದಿನೆಂಟು ಸಂಸ್ಥೆಗಳನ್ನು ಮಹಾರಾಷ್ಟ್ರದಲ್ಲಿ ಮತ್ತು ಎರಡು ಸಂಸ್ಥೆಗಳನ್ನು ಕರ್ನಾಟಕದಲ್ಲಿ ಹೊಂದಿದೆ. ಪ್ರೇಮದ ನಕ್ಷತ್ರ ಆಶ್ರಮ ಇದು ಶೈಕ್ಷಣಿಕ ಸಂಸ್ಥೆಯಾಗಿದ್ದು ಯಲ್ಲಾಪುರದಲ್ಲಿ ಕೇಂದ್ರಿಕೃತವಾಗಿದೆ. ಇದನ್ನು ಹುಡುಗಿಯರ ಶಿಕ್ಷಣದ ಉದ್ದೇಶಕ್ಕಾಗಿ ವಸತಿ ನಿಲಯವನ್ನು ಯಲ್ಲಪೂರದಲ್ಲಿ ಸ್ಥಾಪಿಸಲಾಗಿದೆ. ಅಲ್ಲಿ ಅರವತ್ತು ಮಕ್ಕಳು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಅದರಲ್ಲಿ ಮೂವತ್ತೈದು ಮಕ್ಕಳು ಸಿದ್ದಿಗಳು ಉಳಿದವರೆಲ್ಲರು ನಾನ್ ಸಿದ್ದಿಗಳಾಗಿದ್ದಾರೆ. ಈ ಸಂಸ್ಥೆಯು ಹೆಣ್ಣು ಮಕ್ಕಳಿಗೋಸ್ಕರ ಸೀಮಿತವಾಗಿದೆ. ಪ್ರಾಥಮಿಕ ಶಾಲಾ ಶಿಕ್ಷಣ ಮತ್ತು ಕೀಂಡರ್‌ಗಾರ್ಟನ್ ಶಿಕ್ಷಣವನ್ನು ಒಳಗೊಂಡಿದೆ. ಈ ಹುಡುಗಿಯರು ಹಳಿಯಾಳ ಮತ್ತು ಯಲ್ಲಾಪೂರ, ಮುಂಡಗೋಡ, ಕಲಘಟಗಿ ಮುಂತಾದ ತಾಲೂಕುಗಳಿಗೆ ಸೇರಿದವರಾಗಿರುವರು. ಇವರಿಗೆ ಈಗಾಗಲೇ ಗಮನಿಸಿದ ಹಾಗೆ ಕಿಂಡರ್‌ಗಾರ್ಟನ್ ಅಥವಾ ಪ್ರಾಥಮಿಕ ಶಾಲೆಗಳಲ್ಲಿ ಸೇರಿಸುತ್ತಿದ್ದಾರೆ. ಸಾಮಾಜಿಕ ಕಾರ್ಯಕರ್ತರು ಸಿದ್ದಿ ಮಕ್ಕಳನ್ನು ಶಾಲೆಗೆ ಪ್ರವೇಶ ಪಡೆಯಲು ಸಹಾಯ ಮಾಡುತ್ತಿದ್ದಾರೆ. ಈ ಸಂಸ್ಥೆಯಲ್ಲಿ ಹುಡುಗಿಯರನ್ನು ನೋಡಿಕೊಳ್ಳಲು ಎಂಟು ಜನರನ್ನು ನೇಮಕ ಮಾಡಿದ್ದಾರೆ. ಈ ಸಂಸ್ಥೆಯ ಮುಖ್ಯಸ್ಥಳಾಗಿ Supeiror sister ಇರುತ್ತಾರೆ. ಸಾಂಸ್ಕೃತಿಕ ಚಟುವಟಿಕೆಗಳು sister ನ ಮೇಲ್ವಿಚಾರಣೆಯಲ್ಲಿ ನಡೆಯುವುದು. ಸಿದ್ದಿ ಹುಡುಗಿಯರಿಗೆ ಆಧುನಿಕ ತಂತ್ರಜ್ಞಾನದ ಬಗ್ಗೆ ತರಬೇತಿ ನೀಡುತ್ತಿದ್ದಾರೆ.

ಸಿದ್ದಿ ಸಮುದಾಯದ ಜನರ ಏಳಿಗೆಗೋಸ್ಕರ ಇದು ಒಂದು ಒಳ್ಳೆಯ ಸಂಸ್ಥೆಯಾಗಿದೆ. ಆರ್ಥಿಕ ನೆರವು ಈ ಸಂಸ್ಥೆಗಳಿಗೆ ಬೇರೆ ಬೇರೆ ಸಂಘ ಸಂಸ್ಥೆಗಳಿಂದ ದೊರೆಯಬೇಕಾಗಿದೆ. ಆರ್ಥಿಕತೆಯ ಕೊರತೆಯನ್ನು ಈ ಸಂಸ್ಥೆಯು ಅನುಭವಿಸುತ್ತಿರುವುದರಿಂದ ಇವುಗಳನ್ನು ನಡೆಸಲು ತುಂಬ ತೊಂದರೆಗಳಾಗುತ್ತವೆ.

೭.೨. ಗೃಹ ವಿಜ್ಞಾನ (Home Science)

ಸಿದ್ದಿಗಳು ಸಾಮಾನ್ಯ ಜೀವನವನ್ನು ನಡೆಸುತ್ತಿದ್ದಾರೆ. ಇಂತಹ ಸ್ಥಿತಿಯಲ್ಲಿ ಉತ್ತರ ಕನ್ನಡದಲ್ಲಿ ಕೆಲವೊಂದು ಸಾಮಾಜಿಕ ಸಂಘಟನೆಗಳು ಸಿದ್ದಿ ಮಹಿಳೆಯರಿಗೆ ಗೃಹವಿಜ್ಞಾನ

ತರಬೇತಿ ನೀಡಲು ಪ್ರಯತ್ನಿಸುತ್ತಿದೆ. ಇದು ಚಿಪ್ಗಿ ಸಮೀಪ ಶಿರಸಿಯಿಂದ ಎಂಟು.ಕಿ.ಮೀ. ದೂರದಲ್ಲಿದೆ. ಅಲ್ಲಿಯ ಹುಡುಗಿಯರಿಗೆ ವಿಜ್ಞಾನದ ಶಿಕ್ಷಣವನ್ನು ನೀಡಲಾಗುವುದು. ಈ ಕೋರ್ಸ್‌ನ ಅವಧಿ ಆರು ತಿಂಗಳದಾಗಿದೆ. ಈ ಕೋರ್ಸ್‌ನ್ನು ಸೆಪ್ಟೆಂಬರ್ ತಿಂಗಳಲ್ಲಿ ನಡೆಸಲಾಗುವುದು. ಇಲ್ಲಿ ತರಬೇತಿ ತೆಗೆದುಕೊಳ್ಳುವವರಿಗೆ ಉಚಿತ ವಸತಿ ಮತ್ತು ಆಹಾರವನ್ನು ನೀಡಲಾಗುತ್ತದೆ. ಇಲ್ಲಿ ನೋಂದಣಿಗೊಳ್ಳಲು ಇಪ್ಪತ್ತು ರೂಪಾಯಿಗಳನ್ನು ನೀಡಬೇಕಾಗುತ್ತದೆ. ಅವರು ತುಂಬಾ ಬಡವರಾಗಿದ್ದರೆ ಅಂಥಹ ಮಕ್ಕಳಿಗೆ ಉಚಿತ ಶಿಕ್ಷಣ ನೀಡಲಾಗುವುದು. ತರಬೇತಿಯ ಅವಧಿಯಲ್ಲಿ ಎರಡು ಬಾರಿ ರಜೆಯನ್ನು ಕೊಡಲಾಗುತ್ತದೆ. ಅಲ್ಲಿ ನಾಲ್ಕು ಜನ ಸಹ ಶಿಕ್ಷಕರಿರುವರು. ಹೊಲಿಗೆ, ಸಾಹಿತ್ಯ, ಧಾರ್ಮಿಕ ಜ್ಞಾನ, ಸಾಮಾಜಿಕ ಸಂವಾಹನ, ಅಡುಗೆ ಮಾಡುವುದು, ಕೈ ತೋಟ ಮುಂತಾದವುಗಳನ್ನು ಕುರಿತು ತರಬೇತಿ ನೀಡುತ್ತದೆ.

೭.೩. ಸ್ನೇಹ ಸದನ (Sneha Sadan)

ಈ ಸಂಸ್ಥೆಯನ್ನು ಕ್ಯಾಥೋಲಿಕದ ರೋಸರಿ ಚರ್ಚದ ಮೂಲಕ ಸ್ನೇಹ ಸದನ ವಸತಿ ನಿಲಯವನ್ನು ಯಲ್ಲಾಪುರದಲ್ಲಿ ನಡೆಸಲಾಗುತ್ತಿದೆ. ಚರ್ಚ ಸಮುದಾಯದವರು ಸಿದ್ದಿ ಜನರ ಸಂಪೂರ್ಣ ಅಭಿವೃದ್ಧಿ ಹಾಗೂ ಏಳಿಗೆಗಾಗಿ ಪ್ರಮುಖ ಪಾತ್ರವಹಿಸುತ್ತಿದೆ. ಸಿದ್ದಿ ಜನರ ಏಳಿಗೆಗಾಗಿ ಸ್ನೇಹ ಸದನ ಪ್ರಮುಖವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ಅವು ಈ ಕೆಳಗಿನಂತೆ ಇವೆ.

೧. ಶಿಕ್ಷಣ (Education)

೨. ಧಾರ್ಮಿಕ ಶಿಕ್ಷಣ (Religious education)

೩. ಆರೋಗ್ಯ ವೃದ್ಧಿ (Health progress)

೪. ಮನೆ ಕಟ್ಟುವುದು (House Building)

೫. ಕುಟುಂಬದ ಇರುವಿಕೆಗಾಗಿ ಶಿಕ್ಷಣ (Education for family living)

೬. Catholic Relief Service Food Programmes

೧೯೭೯ ರಿಂದ ಉಚಿತ ವಸತಿ ಶಾಲೆಯಲ್ಲಿ ಸಿದ್ದಿ ಮತ್ತು ಸಿದ್ದಿ ಅಲ್ಲದ ಮಕ್ಕಳು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಎಂಬತ್ತು ಹುಡುಗರಲ್ಲಿ ಅರವತ್ತು ಹುಡುಗರು ಕಿಂಡರ್‌ಗಾರ್ಟನ್ ಒಳಗೊಂಡಂತೆ ಪ್ರಾಥಮಿಕ ಶಾಲೆಯಲ್ಲಿ ಕಲಿಯುತ್ತಿದ್ದಾರೆ. ಈ ವಿದ್ಯಾರ್ಥಿಗಳು ಬೇರೆ ಬೇರೆ ತಾಲ್ಲೂಕುಗಳಿಂದ ಬಂದಿರುವರು. ಈ ವಸತಿ ನಿಲಯದಲ್ಲಿ ಹುಡುಗರಿಗೆ ಬಟ್ಟೆ, ಪುಸ್ತಕಗಳು ಮತ್ತು ಔಷಧಿಗಳು ಮುಂತಾದವುಗಳನ್ನು ಉಚಿತವಾಗಿ ನೀಡಲಾಗುವುದು.

ಧಾರ್ಮಿಕ ಶಿಕ್ಷಣವನ್ನು ನೀಡುವುದು ಚರ್ಚಿನ ಮತ್ತು ಮಿಷನರಿಗಳ ಕೆಲಸವಾಗಿದೆ. ಆರೋಗ್ಯ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಮಿಷನರಿಗಳು ಒಳ್ಳೆಯ ತರಬೇತಿ ಹೊಂದಿದ

ದಾದಿಯರನ್ನು ಬೇರೆ ಬೇರೆ ಹಳ್ಳಿಗಳಿಗೆ ಕಳಿಸುವುದರ ಮೂಲಕ ಸಿದ್ದಿಗಳಿಗೆ ಮತ್ತು ಬೇರೆ ಜನರಿಗೆ ಔಷಧಿಗಳನ್ನು ಹಂಚಿಕೆ ಮಾಡುತ್ತಾರೆ. ಈ ರೀತಿಯ ಜನೋಪಯೋಗಿ ಕೆಲಸ ಕಾರ್ಯಗಳ ಸದುಪಯೋಗ ಸಿದ್ದಿಗಳು ಸರಿಯಾಗಿ ಪಡೆದುಕೊಳ್ಳುತ್ತಿಲ್ಲ. ಸಾಮಾನ್ಯವಾಗಿ ಅವರು ಆಯುರ್ವೇದ ಔಷಧಿ ಮತ್ತು ಸಂಪ್ರದಾಯಿಕ ಸೂಲಗಿತ್ತಿಯರ ಮೂಲಕ ಹೆರಿಗೆಯನ್ನು ಮಾಡಿಸುವರು. ಕ್ರಿಶ್ಚಿಯನ್ ಮಿಷನರಿಗಳು ಮನೆಗಳನ್ನು ಕಟ್ಟಲು ಲೋನ್ ಸೌಲಭ್ಯ ಒದಗಿಸಿದೆ. ಆದರೆ ಕೆಲವೇ ಸಿದ್ದಿ ಕುಟುಂಬಗಳು ಲೋನ್ ಪಡೆದಿವೆ. ಈ ಲೋನ್‌ಗಳನ್ನು ಕೆಲವು ದಿನಗಳ ನಂತರ ಮರಳಿಸಲಾಗುತ್ತದೆ.[3] ಈ ರೀತಿಯಾಗಿ ಈ ಸಂಸ್ಥೆಗಳು ಕಾರ್ಯನಿರ್ವಹಿಸುತ್ತದೆ. ಇಷ್ಟೇ ಅಲ್ಲದೆ ಇನ್ನು ಅನೇಕ ಸಂಘ ಸಂಸ್ಥೆಗಳು ಸಿದ್ದಿಯರ ಅಭಿವೃದ್ಧಿಗೆ ಹಲವು ರೀತಿಯಿಂದ ಶ್ರಮಿಸುತ್ತಿವೆ.

ಮಹಿಳೆಯರಿಗಾಗಿ ಮಹಿಳಾ ಕಲ್ಯಾಣ ಕೇಂದ್ರಗಳನ್ನು ತೆರೆಯಲಾಗಿದೆ. ಸ್ತ್ರೀಶಕ್ತಿ ಯೋಜನೆಯಡಿ ಸಹಾಯಧನ, ಉದ್ಯೋಗಿನಿ ಯೋಜನೆಯಡಿ ಆರ್ಥಿಕಾಭಿವೃದ್ಧಿಗೆ ಸಹಾಯ ಧನ, ಕೌಶಲ್ಯ ಅಭಿವೃದ್ಧಿಗಾಗಿ ತರಬೇತಿ, ಶೈಕ್ಷಣಿಕ ಸೌಲಭ್ಯ ಮುಂತಾದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತವೆ. ಇಷ್ಟಾದರೂ ಬಹುತೇಕ ಮಹಿಳೆಯರು ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಶೈಕ್ಷಣಿಕವಾಗಿ ಹಲವಾರು ವಲಯಗಳಲ್ಲಿ ಸಾಮಾನ್ಯ ಮಹಿಳೆಯರಿಗಿಂತ ಅತ್ಯಂತ ಹಿಂದುಳಿದಿದ್ದಾರೆ. ಈ ಸಿದ್ದಿ ಮಹಿಳೆಯರಿಗೆ ಅವರದೇ ಆದ ರಾಜಕೀಯ, ಸಾಮಾಜಿಕ, ಧಾರ್ಮಿಕ, ಆರ್ಥಿಕ ಬದುಕಿದ್ದರೂ ಸಹ ನಾಗರಿಕ ಜಗತ್ತಿನ ಸಂಪರ್ಕದಿಂದ ತಮ್ಮ ಬದುಕಿನ ಕೆಲವೊಂದು ಮೂಲ ನಿಯಮಾವಳಿಯಿಂದ ದೂರ ಸರಿದಿದ್ದಾಳೆ. ಬದಲಾವಣೆ ಎನ್ನುವುದು ಅನಿವಾರ್ಯ ಹಾಗೂ ಅಪೇಕ್ಷಣೀಯವಾದಂಥ ಒಂದು ಪ್ರಕ್ರಿಯೆ. ಹೀಗಾಗಿ ಈ ಬದಲಾವಣೆ ಎಂಬ ಪ್ರಕ್ರಿಯೆ ಸಮುದಾಯಗಳ ಅಭಿವೃದ್ಧಿಗೆ ಪೂರಕವಾಗಿರಬೇಕಾಗುತ್ತದೆ.

ಮೂಲತಃ ಆಫ್ರಿಕಾದ ನಾಡಿನಿಂದ ಗುಲಾಮರಾಗಿ ಒಬ್ಬರಿಂದ ಮತ್ತೊಬ್ಬರಿಗೆ ಮಾರಾಟವಾಗುತ್ತ ಬಂದಿರುವ ಈ ಸಿದ್ದಿ ಸಮುದಾಯದ ಮಹಿಳೆ ತಮ್ಮ ಮೂಲ ಪರಂಪರೆಯ ಸಾಂಸ್ಕೃತಿಕ ಅನನ್ಯತೆ ಇವರಲ್ಲಿ ಕಂಡುಬರಲಾರದು. ತಾವು ಎಲ್ಲಿ ನೆಲೆನಿಂತಿರುವರೋ ಅಂಥಾ ಪ್ರದೇಶದ ಸಂಸ್ಕೃತಿಗೆ ಒಳಗಾಗಿರುವರು. ಒಡೆಯರ, ಹವ್ಯಕ ಬ್ರಾಹ್ಮಣರಂತಹ ಉನ್ನತ ಸಮುದಾಯದವರಿಂದ ಕೆಲಸ ಕಾರ್ಯಗಳನ್ನು ಮಾಡುತ್ತಿರುವ ಈ ಮಹಿಳೆಯ ಮೇಲೆ ಇವರ ಆಚರಣೆಯ ಅಂಶಗಳು ಇವರಲ್ಲಿ ಕಂಡುಬರುವುದು. ಉನ್ನತ ಸಮುದಾಯದವರಲ್ಲಿ ಗುಲಾಮರಂತೆ ಬದುಕು ಸಾಗಿಸಿದ ಈ ಸಿದ್ದಿ ಮಹಿಳೆಗೆ ಇಂದು ಸ್ವಲ್ಪ ಸರಳತೆ ದೊರೆತಿದೆ. ಕಾಡಿನ ಸಂಪನ್ಮೂಲದೊಂದಿಗೆ ಹೆಣೆದುಕೊಂಡಿದ್ದ ಇವರ

ಬದುಕು ಇಂದು ಕೃಷಿಯಲ್ಲಿ ತೊಡಗಿದೆ. ಆದರೆ ಇವರಿಗೆ ಸ್ವಂತ ಜಮೀನುಗಳಿಲ್ಲ. ಇತ್ತೀಚಿಗಷ್ಟೆ ಸರ್ಕಾರವು ಕೃಷಿಗಾಗಿ ಅಲ್ಪ ಸ್ವಲ್ಪ ಭೂಮಿ ಕೊಟ್ಟ ನಿದರ್ಶನಗಳು ಕಂಡುಬಂದಿದೆ. ಅದು ಈ ಸಮುದಾಯಕ್ಕೆ ಎಷ್ಟರ ಮಟ್ಟಿಗೆ ಎಟುಕಿದೆಯೋ ತಿಳಿಯದು. ಇಲ್ಲಿಯ ಮಹಿಳೆಯರು ಅರಣ್ಯ ಇಲಾಖೆಯ ಕೂಲಿ ಕೆಲಸಗಳಿಗೆ ಹೋಗುವುದುಂಟು. ದೈಹಿಕವಾಗಿ ಮಾನಸಿಕವಾಗಿ ಅತ್ಯಂತ ಸಬಲಳಾದ ಸಿದ್ದಿ ಮಹಿಳೆ ಯಾವುದೇ ಕೆಲಸ ಮಾಡಲು ಅಂಜುವುದಿಲ್ಲ. ಪ್ರತಿಯೊಂದರಲ್ಲಿ ಪುರುಷನಿಗೆ ಸರಿಸಮಾನಳಾಗಿ ಕೆಲಸ ಮಾಡುವವಳಾಗಿದ್ದಾಳೆ. ಕುಟುಂಬದ ನಿರ್ವಹಣೆಯ ಜೊತೆಗೆ ಬದುಕನ್ನು ಸಾಗಿಸಲು ಇತರೆ ಕೂಲಿ ಕೆಲಸಗಳನ್ನು ಮಾಡುವಳು. ಒಂದು ಸಮುದಾಯದ ಜೀವನ ಪದ್ಧತಿಯು ಸದಾ ಬದಲಾವಣೆಗೆ ಒಳಪಟ್ಟಿರುತ್ತಾರೆ. ಹೀಗಾಗಿ ಸಿದ್ದಿ ಸಮುದಾಯದ ಮಹಿಳೆಯರ ಹಿಂದೆ ಒಂದು ಕಾಲದಲಿ ಇದ್ದ ಜೀವನ ವಿಧಾನ ಪ್ರಸ್ತುತ ಸಂದರ್ಭದಲ್ಲಿ ಇದ್ದ ಜೀವನ ವಿಧಾನ ಸಾಕಷ್ಟು ಬದಲಾವಣೆ ಹೊಂದಿದೆ. ಸಿದ್ದಿ ಮಹಿಳೆಯರು ಆಧುನಿಕ ಸೌಲಭ್ಯಗಳನ್ನು ಪಡೆಯುವುದರ ಜೊತೆಗೆ ಅವರದೇ ಆದ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ, ಶ್ರೀಮಂತಿಕೆಯನ್ನು ಉಳಿಸಿಕೊಂಡಿದ್ದಾರೆ. ಹೀಗಾಗಿ ಇಂದಿನ ಆಧುನೀಕರಣದ ಗಾಳಿ ಈ ಸಿದ್ದಿ ಸಮುದಾಯದ ಮಹಿಳೆಯರ ಬದುಕಿನ ಕಡೆಗೂ ಬೀಸತೊಡಗಿದೆ. ಆದ್ದರಿಂದ ಆಧುನಿಕ ಬದುಕನ್ನು ಒಪ್ಪಿಕೊಂಡು ಜೀವನ ಸಾಗಿಸುತ್ತಿದ್ದಾಳೆ. ಪ್ರಾರಂಭದಲ್ಲಿ ಕೆಲವೊಂದು ಕಾಯಿಲೆಗಳು ಬಂದರೆ ಗಿಡ ಮೂಲಿಕೆಗಳಿಗೆ ಶರಣು ಹೋಗುತ್ತಿದ್ದ ಈ ಮಹಿಳೆ ಇಂದು ಆಸ್ಪತ್ರೆಗಳ ಮೊರೆ ಹೋಗುತ್ತಿದ್ದಾಳೆ. ಕೇವಲ ತಮ್ಮ ಸಮುದಾಯಗಳಲ್ಲದೆ ಇತರೇ ಸಮುದಾಯದ ಜೊತೆಗೂ ಸಂಪರ್ಕ ಹೊಂದಿರುವ ಮಹಿಳೆ ಗ್ರಾಮ ಪಟ್ಟಣಗಳ ಸಂಪರ್ಕ ಪಡೆದಿದ್ದಾಳೆ. ಕೆಲವೊಮ್ಮೆ ಹಲವು ಕಾರಣಗಳಿಂದ ಸಮಸ್ಯೆಗಳು ಉದ್ಭವವಾದರೆ ಅಥವಾ ನ್ಯಾಯ ಜಗಳದ ವಿಷಯದಲ್ಲಿ ತಮ್ಮ ಸಮುದಾಯದ ಪಂಚಾಯಿತಿಯಿಂದ ಸರಿಯಾದ ಸಿಗಲಿಲ್ಲವೆಂದರೆ ಕೋರ್ಟ್ ಕಛೇರಿಯ ರಕ್ಷಣಾ ಇಲಾಖೆಯ ಬಳಿ ಹೋಗುವ ಪರಿಪಾಠವಿದೆ. ಸಣ್ಣ ಪುಟ್ಟ ಜಗಳಗಳಿಂದ ಸಮಸ್ಯೆಗಳಾದರೆ ತಮ್ಮಲ್ಲಿಯೇ ಬಗೆಹರಿಸಿಕೊಳ್ಳುತ್ತಾರೆ.

ಸಿದ್ದಿ ಮಹಿಳೆಯು ಇಂದು ನಾಗರಿಕ ಜನರ ಬದುಕಿಗೆ ಹತ್ತಿರವಾಗುತ್ತಿದ್ದಾಳೆ. ಅಂದರೆ ಇವರು ಆಧುನಿಕತೆ ಹಾಗೂ ಬುಡಕಟ್ಟುಗಳೊಂದಿಗೆ ಒಟ್ಟೊಟ್ಟಿಗೆ ಬದುಕುತ್ತಿರುವ ಸ್ಥಿತಿಯನ್ನು ಇಂದು ನಾವು ಅವರಲ್ಲಿ ಕಾಣಬಹುದಾಗಿದೆ.

ಈ ಸಮುದಾಯದ ಮಹಿಳೆಯು ಇಂದು ಕೃಷಿ ಕೂಲಿ ಅಲ್ಲದೆ ಪಶು ಸಂಗೋಪನೆಯಿಂದ ಆರ್ಥಿಕ ಅಭಿವೃದ್ಧಿಯ ಕಡೆ ದಾಪುಗಾಲು ಹಾಕುತ್ತಿದ್ದಾಳೆ. ಸ್ವಸಹಾಯ ಗುಂಪುಗಳು ಹಲವಾರು ಸಂಘಟನೆಗಳು ಇವರನ್ನು ಬಡತನದಿಂದ ಪಾರಾಗಲು ಅನೇಕ

ಕಾರ್ಯಕ್ರಮಗಳನ್ನು ರೂಪಿಸುತ್ತಾ ಬಂದಿವೆ. ಶೈಕ್ಷಣಿಕವಾಗಿ, ರಾಜಕೀಯವಾಗಿ ಅತ್ಯಂತ ಹಿಂದಿರುವ ಈ ಸಮುದಾಯದ ಮಹಿಳೆಯರಿಗೆ ಕೇವಲ ಪ್ರಾಥಮಿಕ ಶಿಕ್ಷಣದವರೆಗೆ ಕಲಿಸುವ ವ್ಯವಸ್ಥೆಯಿತ್ತು. ಆದರೆ ಸರ್ಕಾರದ ಸೌಲಭ್ಯಗಳಿಂದ ಹೆಚ್ಚಿನ ವ್ಯಾಸಂಗಕ್ಕೆ ಈಗ ಕಾಲಿಡುತ್ತಿದ್ದಾರೆ. ಆದರೂ ಕೆಲವೇ ಕೆಲವು ಮಹಿಳೆಯರು ಕಾಲೇಜಿನ ಮೆಟ್ಟಿಲನ್ನು ಹತ್ತಿದ್ದಾರೆ. ಯಾಕೆಂದರೆ ತಾವು ವಾಸಿಸುವ ಪ್ರದೇಶದಲ್ಲಿ ಪ್ರಾಥಮಿಕ ಹಂತದವರೆಗೆ ಮಾತ್ರ ಶಿಕ್ಷಣ ದೊರೆಯುತ್ತಿದ್ದು ಅನಂತರದ ವ್ಯಾಸಂಗಕ್ಕೆ ನಗರ ಪಟ್ಟಣಗಳಿಗೆ ಕಳಿಸಲು ಪೋಷಕರು ಹಿಂಜರಿಯುವರು. ಈ ಮೂಲಭೂತವಾದ ಕೆಲವೊಂದು ಸಮಸ್ಯೆಗಳಿಂದ ಹೆಣ್ಣು ಮಕ್ಕಳನ್ನು ಶಾಲೆ ಬಿಡಿಸುವ ಪರಿಪಾಠವಿದೆ. ಆದರೆ ಆರ್ಥಿಕವಾಗಿ ಅಲ್ಪಸ್ವಲ್ಪ ಸುಸ್ಥಿತಿಯಲ್ಲಿರುವ ಮನೆತನದವರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುವ ವ್ಯವಸ್ಥೆ ಸಿದ್ದಿಯರಲ್ಲಿ ಗೋಚರಿಸುತ್ತಿದೆ.

ತಾಲೂಕು ಕೇಂದ್ರಗಳಿಂದ ತುಂಬ ದೂರವಿರುವ ಇವರ ವಾಡೆಯ ಕಡೆಗೆ ಯಾರು ಹೆಚ್ಚು ಗಮನಹರಿಸಲಾರರು. ಸಿದ್ದಿ ಸಮುದಾಯದ ಮಹಿಳೆಯರು ವಾಸಿಸಿರುವ ಮನೆಯನ್ನು ನೋಡಿದರೆ ಅವರ ಕಿತ್ತು ತಿನ್ನುವ ಬಡತನ ಗೊತ್ತಾಗುತ್ತದೆ. ಪ್ರಾರಂಭದಿಂದಲೂ ಬಡತನವನ್ನು ಅನುಭವಿಸಿದ ಇವರಿಗೆ ಸರ್ಕಾರ ಯಾವುದೇ ರೀತಿಯ ಅಭಿವೃದ್ಧಿಯ ಕಡೆಗೆ ಗಮನ ನೀಡುತ್ತಿಲ್ಲ. ಹೀಗಾಗಿ ಇವರು ವಸತಿಯಂತಹ, ಹಲವಾರು ಆಧುನಿಕ ಮೂಲಭೂತ ವ್ಯವಸ್ಥೆಯಿಂದ ತುಂಬಾ ದೂರ ಉಳಿದಿದ್ದಾರೆ. ಕೇವಲ ಬುಡಕಟ್ಟುಗಳು ಮಾತ್ರವಲ್ಲ ಸಣ್ಣ ಪುಟ್ಟ ಹಳ್ಳಿಯ ಮುಗ್ಧ ಜನರ ಬದುಕು ಸಹ ಹಲವಾರು ದುಃಸ್ಥಿತಿಗೆ ಇಳಿದಿದೆ. ಹೀಗಾಗಿ ಸಿದ್ದಿ ಸಮುದಾಯದಲ್ಲಿ ಆರ್ಥಿಕವಾಗಿ, ಶೈಕ್ಷಣಿಕವಾಗಿ ಯಾರು ಉತ್ತಮ ಸ್ಥಿತಿಯಲ್ಲಿರುವರೋ ಅಂತಹ ಮನೆತನದ ಸ್ತ್ರೀಯರು ಸಾಮಾಜಿಕವಾಗಿ ರಾಜಕೀಯವಾಗಿ ಶೈಕ್ಷಣಿಕವಾಗಿ ಮುಂದೆ ಬಂದರೆ, ಬಡತನದಲ್ಲಿಯೇ ಜೀವನ ಸಾಗಿಸುತ್ತಿರುವ ಕುಟುಂಬದ ಮಹಿಳೆಯ ಬದುಕು ತುಂಬ ದುಃಸ್ಥಿತಿಯಲ್ಲಿದೆ. ಆದ್ದರಿಂದ ಈ ಸಮುದಾಯದ ಮಹಿಳೆ ಅನೇಕ ರೀತಿಯ ಕುಂದುಕೊರತೆಗಳಿಂದ ಸಮಾಜದ ಮುಖ್ಯವಾಹಿನಿಗೆ ಬರಲು ಸಾಧ್ಯವಾಗುತ್ತಿಲ್ಲ.

ಬುಡಕಟ್ಟು ಮಹಿಳೆಯರಿಗೆ ಆರೋಗ್ಯ ಶಿಕ್ಷಣ, ಆರ್ಥಿಕ ಸಬಲೀಕರಣ, ರಾಜಕೀಯ ಜಾಗೃತಿ ಮೂಡಿಸಲು ಹಲವು ಹತ್ತು ಸಂಘಟನೆಗಳು ಕಾರ್ಯಶೀಲವಾಗಿವೆ. ಈ ಸಿದ್ದಿ ಮಹಿಳೆಯರ ಕಲ್ಯಾಣಾಭಿವೃದ್ಧಿಯ ದೃಷ್ಟಿಯಿಂದ ಸರ್ಕಾರ ಹಲವು ಯೋಜನೆಗಳನ್ನು ರೂಪಿಸಿದೆ. ಆದರೆ ಆ ಯೋಜನೆಗಳು ಯೋಜನೆಗಳಾಗಿಯೇ ಉಳಿದಿವೆ ಹೊರತು, ಯಾವುದ ಸರಿಯಾದ ಕಾರ್ಯರೂಪಕ್ಕೆ ಬಂದಿಲ್ಲ. ಅಲ್ಲದೆ ಅವು ನಿರೀಕ್ಷಿಸಿದಷ್ಟು ಸಫಲವಾಗಿಲ್ಲ. ಇದಕ್ಕೆ ಕಾರಣ ಹಲವಾರು ಯೋಜನೆಯ ಬಗ್ಗೆ ಸರಿಯಾದ ಮುಂಜಾಗೃಕತೆ ಇಲ್ಲದೆಯಿರುವುದು, ಹಣದ ದುರಪಯೋಗ ಹಲವಾರು ಆಮೀಶಗಳಿಗೆ ಒಳಗಾಗದ ಅಧಿಕಾರಿಗಳು, ಹೀಗೆ ಅನೇಕ ಕೃತ್ಯಗಳಿಂದ ಯೋಜನೆಗಳು ಮಣ್ಣುಪಾಲಾಗಿವೆ.

ಸಿದ್ದಿ ಮಹಿಳೆಯರ ಬದುಕಿನ ಸ್ಥಿತಿಗತಿ ಹೇಗಿವೆ ಎಂಬುದನ್ನು ಅವರ ಚಿಕ್ಕ ಚಿಕ್ಕ ಗುಡಿಸಲುಗಳನ್ನು ನೋಡಿದರೆ ಗೊತ್ತಾಗುತ್ತದೆ. ಅತ್ಯಂತ ನಿಕೃಷ್ಟವಾದ ಬದುಕನ್ನು ಸಾಗಿಸುತ್ತಿರುವ ಇವರಿಗೆ ಒಳ್ಳೆಯ ಸುಸಜ್ಜಿತವಾಗಿ ವಾಸ ಮಾಡಲಿಕ್ಕೆ ಮನೆಯಿಲ್ಲ. ಕುಟುಂಬದಲ್ಲಿರುವ ಮಕ್ಕಳಿಗೆ ಹೊಟ್ಟೆ ತುಂಬ ಆಹಾರ ಸಿಗದ ಪರಿಸ್ಥಿತಿಯಲ್ಲಿರುವ ಇವರಿಗೆ ಯಾವುದೇ ಸ್ವಂತ ಜಮೀನುಗಳಿಲ್ಲ. ಇದ್ದರೂ ಸಹ ಅವು ಅನೇಕ ಭೂವಡೆಯರ ಪಾಲಾಗಿದೆ. ಜಮೀನುದಾರರ ಕೈಕೆಳಗೆ ಕೂಲಿ ಕೆಲಸದಿಂದ ಬದುಕನ್ನು ಸಾಗಿಸುತ್ತಿದ್ದು ಇವರು ತೋಟ, ಗದ್ದೆಗಳಿಗೆ ಕೆಲಸಕ್ಕೆ ಹೋದರೆ ಶ್ರಮದ ತಕ್ಕಂತೆ ಪ್ರತಿಫಲ ದೊರೆಯಲಾರದು. ಹಿಂದೆ ಕಾಡಿನ ರಾಣಿಯರಂತೆ ಮೆರೆದ ಈ ಸಿದ್ದಿ ಮಹಿಳೆಗೆ ಇಂದು ಸರ್ಕಾರ ಅರಣ್ಯ ಸಂರಕ್ಷಣೆಯ ಅನೇಕ ನಿಯಮಾವಳಿಗಳಿಗೆ ಒಳಪಟ್ಟಿದ್ದಾಳೆ. ಹಲವಾರು ಪ್ರಕೃತಿ ದತ್ತವಾಗಿ ದೊರೆಯುವ ಕಾಡುತ್ಪನ್ನಗಳಿಂದ ತಮ್ಮ ಉಪಜೀವನ ಸಾಗಿಸುತ್ತಿದ್ದಳು. ಆದರೆ ಸರ್ಕಾರದ ಕೆಲವು ಕಟುಬದ್ಧತೆಯು ಇವರ ಬದುಕನ್ನು ಕಟ್ಟಿಹಾಕಿದೆ. ಹೀಗಾಗಿ ಇವರ ಬದುಕು ಅತ್ಯಂತ ದುಃಸ್ಥಿತಿಯಲ್ಲಿದೆ.

ಬೇರೆ ಬುಡಕಟ್ಟು ಸಮುದಾಯದ ಮನೆಗಳಿಗೂ ಇವರ ಮನೆಗಳಿಗೂ ತುಂಬಾ ವ್ಯತ್ಯಾಸ ಕಂಡುಬರುವುದು. ಬೇರೆ ಸಮುದಾಯದ ಮನೆಯಲ್ಲಿ ಅಡುಗೆ ಮನೆ, ದೇವರ ಮನೆ ಎಂದು ವಿಭಾಗಿಸಿರುವರು. ಆದರೆ ಇವರ ಮನೆಯು ಡಾ.ಹಿ.ಚಿ.ಬೋರಲಿಂಗಯ್ಯರವರು ಹೇಳುವಂತೆ ಅದೊಂದು ಅಂಗಳದಂತಿದೆ. ಅರಣ್ಯ ಉತ್ಪನ್ನಗಳಿಂದಲೇ ಆಶ್ರಯ ತಾಣಗಳನ್ನು ನಿರ್ಮಿಸಿಕೊಂಡು ಸಿದ್ದಿ ಸಮುದಾಯದ ಮಹಿಳೆಯು ಇತರೆ ಸಮುದಾಯದ ಮಹಿಳೆಯರನ್ನು ಹೋಲಿಸಿದರೆ ತುಂಬಾ ಹಿಂದುಳಿದಿದ್ದಾಳೆ. ಅವರ ಆಚಾರ-ವಿಚಾರಗಳಲ್ಲಿ ಭಿನ್ನತೆಯನ್ನು ಕಾಣಬಹುದು. ಯಾವುದೇ ತಳಸಮುದಾಯವು ಉನ್ನತ ಸಮುದಾಯದ ಆಚಾರ-ವಿಚಾರ, ನಡೆ-ನುಡಿ ಮುಂತಾದವುಗಳನ್ನು ಅನುಸರಿಸಲು ಪ್ರಯತ್ನಿಸುವುದು ಸಹಜ. ಅದರಂತೆ ಸಿದ್ದಿ ಸಮಾಜವು ಸಹ ತಾವು ಕೆಲಸ ಕಾರ್ಯವನ್ನು ಮಾಡುವ ಉನ್ನತ ಸಮುದಾಯದ ಆಚಾರ ವಿಚಾರಗಳಿಗೆ ಒಳಗಾಗಿದೆ. ಅಲ್ಲದೆ ಇತರೆ ಗಿರಿಜನರ ಸಂಸ್ಕೃತಿಯ ಕೆಲವೊಂದು ಆಚರಣೆಗೆ ಇವರು ಒಳಗಾಗಿರುವರು. ಆಫ್ರಿಕಾದಿಂದ ಗುಲಾಮರಾಗಿ ಈ ನಾಡನ್ನು ಸೇರಿದ ಸಿದ್ದಿ ಮಹಿಳೆಯರು ತಮ್ಮ ಮೂಲ ಧರ್ಮವಲ್ಲದ ಇನ್ನಾವುದೋ ಧರ್ಮಕ್ಕೆ ಒಳಗಾಗಿ ಆ ಧರ್ಮದ ಪ್ರತಿಯೊಂದು ಆಚಾರ-ವಿಚಾರಗಳನ್ನು ಅನಿವಾರ್ಯವಾಗಿ ಪಾಲಿಸಬೇಕಾಗಿದೆ. ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಧರ್ಮದ ಆಚರಣೆಗಳನ್ನು ಪಾಲಿಸುವವರಾಗಿದ್ದಾರೆ. ಮೋಹರಂ, ಈದ್‌ಮಿಲಾದ್, ಕ್ರಿಸ್‌ಮಸ್ ಹಬ್ಬಗಳನ್ನು ಆಚರಿಸುವರು. ಹೀಗಾಗಿ ಇವರಲ್ಲಿ ನಾವು ಒಳ್ಳೆಯ ಸಾಮರಸ್ಯಗಳನ್ನು ಕಾಣಬಹುದು. ಸಿದ್ದಿ ಮಹಿಳೆ ತಮ್ಮ

ಪರಂಪರೆಯಲ್ಲಿ ಪಾಲಿಸಿಕೊಂಡು ಬಂದಿರುವ ನಿಯಮಗಳನ್ನು ಕಟ್ಟೇಚ್ಚರದಿಂದ ಪಾಲಿಸುತ್ತಾ ಬಂದಿದ್ದಾಳೆ.

ಪ್ರಸ್ತುತ ಸಂದರ್ಭದಲ್ಲಿ ಬೇರೆ ಬುಡಕಟ್ಟು ಮಹಿಳೆಯರಿಗೆ ನಗರ, ಪಟ್ಟಣಗಳ ಹಾಗೂ ಆಧುನಿಕ ವಿದ್ಯಮಾನಗಳ ಸಂಪರ್ಕ ದೊರೆತಂತೆ ಇತ್ತೀಚಿಗೆ ಸಿದ್ದಿ ಮಹಿಳೆಯೂ ನಾಗರಿಕ ಜಗತ್ತಿನ ಸಂಪರ್ಕಕ್ಕೆ ಇತ್ತಿತ್ತಲಾಗಿ ಒಳಗಾಗುತ್ತಿದ್ದಾಳೆ. ಯಾವುದೇ ಸಮುದಾಯದಲ್ಲಿ ಬದಲಾವಣೆ ಎನ್ನುವುದು ಒಂದು ಸಹಜ ಪ್ರಕ್ರಿಯೆ. ತಮ್ಮ ಪ್ರತಿಯೊಂದು ಜೀವನಾವಶ್ಯಕ ವಸ್ತುಗಳಲ್ಲಿ ಒಂದಿಲ್ಲೊಂದು ರೀತಿಯಲ್ಲಿ ಬದಲಾವಣೆಯಾಗುವುದು ಖಚಿತ. ನಾಗರಿಕ ಜನರ ಸಂಪರ್ಕ, ಟಿ.ವಿ.ಮಾಧ್ಯಮ, ಚಲನಚಿತ್ರಗಳ ಪ್ರಭಾವದಿಂದ ತಮ್ಮ ಜೀವನ ವ್ಯವಸ್ಥೆಯಲ್ಲಿ ಬದಲಾವಣೆಗಳಾಗುತ್ತವೆ. ಸಿದ್ದಿ ಸಮುದಾಯವು ಸಹ ಇದಕ್ಕೆ ಹೊರತಾಗಿಲ್ಲ. ಸಿದ್ದಿ ಮಹಿಳೆ ಇಂದು ದೂರದರ್ಶನ, ಚಲನ ಚಿತ್ರಗಳಂತಹ ಮಾಧ್ಯಮಗಳ ಪ್ರಭಾವದಿಂದ ತಮ್ಮ ವೇಷ ಭೂಷಣಗಳಲ್ಲಿ, ಉಡುಗೆ ತೊಡುಗೆಗಳಲ್ಲಿ ಸಾಮಾನ್ಯವಾಗಿ ಪರಿವರ್ತನೆ ಕಂಡು ಬರತೊಡಗಿದೆ. ಮೇಲ್ ಸಂಸ್ಕೃತಿಯ ಪ್ರಭಾವದಿಂದ ಇವರ ಜೀವನ ಕ್ರಮದಲ್ಲಿ ಇಂದು ಅಲ್ಪಸ್ವಲ್ಪ ಬದಲಾವಣೆಗಳು ಕಂಡುಬರುತ್ತಿವೆ. ಜಾಗತೀಕರಣದ ಪ್ರಭಾವಕ್ಕೆ ಒಳಗಾಗುತ್ತಿರುವ ಈ ಸಮುದಾಯದ ಮಹಿಳೆ ಇಂದು ತಮ್ಮ ಪ್ರತಿಯೊಂದು ಜೀವನ ಕ್ರಮದಲ್ಲಿ ಬದಲಾವಣೆ ಹೊಂದುತ್ತಿದ್ದಾಳೆ. ತನ್ನ ಸಮುದಾಯದ ಹಬ್ಬ ಹರಿದಿನಗಳ ಆಚರಣೆಯಲ್ಲಿ ಆಧುನಿಕ ಸಮಾಜದ ಕೆಲವೊಂದು ಅಂಶಗಳನ್ನು ಇಂದು ಕಾಣಬಹುದಾಗಿದೆ. ಅವಳ ಉಡುಪಿನಲ್ಲಿ, ವೇಷಭೂಷಣದಲ್ಲಿ ಅಡುಗೆ ಊಟೋಪಾಚಾರದಲ್ಲಿ ಏನೆಲ್ಲ ಬದಲಾವಣೆಗಳು ಕಂಡು ಬರುತ್ತವೆ. ನಾಗರಿಕ ಸಮಾಜದ ಪ್ರಭಾವದಿಂದ ಹಂತಹಂತವಾಗಿ ಇಂದು ತಮ್ಮ ಜೀವನ ಕ್ರಮದಲ್ಲಿ ಬದಲಾಗುತ್ತಿದ್ದಾಳೆ. ಅಂದರೆ ಸಿದ್ದಿ ಸಮುದಾಯದ ಮಹಿಳೆ ಆಧುನಿಕತೆಯ ಪ್ರಭಾವದಿಂದ ಪ್ರತಿಯೊಂದು ವಲಯಗಳಲ್ಲಿ ಬದಲಾವಣೆಯನ್ನು ಬಯಸುತ್ತಿದ್ದಾಳೆ.

ಒಟ್ಟಿನಲ್ಲಿ ಬುಡಕಟ್ಟು ಮಹಿಳೆಯರನ್ನು ಕುರಿತು ಇದುವರೆಗೂ ನಡೆದಿರುವ ಅಧ್ಯಯನಗಳು ಸಾಮಾನ್ಯವಾಗಿ ಕಡಿಮೆ ಪ್ರಮಾಣದಲ್ಲಿವೆ. ಆದ್ದರಿಂದ ಅವರ ಖಾಸಗಿ ಬದುಕನ್ನು ಕುರಿತು ಅಧ್ಯಯನ ಮಾಡುವುದು ಈ ಸಂದರ್ಭದಲ್ಲಿ ಅವಶ್ಯಕವಾಗಿದೆ.

ಬುಡಕಟ್ಟು ಸಮುದಾಯದಲ್ಲಿಯೇ ಅತ್ಯಂತ ಹಿಂದುಳಿದವರೆಂದು ಹೇಳಬಹುದಾದ ಸಿದ್ದಿ ಸಮುದಾಯದ ಮಹಿಳೆಯ ಜೀವನ ಕ್ರಮದ ಬಗ್ಗೆ ಅವಳ ನಡೆನುಡಿ ಆಚಾರವಿಚಾರಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ತುಂಬಾ ಹಿಂದುಳಿದವರಾಗಿ ಕಂಡುಬರುವರು. ಇವರಲ್ಲಿ ಬಡತನ ಅನಕ್ಷರತೆಯ ಬದುಕೆ ಇವರನ್ನು ಹಿಂದುಳಿಯಲಿಕ್ಕೆ ಕಾರಣ. ಆದರೆ ಇಂದು ಅಲ್ಪಸ್ವಲ್ಪ

ನಾಗರಿಕ ಪ್ರಪಂಚಕ್ಕೆ ಒಳಗಾಗಿ ದೂರದರ್ಶನ ಸಿನಿಮಾ ಮಾಧ್ಯಮಗಳ ಪ್ರಭಾವದಿಂದ ಇಂದು ತಮ್ಮ ಜೀವನಾವಶ್ಯವಾದ ಪ್ರತಿಯೊಂದರಲ್ಲಿ ಬದಲಾವಣೆಗಳು ಆಗುತ್ತಿರುವುದು ಕಂಡುಬರುತ್ತದೆ. ಅಂದರೆ ಸಿದ್ದಿ ಮಹಿಳೆ ಆಧುನಿಕತೆಯಡೆಗೆ ಸಾಗುತ್ತಿದ್ದಾಳೆ.

ಅಡಿಟಿಪ್ಪಣಿಗಳು

೧. ನಮ್ಮೊಳಗೊಂದು ಪುಟ್ಟ ಆಫ್ರಿಕಾ – ಡಾ. ಹಿ.ಚಿ. ಬೋರಲಿಂಗಯ್ಯ, ಪುಟ ೧೪, ೨೦೦೦.

೨. ಮಹಿಳಾ ಅಧ್ಯಯನ – ಡಾ. ಶೈಲಜಾ ಹಿರೇಮಠ, ಸಂಪುಟ ೮, ಸಂಚಿಕೆ ೧.

೩. http:11www.sasnet.lu.su/tribalhiremath.doc-page- 6 to 9.

ಅಧ್ಯಾಯ : ಎಂಟು

ಸಮಾರೋಪ

ಅಧ್ಯಾಯ : ಎಂಟು

ಸಮಾರೋಪ

ಪ್ರಸ್ತುತ ಅಧ್ಯಯನವು ಒಂದು ಬುಡಕಟ್ಟು ಸಮುದಾಯದ ಲಿಂಗ ಸಂಬಂಧಿ ವಿವರಿಸಿಕೊಳ್ಳುವ ಒಂದು ಪ್ರಯತ್ನವಾಗಿದೆ. ಬುಡಕಟ್ಟು ಸಮುದಾಯವೊಂದು ನೆಲೆ-ನಿಲ್ಲುವ ಸಂದರ್ಭದಲ್ಲಿ ಎದುರಿಸುವ ತಲ್ಲಣ ಮತ್ತು ಅದು ಮುಖಾಮುಖಿಯಾಗುವ ಸಂಘರ್ಷಗಳನ್ನು ಅವಲೋಕಿಸುವ ನಮ್ರ ಪ್ರಯತ್ನವಾಗಿದೆಯೆಂದು ಭಾವಿಸಿದ್ದೇನೆ. ಈ ದಿಶೆಯಲ್ಲಿ ಸಿದ್ದಿಗಳ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ಅಧಿಕಾರಗೋಸ್ಕರ ನಡೆಸಿದ ಹೋರಾಟದ ಚರಿತ್ರೆ ನಮ್ಮೆಲ್ಲರಿಗೂ ಗೊತ್ತೆ ಇದೆ. ದುಡಿಯುವ ಶ್ರಮ ಜೀವಿಗಳಿಗೆ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯಗಳನ್ನೇ ಕಿತ್ತುಕೊಂಡ ಈ ದೇಶದಲ್ಲಿ ಸಿದ್ದಿ ಸಮುದಾಯ ತಮ್ಮ ಹಕ್ಕುಗಳಿಗಾಗಿ ಕಾಲೂರಿ ನಿಲ್ಲುವ ಕಾಲಘಟ್ಟವಿದೆ. ಹೀಗೆ ಎಚ್ಚೆತ್ತುಕೊಳ್ಳುವ ಹಂತದಲ್ಲಿ ಶೋಷಿತ ಸಮುದಾಯಗಳು ಹಲವು ಸಂಗರ್ಷಗಳನ್ನೆದುರಿಸಬೇಕಾಗುತ್ತದೆ. ಆಳುವ ವರ್ಗದ ಪಿತೂರಿಗಳ ಜೊತೆಯಲ್ಲಿಯೇ ಆಂತರಿಕ ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗಬೇಕಾಗುತ್ತದೆ. ಈ ಬಗ್ಗೆ ಬಿಕ್ಕಟ್ಟು ಚಾರಿತ್ರಿಕವಾಗಿ ಎಲ್ಲಾ ಸಮುದಾಯಗಳನ್ನು ಬೆನ್ನಟ್ಟಿ ಬಂದಿದೆ. ಸಾವಿರಾರೂ ವರ್ಷಗಳ ಶೋಷಣೆಯ ಇತಿಹಾಸವಿರುವ ಈ ದೇಶದಲ್ಲಿ ಶೋಷಣೆಗೊಳಗಾದ ಸಮುದಾಯಗಳನ್ನು ಸಬಲೀಕರಿಸುವುದು ಸುಲಭದ ಮಾತೇನಲ್ಲ. ಆದರೆ ಸಬಲೀಕರಣಗೊಳ್ಳುವ ಬದಲಾಗುವ ಸಮುದಾಯದ ವರ್ತಮಾನದ ಬದುಕಿನ ಚಲನೆಗಳನ್ನು ವಿವರಿಸಿಕೊಳ್ಳುವುದು ಇಂದಿನ ಹಲವು ತುರ್ತುಗಳಲ್ಲೊಂದಾಗಿದೆ. ಈ ಬಗೆಯ ಪ್ರಯತ್ನ ಕೇವಲ ಸಮುದಾಯಗಳ ಬಾಹ್ಯ ಒತ್ತಡಗಳನ್ನು ಅರ್ಥಮಾಡಿಕೊಳ್ಳುವ ಹಂತಕ್ಕೆ ಮಾತ್ರ ನಿಲ್ಲುವುದಿಲ್ಲ. ಅದು ಸಮುದಾಯಗಳು ಬಯಸುವ ರೂಪಾಂತರಗಳ ತವಕಗಳನ್ನು ವಿವರಿಸಿಕೊಳ್ಳುವ ಪ್ರಯತ್ನದಡೆಗೆ ನಡೆಯಬೇಕಾಗಿದೆ.

ಭಾರತದಲ್ಲಿ ಅತ್ಯಂತ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿರುವಂತಹ ರೂಢಿ ಸಂಪ್ರದಾಯಗಳು ಆಚಾರ-ವಿಚಾರಗಳು ಇವೆಲ್ಲವುಗಳು ಮಹಿಳೆಯರ ಬದುಕಿನ ಮೇಲೆ ಅತ್ಯಂತ ಗಾಢವಾದ ಪರಿಣಾಮಗಳನ್ನು ಬೀರಿವೆ. ಸಾಮಾಜಿಕ ಮೌಲ್ಯಗಳೆನಿಸಿದ ಕುಟುಂಬ, ಮದುವೆ, ಸಂಪ್ರದಾಯ, ನಂಬಿಕೆಗಳು, ಧರ್ಮ ಇವೆಲ್ಲವೂ ಮಹಿಳೆಯರನ್ನು ಆಳುತ್ತಲೆ ಬರುತ್ತಿರುವುದರಿಂದ, ಅವಳು ತನ್ನ ಅಸ್ತಿತ್ವದ ಹುಡುಕಾಟದಲ್ಲಿ ವಿಫಲಳಾಗುತ್ತಿದ್ದಾಳೆ. ಪುರುಷಪ್ರಧಾನ ವ್ಯವಸ್ಥೆಯಲ್ಲಿ ಚೌಕಟ್ಟಿನಲ್ಲಿರುವ ಮಹಿಳೆಯರಿಗೆ ಬಂಧಿಸಿರುವುದರಿಂದ

ಅವಳು ಸ್ವತಂತ್ರಳಾಗಿ, ವಿಮುಕ್ತಿ ಪಡೆಯಲು, ತನ್ನದೇ ಆದ ಅಸ್ತಿತ್ವವನ್ನು ಹುಡುಕಲು ಪ್ರಯತ್ನಿಸಬೇಕಾಗಿದೆ. ಆದ್ದರಿಂದ ಮಹಿಳೆಯರು ಈ ಪುರುಷ ನಿರ್ಮಿತಗೋಡೆಗಳನ್ನು ಒಡೆದು ಹೊರಗೆ ಬರಬೇಕಾಗಿದೆ.

ಈ ಸಿದ್ದಿ ಸಮುದಾಯದ ಮಹಿಳೆಯರು ಕುಟುಂಬದಲ್ಲಿ, ಸಮಾಜದಲ್ಲಿ ಆರ್ಥಿಕ ವಲಯದಲ್ಲಿ, ರಾಜಕೀಯ ವಲಯದಲ್ಲಿ, ಶೈಕ್ಷಣಿಕ ಕ್ಷೇತ್ರದಲ್ಲಿ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ದ್ವಿತೀಯ ದರ್ಜೆಯ ಸ್ಥಾನಮಾನವನ್ನು ಪಡೆದುಕೊಂಡಿದ್ದಾರೆ. ಆದ್ದರಿಂದ "ಸಿದ್ದಿ ಸಮುದಾಯ :ಲಿಂಗಸಂಬಂಧಿ ಅಧ್ಯಯನ" ಎಂಬ ಶೀರ್ಷಿಕೆಯ ಅಡಿಯಲ್ಲಿ ಸಿದ್ದಿ ಸಮುದಾಯದ ಮಹಿಳೆಯರ ಬದುಕನ್ನು ಒಂದೊಂದು ಎಳೆ ಎಳೆಯಾಗಿ ಬಿಚ್ಚಿಡಲು ಪ್ರಯತ್ನಿಸಿದ್ದೇನೆ. ಈ ಅಧ್ಯಯನವು ಎಂಟು ಅಧ್ಯಯನಗಳನ್ನು ಒಳಗೊಂಡಿದೆ. ಅಧ್ಯಾಯ ಒಂದರಲ್ಲಿ ಪ್ರಸ್ತಾವನೆ, ಉದ್ದೇಶ, ವ್ಯಾಪ್ತಿ, ವೈಧಾನಿಕತೆ ಮತ್ತು ಸಾಹಿತ್ಯ ಸಮೀಕ್ಷೆಯನ್ನು ನಡೆಸಲಾಗಿದೆ. ಈ ಅಧ್ಯಯನದ ಪ್ರಮುಖ ಉದ್ದೇಶ, ಸಮಾಜದಲ್ಲಿರುವ ಲಿಂಗ ತಾರತಮ್ಯವನ್ನು, ಲಿಂಗಾಧಾರಿತ ಶ್ರಮವಿಭಜನೆ, ಆರ್ಥಿಕ ವಲಯದಲ್ಲಿ ಅಸಮಾನತೆ, ಅಧಿಕ ಶ್ರಮ, ಕಡಿಮೆ ಕೂಲಿ ಕುಟುಂಬದಲ್ಲಿ ಇರುವ ತಾರತಮ್ಯ ಮತ್ತು ಸಾಂಸ್ಕೃತಿಕ ಬದುಕುಗಳನ್ನು ಅರ್ಥಸಿಕೊಂಡು ಮಹಿಳೆಯರು ಅಧೀನ ಬದುಕಿಗೆ ಕಾರಣವಾಗಿರುವ ಅಂಶಗಳನ್ನು ಗುರುತಿಸಿಕೊಂಡು ಸೂಕ್ತ ಪರಿಹಾರಗಳನ್ನು ಕಂಡುಕೊಳ್ಳುವುದು ಅಧ್ಯಯನದ ಉದ್ದೇಶವಾಗಿದೆ.

ಅಧ್ಯಯನದ ವ್ಯಾಪ್ತಿಯಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಬರುವ ಕೆಲವೊಂದು ಸಿದ್ದಿ ಸಮುದಾಯದ ಹಳ್ಳಿಗಳನ್ನು ನಿರ್ದಿಷ್ಟವಾಗಿ ಗೊತ್ತುಪಡಿಸಿಕೊಂಡಂತ ಆರು ಗ್ರಾಮಗಳ ಬಗ್ಗೆ ಸೂಕ್ಷ್ಮವಾದ ಅಧ್ಯಯನಕ್ಕೆ ಕೈಗೊಳ್ಳಲಾಗಿದೆ.

(ಈ ಅಧ್ಯಯನದಲ್ಲಿ ಸ್ತ್ರೀವಾದಿ ವೈಧಾನಿಕತೆಯನ್ನು ಅಥವಾ ಮಹಿಳಾ ಅಧ್ಯಯನದ ವೈದಾನಿಕತೆಯನ್ನು ಅಳವಡಿಸಕೊಳ್ಳಲಾಗಿದೆ. ಈ ಸಿದ್ದಿ ಸಮುದಾಯದ ಮಹಿಳೆಯರ ಕುರಿತು ವೈಧಾನಿಕತೆಯಲ್ಲಿ ಬಳಸಿಕೊಳ್ಳಲಾಗಿದೆ.)

ಅಧ್ಯಾಯ ಎರಡರಲ್ಲಿ ಸಿದ್ದಿಯರನ್ನು ಭಾರತಕ್ಕೆ ಯಾವ ಕಾರಣಕ್ಕೆ ತರಲಾಯಿತು, ಅಲ್ಲದೇ ಅವರು ಉತ್ತರ ಕನ್ನಡ ಜಿಲ್ಲೆಗೆ ಹೇಗೆ ಆಗಮಿಸಿದರು, ಮತ್ತು ಅವರ ಮೂಲವನ್ನು ಕುರಿತು ವಿವರಿಸಲಾಗಿದೆ.

ಅಧ್ಯಾಯ ಮೂರರಲ್ಲಿ ಸಿದ್ದಿ ಸಮುದಾಯದ ಮಹಿಳೆಯರ ಕುಟುಂಬದಲ್ಲಿ ಇರುವ ಸ್ಥಾನಮಾನ ಜವಾಬ್ದಾರಿ, ಕುಟುಂಬದ ಸ್ವರೂಪ, ಜನನದಿಂದ ಸಾವಿನವರೆಗಿನ ಆಚರಣೆಯಲ್ಲಿ ಮಹಿಳೆಯರ ಸ್ಥಾನಮಾನಗಳೇನು ಆಯಾ (ಮೂರು ಧರ್ಮವನ್ನು ಹಿಂದೂ, ಮುಸ್ಲಿಂ,

ಕ್ರಿಶ್ಚಿಯನ್) ಧರ್ಮವನ್ನು ಅನುಲಕ್ಷಿಸಿ ಚರ್ಚಿಸಲಾಗಿದೆ. ಕುಟುಂಬದಲ್ಲಿ ಸಿದ್ದಿ ಮಹಿಳೆಯರು ಲಿಂಗ ತಾರತಮ್ಯ ಅಸಮಾನತೆ ಮತ್ತು ಗೃಹಣಿತ್ವದ ಪರಿಕಲ್ಪನೆಯಲ್ಲಿ ಮಹಿಳೆಯು ಎಷ್ಟೊಂದು ಬಂಧಿಯಾಗಿದ್ದಾಳೆ. ಹೀಗಾಗಿ ಇಲ್ಲಿ ಮಹಿಳೆಯು ಸಾಮಾಜಿಕ ವ್ಯವಸ್ಥೆಯ ಅಡಿಯಲ್ಲಿ ಬದುಕನ್ನು ಸಾಗಿಸಬೇಕಾಗಿದೆ. ಈ ಸಮುದಾಯವು ಮಹಿಳೆಯರನ್ನು ಕೆಲವೊಂದು ಕಟ್ಟಳೆಗಳಲ್ಲಿ ಸಿಲುಕಿಸಿದೆ. ಅದನ್ನು ಪ್ರಶ್ನೆ ಮಾಡುತ್ತಾ ಸಿದ್ದಿ ಸಮುದಾಯದ ಮಹಿಳಾ ಬದುಕನ್ನು ವಿವರಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಸಿದ್ದಿ ಸಮುದಾಯದ ಮಹಿಳೆಯರ ಸಾಮಾಜಿಕ ಸ್ಥಿತಿಗತಿಗಳು ಎಂಬ ಶೀರ್ಷಿಕೆಯಿದೆ. ಈ ಶೀರ್ಷಿಕೆಯ ಅಡಿಯಲ್ಲಿ ಅನೇಕ ಅಂಶಗಳನ್ನು ಉಪಶೀರ್ಷಿಕೆಯಾಗಿ ಸಿದ್ದಿ ಮಹಿಳೆಯರ ಬದುಕಿನ ಸಾಮಾಜಿಕ ಸ್ಥಿತಿಗತಿಯನ್ನು ವಿವರಿಸಲಾಗಿದೆ. ಅವರ ರಾಜಕೀಯ ಸ್ಥಿತಿಗತಿ, ಶೈಕ್ಷಣಿಕ ಸ್ಥಿತಿಗತಿ, ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಗಳಲ್ಲಿ ಸಿದ್ದಿ ಸಮುದಾಯದ ಪಾತ್ರವೇನು? ಅಲ್ಲದೇ ಶೈಕ್ಷಣಿಕ ಸ್ಥಿತಿಗತಿ ಮುಂತಾದ ಅಂಶಗಳನ್ನು ಕುರಿತು ವಿವರವಾಗಿ ಚರ್ಚಿಸಲಾಗಿದೆ.

ಅಧ್ಯಾಯ ಐದರಲ್ಲಿ ಸಿದ್ದಿ ಸಮುದಾಯದ ಮಹಿಳೆಯರ ಆರ್ಥಿಕ ಸ್ಥಿತಿಗತಿಗಳು ಎಂಬ ಶೀರ್ಷಿಕೆಯನ್ನು ಹೊಂದಿದೆ. ಮಹಿಳಾ ದುಡಿಮೆಯ ನಿರ್ವಚನವನ್ನು ನೀಡಲಾಗಿದೆ. ಮಹಿಳೆಯರ ದುಡಿಮೆ ಕುರಿತಾದ ಇರುವ ಸಿದ್ದಿ ಸಮುದಾಯದಲ್ಲಿ ನಿಲುವುಗಳನ್ನು ವಿವರಿಸಲಾಗಿದೆ. ದುಡಿಮೆಯ ವಲಯಗಳಾವವು, ದುಡಿಮೆಯ ಸ್ವರೂಪವೇನು? ದುಡಿಮೆ ವಲಯದಲ್ಲಿ ಮಹಿಳೆ ಮತ್ತು ಪುರುಷರ ಮಧ್ಯೆ ಇರುವ ಕೂಲಿ ತಾರತಮ್ಯ ಮತ್ತು ಅದಕ್ಕಿರುವ ಕಾರಣಗಳೇನು ಎಂಬುದನ್ನು ವಿವರಿಸಲಾಗಿದೆ.

ಅಧ್ಯಾಯ ಆರರಲ್ಲಿ ಸಿದ್ದಿ ಸಮುದಾಯದ ಮಹಿಳೆಯರ ಸಾಂಸ್ಕೃತಿಕ ಚಟುವಟಿಕೆಗಳು ಎಂಬ ಶೀರ್ಷಿಕೆಯಲ್ಲಿ ಅವರ ಸಾಂಸ್ಕೃತಿಕ ಬದಕನ್ನು ಕುರಿತು ಅದರಲ್ಲಿ ಮಹಿಳೆಯರ ಪಾಲುಗೊಳ್ಳುವಿಕೆ ಡಮಾಮಿ ಕುಣಿತ, ಪುಗಡಿ ಕುಣಿತ, ಸಿದ್ದಿನಾಸ, ತೆಂಗುಕಟ್ಟುವ ಪದ್ಧತಿ ಮುಂತಾದವುಗಳ ಕುರಿತು ಚರ್ಚಿಸಲಾಗಿದೆ.

ಅಧ್ಯಾಯ ಏಳರಲ್ಲಿ ವರ್ತಮಾನದಲ್ಲಿ ಸಿದ್ದಿಮಹಿಳೆಯರು ಎಂಬ ಶೀರ್ಷಿಕೆಯಡಿಯಲ್ಲಿ, ಸಿದ್ದಿ ಮಹಿಳೆಯರು ಇಂದಿನ ದಿನಮಾನದಲ್ಲಿ ಯಾವ ಹಂತದಲ್ಲಿ ಬದುಕುತ್ತಿದ್ದಾರೆ, ಅವರ ಬದುಕಿನಲ್ಲಾದ ಸಾಂಸ್ಕೃತಿಕ ಸ್ಥಿತ್ಯಾಂತರ ಅಥವಾ ಪಲ್ಲಟಗಳ ಬಗ್ಗೆ ಸೂಕ್ಷ್ಮವಾಗಿ ತಿಳಿಯಪಡಿಸಲು ಪ್ರಯತ್ನಿಸಿದ್ದೇನೆ.

ಅಧ್ಯಾಯ ಎಂಟರಲ್ಲಿ ಸಮಾರೋಪ ಇದ್ದು ಅದರಲ್ಲಿ ಒಂದರಿಂದ ಏಳನೇ ಅಧ್ಯಾಯದವರೆಗೆ ಏನೇನು ಅಂಶಗಳನ್ನು ಒಳಗೊಂಡಿದೆ ಎಂಬುದನ್ನು ವಿವರಿಸಲಾಗಿದೆ. ಮತ್ತು ಸಿದ್ದಿ ಸಮುದಾಯದ ಮಹಿಳೆಯರ ಅಭಿವೃದ್ಧಿ ಕುರಿತು ಚರ್ಚಿಸಲಾಗಿದೆ.

ಒಟ್ಟಿನಲ್ಲಿ ಈ ಎಂಟು ಅಧ್ಯಾಯಗಳನ್ನು ನೋಡಿದರೆ ಸಿದ್ದಿ ಸಮುದಾಯದ ಮತ್ತು ಸಿದ್ದಿ ಮಹಿಳೆಯರ ಅಭಿವೃದ್ಧಿ ಕುರಿತು ಗಮನಹರಿಸಲಾಗಿದೆ. ಅವರಿಗೆ ಪರಿಶಿಷ್ಟ ಪಂಗಡವೆಂದು (ಎಸ್.ಟಿ) ಸೇರಿಸಿದ ನಂತರ ದೊರಕಬೇಕಾದ ಸೌಲಭ್ಯಗಳು ಇನ್ನೂ ದೊರೆತಿಲ್ಲ. ಆದ್ದರಿಂದ ಅವರ ಹಕ್ಕುಗಳನ್ನು ಅವರಿಗೆ ಲಭಿಸುವಂತೆ ಮಾಡಬೇಕಿದೆ. ಒಟ್ಟಿನಲ್ಲಿ ಹಸಿದವನಿಗೆ ಊಟದ ಅವಶ್ಯಕತೆ ಇದ್ದಂತೆ ಸಿದ್ದಿ ಸಮುದಾಯದವರಿಗೆ ಅಭಿವೃದ್ಧಿ ಯೋಜನೆಗಳ ಅವಶ್ಯಕತೆ ಇದೆ. ಏಕೆಂದರೆ ಅತ್ಯಂತ ಸಂಪೂರ್ಣವಾಗಿ ಹಿಂದುಳಿದವರೆಂದರೆ ಸಿದ್ದಿಗಳು. ಅವರ ಶ್ರೆಯೋಭಿವೃದ್ಧಿಯತ್ತ ಸರ್ಕಾರ ಗಮನಹರಿಸಬೇಕಾಗಿದೆ. ಸರ್ಕಾರ ಕೈಗೊಂಡ ಯೋಜನೆಗಳು ಬುಡಕಟ್ಟುಗಳಿಗೆ ಎಷ್ಟರ ಮಟ್ಟಿಗೆ ತಲುಪಿದೆ ತಿಳಿಯದಾಗಿದೆ. ಏಕೆಂದರೆ ಯೋಜನೆಗಳನ್ನು ರೂಪಿಸುವ ಅಭಿವೃದ್ಧಿ ಚಿಂತಕರು ಪಟ್ಟಣಗಳಲ್ಲಿ, ಮಹಾನಗರಗಳಲ್ಲಿ ಇದ್ದು, ತಳಸಮುದಾಯ ಕುರಿತು ಚಿಂತನೆ ನಡೆಸಿ ಅವರ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವರು. ಅವು ಎಷ್ಟರ ಮಟ್ಟಿಗೆ ಅವರಿಗೆ ತಲುಪುತ್ತವೆ ಎಂಬುದು ಅವರಿಗೆ ಮುಖ್ಯವಲ್ಲ. ಕೇವಲ ಸರ್ಕಾರ ಅಭಿವೃದ್ಧಿ ಯೋಜನೆ ಹಾಕಿಕೊಂಡಿದ್ದೇವೆ ಎಂಬುದನ್ನು ಮುಖ್ಯವಾಗಿ ತೋರಿಸುತ್ತಾರೆ. ಆದರೆ ಹಾಕಿಕೊಂಡ ಯೋಜನೆಗಳು ಬುಡಕಟ್ಟುಗಳಿಗೆ ಸೂಕ್ತವಾದವುಗಳೇ? ಅವುಗಳಿಂದ ಅವರಿಗೆ ಉಪಯುಕ್ತವಾಗಿವೇ? ಎಂಬುದರ ಕುರಿತು ಚಿಂತನೆಗಳು ನಡೆಯುವುದಿಲ್ಲ. ಹೀಗಾಗಿ ಬುಡಕಟ್ಟು ಸಮುದಾಯಗಳಾಗಲಿ ಅಥವಾ ಬುಡಕಟ್ಟು ಮಹಿಳೆಯರ ಅಭಿವೃದ್ಧಿಯಾಗಲು ಸಾಧ್ಯವಿಲ್ಲ. ಆದ್ದರಿಂದ ಬುಡಕಟ್ಟು ಅಥವಾ ತಳಸಮುದಾಯದ ವ್ಯಕ್ತಿಯೊಬ್ಬರನ್ನು ಅಭಿವೃದ್ಧಿ ಯೋಜನೆಯ ಅಧಿಕಾರಿಯನ್ನಾಗಿ ಮಾಡಿ ಬುಡಕಟ್ಟು ಮಹಿಳೆಯರ ಕುರಿತು ಅಥವಾ ಬುಡಕಟ್ಟು ಸಮುದಾಯಗಳ ಕುರಿತು ಚಿಂತಿಸಿದಾಗ ಅಭಿವೃದ್ಧಿ ಸಾಧ್ಯವಾಗಬಹುದು. ಅಭಿವೃದ್ಧಿ ಯೋಜನೆಗಳನ್ನು ಹಾಕಿಕೊಂಡರು ಅವರ ನೆಲೆಯಲ್ಲಿ ನಿಂತು ಬುಡಕಟ್ಟುಗಳ (ಸಿದ್ದಿ ಸಮುದಾಯದ) ಅಭಿವೃದ್ಧಿಯಾಗುವಂತೆ ಯೋಜನೆಗಳನ್ನು ರೂಪಿಸಬೇಕಿದೆ.

ಈ ದಿಶೆಯಲ್ಲಿ ಒಂದು ರಾಷ್ಟ್ರದ ಸರ್ವಾಂಗೀಣ ಅಭಿವೃದ್ಧಿಯು ಆ ರಾಷ್ಟ್ರಗಳ ಗ್ರಾಮಗಳ ಅಭಿವೃದ್ಧಿ ಮೇಲೆ ಅವಲಂಬಿತವಾಗಿರುತ್ತದೆ. ಗ್ರಾಮೀಣ ಪ್ರದೇಶದ ಬುಡಕಟ್ಟು ಮಹಿಳೆಯರು ಮತ್ತು ಆರ್ಥಿಕವಾಗಿ ಬಹಳ ದುರ್ಬಲವಿರುವ ಮಹಿಳೆಯರ ಶಕ್ತತೆ ಮತ್ತು ಸ್ವಾವಲಂಬನೆಗೆ ಆದ್ಯತೆ ನೀಡಿ ಅವರ ಸರ್ವತೋಮುಖ ಅಭಿವೃದ್ಧಿಗಾಗಿ ರೂಪಗೊಂಡ ಯೋಜನೆಗಳನ್ನು ಸರಿಯಾಗಿ ಕಾರ್ಯ ರೂಪಕ್ಕೆ ತರಬೇಕಾಗಿದೆ. ಇಲ್ಲಿಯವರೆಗೆ ಮಹಿಳೆಯರ ಅಭಿವೃದ್ಧಿಯನ್ನು ಪರಿಗಣಿಸುವುದಿಲ್ಲವೋ, ಅಲ್ಲಿಯವರೆಗೆ ನಮ್ಮ ದೇಶ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ. ನಮ್ಮ ದೇಶದ ಜನಸಂಖ್ಯೆಯ ಅರ್ಧದಷ್ಟು ಇರುವ ಮಹಿಳೆಯರ ಅಭಿವೃದ್ಧಿಯತ್ತ

ಗಮನಹರಿಸದೆ ಇದ್ದರೆ, ಅಭಿವೃದ್ಧಿಗಾಗಿ ಏನೇ ಯೋಜನೆಗಳನ್ನು ಹಾಕಿಕೊಂಡರು ಯಶಸ್ಸನ್ನು ಕಾಣಲಾರವು. ಆದ್ದರಿಂದ ಅಭಿವೃದ್ಧಿ ದೃಷ್ಟಿಕೋನದಿಂದ ಮಹಿಳೆಯರ ಸರ್ವಾಂಗೀಣ ಅಭಿವೃದ್ಧಿ ಕಡೆ ಗಮನ ಹರಿಸಬೇಕಾಗಿದೆ. ಅದೇ ರೀತಿಯಾಗಿ ಬುಡಕಟ್ಟು ಮಹಿಳೆಯರು ಸಿದ್ದಿ ಸಮುದಾಯತ್ತ ಗಮನ ಹರಿಸಬೇಕಾಗಿದೆ. ಪುರುಷಶಾಹಿ ವ್ಯವಸ್ಥೆ ಒಂದು ಕಡೆಯಾದರೆ ಮತ್ತೊಂದು ಕಡೆ ಕಿತ್ತು ತಿನ್ನುವ ಬಡತನ. ಇವೆಲ್ಲವನ್ನೂ ಸಹಿಸಿಕೊಂಡು ಬದುಕುತ್ತಿರುವ ಸಿದ್ದಿ ಮಹಿಳೆಯರ ಅಭಿವೃದ್ಧಿ ಈ ಸಂದರ್ಭದಲ್ಲಿ ತುಂಬಾ ಅವಶ್ಯಕವಾಗಿದೆ.

ಭಾರತದಲ್ಲಿ ಗ್ರಾಮೀಣ ಪ್ರದೇಶದ ಬುಡಕಟ್ಟು ಸಮುದಾಯ ಮತ್ತು ಇತರ ಹಿಂದುಳಿದ ಬಡವರು ತಮ್ಮ ಮೂಲಭೂತ ಅವಶ್ಯಕತೆಗಳಿಗಾಗಿ ಅಂದರೆ ಅನ್ನ, ಬಟ್ಟೆ, ವಸತಿ, ಆರೋಗ್ಯ ಹಾಗೂ ಮಕ್ಕಳ ವಿದ್ಯಾಭ್ಯಾಸ, ಕುಟುಂಬ ನಿರ್ವಹಣೆ ಮುಂತಾದವುಗಳಿಗೋಸ್ಕರ ಸಾಲಗಳನ್ನು ಮಾಡಬೇಕಾಗುತ್ತದೆ. ಇಂತಹ ಅವಶ್ಯಕತೆಗಳಿಗೆ ಸಾಲ ಮಾಡಿ ಸಾಲ ತೀರಿಸಲಾಗದೇ, ಸಾಲದಲ್ಲಿಯೇ ಜೀತರಾಗಿ ದುಡಿಯಬೇಕಾಗುತ್ತದೆ. ಈ ಸಾಲವನ್ನು ಶ್ರೀಮಂತರಿಂದ, ಜಮೀನುದಾರರಿಂದ ಪಡೆದಿರುವರು. ಈ ಜಮೀನ್ದಾರರು ಸಾಲಕ್ಕೆ ಬಡ್ಡಿ – ಚಕ್ರಬಡ್ಡಿ ಸೇರಿಸಿ ಸಾಲ ತೀರಿಸದಂತೆ ದೊಡ್ಡ ಪ್ರಮಾಣದಲ್ಲಿ ಸಾಲ ಮಾಡಿ ಸಾಲದಲ್ಲಿಯೇ ಶೋಷಿತರನ್ನಾಗಿ ಮಾಡಿ ಅದರಲ್ಲಿಯೇ ಸಾಯುವಂತೆ ಮಾಡುತ್ತಾರೆ. ಇಂತಹ ಸಂದರ್ಭದಲ್ಲಿ ತಳಸಮುದಾಯ ಅಥವಾ ಬುಡಕಟ್ಟುಗಳು ಸಾಲ ತೀರಿಸಲು ಆಗದೆ ತಾವು ಮತ್ತು ತಮ್ಮ ಹೆಂಡತಿ ಮಕ್ಕಳನ್ನು ಜೀತಕ್ಕೆ ಇಡುವಂತಹ ಹೀನ ಸ್ಥಿತಿಗೆ ಬಲಿಯಾಗಿರುವುದನ್ನು ಕಾಣಬಹುದು. ನೂರಾರು ವರ್ಷಗಳ ಹಿಂದೆ ಸಿದ್ದಿಗಳು ಕೂಡ ಇಂತಹ ಸಮಸ್ಯೆಯನ್ನು ಎದುರಿಸಿದ್ದಾರೆ. ಅದಿರರಲ್ಲಿ ಸಿದ್ದಿ ಪುರುಷರು ಹಲವಾರು ರೀತಿಯಿಂದ ಶೋಷಣೆಗೆ ಒಳಗಾದರೆ, ಸಿದ್ದಿ ಮಹಿಳೆಯರು ಲೈಂಗಿಕ ಶೋಷಣೆಗೆ ಒಳಗಾಗಿದ್ದನ್ನು ಅಧ್ಯಾಯ ನಾಲ್ಕರಲ್ಲಿ ಚರ್ಚಿಸಲಾಗಿದೆ.

ಸಿದ್ದಿ ಸಮುದಾಯದ ಮಹಿಳೆಯರು ಶ್ರಮಜೀವಿಗಳು. ಕುಟುಂಬದ ಜವಾಬ್ದಾರಿಯುಳ್ಳವರು, ಶ್ರದ್ಧಾಮೂರ್ತಿಗಳು ಹಾಗೂ ಕೂಡಿಡುವ ಮನೋಭಾವ ಉಳ್ಳವರು. ಎಲ್ಲಾ ರೀತಿಯಿಂದ ತನ್ನ ಸಾಮರ್ಥ್ಯ ತೋರುವ ಸಿದ್ದಿ ಮಹಿಳೆ ಇಂದು ಅಭಿವೃದ್ಧಿಯಿಂದ ಆಚೆಗೆ ಉಳಿದಿದ್ದಾಳೆ. ಪ್ರಸ್ತುತ ಸಮಾಜದಲ್ಲಿ ಸಿದ್ದಿ ಸಮುದಾಯದ ಮಹಿಳೆಯರು ಶೈಕ್ಷಣಿಕ ಕ್ಷೇತ್ರದಲ್ಲಿ ಪ್ರವೇಶ ಪಡೆಯುತ್ತಿದ್ದಾರೆ. ಸರಿಯಾದ ಸೌಲಭ್ಯಗಳನ್ನು ದೊರಕಿಸಿ ಉದ್ಯೋಗ ಅವಕಾಶಗಳನ್ನು ಒದಗಿಸಿಕೊಡಬೇಕಿದೆ. ಹೀಗಾಗಿ ಅವರನ್ನು ಪ್ರೋತ್ಸಾಹಿಸಿ ಸಮಾಜದ ಮುಖ್ಯವಾಹಿನಿಗೆ ಬರುವಂತೆ ಮಾಡಬೇಕು.

ಸರಕಾರವು ಹಾಕಿಕೊಂಡ ಯೋಜನೆಗಳು ಸಿದ್ದಿ ಸಮುದಾಯದ ಮಹಿಳೆಯರಿಗೆ

ನೇರವಾಗಿ ತಲುಪುವಂತೆ ಮಾಡಬೇಕಿದೆ ಹೇಗೆಂದರೆ ಮಹಿಳೆಯರು ಈಗಾಗಲೇ ಸ್ವಸಹಾಯ ಸಂಘಗಳನ್ನು ಕಟ್ಟಿಕೊಂಡು ಸಶಕ್ತಿಕರಣದಡೆ ನಡೆದಿದ್ದಾರೆ. ಇವರಿಗೆ ಸಾಲಸೌಲಭ್ಯಗಳನ್ನು ಒದಗಿಸಿಕೊಡಬೇಕಿದೆ.

ಸಿದ್ದಿ ಸಮುದಾಯದ ಮಹಿಳೆಯರು ಕೆಲಸ ಕಾರ್ಯಗಳನ್ನು ಮಾಡಲು ಹಿಂಜರಿಯುವುದಿಲ್ಲ. ಬಲಿಷ್ಠರಾದ ಈ ಮಹಿಳೆಯರು ಪುರುಷನಿಗೆ ಸರಿಸಮಾನವಾಗಿ ಕೆಲಸ ಮಾಡುತ್ತಿದ್ದರು. ಆದರೆ ಅವಳು ಕೂಲಿ ತಾರತಮ್ಯವನ್ನು ಅನುಭವಿಸುವರು. ಅವಳ ದುಡಿಮೆ "ಎಲೆ ಮರೆಯ ಕಾಯಿಯಂತೆ" ಆಗಿದೆ. ಆದ್ದರಿಂದ ಸ್ತ್ರೀ ಪುರುಷರ ದುಡಿಮೆಯನ್ನು ಸರಿಸಮಾನವಾಗಿಸಬೇಕಾಗಿದೆ. ಮತ್ತು ಸಮಾನ ಕೆಲಸಕ್ಕೆ ಸಮಾನ ವೇತನ ಕೊಟ್ಟು ಈ ಲಿಂಗತಾರತಮ್ಯವನ್ನು ಹೋಗಲಾಡಿಸಬೇಕಾಗಿದೆ.

ಸಿದ್ದಿ ಸಮುದಾಯದಲ್ಲಿ ಇರುವಂತಹ ಮೂಢನಂಬಿಕೆಗಳನ್ನು ತೊಡೆದು ಹಾಕಿ ಅವರಿಗೆ ವೈಚಾರಿಕರನ್ನಾಗಿ ಮಾಡಬೇಕಾಗಿದೆ. ಅನಾವಶ್ಯಕವಾಗಿ ಮಹಿಳೆಯರ ಮೇಲೆ ಹೇರಿದ ವ್ರತಾಚಾರಣೆಗಳನ್ನು ತೊಡೆದುಹಾಕಿದೆ.

ಈ ಸಮುದಾಯದಲ್ಲಿ ಪುರಷರಿಗೆ ಈಗಾಗಲೇ ಉಡುಗರೆಯಾಗಿ ನೀಡುವ ಒಡವೆ, ವಸ್ತುಗಳು ಮುಂದೆ ವರದಕ್ಷಣೆ ಎಂಬ ಭೂತವಾಗಿ ಕಾಡದಂತೆ ಎಚ್ಚರ ವಹಿಸಬೇಕಾಗಿದೆ.

ಒಟ್ಟಿನಲ್ಲಿ ಇಲ್ಲಿಯವರೆಗೆ ನಾನು ಕೈಗೊಂಡ ಫಲಿತಗಳಲ್ಲಿ ಕೆಲವೊಂದು ಅಂಶಗಳು ಅತ್ಯಂತ ಮಹತ್ವದ್ದಾಗಿವೆ. ಪ್ರಾಚೀನ ಕಾಲದ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ, ಮಹಿಳೆ ಯಾವ ರೀತಿ ಸಮಸ್ಯೆಯಲ್ಲಿ ಸಿಲುಕಿದ್ದಳೋ, ಅದರಂತೆ ಸಿದ್ದಿ ಸಮುದಾಯದ ಮಹಿಳೆ ಪುರುಷಶಾಹಿ ವವಸ್ಥೆಯ ಅಡಿಯಲ್ಲಿ ನಲುಗಿ ಹೋಗಿದ್ದಾಳೆ. ಈ ಸಮುದಾಯದ ಮಹಿಳೆಯರ ಬದುಕು ತುಂಬಾ ಚಿಂತಾಜನಕವಾಗಿದೆ. ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ಈ ಸಮುದಾಯವು ಮುಖ್ಯವಾಹಿನಿಗೆ ಬರಲು ಹಾತೊರೆಯುತ್ತಿದೆ. ಹಲವು ಮೂಲಭೂತ ಸೌಲಭ್ಯಗಳಿಂದ ವಂಚಿತರಾದ ಈ ಸಮುದಾಯದ ಮಹಿಳೆಯರು ಅಭಿವೃದ್ಧಿಯಲ್ಲಿ ತುಂಬಾ ಹಿಂದುಳಿದಿದ್ದಾರೆ. ಅನೇಕ ರೀತಿಯ ಶೋಷಣಾತ್ಮಕವಾದ ಜೀವನ ಸಾಗಿಸಿದ ಮಹಿಳೆ ಶೈಕ್ಷಣಿಕವಾಗಿ ತುಂಬಾ ಹಿಂದುಳಿದಿದ್ದಾಳೆ. ಹೀಗಾಗಿ ಸಿದ್ದಿ ಸಮುದಾಯದ ಅಭಿವೃದ್ಧಿಗೆ ಸರ್ಕಾರ ಸರಿಯಾಗಿ ಸ್ಪಂಧಿಸಿದರೆ ಈ ಸಮಾಜ ಮುಂದೆ ಬರಲು ಸಾಧ್ಯ.

ಅನುಬಂಧಗಳು

೧. ವಕ್ತೃಗಳ ವಿವರ.

೨. ಗ್ರಂಥಋಣ.

೩. ಛಾಯಾಚಿತ್ರಗಳು.

ಅನುಬಂಧಗಳು

೧. ವಕ್ತೃ ವಿವರ :

೧. ಕಲ್ಲೇಶ್ವರ (ಅಂಕೋಲಾ ತಾಲ್ಲೂಕು):

ಕ್ರಸಂ.	ಹೆಸರು	ವಯಸ್ಸು	ಶಿಕ್ಷಣ	ಧರ್ಮ
೧.	ಸುನಿತಾ	೩೦	೫ನೇ ತರಗತಿ	ಹಿಂದೂ ಸಿದ್ದಿ
೨.	ಸಾವಿತ್ರಿ	೩೦	ಅನಕ್ಷರಸ್ಥೆ	ಹಿಂದೂ ಸಿದ್ದಿ
೩.	ಮಂಗಳಾ	೩೨	೫ನೇ ತರಗತಿ	ಹಿಂದೂ ಸಿದ್ದಿ
೪.	ವಚ್ಚಲಾ	೩೦	ಅನಕ್ಷರಸ್ಥೆ	ಹಿಂದೂ ಸಿದ್ದಿ
೫.	ಸುವರ್ಣಾ	೨೪	ಅನಕ್ಷರಸ್ಥೆ	ಹಿಂದೂ ಸಿದ್ದಿ
೬.	ಕಲ್ಪನಾ	೩೩	ಅನಕ್ಷರಸ್ಥೆ	ಹಿಂದೂ ಸಿದ್ದಿ
೭.	ನಾಗರತ್ನ	೨೬	೭ನೇ ತರಗತಿ	ಹಿಂದೂ ಸಿದ್ದಿ
೮.	ಸುಮಾ	೩೦	೩ನೇ ತರಗತಿ	ಹಿಂದೂ ಸಿದ್ದಿ
೯.	ಲಲಿತಾ	೨೨	ವಯಸ್ಕ ಶಿಕ್ಷಣ	ಹಿಂದೂ ಸಿದ್ದಿ
೧೦.	ಸೀತಾ	೩೫	೩ನೇ ತರಗತಿ	ಹಿಂದೂ ಸಿದ್ದಿ
೧೧.	ರಂಜನಾ	೨೨	೨ನೇ ತರಗತಿ	ಹಿಂದೂ ಸಿದ್ದಿ
೧೨.	ಗೌರಿ	೩೦	೩ನೇ ತರಗತಿ	ಹಿಂದೂ ಸಿದ್ದಿ

೨. ರಾಮನಗೂಳಿ (ಅಂಕೋಲಾ ತಾಲ್ಲೂಕು)

ಕ್ರಸಂ.	ಹೆಸರು	ವಯಸ್ಸು	ಶಿಕ್ಷಣ	ಧರ್ಮ
೧೩.	ಲಕ್ಷ್ಮೀ	೭೧	ಅನಕ್ಷರಸ್ಥೆ	ಹಿಂದೂ ಸಿದ್ದಿ
೧೪.	ಸುನಿತಾ	೨೭	೭ನೇ ತರಗತಿ	ಹಿಂದೂ ಸಿದ್ದಿ
೧೫.	ಪಾರ್ವತಿ	೫೦	ಅನಕ್ಷರಸ್ಥೆ	ಹಿಂದೂ ಸಿದ್ದಿ

೧೬.	ಲಕ್ಷ್ಮೀ	೪೫	೩ನೇ ತರಗತಿ	ಹಿಂದೂ ಸಿದ್ದಿ
೧೭.	ಸೀತಾ	೨೫	೫ನೇ ತರಗತಿ	ಹಿಂದೂ ಸಿದ್ದಿ
೧೮.	ಮಂಗಳಾ	೨೭	೫ನೇ ತರಗತಿ	ಹಿಂದೂ ಸಿದ್ದಿ

೩. ವಂಡರಮನೆ (ಅಂಕೋಲಾ ತಾಲ್ಲೂಕು)

ಕ್ರಸಂ.	ಹೆಸರು	ವಯಸ್ಸು	ಶಿಕ್ಷಣ	ಧರ್ಮ
೧೯.	ಲಕ್ಷ್ಮೀ	೪೮	ಅನಕ್ಷರಸ್ಥೆ	ಹಿಂದೂ ಸಿದ್ದಿ
೨೦.	ಸೀತಾ	೨೬	೯ನೇ ತರಗತಿ	ಹಿಂದೂ ಸಿದ್ದಿ

೪. ತಾವರಕಟ್ಟಾ (ಯಲ್ಲಾಪೂರ)

ಕ್ರಸಂ.	ಹೆಸರು	ವಯಸ್ಸು	ಶಿಕ್ಷಣ	ಧರ್ಮ
೨೧.	ನೆತಾಲಿಕ	೨೮	೧ನೇ ತರಗತಿ	ಕ್ರಿಶ್ಚಿಯನ್ ಸಿದ್ದಿ
೨೨.	ಮೋನಿಕಾ	೫೦	ಅನಕ್ಷರಸ್ಥೆ	ಕ್ರಿಶ್ಚಿಯನ್ ಸಿದ್ದಿ
೨೩.	ಕಾರಮೇರಿ	೬೦	ಅನಕ್ಷರಸ್ಥೆ	ಕ್ರಿಶ್ಚಿಯನ್ ಸಿದ್ದಿ
೨೪.	ನೀತಾ	೨೫	೪ನೇ ತರಗತಿ	ಕ್ರಿಶ್ಚಿಯನ್ ಸಿದ್ದಿ
೨೫.	ಅನುಸೂಯಾ	೨೪	ಅನಕ್ಷರಸ್ಥೆ	ಕ್ರಿಶ್ಚಿಯನ್ ಸಿದ್ದಿ
೨೬.	ನತಾಷಾ	೨೫	೫ನೇ ತರಗತಿ	ಕ್ರಿಶ್ಚಿಯನ್ ಸಿದ್ದಿ
೨೭.	ಸುಮಾ	೩೦	ಅನಕ್ಷರಸ್ಥೆ	ಕ್ರಿಶ್ಚಿಯನ್ ಸಿದ್ದಿ
೨೮.	ಅಂಜಲಿ	೨೪	೪ನೇ ತರಗತಿ	ಕ್ರಿಶ್ಚಿಯನ್ ಸಿದ್ದಿ
೨೯.	ಆಲಿಷಾ	೨೪	ಎಸ್.ಎಸ್.ಎಲ್.ಸಿ.	ಕ್ರಿಶ್ಚಿಯನ್ ಸಿದ್ದಿ
೩೦.	ಅನುಸುಯಾ	೨೮	ಅನಕ್ಷರಸ್ಥೆ	ಕ್ರಿಶ್ಚಿಯನ್ ಸಿದ್ದಿ
೩೧.	ಸಂತಾನಿ	೨೮	ಅನಕ್ಷರಸ್ಥೆ	ಕ್ರಿಶ್ಚಿಯನ್ ಸಿದ್ದಿ
೩೨.	ಸುಮಿತ್ರಾ	೩೦	ಅನಕ್ಷರಸ್ಥೆ	ಕ್ರಿಶ್ಚಿಯನ್ ಸಿದ್ದಿ
೩೩.	ರೀಟಾ	೪೫	ಅನಕ್ಷರಸ್ಥೆ	ಕ್ರಿಶ್ಚಿಯನ್ ಸಿದ್ದಿ
೩೪.	ಅನುಷಾ	೨೬	೩ನೇ ತರಗತಿ	ಕ್ರಿಶ್ಚಿಯನ್ ಸಿದ್ದಿ

೩೫.	ಮಂಗಳಾ	೨೪	೭ನೇ ತರಗತಿ	ಕ್ರಿಶ್ಚಿಯನ್ ಸಿದ್ದಿ
೩೬.	ರೋಜಾ	೨೮	ಅನಕ್ಷರಸ್ಥೆ	ಕ್ರಿಶ್ಚಿಯನ್ ಸಿದ್ದಿ
೩೭.	ಸುನಂದಾ	೨೭	ಪಿ.ಯು.ಸಿ.	ಕ್ರಿಶ್ಚಿಯನ್ ಸಿದ್ದಿ
೩೮.	ಮೇರಿ	೪೦	ಅನಕ್ಷರಸ್ಥೆ	ಕ್ರಿಶ್ಚಿಯನ್ ಸಿದ್ದಿ
೩೯.	ರೋಜಾ	೬೦	ಅನಕ್ಷರಸ್ಥೆ	ಕ್ರಿಶ್ಚಿಯನ್ ಸಿದ್ದಿ
೪೦.	ಅನುಸೂಯಾ	೨೩	ಅನಕ್ಷರಸ್ಥೆ	ಕ್ರಿಶ್ಚಿಯನ್ ಸಿದ್ದಿ

೫. ತತ್ವಣಗಿ ಹೊಸೂರು (ಹಳಿಯಾಳ ತಾಲ್ಲೂಕು)

ಕ್ರಸಂ.	ಹೆಸರು	ವಯಸ್ಸು	ಶಿಕ್ಷಣ	ಧರ್ಮ
೪೧.	ಹಲಿಮ್‌ಬಿ	೫೦	ಅನಕ್ಷರಸ್ಥೆ	ಮುಸ್ಲಿಂ ಸಿದ್ದಿ
೪೨.	ಆಶಾಮಾಬಿ	೪೦	ಅನಕ್ಷರಸ್ಥೆ	ಮುಸ್ಲಿಂ ಸಿದ್ದಿ
೪೩.	ಝುರಾಂಬಿ	೪೦	ಅನಕ್ಷರಸ್ಥೆ	ಮುಸ್ಲಿಂ ಸಿದ್ದಿ
೪೪.	ಮೈಮುನ್‌ಬಿ	೨೫	ಅನಕ್ಷರಸ್ಥೆ	ಮುಸ್ಲಿಂ ಸಿದ್ದಿ
೪೫.	ಹೈಮ್‌ಬಿ	೩೫	ಅನಕ್ಷರಸ್ಥೆ	ಮುಸ್ಲಿಂ ಸಿದ್ದಿ
೪೬.	ಜಮೇಲಾಲಿ	೪೦	ಅನಕ್ಷರಸ್ಥೆ	ಮುಸ್ಲಿಂ ಸಿದ್ದಿ
೪೭.	ಬಡಿಮಾ	೩೫	ಅನಕ್ಷರಸ್ಥೆ	ಮುಸ್ಲಿಂ ಸಿದ್ದಿ
೪೮.	ಹುಸೇನ್‌ಬಿ	೪೦	ಅನಕ್ಷರಸ್ಥೆ	ಮುಸ್ಲಿಂ ಸಿದ್ದಿ
೪೯.	ಮುರಿಯಾಬಿ	೫೦	ಅನಕ್ಷರಸ್ಥೆ	ಮುಸ್ಲಿಂ ಸಿದ್ದಿ
೫೦.	ಸಾರಾಬಿ	೨೭	ಅನಕ್ಷರಸ್ಥೆ	ಮುಸ್ಲಿಂ ಸಿದ್ದಿ
೫೧.	ಹಿಮಾಮಾಬಿ	೪೦	ಅನಕ್ಷರಸ್ಥೆ	ಮುಸ್ಲಿಂ ಸಿದ್ದಿ
೫೨.	ಬಾನುಬಿ	೩೦	ಅನಕ್ಷರಸ್ಥೆ	ಮುಸ್ಲಿಂ ಸಿದ್ದಿ
೫೩.	ಸೈನಾದಬಿ	೩೦	ಅನಕ್ಷರಸ್ಥೆ	ಮುಸ್ಲಿಂ ಸಿದ್ದಿ
೫೪.	ಬೀಬಿಕೈನಾ	೨೧	೪ನೇ ತರಗತಿ	ಮುಸ್ಲಿಂ ಸಿದ್ದಿ

೬. ಗೊಲ್ಲೆಹಳ್ಳಿ (ಹಳಿಯಾಳ ತಾಲ್ಲೂಕು)

ಕ್ರ.ಸಂ.	ಹೆಸರು	ವಯಸ್ಸು	ಶಿಕ್ಷಣ	ಧರ್ಮ
೫೫.	ನೂರಜ್ಹಾನ	೨೪	೮ನೇ ತರಗತಿ	ಮುಸ್ಲಿಂ ಸಿದ್ದಿ
೫೬.	ಅಲ್ಲಮ್ಮ	೪೫	ಅನಕ್ಷರಸ್ಥೆ	ಮುಸ್ಲಿಂ ಸಿದ್ದಿ
೫೭.	ಮಾಬೂಬಿ	೩೯	ಅನಕ್ಷರಸ್ಥೆ	ಮುಸ್ಲಿಂ ಸಿದ್ದಿ
೫೮.	ಖಾತುನ್‌ಬಿ	೪೦	ಅನಕ್ಷರಸ್ಥೆ	ಮುಸ್ಲಿಂ ಸಿದ್ದಿ
೫೯.	ಮಾಬುಲ್‌ಬಿ	೩೦	ಅನಕ್ಷರಸ್ಥೆ	ಮುಸ್ಲಿಂ ಸಿದ್ದಿ
೬೦.	ಜಯನಮ್ಮ	೩೫	ಅನಕ್ಷರಸ್ಥೆ	ಮುಸ್ಲಿಂ ಸಿದ್ದಿ

೬೧. ದಿಯೋಗ ಸಿದ್ದಿ – ವನಶ್ರೀ ಗಿರಿಜನ ದೊಡ್ಡ ಪ್ರಮಾಣದ ವಿವಿದ್ಧೋಶಗಳ ಸಹಕಾರಿ ಸಂಘದ ಅಧ್ಯಕ್ಷರು, ಹಳಿಯಾಳ.

೬.೨. ಮಹೇಂದ್ರ ಕುಮಾರ – ಗ್ರೀನ್ ಇಂಡಿಯಾ ಸಂಸ್ಥೆಯ ಅಧ್ಯಕ್ಷರು, ದಾಂಡೇಲಿ.

೨. ಗ್ರಂಥ ಋಣ :

೧. ಅನ್ನಪೂರ್ಣೇಶ್ವರಿ ಎನ್. ಮಹಿಳಾ ಶಿಕ್ಷಣ ಮತ್ತು ಅಭಿವೃದ್ಧಿ, ಪ್ರಕಾಶಕರು ಮಾನವಾಭಿವೃದ್ಧಿ ಅಧ್ಯಯನಗಳ ಕೇಂದ್ರ, ಮೈಸೂರು ೨೦೦೨.

೨. ಅರ್ಜುನ ಗೊಳಸಂಗಿ, ದಲಿತ ಬದುಕು ಮತ್ತು ಸಂಸ್ಕೃತಿ, ವಿಮೋಚನಾ ಪ್ರಕಾಶನ, ೨೦೦೩.

೩. ಬೋರಲಿಂಗಯ್ಯ ಹಿ.ಚಿ., ಗಿರಿಜನರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೪.

೪. ಬೋರಲಿಂಗಯ್ಯ ಹಿ.ಚಿ., ಉಪಸಂಸ್ಕೃತಿ ಅಧ್ಯಯನ ಮಾಲೆ, 'ಸಿದ್ದಿಯರ ಸಂಸ್ಕೃತಿ' ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೩.

೫. ಬೋರಲಿಂಗಯ್ಯ ಹಿ.ಚಿ., ನಮ್ಮೊಳಗೊಂದು ಪುಟ್ಟ ಆಫ್ರಿಕಾ, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೪.

೬. ಬೋರಲಿಂಗಯ್ಯ ಹಿ.ಚಿ., ವಿಸ್ಮೃತಿ ಮತ್ತು ಸಂಸ್ಕತಿ (ಒಂದು ಬುಡಕಟ್ಟಿನ ಲೋಕ ದೃಷ್ಟಿಯ ಹಿನ್ನಲೆಯಲ್ಲಿ ಸಂಸ್ಕೃತಿ ಚರ್ಚೆ), ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೧.

೭. ಬೈರಪ್ಪ. ಕೆ. ಭಾರತದ ಸಮಾಜ ಪರಂಪರೆ ಮತ್ತು ಪರಿವರ್ತನೆ ಭಾಗ ೧, ಸ್ವಪ್ನ ಬುಕ್ ಹೌಸ್, ತುಂಗಾ ಕಾಂಪ್ಲೆಕ್ಸ್, ಗಾಂಧಿನಗರ, ಬೆಂಗಳೂರು ೨೦೦೬.

೮. ಭಾನುಮತಿ. ವೈ.ಸಿ. ಜನಪದ ಆಂತರ್ಯ, ದೇಜಗೌ ಸಾಹಿತ್ಯ ಮಾಲೆ ಕುಸುಮ ೧೦, ತಳಗವಾದಿ ಪ್ರಕಾಶನ, ಕುವೆಂಪುನಗರ ಮೈಸೂರು, ೨೦೦೩.

೯. ಭಾನುಮತಿ. ವೈ.ಸಿ. ಮಹಿಳೆ ಮತ್ತು ಫಲವಂತಿಕೆ, ಮಹಿಳಾ ಅಧ್ಯಯನ ಸಂಚಿಕೆ ೩, ಸಂಪುಟ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೧೦. ಬೈರೇಗೌಡ. ಎಂ. ಜಾನಪದ ವೈವಿದ್ಯ, ಶಕ್ತಿ ಮುದ್ರಣ, ಬೆಂಗಳೂರು ೧೯೯೯.

೧೧. ಚಂದ್ರಮತಿ ಸೊಂದಾ, ಸ್ತ್ರೀವಾದಿ ವಿಮರ್ಶೆ, ಚಿಪ್ಪೊಡೆದ ಮೌನ, ಅಭಿರುಚಿ ಪ್ರಕಾಶನ, ಮೈಸೂರು ೨೦೦೪.

೧೨. ಚಂದ್ರಶೇಖರ.ಟಿ.ಆರ್., ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೧೩. ಛಾಯಾದಾತಾರ (ಮೂಲ): ಸ್ತ್ರೀಪುರುಷ (ಅನು) ಸರಸ್ವತಿ ರಿಸಬೊಡ, ೧೯೯೨.

೧೪. ಗಂಗಾಧರ ದೈವಜ್ಞ, ಬುಡಕಟ್ಟು ಸಮಾಜ ಹುಟ್ಟು ಸಾವಿನ ನಡುವೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೧೫. ಗಾಯತ್ರಿ. ಎನ್. ಮಹಿಳೆ ಬಿಡುಗಡೆಯ ಹಾದಿಯಲ್ಲಿ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೬.

೧೬. ಗೂರು ಚೆನ್ನಬಸಪ್ಪ, ಕರ್ನಾಟಕ ಜನಪದ ಕಲೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು, ೧೯೯೭.

೧೭. ಹಾ.ಮಾ.ನಾಯಕ, ಪ್ರಧಾನ ಸಂಪಾದಕ, ಕನ್ನಡ ವಿಷಯ ವಿಶ್ವಕೋಶ, ಕರ್ನಾಟಕ ಸಂಪುಟ-೧, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ವಿಶ್ವವಿದ್ಯಾಲಯ, ಮೈಸೂರು, ೨೦೦೫.

೧೮. ಹೇಮಲತಾ. ಎಚ್.ಎಂ.- ಮಹಿಳಾ ಅಧ್ಯಯನ ಒಂದು, ಡಿ.ವಿ.ಕೆ. ಮೂರ್ತಿ ಪ್ರಕಾಶಕರು, ಮೈಸೂರು, ೨೦೦೪.

೧೯. ಹೇಮಲತಾ. ಎಚ್.ಎಂ.- ಮಹಿಳಾ ಅಧ್ಯಯನ ಎರಡು, ಡಿ.ವಿ.ಕೆ. ಮೂರ್ತಿ ಪ್ರಕಾಶಕನ, ಮೈಸೂರು, ೨೦೦೪.

೨೦. ಹೇಮಲತಾ. ಎಚ್.ಎಂ.- ಮಹಿಳಾ ಅಧ್ಯಯನ ನಾಲ್ಕು, ಡಿ.ವಿ.ಕೆ. ಮೂರ್ತಿ ಪ್ರಕಾಶಕರು, ಮೈಸೂರು, ೨೦೦೭.

೨೧. ಇಂದಿರಾ. ಆರ್. ಮಹಿಳೆ ಸಮಾಜ ಮತ್ತು ಸಂಸ್ಕೃತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

೨೨. ಜ್ಯೋತಿ ಶಶಿಕುಮಾರು, ಮಹಿಳಾ ಸಾಮಾಜಿಕತೆ, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೨೩. ಕವಿತಾ ರೈ, ವಿವಾಹ ಮತ್ತು ಕುಟುಂಬ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೨೪. ಕಮಲ. ಎಂ.ಆರ್., ಕಪ್ಪು ಹಕ್ಕಿಯ ಬೆಳಕಿನ ಹಾಡು (ಗುಲಾಮ ಪದ್ಧತಿಯ ವಿರುದ್ಧ ಸೆಣಸಿದ ಕಪ್ಪು ಮಹಿಳೆಯರ ಆತ್ಮಕಥೆಗಳು) ಕಥನ ಪ್ರಕಾಶನ, ಬೆಂಗಳೂರು, ೨೦೦೪.

೨೫. ಕಮಲ. ಎಂ.ಆರ್., ಕಪ್ಪು ಹಕ್ಕಿಯ ಬೆಳಕಿನ ಹಾಡು, ೨ ಉತ್ತರ ನಕ್ಷತ್ರ, ಕಥನ ಪ್ರಕಾಶನ, ಬೆಂಗಳೂರು, ೨೦೦೫.

೨೬. ಲಕ್ಕಪ್ಪಗೌಡ, ಎಚ್.ಜೆ.ಪ್ರಧಾನ ಸಂಪಾದಕ, ಕರ್ನಾಟಕ ಬುಡಕಟ್ಟುಗಳು ಸಂಪುಟ ೧, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ೧೯೯೮.

೨೭. ನಾಯಕ ಎನ್.ಆರ್., ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಜನಾಂಗ, ಜಾನಪದ ಪ್ರಕಾಶನ, ಹೊನ್ನಾವರ, ಉತ್ತರ ಕನ್ನಡ, ೧೯೯೨.

೨೮. ನಾಯಕ ಜಿ.ಪಿ., ಉತ್ತರ ಕನ್ನಡ ಜನಪದ ಕಲೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨೯. ಒಡೆಯರ. ಡಿ. ಹೆಗ್ಗಡೆ, ಎನ್. ಅನ್ನಪೂರ್ಣೇಶ್ವರಿ, ಮಹಿಳಾ ಅಧ್ಯಯನಗಳು ಆರ್ಥಿಕ ನೆಲೆಗಳು ಮತ್ತು ಆಯಾಮಗಳು, ಪ್ರಕಾಶಕರು, ಮಾನಾವಾಭಿವೃದ್ಧಿ ಅಧ್ಯಯನಗಳ ಕೇಂದ್ರ, ಮೈಸೂರು – ೨೦೦೩.

೩೦. ಪ್ರಭಾಕರ.ಎ.ಎಸ್., ಸಂಪಾದಕ, ಆದಿವಾಸಿ ಆಖ್ಯಾನ ಸಮುದಾಯಗಳ ಅಧ್ಯಯನಕ್ಕೊಂದು ಆಕರ, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ, ೨೦೦೬.

೩೧. ಶೈಲಜಾ ಹಿರೇಮಠ, ಪಾತರದವರು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೩೨. ಶೈಲಜಾ ಹಿರೇಮಠ, ಮಾತೃ ಪ್ರಧಾನ ಪರಿಕಲ್ಪನೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೩೩. ಸುನಂದಮ್ಮ ಆರ್. ಮಹಿಳಾ ಸಂಸ್ಕೃತಿ, ಪ್ರಕಾಶನ ಸಮತಾ ಅಧ್ಯಯನ ಕೇಂದ್ರ, ಮೈಸೂರು, ೨೦೦೫.

೩೪. ಸುಮಿತ್ರಾಬಾಯಿ. ಬಿ.ಎನ. ಸ್ತ್ರೀವಾದ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೨೦೦೬.

೩೫. ಶ್ರೀಮತಿ. ಎಚ್.ಎಚ್. ಶಿವಾನಂದ, ವಿರಕ್ತಮಠ, ಜೆ.ಕೃಷ್ಣ ಸಂಪಾದಕರು, ಮಹಿಳಾ ಆರ್ಥಿಕತೆ, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೩೬. ಶ್ರೀಮತಿ. ಎಚ್.ಎಸ್. ಹೆಣ್ಣು ಹೆಂಗಸು, ಬ್ಯಾಲದ ಕೆರೆ ಪ್ರಕಾಶನ, ಮಂಡ್ಯ ಜಿಲ್ಲೆ, ೨೦೦೪.

೩೭. ಉಷಾ.ಎಂ., ಮಹಿಳಾ ಚಳವಳಿ ಮತ್ತು ಮಹಿಳಾ ವಿಷಯಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೩೮. ವಿಜಯಕುಮಾರಿ.ಎಸ್.ಕರಿಕಲ್., ಮಹಿಳಾ ಮತ್ತು ಸಮಾಜ (ಮಂಟಪ ಮಾಲೆ ೧೫೦) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೯. http:11www.sasnet.lu.su/tribalhiremath.doc-page- 6 to 9.

ಛಾಯಾಚಿತ್ರಗಳು



ಡಮಾಕಿ ಕುಣಿತದಲ್ಲಿ ನಿರತರಾದ ಯುವಕರು



ಡಮಾಕಿ ಬಾರಿಸುತ್ತಿರುವ ಸಿದ್ದಿ ಪುರುಷ



ಬಿದಿರಿನ ಬುಟ್ಟಿ ತಯಾರಿಸುವಲ್ಲಿ ನಿರತರಾಗಿರುವ ಸಿದ್ದಿ ಪುರುಷ.



ದುಡಿತದಲ್ಲಿ ನಿರತರಾಗಿರುವ ಸಿದ್ದಿ ಮಹಿಳೆಯರು.



ಅಕ್ಕಿಯಿಂದ ಭವಿಷ್ಯ ನುಡಿಯುವ ಸಿದ್ದಿ ಮಹಿಳೆ.



ಢಮಾಮಿ ಬಾರಿಸುತ್ತಿರುವ ಮಹಿಳೆ.



ಮಗು ತೂಗುತ್ತಿರುವ ಸಿದ್ದಿ ಮಹಿಳೆ.



ಅಡುಗೆಯಲ್ಲಿ ನಿರತಳಾಗಿರುವ ಸಿದ್ದಿ ಮಹಿಳೆ.



ಮುಸ್ಲಿಂ ಸಿದ್ದಿ ದೇವರು.



ಸಿದ್ದಿ ಯರು ಪೂಜಿಸುವ ತುಳಸಿ ಕಟ್ಟೆ.



ಹಿಂದು ಸಿದ್ದಿಯರು ಆರಾಧಿಸುವ ದೇವರುಗಳು.



ಕ್ರೈಸ್ತ ಸಿದ್ದಿಯರು ಆರಾಧಿಸುವ ದೇವರು.



ಕ್ಷೇತ್ರ ಕಾರ್ಯದಲ್ಲಿ ಸಂಶೋಧಕಿ.



ಗ್ರಾಮ ಪಂಚಾಯತಿ, ತಾಲೂಕ ಪಂಚಾಯತಿ ಸದಸ್ಯರು.



ಸಿದ್ದಿ ಮಕ್ಕಳು.



ಸಿದ್ದಿಯರು ವಾಸಿಸುವ ಮನೆ.



ಮುಸ್ಲಿಂ ಸಿದ್ದಿ ವಧು-ವರರು.



ಮದುವೆ ಸಂಧರ್ಬದಲ್ಲಿ ಕೊಡುವ ಉಡುಗರೆ.



ಮುಸ್ಲಿಂ ಸಿದ್ದಿ ಮಹಿಳೆಯರು.



ಎನ್.ಜಿ.ಓ. ಸಂಸ್ಥೆಯಲ್ಲಿ ಕೆಲಸಮಾಡುವ ಯುವತಿ



ಸ್ವ- ಸಹಾಯ ಗುಂಪಿನ ಸಿದ್ದಿ ಮಹಿಳೆಯರು.



ಕೆಲಸದಲ್ಲಿ ನಿರತರಾದ ಸ್ವ- ಸಹಾಯ ಸಂಘದ ಮಹಿಳೆಯರು.